

ಪುಸ್ತಕ ವಿಭಾಗ

ಡಾ. ಕೃಷ್ಣಾನಂದ ಕಾಮತರ
ಪ್ರೇಯಸಿಗೆ ಪತ್ರಗಳು

ಡಿಸೆಂಬರ್ 1991 ರೂ. 3.00

ಕಸ್ತೂರಿ

ಬಲ್' ಎಂಬ ಪಟ್ಟಣ !





ಸುವಾಸಿತ ಹಾಗೂ ಸ್ವಾದಿಷ್ಟ
ಮುಖಶುದ್ಧಿಗಾಗಿ
CHAMAN
ಚಮನ್
ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.
ಚಮನದಲ್ಲಿ ಏನೆಲ್ಲ ಇದೆ?
ಈ ಚಮನದಲ್ಲಿ ಜೇಷ್ಠಮಧು, ಕೇಶರ, ಏಲಕ್ಕಿ, ಲವಂಗ, ಪತ್ರಿ, ಜಾಜಿಕಾಯಿ, ಬಡಿಸೋಪ್, ದುಂಧಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರೆಗೆ ಎಲ್ಲರಿಗೂ ಅಚ್ಚುಮೆಚ್ಚು.
ಸ್ಟಾರ್ ಕಂಪನಿ, ಬೆಳಗಾಂವ್

ಕಸ್ತೂರಿ
ಕನ್ನಡ ಡೈಜೆಸ್ಟ್

ಸಂಪುಟ: 36 ● ಸಂಚಿಕೆ: 4 ● ಡಿಸೆಂಬರ್ 1991

ವ್ಯವಸ್ಥಾಪಕ ಸಂಪಾದಕ: ಕೆ.ಶಾಮರಾವ್
ಸಂಪಾದಕ: ಆರ್.ಎ.ಉಪಾಧ್ಯ
ನಿರ್ವಹಣೆ: ರವಿ ಬೆಳಗೆರೆ

ಈ ಸಂಚಿಕೆಯಲ್ಲಿ



ನನ್ನ 'ನಾ ಕಂಡ ಶಾಂತಾರಾಂ' ಲೇಖನದಲ್ಲಿ (ನವೆಂಬರ್ 91) ಒಂದು ಅನುಮಾನಾಸ್ಪದ ಹೇಳಿಕೆ ನುಸುಳಿಬಿಟ್ಟಿದೆ. ಪುಟ 70ರಲ್ಲಿ ಎರಡನೇ ಕಾಲಂನ ಎಂಟನೇ ಸಾಲಿನಲ್ಲಿ 'ದಿ. ಹೇಮಂತಕುಮಾರರಿದ್ದಿರಬೇಕು' ಎಂದು ಅನುಮಾನವಿಟ್ಟು ಬರೆದುದನ್ನು ''ಮನ್ನಾಡೇ'' (ದಿವಂಗತರಲ್ಲ) ಎಂದು ತಿದ್ದಿಕೊಳ್ಳಬೇಕಾಗಿ ಪ್ರಾರ್ಥನೆ.

ಬೆಂಗಳೂರು **ಖಜಾನೆ ಕೃಷ್ಣಮೂರ್ತಿ**

ಪ್ರಿಯ ಸಂಪಾದಕರಿಗೆ,

ತಾವು ನನ್ನ ಬಗ್ಗೆ ಸಚಿತ್ರ, ಲೇಖನ ಪ್ರಕಟಿಸಿ (ನವೆಂಬರ್ 91) ನನ್ನ ಬದುಕು, ಬರಹಕ್ಕೆ ಪ್ರೋತ್ಸಾಹ ನೀಡಿದ್ದಕ್ಕಾಗಿ ತುಂಬು ಹೃದಯದ ವಂದನೆಗಳು.

ಲೇಖನ ಮೆಚ್ಚಿ ನನ್ನ ಬಹಳಷ್ಟು ಮಿತ್ರರು ಪತ್ರ ಬರೆದಿದ್ದಾರೆ. ವಿಶೇಷವಾಗಿ ಹುಬ್ಬಳ್ಳಿಯ ಮೂರುಸಾವಿರ ಮಠದ ಸ್ವಾಮಿಯವರು ಪತ್ರ ಬರೆದು ಹಲವು ವರ್ಷಗಳ ಹಿಂದೆ ನನಗೆ ನೀಡಿದ್ದ ಆಶ್ವಾಸನೆಯನ್ನು ಸದ್ಯದಲ್ಲೇ ಈಡೇರಿಸುವುದಾಗಿ ತಿಳಿಸಿದ್ದಾರೆ...... ಇನ್ನೂ ಬದುಕುವ ಆಸೆ, ಬರೆಯುವ ಆಸೆ ಪುಟಿಯುತ್ತಿದೆ. ನನ್ನ ಕೊರತೆ ಇತಿ ಮಿತಿಗಳ ಮಧ್ಯದಲ್ಲೂ ಕ್ರಿಯಾಶೀಲವಾಗಿರಲು ತಮ್ಮಂತಹ ಸಹೃದಯ ಸಂಪಾದಕರ ಪ್ರೀತಿ, ವಾತ್ಸಲ್ಯ ಅಗತ್ಯ.

ತಿಪಟೂರು **ಟಿ.ಎಂ. ಷಡಕ್ಷರಿ**

ಅಕ್ಟೋಬರ್ 91ರ 'ಕಸ್ತೂರಿ'ಯ ಪುಸ್ತಕ ವಿಭಾಗದಲ್ಲಿ ಪ್ರಕಟವಾದ 'ಎಮ್ಮೆ ಮತ್ತು ರಂಗಭೂಮಿ' (ಪುಟ 104) ಎಂಬ ವಿವರಣೆಯಲ್ಲಿ ''ಶಾಂತಕವಿಗಳು ಸ್ಥಾಪಿಸಿದ 'ವೀರನಾರಾಯಣ ಪ್ರಾಸಾದಿಕ ಕೃತಪುರ ನಾಟಕ ಮಂಡಳಿ'ಯು ಕನ್ನಡದ ಮೊಟ್ಟಮೊದಲ ವೃತ್ತಿನಾಟಕ-ಸಂಸ್ಥೆ'' ಎಂಬುದಾಗಿ ದಾಖಲಾಗಿರುವುದು ಉಚಿತವಾದುದಾಗಿಲ್ಲ. ದಿ.ಮುದವೀಡು ಕೃಷ್ಣರಾಯರೇ ಮೊದಲಾದವರು ತಿಳಿಸಿರುವಂತೆ ಬೆಳಗಾಂವಿ ಜಿಲ್ಲೆಯ ಹಲಸಿಗೆಯಲ್ಲಿ 1869ರಲ್ಲಿ ಸ್ಥಾಪನೆಯಾದ 'ಹಲಸಿಗೆ ನಾಟಕ ಮಂಡಳಿ'ಯೆ ಕರ್ನಾಟಕದ ಮೊಟ್ಟಮೊದಲ ನಾಟಕ-ಮಂಡಳಿಯಾಗಿರುವುದು. ಈ ಸಂಸ್ಥೆಯು ಬೆಳಗಾಂವಿ - ಬಳ್ಳಾರಿಗಳನ್ನೊಳಗೊಂಡಂತೆ ಉತ್ತರ ಕರ್ನಾಟಕದಾದ್ಯಂತ ಬಹುಖ್ಯಾತಿಯನ್ನು ಪಡೆದಿದ್ದಿತು. 'ಶ್ರೀನಿವಾಸ' ಎಂಬ ಹೆಸರಿನಲ್ಲಿ ಅಗಳಗಟ್ಟಿ ವೆಂಕಣ್ಣಾಚಾರ್ಯರು ಬರೆದುಕೊಡುತ್ತಿದ್ದ ನಾಟಕಗಳು ಈ ಸಂಸ್ಥೆಯ ಪ್ರಖ್ಯಾತ ಪ್ರದರ್ಶನಗಳು. 'ಸಂಡಿಗಿ - ಮಂಡಿಗಿ' ಎಂಬ ಅಡ್ಡಹೆಸರಿನ ಇಬ್ಬರು ತಮ್ಮ ಸ್ತ್ರೀಪಾತ್ರಗಳಿಂದಾಗಿ ಈ ಕಂಪನಿಗೆ ಹೆಸರು ತಂದರೆಂದು ದಾಖಲೆಗಳಿವೆ.

ಮೈಸೂರು **ಡಾ.ಹೆಚ್.ಎ. ಪಾರ್ಶ್ವನಾಥ್**

['ಹಲಸಿಗೆ ನಾಟಕ ಮಂಡಳಿ' ಕರ್ನಾಟಕದ ಮೊಟ್ಟಮೊದಲ ವೃತ್ತಿ ನಾಟಕ ಸಂಸ್ಥೆ ಎಂಬುದು ನಿರ್ವಿವಾದದ ಮಾತು. ಆದರೆ, ಮೇಲ್ಕಾಣಿಸಿದ ವಿವರ ನೀಡುವಾಗ ಎನ್ಕೆಯವರು ಬರೆದ 'ಶ್ರೀ ಗರೂಡ ಸದಾಶಿವರಾಯರು' ಪುಸ್ತಿಕೆ (ಪ್ರಕಾಶನ: ಮೈಸೂರು ರಾಜ್ಯ ಸಂಗೀತ - ನಾಟಕ ಅಕಾಡೆಮಿ - 1970)ಯ ಪುಟ 12ರಲ್ಲಿ ಪ್ರಸಿದ್ಧವಾದ ಶಾಂತಕವಿಗಳ ಕುರಿತ ಅಂಶವನ್ನು ನಾನು ಆಧಾರವಾಗಿಟ್ಟುಕೊಂಡೆ. ಅಲ್ಲದೆ, ಡಾ.ಎಚ್.ಕೆ.ರಂಗನಾಥರ 'ದಿ ಕರ್ನಾಟಕ ಥಿಯೇಟರ್'(ಪುಟ 85)ದಲ್ಲೂ ಕೃತಪುರ ನಾಟಕ ಮಂಡಳಿಯು 'ಪ್ರಥಮ ಕನ್ನಡ ವೃತ್ತಿ ನಾಟಕ ಸಂಸ್ಥೆ' ಯೆಂದು ದಾಖಲಿಸಿರುವುದನ್ನು ಎನ್ಕೆಯವರು ತಮ್ಮ ಬರಹದಲ್ಲಿ ಉದ್ಧರಿಸಿರುವುದನ್ನೂ ಗಮನಿಸಿದೆ.

ಗೋಪಾ]

○

ಶಂ.ಬಾ. ಅವರ 'ಕಂಸಾಡ ಕತೆ' ಯನ್ನು ಸಂಗ್ರಹಿಸಿ ಕೊಟ್ಟಿದ್ದಕ್ಕಾಗಿ ನಿಮ್ಮನ್ನು ಮನಸಾರೆ ಅಭಿನಂದಿಸುವೆ. ಅವರ ಸಂಶೋಧನೆ ಸ್ಮರಣೆಗೆ ಇದಕ್ಕಿಂತ ಹೆಚ್ಚಿನ ಮನ್ನಣೆ ಬೇಡ. 'ಎಡೆಗಳು ಹೇಳುವ' ಎಂಬ ಶಬ್ದ

ಪ್ರಯೋಗವು ಅವರು ಇದನ್ನು ರಚಿಸಿದ ಕಾಲಕ್ಕೆ ಸ್ಥಳನಾಮವು ಒಂದು ಶಾಸ್ತ್ರವಾಗಿ ಪರಿಣಮಿಸಿರಲಿಲ್ಲ ಎನ್ನುವುದರ ದ್ಯೋತಕ. ಸ್ಥಳನಾಮಗಳ ಅಧ್ಯಯನದ ಬಗ್ಗೆ ಐವತ್ತು ವರ್ಷಗಳ ಹಿಂದೆಯೇ ಅವರು ಸೂಕ್ತವಾದ ವಿಧಾನವನ್ನು ರೂಪಿಸಿದ್ದರು. ಈ ವಿಧಾನವು ಮಹಾರಾಷ್ಟ್ರದ ಸಂಶೋಧನ ರಂಗಕ್ಕೂ ಹೊಸದಾಗಿದ್ದಿತು. ಅಂತೂ ಈ ಬಗೆಯ ಸಂಶೋಧನೆಯಿಂದ ಕರ್ನಾಟಕ ಹಾಗೂ ಮಹಾರಾಷ್ಟ್ರ ಇವೆರಡರ ಪ್ರಾಚೀನ ಸಂಬಂಧವನ್ನು ಗುರುತಿಸಿದ್ದು ಒಂದು ಹಿರಿಯ ಸಾಧನೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಾಠ ಹೇಳುವಾಗ, ಯಾವ ಒಂದು ವರ್ಷವೂ ಶಂ.ಬಾ.ಅವರ ಈ ವಿವೇಚನೆಯನ್ನು ನಾನು ಹೇಳದೇ ಇಲ್ಲ.

ಯಾರಾದರೂ ಇದನ್ನು ಮರುಪ್ರಕಟನೆ ಮಾಡಬಾರದೆ?

ಪುಣೆ **ಶ್ರೀನಿವಾಸ ಹಾವನೂರ**

○

ಹೆಂಡತಿಯ ಅವತಾರಗಳ ಬಗ್ಗೆ

ಶ್ರೀ ಜನಾರ್ದನ ದೇವದಕೇರಿಯವರು ಸೆಪ್ಟೆಂಬರ್ 'ಕಸ್ತೂರಿ'ಯ ''ಪದಾರ್ಥ ಚಿಂತಾಮಣಿ'' ಯಲ್ಲಿ ನಾನು ಚರ್ಚಿಸಿದ ಕೆಲ ಪದಗಳ ಬಗ್ಗೆ ಆಕ್ಷೇಪಿಸಿದ್ದಾರೆ. (''ಸಹಚಿಂತನ'' ನವಂಬರ್ 1991) ಸಂಸ್ಕೃತ ವೈಯಾಕರಣರ ಮತ್ತು ನೈಘಂಟುಕರ ದೃಷ್ಟಿಯಿಂದ ಅವರ ಆಕ್ಷೇಪಗಳು ಸಹಜ. ಆದರೆ ಇಂದು ನಮಗೆ ತುಲನಾತ್ಮಕ ಭಾಷಾಶಾಸ್ತ್ರದ ಸಹಾಯವಿರುವಾಗ ನಮ್ಮ ಪುರಾತನರ ಎಲ್ಲ ನಿಶ್ಚಯಗಳನ್ನು ಒಪ್ಪುವ ಅಗತ್ಯವಿಲ್ಲ. ''ದಂ-ಪತಿ''ಯಲ್ಲಿನ ''ದಂ'' ಪ್ರಾಥಮಿಕವಾಗಿ ಮನೆಯಿರಬೇಕು. ಅದು ಗ್ರೀಕ್ domos, ಲ್ಯಾಟಿನ್ domus ಮೊದಲಾದವುಗಳಿಗೆ ಜ್ಞಾತಿಯಾಗಿದ್ದು ಅವು ಮನೆಯೆಂಬರ್ಥ ಕೊಡುತ್ತವೆ. ಅಷ್ಟೇ ಅಲ್ಲ, ಗ್ರೀಕಿನಲ್ಲಿ ಸಂಸ್ಕೃತ ''ಪತಿ''ಗೆ ಸಂವಾದಿಯಾದ potes ಯೊಡನೆ ಸಮಾಸ ಹೊಂದಿದ domos (=ದಂ-ಪತಿ)ಗೆ ಗೃಹಪತಿಯೆಂದೇ ಅರ್ಥವಿದೆ. ಮನೆ, ನಿವಾಸ ಎಂಬರ್ಥದಲ್ಲಿ ವೈದಿಕ ಭಾಷೆಯಲ್ಲಿ ಕೂಡ ದಮ್-ದಮ ಪ್ರಯೋಗವಿದೆಯೆಂದು ಋಗ್ವೇದದ 10-99-6 ಮೊದಲಾದ ಸೂಕ್ತಗಳತ್ತ ಮೋನಿಯರ್ ವಿಲಿಯಮ್ಸ್ ನಿರ್ದೇಶಿಸಿದ್ದಾನೆ. ಹೀಗೆ ''ದಂಪತೀ'' ಎಂಬಲ್ಲಿ ಗಂಡ ಹೆಂಡಿರು ಸೇರಿ ಮನೆಯೊಡೆಯ - ಒಡತಿಯರೆಂದು ತಾತ್ಪರ್ಯವೆಂದು ನನಗೆ ಮನವರಿಕೆಯಾಯಿತು.

''ಕಲತ್ರ''ದ ವಿಚಾರ: ಹೆಂಡತಿ ವೀರ್ಯಕ್ಕೆ ಪಾತ್ರವಾದಪ್ಪರಿಂದ ಅವಳು ''ಕಲತ್ರ''ಎಂದು ಶ್ರೀದೇವದಕೇರಿಯವರೂ ಒಪ್ಪಿದ್ದಾರೆ. ''ಕಲ'' ಎಂದರೆ ವೀರ್ಯವೆಂದು ಅವರು ನಿಘಂಟುಗಳನ್ನು ನಿರ್ದೇಶಿಸಿದ್ದಾರೆ. ''ಕಲಶ'', ''ಕಲತ್ರ'' ಇವೆರಡೂ ದ್ರಾವಿಡ ''ಕಲಂ'' ಎಂಬುದರಿಂದ ಹೊರಟಿವೆಯೆಂದು ನಾನು ಭಾವಿಸಿದ್ದೇನೆ. ದ್ರಾವಿಡ ''ಕಲ''ಕ್ಕೆ ಪಾತ್ರವೆಂದೂ ಹಡಗೆಂದೂ ಅರ್ಥವಿದೆ. ಈ ವಿಷಯದಲ್ಲಿ ನಾನು ತುಲನಾತ್ಮಕ ದ್ರಾವಿಡ ಕೋಶವನ್ನು ಆಧರಿಸಿದ್ದೇನೆ. ಸಂಸ್ಕೃತದಲ್ಲಿ ''ತ್ರ''ಪ್ರತ್ಯಯ ಕೇವಲ ''ತ್ರಾಯತೇ''(ರಕ್ಷಿಸುತ್ತದೆ) ಎಂಬೊಂದೇ ಅರ್ಥವನ್ನು ಸೂಚಿಸದೆ ''ಅಲ್ಲಿ ಇದೆ'', ''ಅದಕ್ಕೆ ಸಂಬಂಧಿಸಿದೆ'' ಎಂಬ ಮೊದಲಾದ ಅರ್ಥಗಳನ್ನು ಸೂಚಿಸುತ್ತದೆ (ಉದಾ - ಪಾತ್ರ). ''ಕಲಂಬಿ'' ಎಂಬ ತುಳು ಪದವೂ (ತನ್ನಲ್ಲಿ ಒಳಗೊಳ್ಳುತ್ತದೆ ಎಂಬುದರಿಂದ) ಮರದ ದೊಡ್ಡ ಪೆಟ್ಟಿಗೆ ಎಂಬರ್ಥದಲ್ಲಿ ಬಳಕೆಯಲ್ಲಿದೆ.

ಇನ್ನು ಅದೇ ''ಸಹಚಿಂತನ''ದಲ್ಲಿ ಸೋಮಶೇಖರ ರುಳಿಯವರು ''ಗವ್ವಾ'' ಎಂಬ ಪದ ಮರಾಠಿಯಲ್ಲಿದೆ ಎಂದದ್ದು ಸರಿ. ಆದರೆ ಈ ಪದ ಮರಾಠಿಯಿಂದಾಚೆಗೆ ನೀಡುತ್ತದಾದ್ದರಿಂದ ಮರಾಠಿಯನ್ನು ನಾನು ಕುರಿತು ಹೇಳಲಿಲ್ಲ. ಆದರೆ ''ಗಪ್ಪು'' ಮತ್ತು ''ಗಫಲತ್'' ಬೇರೆ ಬೇರೆ ಪದಗಳು. ''ಗಪ್ಪು'' = ಬಾಯಿ ಮುಚ್ಚಿಕೊಂಡಿರುವುದು.

ಹುಬ್ಬಳ್ಳಿ **ಪಾ.ವೆಂ. ಆಚಾರ್ಯ**

ದಿ. ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಶಾನುಭೋಗರ ತೋರಣ' (ಕಸ್ತೂರಿ, ನವೆಂಬರ್ 91, ಪುಟ 18)ದಲ್ಲಿ ಕೊಟ್ಟಿರುವ ಬಾಕ್ಸ್ ಐಟಂನಲ್ಲಿ 'ಮೆರವಣಿಗೆ' ಗ್ರಂಥದ ಕುರಿತು ''1981ರಲ್ಲಿ ಐಬಿಎಚ್ ಪ್ರಕಟಿಸಿರುವ'' ಎಂದು ನೀಡಿದ ವಿವರಣೆಗೆ ಪೂರಕವಾಗಿ ಈ ಅಂಶ: 'ಮೆರೆವಣಿಗೆ' ಎಂಬ ಹೆಸರಿನಲ್ಲಿ ಅದು ಮೊದಲ ಆವೃತ್ತಿಯಾಗಿ 1947ರಲ್ಲಿ, ಸತ್ಯಶೋಧನ ಪ್ರಕಟನಾಲಯ ಕೋಟೆ - ಬೆಂಗಳೂರು ಇವರಿಂದ ಪ್ರಕಟವಾಯಿತು. ಈ ಗ್ರಂಥಕ್ಕೆ 'ಮೆರೆವಣಿಗೆ' ಎಂಬ ಹೆಸರಿಡಬೇಕೋ, 'ಮೆರವಣಿಗೆ' ಎಂದು ಕರೆಯಬೇಕೋ ಎಂಬ ಗೊರೂರರ ಸಂದಿಗ್ಧವನ್ನು ದಿ.ತಿ.ನಂ.ಶ್ರೀ.ಯವರು ''ಎರಡೂ ಒಂದೇ, ಹೇಗಾದರೂ ಕರೆಯಿರಿ'' ಎಂದು ಹೇಳಿ ಪರಿಹರಿಸಿದರಂತೆ.

ಸಂಪಾದಕ

ಎಲ್ಲ ಮನುಷ್ಯರಲ್ಲೂ ಮನಸ್ಸು ಇರುವುದು ನಿಜವಾದರೂ ಅದು ಎಲ್ಲರಲ್ಲೂ ಒಂದೇ ಸಮನಾಗಿ ಇರುವುದಿಲ್ಲ. ಮನಸ್ಸನ್ನು ನಿಕಷಕ್ಕೆ ಒಡ್ಡುವ ಮನಃಶಾಸ್ತ್ರ ಒಂದು ತತ್ತ್ವವೂ ಹೌದು, ತಂತ್ರವೂ ಹೌದು.

ಮನಸ್ಸು ಮತ್ತು ಮನುಷ್ಯ

● ಎಂ.ಎ. ಶರ್ಮಾ ತದ್ದಲಸೆ

ಮನುಷ್ಯನಿಗಿಂತಲೂ ಮನಸ್ಸು ಮಿಗಿಲಾದದ್ದು ಎನ್ನಲಾಗುತ್ತದೆ. ಯಥಾರ್ಥವಾದಿಗಳು ಇದನ್ನು ಒಪ್ಪಿಕೊಳ್ಳಲಾರರು. ಆದರೆ ಮನುಷ್ಯನ ಸ್ಥಾನಮಾನ ಏನೇ ಇರಲಿ, ಮನಸ್ಸಿನ ಮೇಲ್ಮೆ ಮಹಿಮೆ ಸ್ವತಃಸಿದ್ಧವಾದದ್ದು. ಮನುಷ್ಯ ಮಿಗಿಲಾಗುವುದಾದರೂ ಅವನಲ್ಲಿ ಮೂಡಿ ಮೂರ್ತವಾದ ಮನಸ್ಸಿನ ಮೂಲಕವೇ ಸರಿ. ಮಾನವರು ಮನುವಿನ ಮಕ್ಕಳು ಹೌದೋ ಅಲ್ಲವೋ ಮನಸ್ಸಿನ ಮಕ್ಕಳು ಎಂಬುದು ಮಾತ್ರ ಸತ್ಯ. 'ಮನ್' ಧಾತುವಿನಿಂದ ಸಿದ್ಧವಾದ 'ಮಾನವ' ಶಬ್ದವೇ ಇದಕ್ಕೆ ಸಾಕ್ಷಿ. 'ಮನ ಏವ ಮನುಷ್ಯಾಣಾಂ' ಎಂದು ಕೂಡ ಹೇಳಲಾಗಿದೆ. ಮಾನವನ ಮನೋಗತಿಗಳ ವಿನ್ಯಾಸವು; ಮನೋರಥಗಳ ವಿಲಾಸವು, ಮನೋಧರ್ಮ ವಿಕಾಸವು ಜೀವನ ವ್ಯಾಪ್ತಿಯುದ್ದಗಿದೆ. ಮನಃಶಕ್ತಿ, ಮನಃಶುದ್ಧಿ, ಹಾಗೂ ಮನಃಶಾಂತಿ ಇವನ್ನು ಅವಲಂಬಿಸಿಯೇ ಜೀವನದ ನೆಮ್ಮದಿ ನಿಂತಿದೆ.

ಮನಃಶಾಸ್ತ್ರವು ಒಂದು ವಿಜ್ಞಾನವಾಗಿ ರೂಪುಗೊಂಡದ್ದು 19ನೇ ಶತಮಾನದಿಂದ. ಹಾಗೆ ನೋಡಿದರೆ ಮನಸ್ಸಿನ ಕುರಿತು ಕುತೂಹಲ-ಜಿಜ್ಞಾಸೆಗಳು ಮಾನವನಷ್ಟೇ ಪ್ರಾಚೀನವಾದವುಗಳು. ತತ್ವಜ್ಞಾನದ ವೇದಾಂತದ ಇತರ ಅಂಗಗಳಷ್ಟೇ ಸಮೀಚೀನವಾಗಿ ಮನಸ್ತತ್ವದ ಕುರಿತು ಮೇಧಾವಿಗಳು ಅನಾದಿಯಿಂದಲೂ ವಿಶ್ಲೇಷಿಸುತ್ತ ಬಂದಿದ್ದಾರೆ. ಅರಿಸ್ಟಾಟಲ್‌ನಿಗಿಂತ ಮೊದಲು ಭಾರತದ ದಾರ್ಶನಿಕರು, ಭಗವದ್ಗೀತಾಕಾರರು, ಭಗವಾನ್ ಪತಂಜಲಿಗಳು, ಬೌದ್ಧ ತತ್ವವೇತ್ತರು ತಕ್ಕ ಮಟ್ಟಿಗೆ ಮನಸ್ಸಿನ ಸ್ವರೂಪ ಸ್ವಭಾವದ ವ್ಯಾಖ್ಯಾನ ಮಾಡಿದ್ದರು. ಆರಂಭದಲ್ಲಿ ಮನಸ್ತತ್ವದ ಪರಿಜ್ಞಾನವು ಒಂದು ಊಹೆಯ ಉತ್ಪ್ರೇಕ್ಷೆಯ ವಿಷಯವಾಗಿತ್ತು. ಅದು ಕ್ರಮೇಣ ಪ್ರಾಯೋಗಿಕ ಅವಸ್ಥೆಯನ್ನು ವಿಜ್ಞಾನದ ಪ್ರತಿಷ್ಠೆಯನ್ನು ಪಡೆಯಿತು. ವಿಜ್ಞಾನದ ಶಕ್ತಿ ವ್ಯಾಪಕವಾದಂತೆ ಅದರ ಪರಿಣಾಮವು ದೂರಗಾಮಿಯಾಯಿತು. ಮನಃಶಾಸ್ತ್ರವನ್ನವಲಂಬಿಸಿದ ಸಾಮಾನ್ಯದ್ದಾದ ಹಸ್ತಸಾಮುದ್ರಿಕ ವಿದ್ಯೆಯು ವಿಜ್ಞಾನದ ಒರೆಗಲ್ಲಿನಲ್ಲಿ ಹೊಸ ಸಂಗತಿಯನ್ನು ಸ್ಪಷ್ಟಪಡಿಸಿತು. ಇದೊಂದು ಸಣ್ಣ ಸಂಗತಿಯ ಶೋಧದ ಪ್ರಭಾವ ಪರಿಣಾಮ ಎಲ್ಲಿಗೆ ಬಂತೆಂದರೆ ವ್ಯಕ್ತಿ ವ್ಯಕ್ತಿಗಳ ಬೆರಳುಗಳ ರೇಖಾ ರಚನೆಗಳು ಬೇರೆ ಬೇರೆಯಾಗಿರುತ್ತದೆಂದು ಖಾತ್ರಿಯಾಯಿತು. ಬೆರಳುಗಳ ಗುರುತುಗಳಿಂದ ಕಳ್ಳ, ಕೊಲೆಗಡುಕರನ್ನು ಗುರುತಿಸುವ ಶಾಸ್ತ್ರವೊಂದು ಹುಟ್ಟಿಕೊಂಡಿತು. ಆದರೆ ಕಳ್ಳ-ಕೊಲೆಗಡುಕರು ಈ ಶೋಧಕ್ಕೆ ಹೊಂದಿಕೊಂಡು ತಮ್ಮ ಕಾರ್ಯತಂತ್ರವನ್ನೇ ಬದಲಾಯಿಸಿದರು. ಸಭ್ಯಸಂಭಾವಿತರು ಕೈಕುಲುಕುವಾಗ ಕೈಚೀಲಗಳನ್ನು ತೊಡುತ್ತಿದ್ದರೆ ಕಳ್ಳ ಕೊಲೆಗಡುಕರು ಈ ಕೈಚೀಲಗಳನ್ನೇ ಬಳಸಿ ಕತ್ತು ಹಿಚುಕಹತ್ತಿದರು. ಇದೇ ರೀತಿಯಲ್ಲಿಯೇ ಮನಃಶಾಸ್ತ್ರದ ಮಾರ್ಮಿ

ಕತೆಯೂ ಮುಂದುವರಿದಿದೆ. ಮನಃಶಾಸ್ತ್ರ ಒಂದು ತತ್ವವೂ ಹೌದು, ತಂತ್ರವೂ ಹೌದು. ಮಾನವನ ಜೀವನ ವ್ಯಾಪಾರದ ಒಂದಲ್ಲ ಒಂದು ಅಂಗವನ್ನು ಎತ್ತಿಕೊಂಡು ಅದರ ರಚನೆಯ ಮನೋಮೂಲವನ್ನು ಕಂಡುಕೊಳ್ಳಲು ಹೆಣಗುತ್ತಿರುವ ಮನಃಶಾಸ್ತ್ರಜ್ಞರ ಕಾರ್ಯದ ಮಹತ್ವ ಬೃಹತ್ತಾಗಿಯೇ ಇದೆ. ಭ್ರಮಿಷ್ಠರ, ಮನೋರೋಗಿಗಳ, ಕೆಲಸಗಾರರ, ಸೆರೆಗುಡುಕರ, ಸೆರೆಯಾಳುಗಳ ಮನೋಭೂಮಿಕೆಗಳನ್ನು ಅಭ್ಯಸಿಸುವ ತಜ್ಞರ ಸಿದ್ಧಾಂತಗಳೂ ಅನುಮಾನಗಳೂ ಅನೇಕ ತೊಡಕುಗಳ ಬಗೆಹರಿಕೆಗೆ ನೆರವಾಗಿವೆ. ಇಂದಿನ ಶೈಕ್ಷಣಿಕ, ಔದ್ಯೋಗಿಕ, ವೈದ್ಯಕೀಯ, ಅಪರಾಧ ದಂಡಕ ಕ್ಷೇತ್ರಗಳಲ್ಲಿ ಮನಸ್ಸಿನ ತುಡಿತ ಮಿಡಿತದ ಮಾರ್ಗ ಕಂಡು ಬಂದಿದೆ.

ಮನಸ್ಸಿನ ಶಕ್ತಿ ವೈತ್ಯ ಸ್ವರೂಪದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ನಿಸರ್ಗದಲ್ಲಿ ಬೇರೆ ಜೀವಿಗಳಿಗೆ ಹೋಲಿಸಿದರೆ ಮನುಷ್ಯನ ಮನಸ್ಸಿಗಿರುವಷ್ಟು ಧಾರಣ ಶಕ್ತಿ ಉಳಿದವಕ್ಕೆ ಇರುವದಿಲ್ಲ. ಇತರ ಜೀವಿಗಳ ಮನಸ್ಸು ಉಗ್ರವಾಗಬಹುದು. ಆದರೆ ಅದನ್ನೇ ಉದ್ದಕ್ಕೂ ಉಳಿಸಿಕೊಂಡು ಬರಲಾರವು. ಮಾನಸಿಕ ಸ್ಥಿತಿ ಮನುಷ್ಯ ಜಾತಿಯ ಪ್ರತಿಯೊಂದು ವರ್ಗದಲ್ಲೂ ಪ್ರತಿಯೊಂದು ಕಾಲದಲ್ಲೂ ಬೇರೆಬೇರೆಯಾಗಿ ಕಂಡುಬರುತ್ತಲೇ ಇದೆ. ಮಾನವನ ಮನಸ್ಸು ಒಳಗೆಲ್ಲ ಒಂದೇ. ಆಹಾರ, ಮೈಥುನ, ಭಯ, ವಿಪ್ಲವ, ಯುದ್ಧ, ಉತ್ಸವ ಮುಂತಾದ ನಿಕರದ ಪ್ರಸಂಗಗಳಲ್ಲಿ ಯಾವ ದೇಶದ ಮನುಷ್ಯನಾದರೂ ನಡೆಯುವ ರೀತಿ ಒಂದೇ.

ಮನಸ್ಸಿಗೆ ಕಳವಳ ಮತ್ತು ಕಳಂಕ ಹಚ್ಚುವದರಲ್ಲಿ ಇಂದಿನ ನಾಗರಿಕ ಸಮಾಜದ ಪಾತ್ರ ಅಧಿಕವಾಗಿದೆ. ಎಲ್ಲ ಮನುಷ್ಯರಲ್ಲೂ ಮನಸ್ಸು ಇರುವದು ನಿಜವಾದರೂ ಎಲ್ಲರಲ್ಲೂ ಅದು ಸಶಕ್ತವಾಗಿ, ಒಂದೇ ಸಮನಾಗಿ ಇರುವದಿಲ್ಲ. ದುರ್ಬಲ ಮನಸ್ಸಿನವನನ್ನು ಬಲಶಾಲಿಯಾದವನಿಂದ ಉಳಿಸಲು ಯಾವುದೇ ಮಾರ್ಗ ಕಾಣದಿರುವ ಸಮಾಜವೊಂದನ್ನು ಒಂದು ಕ್ಷಣ ಕಲ್ಪಿಸಿಕೊಳ್ಳಿ. ಅಂಥ ಸಮಯದಲ್ಲಿ ಆ ಬಲಶಾಲಿ ಹೆದರಿ

ಚಿಟಿಕೆ ಚಿಂತನೆ

★ ಒಳ್ಳೆಯ ವಿಚಾರಗಳನ್ನು ಹೇಳುವವರು ಬೇಕಾದಷ್ಟು ಜನ ಸಿಗುತ್ತಾರೆ. ಆದರೆ, ಕೇಳುವವರು ಮಾತ್ರ ಅತಿ ಕಡಿಮೆ. ಏಕೆಂದರೆ ಕೇಳುವುದಕ್ಕೆ ಮಾನಸಿಕ ಶಕ್ತಿ ಬೇಕಾಗುತ್ತದೆ.

- ರವೀಂದ್ರನಾಥ್ ಟಾಗೂರ್

★ ಸಂಕುಚಿತ ಮನಸ್ಸಿನ ವ್ಯಕ್ತಿಗಳು ಚಿಕ್ಕ ಬಾಯಿಯ ಶೀಷೆಯಂತೆ; ಅವರೊಳಗೆ ಇರುವ ಅಲ್ಪವನ್ನು ಹೊರಹಾಕುವಾಗಲೂ ಅತಿಯಾದ ಸಪ್ಪಳ ಮಾಡುತ್ತಾರೆ.

- ಅಲೆಕ್ಸಾಂಡರ್ ಪೋಪ್

★ ಇಲ್ಲಿ ಇರುವ ಏಕೈಕ ನಿಶ್ಚಿತತೆಯೆಂದರೆ ಎಲ್ಲವೂ ಅನಿಶ್ಚಿತವಾಗಿರುವುದು.

- ಹಿರಿಯ ಪ್ಲೀನಿ

★ ಮಾನವ ಸಂದರ್ಭಗಳ ಶಿಶು ಅಲ್ಲ; ಸಂದರ್ಭಗಳೇ ಮನುಷ್ಯನಿಂದ ಸೃಷ್ಟಿಸಲ್ಪಡುತ್ತವೆ.

- ನೆಲ್ಸನ್ ಗ್ಲುಯೆಕ್

★ ಲೌಕಿಕ ಪ್ರಸಿದ್ಧಿ ಉಸಿರಾಟದಂತೆ ಒಳಗೊಮ್ಮೆ ಹೊರಗೊಮ್ಮೆ ಹಾಯುತ್ತದೆ. ಬದಿ ಬದಲಾದಾಗ ಹೆಸರೂ ಬದಲಾಗುತ್ತದೆ.

- ಡಾಂಟೆ

★ ವಿರಾಮವನ್ನು ಜಾಣ್ಮೆಯಿಂದ ಬಳಸಿಕೊಳ್ಳುವುದೇ ಶಿಕ್ಷಣದ ಗುರಿ.

- ಅರಿಸ್ಟಾಟಲ್

★ ದುಃಖಗಳು ಗೂಢಚಾರರಂತೆ ಒಬ್ಬಂಟಿಯಾಗಿ ಬರುವುದಿಲ್ಲ. ದಂಡು ದಂಡಾಗಿ ಬರುತ್ತವೆ

ಹ್ಯಾಮ್ಲೆಟ್

ಬಲಪ್ರಯೋಗ ಮಾಡದೆ ಇರುವಂತಹ ಯಾವುದಾದರೂ ಬಗೆಯ ಭಯದ ತುರ್ತು ಅವಶ್ಯಕತೆ ಉಂಟಾಗುತ್ತದೆ. ಯಾರಾದರೂ ವಿಪರೀತ ಬಲಶಾಲಿಗಳಾಗಿದ್ದರೆ ಅಂಥವರು ಇನ್ನೊಬ್ಬ ಶಕ್ತಿಶಾಲಿಯ ಮಾನಸಿಕ ಸ್ಥಿತಿಯಿಂದಲೇ ಭಯಗ್ರಸ್ತರಾಗಬಲ್ಲರು. (ಶ್ರೀಕೃಷ್ಣ ಶಿಶುಪಾಲನನ್ನು ವಧೆ ಮಾಡಿದ್ದು ಹೀಗೇ ಅಲ್ಲವೇ?) ಇಷ್ಟರ ಮೇಲೂ ಆ ಬಲಶಾಲಿ ತನ್ನ ಸಾಧನ ಸಂಪತ್ತುಗಳ ನೆರವಿನಿಂದ ದುರ್ಬಲರನ್ನು ಶೋಷಣೆಗೆ ಒಳಪಡಿಸುತ್ತಲೇ ಹೋದರೆ ಆಗ ಕಾಲಾಂತರದಲ್ಲಿ ಆ ಮಂದಿ ಭಾವನಾತ್ಮಕ(ಮಾನಸಿಕ)ವಾಗಿ ಸಂಘಟಿತರಾಗಿ ಸೆಟೆದು ನಿಂತುಕೊಳ್ಳುತ್ತಾರೆ. ಇದೇ ಬಂಡಾಯ ಮನೋಧರ್ಮವೆಂದೆನಿಸಿಕೊಳ್ಳುತ್ತದೆ.


ಪ್ರತಿಯೊಂದು ಕಾಲದಲ್ಲೂ ಮನಸ್ಸು ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಹೋಗುತ್ತದೆ. ಮಾನವ ತಾನು ನಾಗರಿಕತೆಯ ಮೂಸೆಯಲ್ಲಿ ಅಚ್ಚೊತ್ತಿಸಿಕೊಳ್ಳುತ್ತಾ ಹೋಗುತ್ತಿದ್ದಂತೆಯೆ ಮನಸ್ಸಿಗೆ ಕೂಡಾ ನಾಗರಿಕವಾದ ರೂಪವನ್ನು ಕೊಡಲಾರಂಭಿಸಿದ. ಹಿಂದೆ ನಾಗರಿಕ ಸಮಾಜದ ಲಕ್ಷಣಗಳನ್ನು ಪಡೆಯುತ್ತಿದ್ದಂತೆಯೇ ರಾಜನ ಆಡಳಿತವುಳ್ಳ ಶಾಸನ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು. ಈ ವ್ಯವಸ್ಥೆ ಪ್ರಜೆಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ತನ್ನದಾಗಿಸಿಕೊಂಡಿತು. ಹೊಡೆದಾಟ-ಯುದ್ಧ ಭಯದಿಂದ ಸಾಮಾನ್ಯ ಜನರ ಮನಸ್ಸಿಗೆ ಸ್ವಲ್ಪ ನೆಮ್ಮದಿ ದೊರೆಯಿತು. ಇದರಿಂದ ಶಾರೀರಿಕ ಬಲದ ಮಹತ್ವ ಕಡಿಮೆಯಾಯಿತು. ಬುದ್ಧಿಬಲ ಹಣದ ಬಲಗಳಿಗೆ ಹೆಚ್ಚು ಪ್ರಾಶಸ್ತ್ಯ ದೊರೆಯಲಾರಂಭಿಸಿತು. ಬುದ್ಧಿ ಮತ್ತು ಹಣದ ಬಲವುಳ್ಳವರ ಕೈಗೆ ಅಧಿಕಾರ ಬಂದು ಸೇರಿತು. ನಾಡಿನಲ್ಲಿ ಆಡಳಿತ ವ್ಯವಸ್ಥೆ ಸುಸೂತ್ರವಾಗಿರಬೇಕಾದರೆ ಮನಸೋ ಇಚ್ಛೆ ನಡೆದುಕೊಳ್ಳಲಾಗದೆಂದು ಈ ಅಧಿಕಾರಾರೂಢರು ಮನಗಂಡರು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮನಸ್ಸಿಗಾದ ವ್ಯಥೆ ವಿಷಾದಕ್ಕೆ ಅದರ ಪೂರ್ಣ ವಿವರಗಳನ್ನು ಆಡಳಿತದ ಜವಾಬ್ದಾರಿ ಹೊತ್ತವರಿಗೆ ನೀಡಿ, ಅವರು ತಮಗೆ ಉಚಿತವೆನಿಸಿದ ರೀತಿಯಲ್ಲಿ ಅದನ್ನು ಬಗೆಹರಿಸಲು ತೀರ್ಮಾನಿಸಲಾಯಿತು. ಈ ರಾಷ್ಟ್ರೀಯ ರೂಪಕ್ಕೆ 'ದಂಡ' ಅಥವಾ 'ಶಿಕ್ಷೆ' ಎಂದು ಕರೆಯಲಾಯಿತು. ತೊಂದರೆಯಾದ ಮನಸ್ಸಿಗೆ ಸಮಾಧಾನ ಸಿಕ್ಕಲಿ ಎಂಬುದು ಈ ದಂಡ ವ್ಯವಸ್ಥೆಯ ಗುರಿಯಾಗಿತ್ತು. ಇನ್ನೊಂದು ಉದ್ದೇಶ ಇಂಥ ಕೃತ್ಯಗಳಲ್ಲಿ ತೊಡಗುವವರು ಶಿಕ್ಷೆಯ ಭಯದಿಂದಾಗಿ ಆ ಕೃತ್ಯವನ್ನು ಮಾಡದಿರಲಿ ಎಂಬುದು. ಈ ವ್ಯವಸ್ಥೆ ಇಂದಿಗೂ ಚಾಲ್ತಿಯಲ್ಲಿದೆ. ಆದರೆ ಇಂದು ಸರಕಾರದಿಂದ ನ್ಯಾಯ ದೊರಕುವಲ್ಲಿ ಉಂಟಾಗುವ ವಿಲಂಬದಿಂದಾಗಿ ಹಾಗೂ ಕಾನೂನಿನ ದೃಷ್ಟಿಯಿಂದ ಸಾಬೀತುಪಡಿಸಲು ಸಾಧ್ಯವಾಗಲಾರದೆಂದು ತೀವ್ರಗೊಂಡ ಮನಸ್ಸು ಮುನ್ನುಗ್ಗುವಂತಾಗಿದೆ. ಸರಕಾರ ತನ್ನ ಕಾನೂನುಪಾಲನೆಯ ಮೇಲೆ ನಂಬಿಕೆಯಿಡಲಿಲ್ಲವೆಂದೂ ಶಿಕ್ಷೆಗೆ ಗುರಿಪಡಿಸುತ್ತದೆ. ಆದರೆ ತೀವ್ರಗೊಂಡ ಮನಸ್ಸು ತನ್ನ ಕಾರ್ಯಶಕ್ತಿಗೆ ಎಷ್ಟು ಶಾಂತಿ ಹೊಂದುತ್ತದೆಂದರೆ ಸರಕಾರ ನೀಡುವ ಶಿಕ್ಷೆ ಕೂಡಾ ಅದರ ಪಾಲಿಗೆ ಕ್ಷುಲ್ಲಕವೆನಿಸುವಷ್ಟು! ಸರಕಾರ ಉಚಿತ - ಅನುಚಿತಗಳ ತಾರತಮ್ಯವನ್ನು ತಿಳಿಯದೆ ತೀರ್ಮಾನ ಕೈಗೊಳ್ಳುತ್ತ ಹೋದಾಗ ಅತೃಪ್ತ ಅಸಂತುಷ್ಟ ಮನಸ್ಸಿನವರ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಅಂಥ ಪರಿಸ್ಥಿತಿಯಲ್ಲಿ ಜನತೆಗೆ ದೃಢಮನಸ್ಕನಾದ ಸಶಕ್ತ ವ್ಯಕ್ತಿಯ ಮುಂದಾಳುತನ ದೊರೆತಲ್ಲಿ ಸರಕಾರ ಉರುಳುವುದಕ್ಕೆ ಹೆಚ್ಚು ಸಮಯ ಬೇಕಾಗುವದಿಲ್ಲ. ಈ ಬಗೆಯ ಸಾಮೂಹಿಕ ತಿರಸ್ಕಾರ ಮನಸ್ಸಿನ ಮೂಲಕವೇ ಆಗುತ್ತದೆ. ಇಂದಿನ ಸಮಾಜದಲ್ಲಿ ದಿನ ದಿನಕ್ಕೂ ಮಾನಸಿಕ ಹಿಂಸೆ ಹೆಚ್ಚುವಂತಾಗಿದೆ. ಉದ್ರಿಕ್ತವಾದ ಮನಸ್ಸಿನ ಕೆಲಸ ಯಾವುದೇ ಎಗ್ಗಿಲ್ಲದೆ ಆಗುತ್ತದೆ. ಸುಶಿಕ್ಷಿತ ಮನಸ್ಸು ಒಳಗೊಳಗೆ ಕೆಲಸ ಮಾಡುತ್ತಿರುತ್ತದೆ. ಉದ್ರಿಕ್ತ ಮನಸ್ಸು ಶಾರೀರಿಕವಾಗಿ ಪೀಡಿಸಿದರೆ ಸುಶಿಕ್ಷಿತ ಮನಸ್ಸು ಬುದ್ಧಿವಂತರನ್ನು ಕಾಡುತ್ತದೆ. ಮನೆಗಳಲ್ಲಿ, ಕಚೇರಿಗಳಲ್ಲಿ, ಸುತ್ತಮುತ್ತಲಲ್ಲಿ ಎಲ್ಲಿ ಬೇಕಾದರೂ ಈ ಹಿಂಸಾಮಯತೆಯನ್ನು ಕಾಣಬಹುದು.

ಅತೃಪ್ತ ಮನಸ್ಸಿನ ಆಶಯ ಹೇಗೆ ಬೇಕಾ

ದರೂ ಅಭಿವ್ಯಕ್ತವಾಗಬಹುದು. ತಂದೆ ತಾಯಿಗಳು ಮಕ್ಕಳನ್ನು ಮುದ್ದುಮಾಡಿ ಕೆಲವೊಂದಕ್ಕೆ ನಿರ್ಬಂಧಿಸುತ್ತಾರೆ. ಅದು ಮಗುವಿನ ಒಳ್ಳೆಯದಕ್ಕೇ. ಆದರೂ ಮಗು ತಂದೆ ತಾಯಿಗಳನ್ನು ಸತಾಯಿಸಿ ಸಮಾಧಾನ ಪಟ್ಟುಕೊಳ್ಳುತ್ತದೆ. ಸತಾಯಿಸುವದರಿಂದ ತಾನು ತೊಂದರೆಗೆ ಒಳಗಾಗುತ್ತಿದ್ದರೂ ಅದರ ಪರಿವೆ ಎಲ್ಲಿ? ಅದರ ಅಪರಿಪಕ್ವ ಬುದ್ಧಿ ತಾನು ಗೋಳು ಹೊಯ್ದುಕೊಂಡೆನೆಂದು ತಿಳಿದು ಸಂತೋಷಪಡುತ್ತದೆ. ಅದೇ ದೊಡ್ಡವರಾದ ಮೇಲೆ ತನ್ನನ್ನು ಆಶ್ರಯಿಸಿದ ತಂದೆ ತಾಯಿಗಳಿಗೆ ಅವಶ್ಯಕ ವಸ್ತುಗಳನ್ನು ತಂದು ಕೊಡದೆ, ಅವರಿಗೆ ಬೇಡವಾದ ಪದಾರ್ಥಗಳನ್ನು ವ್ಯರ್ಥವಾಗಿ ಹಣ ಸುರಿದು ತಂದು ವಿಚಿತ್ರವಾದ ಆನಂದವನ್ನು ಅನುಭವಿಸುವದುಂಟು. ಚಿಕ್ಕಂದಿನಲ್ಲಿರುವಾಗ ಮನಸ್ಸಿನಲ್ಲಿ ಹೆಪ್ಪುಗಟ್ಟಿದ ತಿರಸ್ಕಾರವೇ ಇದಕ್ಕೆ ಕಾರಣ. ಬಡಪಾಯಿ ಜವಾನನೂ ಮನಸ್ಸು ರೋಸಿ ಹೋಗಿದ್ದರೆ ತನ್ನ ಯಜಮಾನನ ಮೇಲೆ ಸಮಯ ಸಾಧಿಸುತ್ತಾನೆ. ಯಜಮಾನನಿಗೆ ಇದು ತಿಳಿಯದಿದ್ದರೂ - ಇದರಿಂದ ತೊಂದರೆಯಾಗದಿದ್ದರೂ ಜವಾನನ ಮನಸ್ಸಿಗಂತೂ ಶಾಂತಿ ಸಿಕ್ಕಿತು. ಮನಸ್ಸು ವಿಕೃತಗೊಂಡ ಒಬ್ಬ ವ್ಯಕ್ತಿ ಚಿತ್ರ ಕಲಾವಿದನಾದರೆ ತನಗಾಗದವರ ವ್ಯಂಗ್ಯಚಿತ್ರಗಳನ್ನು ಬಿಡಿಸುತ್ತಾನೆ. ಇದರಿಂದ ಅವರ ಪ್ರತಿಷ್ಠೆ ಕುಸಿಯಿತೆಂದು ಭಾವಿಸುತ್ತಾನೆ. ಲೇಖಕನಾದರೆ ತನಗೆ ಕಂಡರಾಗದವರ ಕುರಿತು ಕುಪಿತನಾಗಿ ಕುಚೇಷ್ಟೆಯಿಂದ ಬರೆಯುತ್ತಾನೆ. ರಾಜಕಾರಣಿಗಳಂತೂ ಹಿಂಬಾಲಕರನ್ನು ಸೇರಿಸಿಕೊಂಡು ಗುಂಪು ಕಟ್ಟಿ ಹಗರಣವನ್ನೇ ಹುಟ್ಟುಹಾಕುತ್ತಾರೆ.

ಮನಸ್ಸಿನ ಸ್ಥಿತಿಗತಿ ಎಷ್ಟೋ ಸಾರೆ ಸಮಾಜದ ಹಿತಕ್ಕೆ ಸಹಾಯವಾದದ್ದೂ ಇದೆ. ಆದರೆ ಈ ಸ್ಥಿತಿ ವ್ಯಕ್ತಿಯ ಪಾಲಿಗೆ ನುಂಗಲಾರದ ತುತ್ತು, ಒಂದು ಬಗೆಯ ಮಾನಸಿಕ ಶಿಕ್ಷೆಯಾಗಬಾರದು. ಈ ದೆಸೆಯಿಂದ ಮನುಷ್ಯನ ಮನಸ್ಸು ಕಾದ ಕಾವಲಿಯಾಗೇ ಇರಬಹುದು. ಇದರಿಂದ ಅವನ ಮನಸ್ಸಿಗೆ ಕೊನೆಗೂ ಶಾಂತಿ ದೊರೆಯುವುದಿಲ್ಲ. ಒಮ್ಮೊಮ್ಮೆ ಈ ಮನಸ್ಥಿತಿ ಅವನನ್ನು ಪ್ರಾಣಿಗಳಿಗಿಂತ ಕಡೆಯಾಗಿ ಮಾಡುತ್ತದೆ.

ಮನಸ್ಸಿನ ಸ್ಥಿತಿ ಗತಿ ಪ್ರಗತಿ ಪ್ರಚಾರಗಳು ಸಾಕಷ್ಟು ಕಾಲ ಸಾಕಷ್ಟು ವಿಶಾಲವಾಗಿ ನಡೆದದ್ದು ಪಾಶ್ಚಾತ್ಯರಲ್ಲಿ; ಇಂಗ್ಲಂಡ್, ಅಮೆರಿಕ, ಜರ್ಮನಿ, ರಶಿಯಾ ಈ ಕಡೆಗಳಲ್ಲಿ. ನಮ್ಮಲ್ಲಿಯೂ ಹಿಂದಿಗಿಂತ ಇಂದಿನ ಸುಶಿಕ್ಷಿತ ವರ್ಗವು ಹೆಚ್ಚು ಆತ್ಮನಿರೀಕ್ಷೆಯುಡಾಗಿದೆ. ತನ್ನತನದ ಅರಿವು ಇಂದಿನವರಿಗೆ ವಿಶೇಷ. ಹಿಂದಿನ ಜನ ಒಂದು ಕುಲವಾಗಿ, ಜಾತಿಯಾಗಿ, ಮತದ ಅನುಯಾಯಿ ವರ್ಗವಾಗಿ, ಮತ ಸಂಪ್ರದಾಯವಾಗಿ, ಹತ್ತು ಸಮಸ್ತರಲ್ಲಿ ಒಂದಾಗಿ ಬದುಕುವದೇ ಸುಖವೆಂದು ಭಾವಿಸಿದ್ದರು. ಆದರೆ ಇಂದು ವ್ಯಕ್ತಿನಿಷ್ಠೆ, ವ್ಯಕ್ತಿತ್ವದ ಮಹತ್ವ ಮನೋಧರ್ಮವಾಗಿದೆ. ಗತಾನುಗತಕರಾಗಲು ಸುಶಿಕ್ಷಿತರು ಒಮ್ಮೆಲೇ ಒಪ್ಪುವದಿಲ್ಲ. ನಾಲ್ಕು ಮಂದಿಯಿಂದ ಏನೋ ಮೇಲಿನ ಮಿಗಿಲಾದ ಅಥವಾ ಬೇರೆಯಾದ ವಸ್ತುವೆನಿಸಿಕೊಳ್ಳುವ ಹೆಣಗಾಟ ಕಾಣುತ್ತಿದೆ. ಒಟ್ಟಾರೆ ವೈಶಿಷ್ಟ್ಯ, ವೈವಿಧ್ಯ ಬೆಳೆದಿದೆ. ಇದರ ಮೂಲಕ ನಮ್ಮ ಮನಸ್ಸಿನ ಸ್ವರೂಪ ಸ್ವಭಾವಕ್ಕೆ ಒಂದು ಪಡಿಯಚ್ಚು ಸ್ಥಿರವಾಗಿಲ್ಲ. ನಮ್ಮ ವ್ಯವಸ್ಥೆಯ ಜೀವನ ವಿಧಾನದ ಆಶೋತ್ತರಗಳ ಕುರಿತು ಮನೋರಂಗದಲ್ಲಿಯೇ ವಿಚಿಕಿತ್ಸೆ, ವಿಶ್ಲೇಷಣೆ ನಡೆಯುತ್ತಿರುವಂತಾಗಿದೆ. ಇದರಿಂದ ಸ್ಥಾಯೀಭಾವ ಕಡಿಮೆ. ಸ್ಥಿತಪ್ರಜ್ಞೆಯಂತೂ ಇರುವದೇ ಇಲ್ಲ. ಒಂದು ಬಗೆಯ ಚಿತ್ತಚಾಂಚಲ್ಯ, ಸಂಶಯಾತ್ಮಕತೆ, ಭರವಸೆ ಭ್ರಮೆಗಳ ಹೊಯ್ದಾಟ, ಬುದ್ಧಿ ಭಾವನೆಗಳ ಅಸಮಂಜಸ ನಮ್ಮ ಮನೋರಂಗದ ನಿತ್ಯಲೀಲೆಯಾಗಿದೆ. ಇದರಿಂದ ಒಂದೆಡೆಗೆ ಆತ್ಮ ಪ್ರೌಢಿಮೆ, ಡಂಭಾಚಾರ, ಸ್ವಚ್ಛಂದತೆಗಳು ಬಹಿರಂಗವಾಗಿ ಪ್ರಚುರವಾಗಿದ್ದರೆ, ಇನ್ನೊಂದೆಡೆಗೆ ಆತ್ಮಜ್ಞಾನಿ, ನಿರಾಶಾವಾದ, ಹೃದಯ ದೌರ್ಬಲ್ಯ, ಭಾವೋದ್ರೇಕ, ವಿಭೂತಿ ಪೂಜೆ ಇವು ಬಾಳಿನ ಪ್ರಚೋದನೆಯಾಗಿವೆ. ಸುಶಿಕ್ಷಿತರ ಬದುಕು ಮನೋವೈಜ್ಞಾನಿಕ ಸಂಸ್ಕಾರದಿಂದ ಒಂದು ಬಗೆಯ ಕೃತ್ರಿಮತೆಯಿಂದ ಕೂಡಿದ ಕಳವಳದಿಂದ ತುಳುಕುತ್ತಿದೆ.



ಸಿಂಹ ಸಂಸಾರ

● ಪ್ರೊ. ಎನ್. ಆರ್. ಆಡೂರ

ಒಂದು ಕಾಲಕ್ಕೆ ಸಿಂಹ ಜಾತಿಯು (ಪ್ಯಾಂಥೆರಾ ಲಿಯೊಪರ್ಸಿಕಾ) ತುರ್ಕಸ್ಥಾನ, ದ.ಅರಬಸ್ಥಾನ, ಪ.ಇರಾಕ್, ಇರಾಣ, ಅಫಘಾಣಿಸ್ಥಾನ, ಪಶ್ಚಿಮ ಮತ್ತು ಪೂರ್ವ ಭಾರತದಲ್ಲಿ ನರ್ಮದಾ ನದಿಯ ವರೆಗೆ ಪಸರಿಸಿತ್ತು! ಈಗ? ಸೌರಾಷ್ಟ್ರದ ಗೀರ್ ಅರಣ್ಯದಲ್ಲಿ ಮಾತ್ರ ಬಹುದಕ್ಷತೆಯಿಂದ ಸಿಂಹ ಕುಲವನ್ನು ಕಾಪಾಡಲಾಗುತ್ತಿದೆ. ಇನ್ನುಳಿದ ಭಾಗಗಳಲ್ಲಿ ಇವು ನಿರ್ನಾಮಗೊಂಡಿವೆ ಎಂತಲೇ ಹೇಳಬೇಕು.

ಸಿಂಹ ನಿಶಾಚರ ಪ್ರಾಣಿ. ದಿನವಿಡೀ ಸೋಮಾರಿಯಂತೆ ಯಾವುದಾದರೊಂದು ಮರದ ಕೆಳಗೆ ಇಲ್ಲವೇ ಕಂಟಿಯಲ್ಲಿ ತನ್ನ ಪರಿವಾರದೊಂದಿಗೆ ವಿಶ್ರಾಂತಿ ಪಡೆಯುತ್ತದೆ. ಐದಾರು ತಿಂಗಳಿನ ಮರಿಗಳು ತಾಯಿಯ ಸುತ್ತ ಸುತ್ತಿಕೊಂಡಿರುತ್ತವೆ. ಹೆಣ್ಣು ಸಿಂಹ ಪ್ರಶಾಂತ ಭಾವದ ರಾಣಿ; ಗಂಡು ಬಲಿಷ್ಠವಾದ ಭವ್ಯ ಶರೀರಿ. ಅಂತೆಯೇ ಇನ್ನೆಲ್ಲ ಪ್ರಾಣಿಗಳಿಗಿಂತಲೂ ಉಚ್ಚ ಶ್ರೇಣಿಯದಾಗಿ 'ರಾಜ'ನಾಗಿ ಮೆರೆಯುತ್ತದೆ. ಇಂಥ ವನರಾಜನ ಭದ್ರತೆ ಸಿಂಹಿಣಿಗೆ ಹೆಚ್ಚಿನ ಸ್ಥೈರ್ಯ ನೀಡುತ್ತದೆ! ಹೀಗಾಗಿ ತೆಳ್ಳನೆಯ ಸುಂದರ ಮೈಕಟ್ಟಿನ ಸಿಂಹಿಣಿ ಅತ್ಯುತ್ಸಾಹದಿಂದ ಬೇಟೆಯಾಡಲು ಮುಂದಾಗುತ್ತದೆ. ಸಿಂಹಿಣಿ ಚತುರ ಬೇಟೆಗಾತಿಯಾದರೆ ಸಿಂಹ ವೀರಯೋಧ. ಕತ್ತಿನ ಮೇಲಿರುವ ಬಂಗಾರ ವರ್ಣದ ಕೂದಲು ಕಪ್ಪಾಗತೊಡ

ರಾಜಕೀಯ ಸ್ಥಿತ್ಯಂತರದ ದೆಸೆಯಿಂದ ನಾಡಿನ ರಾಜರೇನೋ ಕಿರೀಟ ಕಳೆದುಕೊಂಡರು. ಆದರೂ ಅವರ ಸಾಮಾನ್ಯ ಬದುಕಿಗೇನೂ ಧಕ್ಕೆಯಾಗಲಿಲ್ಲ. ಆದರೆ 'ಕಾಡಿನ ರಾಜ' ಸಿಂಹ ಸಂತತಿ ಮಾತ್ರ ಅಳಿವಿನ ಅಂಚಿಗೆ ಸರಿದಿದೆ. ಊರ ವಿದ್ಯಮಾನ ಕಾನನಕ್ಕೆ ಅನ್ವಯಿಸದಾದರೂ ನಾಡ ಜನರ ಕೋವಿ, ಕೊಡಲಿಗಳು ಸಿಂಹಸಂಕುಲಕ್ಕೆ ಮುಳುವಾದದ್ದು ನಿಜ. ಸಿಂಹ ಸಂಸಾರದ ಒಂದು ಅಪೂರ್ವ ಅವಲೋಕನ.

ಗಿದರೆ ಸಿಂಹಕ್ಕೆ ಮುಪ್ಪು ಬಂದಿತೆಂದೇ ಅರ್ಥ. ಬಾಲವನ್ನು ಅಲ್ಲಾಡಿಸುತ್ತಿದ್ದರೆ ಸಿಂಹ ರೊಚ್ಚಿಗೆದ್ದಿದೆ ಎಂದು ತಿಳಿಯಬೇಕು.

ಬೇಟೆ :

ಕಾಡು ಹಂದಿ, ಕಡವೆ (ಸಾಂಬಾರ) ಜಿಂಕೆ, ಕಾಡೆಮ್ಮೆಗಳು ಸಿಂಹದ ಸಾಮಾನ್ಯವಾದ ಭಕ್ಷ್ಯಗಳು. ದಟ್ಟಾರಣ್ಯದಲ್ಲಿ ಬೇಟೆಯಾಡುತ್ತಿರುವ ಸಿಂಹವನ್ನು ಕಾಣುವುದು ಸುಲಭವಲ್ಲ. ಹಳ್ಳಿಗಳ ಸಮೀಪ ದನಕರುಗಳು ಮೇಯುತ್ತಿರುವಾಗ ಸಿಂಹಕ್ಕೆ ಬಲಿಯಾಗಬಹುದು.

ಸಾಮಾನ್ಯವಾಗಿ ಸಿಂಹ ಒಂಟಿಯಾಗಿ ಬೇಟೆಯಾಡುವುದೇ ಇಲ್ಲ. ಗಂಡು ಹೆಣ್ಣುಗಳು ಗುಂಪು ಕಟ್ಟಿಕೊಂಡೇ ಬೇಟೆಗೆ ತೆರಳುತ್ತವೆ. ಒಂದು ಆಯಕಟ್ಟಿನ ಸ್ಥಳದಲ್ಲಿ ಸಿಂಹಿಣಿ ಅಡಗಿಕೊಂಡು ಜಪ್ಪಿಸಿ ಕುಳಿತುಕೊಳ್ಳುತ್ತದೆ. ಸಿಂಹ ತನ್ನ ಗರ್ಜನೆಯಿಂದ ಬೇಟೆಯನ್ನು ಹೆದರಿಸುತ್ತ ಸಿಂಹಿಣಿಯತ್ತ ಓಡಿಸುತ್ತದೆ. ಮರಿಗಳು ಇನ್ನುಳಿದ ದಾರಿಗಳಿಂದ ಓಡುವ ಬೇಟೆಯನ್ನು ತಡೆಯುತ್ತವೆ. ಪಾಪ ಬೇಟೆಯು ಸಿಂಹದ ಕುಟುಂಬದ ಚಕ್ರವ್ಯೂಹದಲ್ಲಿ ಬಂಧಿಸಲ್ಪಡುತ್ತದೆ; ಸಿಂಹಿಣಿಯ ದಂತ ಮುದ್ರೆ ಗೀಡಾಗಿ ಪ್ರಾಣ ತೊರೆಯುತ್ತದೆ.

ಆಹಾರ ಸಿಕ್ಕ ಸಮಯದಲ್ಲಿ ಸುಮಾರು 28 ರಿಂದ 35 ಕಿಲೋಗಳಷ್ಟು ಮಾಂಸವನ್ನು ತಿಂದು ಜಿಡುತ್ತದೆ. ಮುಂದೆ ಐದಾರು ದಿನಗಳವರೆಗೆ ಉಪವಾಸವಿದ್ದರೂ ನಡೆದೀತು. ಗಂಡು ಸಿಂಹವು ಅಕಸ್ಮಾತ್ತಾಗಿ ಒಂಟಿಯಾಗಿದ್ದರೆ ಮಾತ್ರ ಬೇಟೆ ಹಿಡಿಯುವುದು. ಮೂರು-ನಾಲ್ಕು ಸಿಂಹಗಳು (ಬಹುಶಃ ಅಣ್ಣ ತಮ್ಮಂದಿರು) ಕೂಡಿ ಬೇಟೆಯಾಡಿದರೆ ಸಮಪಾಲು ತತ್ವವನ್ನನುಸರಿಸುತ್ತವೆ. ಈ ಪಾಲುಗಾರಿಕೆಯಲ್ಲೂ ಅತಿ ಶಿಸ್ತು ಕಂಡು ಬರುತ್ತದೆ. ಒಂದು ಸಿಂಹವು ಬೇಟೆಯನ್ನು ಭುಂಜಿಸುತ್ತಿರುವಾಗ ಇನ್ನುಳಿದವು ವಿರುದ್ಧ ದಿಕ್ಕಿಗೆ ಮುಖ ಮಾಡಿ ಸುಮ್ಮನೇ ಕುಳಿತುಕೊಂಡಿರುತ್ತವೆ. ತನ್ನ ಪಾಲನ್ನು ತಿಂದು ಮುಗಿಸಿದ ಬಳಿಕ ಇನ್ನೊಂದನ್ನು ಕರೆದು ತಾನು ಬೇರೆಡೆ ಮುಖ ಹೊರಳಿಸಿ ನಾಲಗೆಯಿಂದ ತುಟಿ ಸವರಿಕೊಳ್ಳುತ್ತದೆ. ಸಿಂಹಗಳದು ಒಂದು ರೀತಿಯಲ್ಲಿ ಪರಿಶುದ್ಧ ಊಟ. ಆದಷ್ಟು ಸಶಕ್ತ ಗಂಡು ಪ್ರಾಣಿಗಳನ್ನೇ ಬೇಟೆಯಾಡುತ್ತವೆ. ತಾನೇ ಕೊಂದ ಪ್ರಾಣಿಯನ್ನು ಬಾಯಿ ಚಪ್ಪರಿಸುತ್ತ ಉತ್ಸಾಹದಿಂದ ತಿನ್ನುತ್ತವೆ. ಅಶಕ್ತ ಅಥವಾ ರೋಗಗ್ರಸ್ತ ಪ್ರಾಣಿಗಳ ಗೊಡವೆಗೇ ಹೋಗುವುದಿಲ್ಲ. ಮನುಷ್ಯನ ಮಾಂಸ ಅವಕ್ಕೆ ರುಚಿಸುವುದಿಲ್ಲ.

ರಾಜ್ಯ :

ಸಿಂಹವು ತನ್ನದೇ ಆದ ರಾಜ್ಯವನ್ನು ನಿರ್ಮಿಸಿಕೊಂಡು ಕಟುವಾಸನೆಯುಳ್ಳ ತನ್ನ ಮೂತ್ರದಿಂದ ಸೀಮೆಯನ್ನು ದೃಢಪಡಿಸಿಕೊಳ್ಳುತ್ತದೆ. ಸಿಂಹಗರ್ಜನೆ ಎಷ್ಟೋ ಮೈಲು ದೂರದವರೆಗೆ ಕೇಳಿ ಬರುತ್ತದೆ. ಆ ಪ್ರದೇಶದ ಮೇಲಿನ ಸ್ವಾಮ್ಯತ್ವವನ್ನು ಸಿಂಹ ತನ್ನ ಗರ್ಜನೆಯ ಮೂಲಕ ಸಾರು

ತ್ತವೆ. ಅಲ್ಲಿ ಎರಡು ಮೂರು ಸಿಂಹಿಣಿಗಳಿಗೆ ಆಶ್ರಯ ದೊರಕಬಹುದು.


ಕೆಲವು ಸಿಂಹಗಳು ಮಾತ್ರ ವರ್ಷ ಪೂರ್ತಿ ತಿರುಗಾಡುತ್ತಲೇ ಇರುತ್ತವೆ. ಇವು ಭ್ರಮಣಶೀಲ ಜಾತಿಯವು; ಬಹುಶಃ ಯಾವುದೇ ನಿಶ್ಚಿತ ಗುಂಪಿಗೆ ಸೇರಿರದ ಯುವ ಸಿಂಹಗಳಿವು. ಗಂಡು ಮರಿಯು ಎರಡೂವರೆ ವರುಷ ವಯಸ್ಸಿನವಾದೊಡನೆ ಕುಟುಂಬದಿಂದ ಹೊರ ಹಾಕಲ್ಪಡುತ್ತದೆ. ಒಂದು ವೇಳೆ ತನ್ನದೇ ಆದ ಸಾಮ್ರಾಜ್ಯವನ್ನೂ ಕುಟುಂಬವನ್ನೂ ಗಳಿಸಿಕೊಳ್ಳದೇ ಹೋದರೆ ಇನ್ನುಳಿದ ಸಿಂಹಗಳಿಂದ ಅದಕ್ಕೆ ಹೀಯಾಳಿಕೆ ಕಟ್ಟಿಟ್ಟ ಬುತ್ತಿ. ಯಾವುದಾದರೊಂದು ಸಿಂಹ ಸತ್ತರೆ ಆ ರಾಜ್ಯದ ಒಡೆಯನಾಗುತ್ತದೆ. ಇಂಥ ಯುವ ಸಿಂಹ ಇಲ್ಲವಾದರೆ ಇದ್ದ ರಾಜನೊಡನೆ ಕಾದಾಡಿ, ಕೊಂದು ಆ ರಾಜ್ಯವನ್ನು ಆಕ್ರಮಿಸಬೇಕಾಗುತ್ತದೆ. ಅಲ್ಲಿಯವರೆಗೆ ಒಂಟಿಯಾಗಿಯೇ ನೆಲೆ ಹುಡುಕುತ್ತ ತಿರುಗುತ್ತಲೇ ಇರಬೇಕಾಗುತ್ತದೆ.

ಖಾಸಗಿ ಜೀವನ :

ಸಿಂಹಿಣಿಯು ಪ್ರಾಯದ ಪಕ್ವತೆಗೆ ಬಂದಾಗ ಒಂದು ಪ್ರಕಾರದ ಹಿತವಾದ ಸುವಾಸನೆಯನ್ನು ಬೀರುತ್ತ ಗಂಡು ಸಿಂಹವನ್ನು ಆಕರ್ಷಿಸಲೆತ್ನಿಸುತ್ತದೆ. ('ಸುವಾಸಿನಿ'ಯಾಗುತ್ತದೆ, 'ಸುಹಾಸಿನಿ' ಯಾಗುತ್ತದೆ) ಕೆಲವು ಬಾರಿ ಮೂತ್ರದೊಂದಿಗೆ ಸುವಾಸನೆಯ ದ್ರವ್ಯವನ್ನು ಅಲ್ಲಲ್ಲಿ ಸ್ರವಿಸುತ್ತ ನಡೆಯುತ್ತದೆ. ಬಲಶಾಲಿಯಾದ ಗಂಡೊಂದು ಒಲಿದೊಡನೆ ಎರಡೂ ಜೊತೆಯಾಗಿ ರಮ್ಯ ಸ್ಥಾನ ಸೇರಿ (ಪ್ರಶಾಂತವಾದ, ನೆರಳಿದ್ದ ಅದರಲ್ಲೂ ಜುಳು ಜುಳು ನೀರು ಹರಿಯುತ್ತಿರುವ ಸ್ಥಳವನ್ನಾರಿಸಿಕೊಂಡು) ರಮಿಸುತ್ತವೆ. ಗಂಡು ಕೂಡ ಸೂಕ್ಷ್ಮವಾದ ಪ್ರೇಮವನ್ನು ತೋರಿಸುತ್ತದೆ. ಪ್ರೇಯಸಿಯ ಕುತ್ತಿಗೆ ಹಾಗೂ ಬೆನ್ನನ್ನು ನೆಕ್ಕುತ್ತದೆ. ಎರಡೂ ಪ್ರೇಮ ಕೇಳಿ ನಡೆಸುತ್ತವೆ. ಈ 'ಯುವ ಜೋಡಿ'ಯ ಬಗ್ಗೆ ಇನ್ನುಳಿದ ಕುಟುಂಬದ ಸದಸ್ಯರು ಆಸ್ಥೆಯನ್ನೂ ತೋರುವುದಿಲ್ಲ, ಆಕ್ಷೇಪವನ್ನೂ ವ್ಯಕ್ತಪಡಿಸುವುದಿಲ್ಲ. ಈ ಪ್ರೇಮ-ಮಿಲನದ ಅವಧಿ ನಾಲ್ಕಾರು ದಿನಗಳವರೆಗಿರುತ್ತದೆ.

ಸಿಂಹಿಣಿಯು ಗರ್ಭಿಣಿ ಅವಸ್ಥೆಯ ಅವಧಿ 106 ರಿಂದ 110 ದಿನಗಳು. ನಂತರ ಕವಳೆ ಸಸ್ಯಗಳಂಥ ಕಂಟಿಗಳನ್ನು ಹುಡುಕಿ ಅದರ ಮರೆಯಲ್ಲಿ ಒಂದರಿಂದ ನಾಲ್ಕು (ಕೆಲವೊಮ್ಮೆ ಆರು) ಮರಿಗಳನ್ನು ಹಾಕುತ್ತದೆ. ಹುಟ್ಟಿದ ಮರಿಗಳು ತೀರ ಅಶಕ್ತವಾಗಿದ್ದು 24 ಗಂಟೆಗಳವರೆಗೆ ಕುರುಡಾಗಿದ್ದು ಮೂರನೆ ದಿನದ ನಂತರ ಕಣ್ಣು ತೆರೆಯುತ್ತವೆ. ಮರಿಗಳನ್ನು ಬಿಟ್ಟು ತಾಯಿ ಆಗಾಗ ಬೇಟೆಗಾಗಿಯೂ ನೀರು ಕುಡಿಯಲೂ ಹೋಗುವುದುಂಟು. ಆಗ ಮರಿಗಳ ರಕ್ಷಣೆಯ ಭಾರ ಗಂಡಿನದು. ಇತರ ಕೆಲ ಸಿಂಹಿಣಿಗಳು ದಾದಿಯ ಕೆಲಸವನ್ನೂ ಮಾಡುತ್ತವಲ್ಲದೆ ಮರಿಗಳಿಗೆ ಆಟಗಳನ್ನೂ ಕಲಿಸುತ್ತವೆ.

ಸಿಂಹಿಣಿ ಬಲು ಶಿಸ್ತಿನ ಪ್ರಾಣಿ. ಮರಿಗಳು





ತಾಯಿಯ ಆಜ್ಞೆಯನ್ನು ಶಿರಸಾವಹಿಸುತ್ತವೆ. ತಾಯಿ ಮರಳಿ ಬರುವವರೆಗೂ ಒಂದೇ ಸ್ಥಳದಲ್ಲಿ ಕುಳಿತಿರುತ್ತವೆ. ತಾಯಿ ಸಮೀಪದಲ್ಲಿದ್ದು ತಮ್ಮಷ್ಟಕ್ಕೆ ತಾವೇ ಆಟವಾಡಿಕೊಳ್ಳುತ್ತಿರುವಾಗಲೂ ನಾಲ್ಕೈದು ನಿಮಿಷಕ್ಕೊಮ್ಮೆ ಅಮ್ಮನ ಬಳಿ ಬಂದು ಹೋಗುತ್ತವೆ. ಒಂದೊಮ್ಮೆ ಅವು ಹಾಗೆ ಬರದಿದ್ದರೆ ತಾಯಿ ಸಣ್ಣ ಧ್ವನಿಯಲ್ಲಿ ಕೂಗುತ್ತದೆ. ಮರಿಗಳು ಕ್ಷಮೆ ಕೇಳುವ ರೀತಿಯಲ್ಲಿ ಓಡಿ ಬರುತ್ತವೆ. ತಾಯಿಯ ಮೈಮೇಲೆ ಕುಣಿಯುತ್ತ ಆಟವಾಡುತ್ತವೆ. ಚಿಕ್ಕಪುಟ್ಟ ಗಿಡಗಳ ಮೇಲೆ ಏರಿ ಜಿಗಿಯುತ್ತವೆ.

ಚಿರತೆಗಳೂ ಹಯೆನಾಗಳೂ (ಕಿರುಬ) ಮರಿಗಳನ್ನು ಎತ್ತಿಕೊಂಡು ಹೋಗುವ ಸಂಭವ ಹೆಚ್ಚು. ಅದಕ್ಕಾಗಿ ಸಿಂಹಿಣಿಯು ಮಕ್ಕಳ ಬಗ್ಗೆ ಹೆಚ್ಚು ಜಾಗರೂಕತೆವಹಿಸಬೇಕಾಗುತ್ತದೆ. ಗಂಡು ಮರಿ ಐದು ವರ್ಷದ ಹೊತ್ತಿಗೆ ಪ್ರಾಯಕ್ಕೆ ಬಂದರೆ ಹೆಣ್ಣು ಎರಡು-ಮೂರು ವರ್ಷಕ್ಕೇ 'ದೊಡ್ಡದಾಗು'ತ್ತದೆ.


ಗೀರ ರಾಷ್ಟ್ರೀಯ ಉದ್ಯಾನ

ಭಾರತೀಯ ಸಂಸ್ಕೃತಿಯಲ್ಲಿ ಸಿಂಹವನ್ನು ವನ್ಯಮೃಗಗಳ ರಾಜನೆಂದೇ ಸಂಬೋಧಿಸಿ ಸನ್ಮಾನಿಸಲಾಗುತ್ತಿದೆ. ಸುಮಾರು ಎರಡು ಸಾವಿರ ವರ್ಷಗಳ ಪೂರ್ವದಲ್ಲಿಯೇ ಸಮ್ರಾಟ ಅಶೋಕನು ಸಾರಾನಾಥದಲ್ಲಿ ಸಿಂಹಗಳ ಚಿತ್ರವನ್ನು ಕೊರೆಸಿದ್ದ. ಅದೇ ಇಂದು ನಮ್ಮ ಸ್ವತಂತ್ರ ಭಾರತ ಒಕ್ಕೂಟದ ಸರಕಾರಿ ಮುದ್ರೆಯಾಗಿ ಮಹತ್ವ ಪಡೆದಿದೆ. ಇಂಥ ಭವ್ಯ ಸ್ವರೂಪವನ್ನು ಪಡೆದ ಈ ಜಾತಿಯ ಪ್ರಾಣಿಗಳು ಉತ್ತರ ಭಾರತದ ತುಂಬೆಲ್ಲ ವಾಸಿಸಿದ್ದವು. ಆದರೆ ಇತ್ತೀಚಿನ ಶತಕದಲ್ಲಿ ಗುಜರಾತ್ ರಾಜ್ಯದ ಗೀರ ಅರಣ್ಯವನ್ನು ಹೊರತುಪಡಿಸಿ ಇನ್ನುಳಿದಲ್ಲಿ ಈ ಜಾತಿಯೇ ಅಳಿಸಿ ಹೋಗಿದೆ. (ಭಾರತದ ಹೊರಗೆ ಆಫ್ರಿಕೆಯ ಅರಣ್ಯಗಳಲ್ಲಿ ಮಾತ್ರ ಸಿಂಹಗಳು ವಾಸ ಮಾಡಿವೆ.)

ನೈಋತ್ಯ ಗುಜರಾತದ ಸೌರಾಷ್ಟ್ರ ದ್ವೀಪಕಲ್ಪದ ಸುಮಾರು 1412 ಚದರ ಕಿಲೋಮೀಟರು ಭಾಗವು ಅರಣ್ಯ ಹಾಗೂ ಹುಲ್ಲುಗಾವಲಿನಿಂದ ತುಂಬಿದ್ದು ಇತ್ತೀಚೆಗೆ ಮಾನವನ ಮತ್ತು ಆತ ಸಾಕಿದ ದನಕರುಗಳ ಸಂಖ್ಯಾಸ್ಫೋಟದ ಒತ್ತಡಕ್ಕೊಳಪಟ್ಟಿದೆ. ಈ ಶತಮಾನದಲ್ಲಿ ಅರಣ್ಯ ಭಾಗವು ಅರ್ಧಕ್ಕಿಳಿದಂತಿದೆ. ಇದೀಗ ಕೇವಲ 300 ಚದರ ಕಿಲೋಮೀಟರ್ ಅರಣ್ಯವಷ್ಟೇ 'ಗೀರ ರಾಷ್ಟ್ರೀಯ ಉದ್ಯಾನ'ವೆಂದು ಘೋಷಿಸಲ್ಪಟ್ಟಿದೆ. ಇದು ಗಿರಿನಾರ ಪರ್ವತಾವಳಿಗೆ ಹೊಂದಿಕೊಂಡಿಲ್ಲ. ಅರಣ್ಯ ಇಲಾಖೆಯ ವಿಶ್ರಾಮಧಾಮವನ್ನು ಹೊಂದಿರುವ ಸಸಾನ್ ಎಂಬ ಸ್ಥಳವೇ ಗೀರ ರಾಷ್ಟ್ರೀಯ ಉದ್ಯಾನದ ಕೇಂದ್ರ ಬಿಂದು.

ಇದು ಚಳಿಗಾಲದಲ್ಲಿ ಎಲೆಯುದುರಿಸುವ ಮರಗಳಿಂದ ಕೂಡಿದ ಅರಣ್ಯವಾಗಿದ್ದು ತೇಗ, ಮತ್ತಿ, ಹೊನ್ನೆ, ಮುತ್ತಲ, ನೇರಳೆ, ಆಲ, ಜಾಲಿ ಮುಂತಾದ ಜಾತಿಯ ಮರಗಳಲ್ಲಿವೆ. ಅಲ್ಲಲ್ಲಿ ಹರಿಯುತ್ತಿರುವ ನದಿ ಹಳ್ಳಗಳಿಂದಾಗಿ ಈ ಪ್ರದೇಶ ಪ್ರವಾಸಿಕರಿಗೆ ಆಹ್ಲಾದವನ್ನುಂಟು ಮಾಡುತ್ತದೆ. ಇಪ್ಪತ್ತನೆಯ ಶತಮಾನದ ಪ್ರಾರಂ

1. ರಾಷ್ಟ್ರೀಯ ಉದ್ಯಾನದ ಕೇಂದ್ರ ಭಾಗ
2. ಕಮಲೇಶ್ವರ ಕೊಳ
3. ಸಸಾನ
4. ತುಳಸಿ ಶ್ಯಾಮ
5. ರೈಲು ಮಾರ್ಗ
6. ರಸ್ತೆ



ಗೀರ ರಾಷ್ಟ್ರೀಯ ಉದ್ಯಾನ

ಭದಲ್ಲಿಯೇ ಭೀಕರ ಬರಗಾಲ ಬಿದ್ದು ಸಿಂಹ ಭಕ್ಷ್ಯಗಳಾಗಬಲ್ಲ ವನ್ಯ ಪ್ರಾಣಿಗಳೆಲ್ಲ ಬಹು ಸಂಖ್ಯೆಯಲ್ಲಿ ಸತ್ತು ಹೋದವು. ಪರಿಣಾಮ ವಾಗಿ ಸಿಂಹಗಳು 'ನರಭಕ್ಷಕ'ಗಳಾಗಬೇಕಾ ಯಿತು. ಜತೆಗೆ ಸಿಂಹಗಳ ಹತ್ಯೆ ನಡೆದು ಸಿಂಹ ಸಂಕುಲವೇ ನಶಿಸಿಬಿಡುವ ಅವಸ್ಥೆಯೊದಗಿತು. ಕ್ರಿಸ್ತಶಕ 1913ರಲ್ಲಿ ಇಪ್ಪತ್ತು ಸಿಂಹಗಳು ಮಾತ್ರ ಉಳಿದಿದ್ದವೆನ್ನುತ್ತವೆ ಆಗಿನ ಸಿಂಹ ಗಣತಿ. ಆಗ ಜುನಾಗಡದ ನವಾಬರು ಸಿಂಹಗಳ ರಕ್ಷಣೆಗೆ ಮುಂದಾದರು. ಅಂದಿನಿಂದ ವನರಾಜ ರಕ್ಷ ಣೆಯ ಕಾರ್ಯ ಮುಂದುವರಿಯಿತು. 1950ರ ದಶಕದಲ್ಲಿ ಸಿಂಹಗಳ ಬೇಟೆಯನ್ನು ಸಂಪೂರ್ಣ ವಾಗಿ ನಿಷೇಧಿಸಲಾಯಿತು. ಏಶಿಯನ್ ಸಿಂಹ ಜಾತಿಗೆ ಗೀರಾರಣ್ಯವೊಂದೇ ಸುರಕ್ಷಿತ ಮನೆ. 1950ರಲ್ಲಿ ಮೊಟ್ಟಮೊದಲು ವೈಜ್ಞಾನಿಕ ರೀತ್ಯ ಗೀರ ಅರಣ್ಯದಲ್ಲಿ ವನ್ಯ ಮೃಗಗಳ ಗಣತಿ ನಡೆ ಯಿತು.

ಹಿಂದೆರಡು ಬಾರಿ ರಕ್ಷಣೆಗಾಗಿ ಸಿಂಹಗಳನ್ನು ಬೇರೆಡೆ ಸ್ಥಳಾಂತರಿಸುವ ಪ್ರಯತ್ನಗಳು ನಡೆದು ವಾದರೂ ಫಲಪ್ರದವಾಗಲಿಲ್ಲ. ಇತ್ತೀಚೆಗೆ ಗುಜ ರಾತ ಸರಕಾರವು ಪೋರಬಂದರ ಸಮೀಪದ ಬಾರ್ದಾ ಪರ್ವತ ಪ್ರದೇಶದಲ್ಲಿ ಸಿಂಹಗಳಿಗೆ ಇನ್ನೊಂದು ರಕ್ಷಣಾಗ್ರಹವನ್ನು ನಿರ್ಮಿಸಿದೆ. ಇದರ ವಿಸ್ತಾರ ಸುಮಾರು 180 ಚದರ ಕಿಲೋ ಮೀಟರ್.

ಗೀರಾರಣ್ಯ ಪ್ರದೇಶದಲ್ಲಿ ಸಿಂಹಗಳೊಟ್ಟಿಗೆ ಭಾರತದ ಇನ್ನುಳಿದ ಅರಣ್ಯಗಳಿಗಿಂತಲೂ ಚಿರತೆ ಗಳು ಹೆಚ್ಚು ಸಂಖ್ಯೆಯಲ್ಲಿವೆ. 1985ರಲ್ಲಿನ ಗಣ ತಿಯ ಪ್ರಕಾರ 201 ಚಿರತೆಗಳಿದ್ದವು. ಇದೀಗ ಸಂಖ್ಯೆ ಬೆಳೆದಿದೆ. (1979ರಲ್ಲಿ 161 ಮಾತ್ರ ಇದ್ದ ವಂತೆ.) ಅರಣ್ಯದೊಳಗೆ ವಾಹನದಲ್ಲಿ ಸಾಗುತ್ತಿ ದ್ದಂತೆಯೇ ಎಷ್ಟೋ ಬಾರಿ ಪ್ರವಾಸಿಕರಿಗೆ ಚಿರತೆ ಎದುರಾಗುವುದುಂಟು. 1985ರ ಗಣತಿಯ ಪ್ರಕಾರ ಇಲ್ಲಿ 772 ಕಡವೆಗಳು (ಸಾಂಬಾರ), 10441 ಕಾಂಚನ ಮೃಗಗಳೂ, 2081 ನಿಲ್ಗಾಯಿ ಗಳೂ, 1063 ಚೌಸಿಂಗಗಳೂ (ನಾಲ್ಕು ಕೋಡಿನ ಜಿಂಕೆ ಜಾತಿ), 311 ಚಿಂಕಾರಾ ಜಾತಿಯ ಜಿಂಕೆ ಗಳೂ (ಗೆಜೆಲ್), 2212 ಕಾಡು ಹಂದಿಗಳೂ, 6912 ಮುಸುವಗಳೂ ಇಲ್ಲಿ ವಾಸಿಸುತ್ತಿರುವ ವೆಂಬ ವರದಿಯುಂಟು. 1979ರ ಗಣತಿಗಿಂತ 1985ರಲ್ಲಿ ಕಾಡು ಹಂದಿ ಚಿಂಕಾರಾಗಳ ಸಂಖ್ಯೆ ಯಲ್ಲಿ ಇಳಿಮುಖವಾಗಿದ್ದು ಇನ್ನುಳಿದವುಗಳ



ಸಿಂಹಗಳೂ ಮನುಷ್ಯರಂತೆಯೇ!

ಮಾನವನಿಗೂ ಸಿಂಹಗಳಿಗೂ ನಡವಳಿಕೆಯಲ್ಲಿ ಅಪಾರ ಸಾಮ್ಯ ಕಂಡುಬರುತ್ತದೆ. ಬಾಹ್ಯ ಸ್ವರೂಪ ಮತ್ತು ಮನಸ್ತತ್ವದ ದೃಷ್ಟಿಯಲ್ಲಿ ಚಿಂಪಾಂಜಿ ಮಾನವನಿಗೆ ಹೋಲುವುದೇನೋ ಸರಿ. ಶ್ವಾನಗಳು ಮಾನವನ ಭಾವನೆಗಳೊಂದಿಗೆ ಹೆಚ್ಚು ಸ್ಪಂದಿಸುವುದೂ ಹೌದು. ಆದಾಗ್ಯೂ ಅವೆಲ್ಲಕ್ಕಿಂತ ಮಿಗಿಲಾದ ಸಾಮ್ಯತೆಯನ್ನು ಮೃಗರಾಜ ತೋರುತ್ತಾನೆ.

ಸಿಂಹ, ಪ್ರಾಣಿ ಪ್ರಪಂಚದಲ್ಲೇ ಅತ್ಯಂತ ಸ್ವಂತಿಕೆಯುಳ್ಳದ್ದು. ಸಿಂಹದ ಭಾವಪೂರ್ಣ ನಯನಗಳು ಮನಸ್ಸಿನ ಒಳತೋಟಿಯನ್ನು ಪ್ರತಿಬಿಂಬಿಸುವುದೇ ನಿಜವಾದಲ್ಲಿ ಮನುಷ್ಯರಂತೆಯೇ ಅವುಗಳೊಳಗೂ ಅತೃಪ್ತಿ, ಅಸಂತೋಷ ಹೆಪ್ಪುಗಟ್ಟಿರುವುದು ಗೋಚರಿಸುತ್ತದೆ.

ಸಿಂಹವನ್ನು ಸಾಕಿದವರ ಪ್ರಕಾರ ಸಿಂಹಗಳಿಗೆ ಟೊಪ್ಪಿಗೆಯೊಂದಿಗೆ ಗಂಟೆಗಟ್ಟಲೆ ಆಟವಾಡುವುದೆಂದರೆ ಅತ್ಯಂತ ಪ್ರೀತಿಯಂತೆ. ಕಪ್ಪು ವಸ್ತುಗಳನ್ನು ಕಂಡರೆ ಸಿಂಹ ಖಿನ್ನಗೊಳ್ಳುತ್ತದೆ. ಆದರೆ ಸಡಿಲವಾದ ಮೊಗಳೆ ವಸ್ತುಗಳೆಂದರೆ ಅವುಗಳಿಗೆ ಬಲು ಇಷ್ಟ. ಕೆಲವು ಸಿಂಹಗಳಿಗಂತೂ ಸಂಗೀತವೆಂದರೆ ಆಗುವುದೇ ಇಲ್ಲ; ಸಂಗಿತದ ಸದ್ದಡಗುವವರೆಗೂ ಅಳುದನಿಯಲ್ಲಿ ಕೂಗಿ ಪ್ರತಿಭಟಿಸುತ್ತವೆ.

ಸಿಂಹಗಳು ಎಷ್ಟೊಂದು ಮದ್ಯಪಾನ ವಿರೋಧಿಗಳೆಂದರೆ ಕುಡಿದು ಪಳಗಿಸಲು ಬಂದ ಅನೇಕ ಜನರನ್ನು ಅವು ಕೊಂದು ಹಾಕಿದ ಉದಾಹರಣೆಗಳಿವೆ. ಮೃಗರಾಜನ ಕಣ್ಣಿಗೆ ವಾಹನಗಳು ನಿರುಪದ್ರವಿ ಪ್ರಾಣಿಗಳಂತೆ ತೋರುವುದರಿಂದ ಅವುಗಳೆಡೆ ಮೆಚ್ಚಿಗೆಯ ನೋಟ ಬೀರುತ್ತವೆ.

ಸಿಂಹಗಳು ನಾಯಿಯನ್ನು ಎಂದೂ ಕೊಲ್ಲಲಿಚ್ಛಿಸುವುದಿಲ್ಲ. ಹಾಗೊಂದು ವೇಳೆ ತಪ್ಪು ಭಾವನೆಯಿಂದ ನಾಯಿಯನ್ನು ಕೊಂದರೆ ಅದರ ಕಳೇಬರವನ್ನು ಮುದ್ದಿಸುತ್ತ ಪಶ್ಚಾತ್ತಾಪ ವ್ಯಕ್ತಪಡಿಸುವುದುಂಟು. ಒಳಗಿನ ಭಾವನೆಗಳನ್ನೆಲ್ಲ ಹೊರಗಿಡದ ಮೇಲೆ ಪ್ರಕಟಿಸುವಲ್ಲಿ ಸಿಂಹಗಳು ಮಾನವನನ್ನು ಪೂರ್ಣ ಹೋಲುತ್ತವೆ. ಅವುಗಳೊಳಗೂ ನಮ್ಮಂತೆಯೇ ಭಯ, ಗೊಂದಲ, ಅನಿಶ್ಚಿತತೆ ಗೂಡು ಕಟ್ಟಿರುವುದು ದಿಟ.

ಸಿಂಹಕ್ಕೆ ಮರ ಏರಲು ಬರುವುದಿಲ್ಲ ಎಂಬುದು ಸಾಮಾನ್ಯ ನಂಬಿಕೆ. ಆದರೆ ಆತಂಕದ ಸಂದರ್ಭಗಳಲ್ಲಿ ಬಹಳ ಎತ್ತರದ ಗಿಡಮರಗಳನ್ನು ನಿರಾಯಾಸವಾಗಿ ಹತ್ತಿದ ನಿದರ್ಶನಗಳು ಸಿಗುತ್ತವೆ. ಎತ್ತರ ಜಿಗಿತದಲ್ಲಿ ಸಿಂಹಗಳಿಗೆ ಸಾಟಿಯೇ ಇಲ್ಲ. ಹತ್ತು - ಹನ್ನೆರಡು ಅಡಿ ಎತ್ತರದ ಬೇಲಿಯನ್ನು ಹಾರಲು ಅವುಗಳಿಗೆ ಕಷ್ಟವಾಗಲಾರದು. ●

ಸಂಖ್ಯೆ ಹೆಚ್ಚಿದೆ. ಇವೆಲ್ಲ ಪ್ರಾಣಿಗಳು ಹಾಗೂ ಸಾಕಿದ ದನಕರುಗಳು ಸಿಂಹ-ಚಿರತೆಗಳಿಗೆ ಆಹಾರ ವಾಗುತ್ತವೆ.

ಇನ್ನುಳಿದ ವನ್ಯ ಪ್ರಾಣಿಗಳಲ್ಲಿ ಕಾಡು ಬೆಕ್ಕು, ನರಿ ಹಾಗೂ ಕಿರುಬಗಳ ಸಂಖ್ಯೆಯಲ್ಲಿಯೂ ಹೆಚ್ಚಳ ಕಂಡು ಬಂದಿದೆ. ಇವೆಲ್ಲ ಪ್ರಾಣಿಗಳ ಗಣತಿಯ ಸಂಖ್ಯೆಯನ್ನು ಸಂಪೂರ್ಣವಾಗಿ ಸರಿ ಎಂದು ಹೇಳಲಿಕ್ಕಾಗದಿದ್ದರೂ ಸಿಂಹಗಳ ಸಂಖ್ಯೆ ಮಾತ್ರ ನಿಜವಾದದ್ದು. ಕರಡಿಗಳು ಮಾತ್ರ ಇಲ್ಲಿಲ್ಲ. ಹೆಬ್ಬಾವುಗಳನ್ನೊಳಗೊಂಡ ಸಾಕಷ್ಟು ಜಾತಿಯ ಸರ್ಪಗಳು ಇಲ್ಲಿ ಹೇರಳ. ಮೊಸಳೆಗಳು ಅಲ್ಲಲ್ಲಿ ನದಿಗಳಲ್ಲಿ ಕಂಡು ಬರುತ್ತವೆ. ಕಮಲೇಶ್ವರ ಸರೋವರದಲ್ಲಿ ಮಾತ್ರ ಸಾಕಷ್ಟಿವೆ. ಸಸಾನ್‌ದಲ್ಲಿ ಮೊಸಳೆ ಅಭಿವೃದ್ಧಿ ಕೇಂದ್ರವೊಂದು ಸ್ಥಾಪಿಸಲ್ಪಟ್ಟಿದೆ.

ಗೀರಾರಣ್ಯದಲ್ಲಿ ವಿವಿಧ ಜಾತಿಯ ಪಕ್ಷಿಗಳಿಗೂ ಕೊರತೆ ಇಲ್ಲ. ಗರುಡ, ಗಿಡಗ, ಹದ್ದು, ಜಾಲಿಗಾರ ಹಕ್ಕಿ, ಮರಕುಟುಕ, ಕೋಗಿಲೆ, ಗೂಬೆಗಳಲ್ಲದೇ ಡ್ರ್ಯಾಂಗೋ, ಶ್ರೈಕ್, ರೋಲರ್, ಸ್ವಿಫ್ಟ, ಪಾರ್ಟ್ರಿಜ್, ಸನ್‌ಬರ್ಡ, ಸ್ಪಾರ್ಕ್, ಫ್ಲಾಯ್‌ಕ್ಯಾಚರ್, ಕಾಪರ್‌ಸ್ಮಿಥ್ ಮುಂತಾದವುಗಳು ಪಕ್ಷಿ ವೀಕ್ಷಕರ ಮನ ತಣಿಸುತ್ತವೆ. ವನ್ಯ ಜೀವಿಗಳ ವೀಕ್ಷಣೆಗೆಂದೇ ಹೊರಡುವುದಾದರೆ ಜೀಪಿನಲ್ಲಿ ಸಸಾನ್‌ದಿಂದ ಬಾವಲಚೌಕ್ ಹಾಗೂ ಕಂಕಾಯಿಯಿಂದ ಚೊಡಾವ್ಡಿ ಮತ್ತು ತುಳಸಿ ಶ್ಯಾಮ, ಕಮಲೇಶ್ವರ ಜಲಾಶಯದವರೆಗೂ ಹೋಗಬಹುದು. ಸೂರ್ಯೋದಯಕ್ಕಿಂತ ತುಸು ಮುಂಚೆ ಹಾಗೂ ಸೂರ್ಯಾಸ್ತದ ನಂತರದ ಸಮಯಗಳು ಪ್ರಾಣಿ ವೀಕ್ಷಣೆಗೆ ಯೋಗ್ಯ. ಡಿಸೆಂಬರದಿಂದ ಮಾರ್ಚ ಮಧ್ಯದ ದಿನಗಳು ಗೀರಾರಣ್ಯಕ್ಕೆ ಭೆಟ್ಟಿ ನೀಡಲು ಒಳ್ಳೆಯ ಕಾಲವಾಗಿದೆ. ಜೂನ್‌ನಿಂದ ಅಕ್ಟೋಬರವರೆಗೆ ಗೀರ ಅಭಯಾರಣ್ಯದಲ್ಲಿ ಪ್ರವೇಶವಿಲ್ಲ. ಇಲ್ಲಿ ಚಳಿಗಾಲದಲ್ಲಿ ಉಷ್ಣತಾಮಾನ ಆರು ಡಿಗ್ರಿ, ಸೆಂಟಿಗ್ರೇಡ್‌ವರೆಗೆ ಇಳಿದರೆ ಕಡು ಬೇಸಿಗೆಯಲ್ಲಿ 40 ಡಿಗ್ರಿ ಸೆಂಟಿಗ್ರೇಡ್‌ವರೆಗಿರುತ್ತದೆ.

ಅಭಯಾರಣ್ಯ ಪ್ರದೇಶದಲ್ಲಿ ಮನುಷ್ಯರ ಸಂಖ್ಯೆ ಹೆಚ್ಚುತ್ತಿರುವುದು, ದನಕರುಗಳು ಓಡಾಡುತ್ತಿರುವುದು ಮುಂತಾದವುಗಳು ಇತ್ತೀಚಿನ ದೊಡ್ಡ ಸಮಸ್ಯೆಗಳು. ಮೂವತ್ತು ಸಾವಿರಕ್ಕೂ ಹೆಚ್ಚು ದನಕರುಗಳು ಇಲ್ಲಿ ಮೇಯುತ್ತಿರುವುದರಿಂದ ಸಸ್ಯಾಹಾರಿ ವನ್ಯ ಪ್ರಾಣಿಗಳಿಗೆ ನೈಸರ್ಗಿಕ ಆಹಾರ ಸಾಕಷ್ಟು ಮಟ್ಟಿಗೆ ಸಿಗುತ್ತಿಲ್ಲ. ●

ಲೇಖಕರಿಗೆ ಸೂಚನೆ

ಫುಲ್‌ಸ್ಕೇಪ್ ಹಾಳೆಯ ಒಂದೇ ಮಗ್ಗುಲಿಗೆ ಸ್ಫುಟವಾಗಿ ಬರೆದ ಲೇಖನದೊಂದಿಗೆ ಲೇಖಕರ ಹೆಸರು, ವಿಳಾಸ ಇರುವುದು ಅಗತ್ಯ. ಅನುವಾದ, ರೂಪಾಂತರ, ಸಾಧಾರ ಲೇಖನಗಳಾದರೆ ಮೂಲ ಲೇಖಕ, ಪ್ರಕಾಶಕರ ಹೆಸರು, ವಿಳಾಸ ಮತ್ತು ಅನುಮತಿ ಪತ್ರವನ್ನೊಳಗೊಂಡಿರಬೇಕು.

ಅಸ್ವೀಕೃತ ಲೇಖನದೊಂದಿಗೆ ಅಂಚೆ ಲಕೋಟೆ ಇದ್ದರೆ ಮಾತ್ರ ಹಿಂದಿರುಗಿಸಲಾಗುವುದು. ಸ್ವೀಕೃತಿ ಬಗ್ಗೆ ಒಂದು ತಿಂಗಳಲ್ಲಿ ತಿಳಿಸಿ ಯಥಾವಕಾಶ ಪ್ರಕಟಿಸಲಾಗುತ್ತದೆ. ಪ್ರಕಟಿತ ಬರಹಗಳಿಗೆ ಸೂಕ್ತ ಸಂಭಾವನೆಯುಂಟು.

ಕವನ, ಕಿರುಬರಹ, ಸ್ಥಿರಶೀರ್ಷಿಕೆಯ ಲೇಖನಗಳನ್ನು ಹಿಂದಿರುಗಿಸಲು ಸಾಧ್ಯವಿಲ್ಲ. 'ಸಹಚಿಂತನ'ಕ್ಕೆ ಬರೆದ ಪತ್ರಗಳು ಚಿಂತನಾರ್ಹ ಅಂಶವನ್ನೊಳಗೊಂಡಿರುವುದು ಆವಶ್ಯಕ.

●


ಚಂದಾದಾರರಿಗೆ ಸೂಚನೆ

'ಕಸ್ತೂರಿ' ಪ್ರತಿ ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ಐದನೇ ದಿನಾಂಕದೊಳಗೆ ತಲುಪದಿದ್ದರೆ ಚಂದಾದಾರರು ತಮ್ಮ ಅಂಚೆ ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ಸಂಖ್ಯೆ ನಮೂದಿಸಿರಬೇಕು.

●

ಚಂದಾ ದರಗಳು

ಬಿಡಿ ಸಂಚಿಕೆ	.....	*ರೂ.3-00*
ಒಂದು ವರ್ಷಕ್ಕೆ	*ಅಂಚೆ ಸೇರಿ*	*ರೂ.34-00*
ಎರಡು ವರ್ಷಕ್ಕೆ	*ಅಂಚೆ ಸೇರಿ*	*ರೂ.65-00*
ಮೂರು ವರ್ಷಕ್ಕೆ	*ಅಂಚೆ ಸೇರಿ*	*ರೂ.100-00*



ಡೆಕೊರೇಲ್....

ಕರ್ಟನ್ ಕ್ಯಾರಿಯರ್

21 ನೇ ಶತಮಾನದಲ್ಲಿ ಪೆಲ್ಮೆಟ್‌ಗಳಿಗೆ ವಿಕಲ್ಪ

ಡೆಕೊರೇಲ್ ಹೇಗೆ ಪೆಲ್ಮೆಟ್‌ಗಳನ್ನು ಮೂಲೆಪಾಲಾಗಿಸುತ್ತದೆ. :

- ಶೀಘ್ರವಾಗಿ ಅಳವಡಿಸುವುದು ಸುಲಭ.
- ಈ ಕೆಲಸ ನೀವೇ ಮಾಡಬಲ್ಲಿರಿ. ಕಾರ್ಪೆಂಟರ್‌ನ ಅಗತ್ಯವಿಲ್ಲ.
- ಯಾವುದೇ ಸೈಜಿನ ಕಿಟಕಿ/ಬಾಗಿಲುಗಳಿಗೆ ಹೊಂದಿಸಲು ಅನುಕೂಲಕರವಾದ ಟೆಲಿಸ್ಕೋಪಿಕ್ ಚಾನಲ್‌ಗಳು.
- ಬಾಳಿಕೆ ಬರುತ್ತವೆ. ಪೇಂಟ್ ಮಾಡಲಾದ ಮೆಟಲ್ ಹಾಗೂ ಪ್ಲಾಸ್ಟಿಕ್ ಭಾಗಗಳು.
- ಪೆಲ್ಮೆಟ್‌ಗಳ ಮೇಲೆ ಕನಿಷ್ಠ 20% ವೆಚ್ಚ ಉಳಿತಾಯ.
- ವಿಶೇಷವಾಗಿ ಮಾಡಲ್ಪಟ್ಟ ಕರ್ಟನ್ ಟೇಪ್ ಮತ್ತು ಹುಕ್‌ಗಳಿಂದಾಗಿ ಆಟೊಮೆಟಿಕ್ ಟ್ರಿಪಲ್ ಪ್ಲೀಟ್ ಮತ್ತು ಸುಲಭವಾಗಿ ಸ್ವಚ್ಛಗೊಳಿಸುವ, ಇಸ್ತ್ರಿ ಮಾಡುವ ಅನುಕೂಲತೆಯಿದೆ.

FLASH - KN 10098

- ಮರ ಉಳಿಸಿರಿ: ಕಾಡುಗಳನ್ನು ಸಂರಕ್ಷಿಸಿರಿ.

Manufactured by: **AJAY WINDECOR PRODUCTS PVT. LTD.**
Regd. Office: Gurudeep - 2 Flat No. 12 Tulshibaugwale Colony.
Sahakar Nagar No. 2. Pune - 411 009 Phone - 436960

ಬೆಂಗಳೂರಿಗೆ ಹಂಚಿಕೆದಾರರು: ಅಮಿತ್ ಎಂಟರ್‌ಪ್ರೈಸಸ್ 212/ಬಿ, 54ನೇ ಕ್ರಾಸ್, IV ಬ್ಲಾಕ್, ರಾಜಾಜಿನಗರ, ಬೆಂಗಳೂರು. 560010. ಫೋನ: 358891. **ಮಂಗಳೂರು:**

ಜೀವನದರ್ಶನ

ಕೆ.ಟಿ. ಪಾಂಡುರಂಗಿ

ಪಿಸುಮಾತು

ಪಿಸು ಮಾತು ಅಂದರೆ ಮೆಲ್ಲಗಿನ ಧ್ವನಿಯಲ್ಲಿ ಹೇಳುವುದು. ಮನುಷ್ಯನು ಅನೇಕ ಸಂದರ್ಭಗಳಲ್ಲಿ ಮೆಲ್ಲಗೆ ಮಾತನಾಡುತ್ತಾನೆ. ಚಾಡಿ ಹೇಳುವುದು, ರಹಸ್ಯ ವಿಷಯಗಳನ್ನು ಹೇಳುವುದು, ದೊಡ್ಡವರ ಗಮನ ಸೆಳೆಯದಂತೆ ಹೇಳುವುದು, ದೊಡ್ಡವರಿಗೆ ಮಾತ್ರ ಹೇಳುವುದು ಇತ್ಯಾದಿ. ಇವುಗಳಲ್ಲಿ ಚಾಡಿಯ ಮಾತುಗಳಿಗೇ ಪಿಸುಮಾತು ಎಂಬ ಪದವು ಹೆಚ್ಚು ಬಳಕೆಯಲ್ಲಿ ಇದೆ.

ಸ್ವಲ್ಪವಾದರೂ ಚಾಡಿ ಹೇಳದ, ಒಮ್ಮೆಯಾದರೂ ಚಾಡಿ ಹೇಳದ ವ್ಯಕ್ತಿಯು ಸಿಗುವುದು ದುರ್ಲಭ. ನಿತ್ಯಜೀವನದಿಂದ ಆರಂಭಿಸಿ ರಾಷ್ಟ್ರ ಜೀವನದವರೆಗೆ ಅನೇಕ ಹಂತಗಳಲ್ಲಿ ಈ ಚಾಡಿ ಹೇಳುವುದು ವ್ಯಾಪಿಸಿರುತ್ತದೆ. ಚಾಡಿ ಹೇಳಲು ಮುಖ್ಯವಾಗಿ ಮೂರು ಕಾರಣಗಳಿರುತ್ತವೆ. 1. ಅಸೂಯೆ 2. ಎದುರಿಗೇ ಹೇಳಲು ಧೈರ್ಯವಿಲ್ಲದಿರುವುದು 3. ಕುಚೋದ್ಯದ ಸ್ವಭಾವ.

ಮನುಷ್ಯನು ತನ್ನ ವ್ಯಕ್ತಿತ್ವವನ್ನು ತನ್ನ ಕಾರ್ಯಕ್ಷೇತ್ರದಲ್ಲಿಯೇ ಕಾರ್ಯ ಮಾಡುವವರೊಡನೆ ತಾನು ಇರುವ ಪರಿಸರದಲ್ಲಿಯೇ ಇರುವವರೊಡನೆ ಅಥವಾ ಬೇರೆ ಯಾವುದಾದರೂ ರೀತಿಯಿಂದ ತನ್ನ ಸಂಬಂಧ ಬಂದವರೊಡನೆ ತಿಳಿದೋ, ತಿಳಿಯದೆಯೋ ತೂಗಿನೋಡಿಕೊಳ್ಳುತ್ತಿರುತ್ತಾನೆ. ಇಂಥ ತೂಕದಲ್ಲಿ ತಾನು ಇನ್ನೊಬ್ಬರಿಗಿಂತ ಕಡಿಮೆ ಎಂದು ತಿಳಿದುಬಂದರೆ ತಾನು ಇನ್ನೂ ಪ್ರಯತ್ನ ಮಾಡಿ ಮುಂದೆ ಬರುವುದು ಒಂದು ವಿಧವಾದರೆ ಅಸೂಯೆ ಪಡುವುದು ಇನ್ನೊಂದು ವಿಧ. ಈ ಅಸೂಯೆ ಆ ಇನ್ನೊಬ್ಬ ವ್ಯಕ್ತಿಯ ತೂಕವನ್ನು ಕೆಳಗಿಳಿಸಲು ಅವನಲ್ಲಿ ದೋಷಗಳನ್ನು ಕಾಣತೊಡಗುತ್ತದೆ. ಇಲ್ಲದ ದೋಷಗಳನ್ನು ಆರೋಪಿಸತೊಡಗುತ್ತದೆ. ಇನ್ನೂ ಬೇರೆ ರೀತಿಯಲ್ಲಿ ಅವನ ವ್ಯಕ್ತಿತ್ವಕ್ಕೆ ಕುಂದು ತರಲು ಪ್ರಯತ್ನಿಸುತ್ತದೆ. ಇವನ್ನೆಲ್ಲ ಅವನ ವಿರುದ್ಧ ಚಾಡಿ ಹೇಳುವುದು ಒಂದು ಸುಲಭ ಮಾರ್ಗ.

ಇನ್ನು ಸಮಾಜದಲ್ಲಿ ಕೆಲವರು ದೊಡ್ಡವರು ಪ್ರಬಲರು ಕೆಲವು ಅಕೃತ್ಯಗಳಲ್ಲಿ ತೊಡಗಿರುತ್ತಾರೆ. ಅದನ್ನು ನೇರವಾಗಿ ಪ್ರತಿಭಟಿಸಲು ಬರುವುದಿಲ್ಲ. ಸುಮ್ಮನೆ ಕೂಡಲೂ ಆಗುವುದಿಲ್ಲ. ಇಂಥ ಸಂದರ್ಭಗಳಲ್ಲಿ ಅವರಷ್ಟೇ ಪ್ರಬಲರಾದವರಿಗೆ ಅಥವಾ ಅವರನ್ನು ಎದುರಿಸಬಲ್ಲ ಅನೇಕರಿಗೆ ಅವರ ದುಷ್ಕೃತ್ಯಗಳ ಚಾಡಿ ಹೇಳುವುದು ಸಾಮಾನ್ಯವಾಗಿ ಅನುಸರಿಸುವ ಉಪಾಯ. ಇಂಥ ವಿಷಯಗಳನ್ನು ಹೇಳುವಾಗ ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಅದು ಚಾಡಿಯಾಗುವುದಿಲ್ಲ. ಉಪ್ಪುಕಾರ ಹಚ್ಚಿ ಹೇಳಿದರೆ ಕೇಳುವವರಿಗೆ ಗ್ರಾಹ್ಯವಾಗುವಂತೆ ಬದಲಿಸಿ ಹೇಳಿದರೆ ಚಾಡಿಯಾಗುತ್ತದೆ.

ಮನುಷ್ಯನ ಸ್ವಭಾವಗಳಲ್ಲಿ ಕುಚೋದ್ಯಮಾಡುವ ಸ್ವಭಾವ ಒಂದು ವೈಶಿಷ್ಟ್ಯ. ಇಬ್ಬರಿಗೆ ಜಗಳ ಹಚ್ಚುವುದು ಇಂಥ ಕುಚೋದ್ಯಗಳಲ್ಲಿ ಒಂದು. ಪರಸ್ಪರರ ಸ್ವಭಾವ ದೋಷಗಳ ಚಾಡಿಹೇಳುವುದು ಇದಕ್ಕೊಂದು ಸುಲಭ ಉಪಾಯ. ಹೀಗೆ ಚಾಡಿ ಹೇಳುವುದು ಮನುಷ್ಯನ ಸ್ವಭಾವದ ಒಂದು ಅಂಗವಾಗಿದೆ. ಇದು ಅತಿಯಾದರೆ ಕೆಡಕು. ಹಿತಮಿತವಾಗಿದ್ದರೆ ವಿನೋದ. ಇಲ್ಲವೇ ಇರುವುದು ಸಜ್ಜನಿಕೆ.

ಬಡ ಮಕ್ಕಳ ಸೇವೆಯೇ ಈಕೆಯ ಬದುಕು!

ಜೇನ್ ಮೆಕ್ ಬ್ರೈಡ್:

ಎಲ್ಲಿಂದಲೊ ಬಂದು ಇಲ್ಲಿಯೆ ನಿಂತವಳು

ಮಾತನಾಡುವವರು ಬಹಳ ಜನ ಇದ್ದಾರೆ. ಭಾಷಣ ಬಿಗಿಯುತ್ತಾ ಅಂಗೈಯಲ್ಲಿ ಸ್ವರ್ಗ ತೋರಿಸುವವರ ಸಂಖ್ಯೆ ಕಡಿಮೆಯೇನಿಲ್ಲ. ಆದರೆ ಒಂದು ಒಳ್ಳೆ ಕೆಲಸವನ್ನು ಆಡದೇ ಮಾಡುವವರು ಬಹಳ ವಿರಳ! ಅಂತಹ ಅಪರೂಪದ ಮಹಿಳೆ ಜೇನ್ ಮೆಕ್ ಬ್ರೈಡ್.

ಆಂಧ್ರ ಪ್ರದೇಶದ ಕೃಷ್ಣಾ ಜಿಲ್ಲೆಯ ಪೆದಗೊಲ್ಲಪಾಲೆಂನಲ್ಲಿ ಒಂದು ಆಶ್ರಮವನ್ನು ನಡೆಸುತ್ತಾ ಬಡ ಮಕ್ಕಳಿಗೆ ವಿದ್ಯೆ ಕಲಿಸುತ್ತಿದ್ದಾಳೆ ಜೇನ್ ಮೆಕ್ ಬ್ರೈಡ್. ಅಷ್ಟೇ ಅಲ್ಲದೆ ಆ ಮಕ್ಕಳಿಗೆ ವಸತಿ, ಭೋಜನ ಸೌಕರ್ಯಗಳನ್ನು ಕೂಡಾ ಒದ

● ಕಂಬಳಿ ಆದವಾನಿ

ಗಿಸುತ್ತಿದ್ದಾಳೆ. ಇದೆಲ್ಲ ಕೇವಲ ಸಮಾಜ ಸೇವೆಯ ಹಂಬಲದ ಮೂರ್ತ ರೂಪವೇ ಹೊರತು ಲಾಭಾಪೇಕ್ಷೆ ಎಳ್ಳಷ್ಟೂ ಇಲ್ಲ.

ಆಕೆಯದು ಅಮೆರಿಕದ ಕ್ಯಾಲಿಫೋರ್ನಿಯಾ. ಸಮಾಜಕ್ಕೆ ಉಪಯೋಗವಾಗುವ ಯಾವುದಾದರೂ ಕೆಲಸಮಾಡಬೇಕೆಂಬ ಸಂಕಲ್ಪದಿಂದ ಒಬ್ಬ ಮಹಿಳೆ ತನ್ನ ಕುಟುಂಬವನ್ನೂ ಮಕ್ಕಳನ್ನೂ ತೊರೆದು ಸಾವಿರಾರು ಮೈಲಿ ದೂರ ಬಂದು ತನ್ನ ಸೇವಾ ಕಾರ್ಯಕ್ರಮವನ್ನು ಆರಂಭಿಸಿರುವುದು ನಿಜವಾಗಿಯೂ ಆಶ್ಚರ್ಯಕರ! ಎಲ್ಲವೂ ವ್ಯಾವಹಾರಿಕ ಲೆಕ್ಕಾಚಾರದಿಂದಲೇ ನಿಜಕ್ಕಿಳಿಯುವ ಇಂದಿನ ವಾತಾವರಣದಲ್ಲಂತೂ ಈಕೆಯ ನಿಲುವು ನಂಬಲಸಾಧ್ಯವಾಗಿ ಕಾಣಿಸುತ್ತದೆ.

ಕ್ಯಾಲಿಫೋರ್ನಿಯಾದಲ್ಲಿ ಕಂಪ್ಯೂಟರ್ ಉಪಾಧ್ಯಾಯಿನಿಯಾಗಿ ಕೆಲಸಮಾಡುತ್ತಿದ್ದ ಜೇನ್ ರಜಾದಿನಗಳಲ್ಲಿ ವಿಹಾರ ಯಾತ್ರೆಗೆಂದು ನೇಪಾಳಕ್ಕೆ ಬಂದಳು; ನೇಪಾಳದ ಪ್ರಕೃತಿಗೆ ಮಾರುಹೋದಳು. ಖಟ್ಮಂಡುವಿನಲ್ಲಿ ಆಕೆಗೊಬ್ಬ ಸಾಧು ಪರಿಚಯವಾದ. ಆತನು ಜೇನ್‌ಗೆ ಸಮಾಜ ಸೇವೆಮಾಡುವಂತೆ ಸಲಹೆ ನೀಡಿದ.

''ಪ್ರಪಂಚದಲ್ಲಿ ಬಡತನ ಹೆಚ್ಚಿದೆ. ಎಷ್ಟೋ ಬಡ ಮಕ್ಕಳು ಸಹಜ ಪ್ರೀತಿ, ಪ್ರೇಮ ವಾತ್ಸಲ್ಯದಿಂದ ವಂಚಿತರಾಗಿದ್ದಾರೆ. ಅವರಿಗೆ ಹೊಟ್ಟೆ ತುಂಬಾ ಆಹಾರವಿಲ್ಲ. ಮೈತುಂಬಾ ಬಟ್ಟೆ ಇಲ್ಲ.





ಅಂತಹವರಲ್ಲಿ ಕೆಲವರಿಗಾದರೂ ಸಹಾಯ ಮಾಡು. ಭಗವಂತನು ನೀಡಿದ ಜೀವನವನ್ನು ಸದುಪಯೋಗಪಡಿಸಿಕೋ'' ಎಂದು ಆ ಸಾಧು ಆಕೆಗೆ ಸಲಹೆ ನೀಡಿದ. ಜೇನ್‌ಗೆ ಆತನ ಮಾತು ಮೆಚ್ಚುಗೆ ಆಯಿತು.

ಮರಳಿ ಕ್ಯಾಲಿಫೋರ್ನಿಯಾಕ್ಕೆ ಹೋಗಿ ತನ್ನ ಸಾಧಾರಣ ಜೀವನದಲ್ಲಿ ಪ್ರವೇಶಿಸಲು ಯತ್ನಿಸಿದರೂ ಆಕೆಯ ಕಿವಿಗಳಲ್ಲಿ ಸಾಧುವಿನ ಮಾತುಗಳೇ ಕೇಳಿಸತೊಡಗಿದವು. ಉದ್ಯೋಗದಲ್ಲಿ ಏಕಾಗ್ರತೆ ಮೂಡಲಿಲ್ಲ; ರಾಜಿನಾಮೆ ಕೊಟ್ಟು ಖಟ್ಮಂಡುವಿಗೆ ಬಂದು ಸಾಧುವನ್ನು ಭೆಟ್ಟಿಯಾದಳು. ದಕ್ಷಿಣ ಭಾರತದ ಕರಾವಳಿ ಪ್ರದೇಶವನ್ನು ಸಂದರ್ಶಿಸಬೇಕೆಂಬ ತನ್ನ ಕೋರಿಕೆಯನ್ನು ವ್ಯಕ್ತಪಡಿಸಿದಳು. ಸಾಧು ಆಕೆಯ ಅಭಿಲಾಷೆಯನ್ನು ಮೆಚ್ಚಿಕೊಂಡು ಎಸಿರಿಲಿಕ್ ಎಂಬ ವ್ಯಕ್ತಿಯನ್ನು ಆಕೆಯೊಂದಿಗೆ ಕಳುಹಿಸಿದ. ಎಸಿರಿಲಿಕ್‌ನೊಂದಿಗೆ ಆಕೆ ಕೆಲವು ಪ್ರದೇಶಗಳನ್ನು ನೋಡಿದಳು. ಕೃಷ್ಣಾ ಜಿಲ್ಲೆಯ ಪೆದಗೊಲ್ಲಪಾಲೆಂ ಆಕೆಯನ್ನು ಆಕರ್ಷಿಸಿತು. ಆ ಹಳ್ಳಿಯಲ್ಲಿನ ಬಡ ಮಕ್ಕಳ ದಯನೀಯ ಸ್ಥಿತಿ ಆಕೆಯ ಹೃದಯವನ್ನು ಅಲುಗಾಡಿಸಿತು. ಅವರ ಅಭ್ಯುನ್ನತೆಗೆ ತಾನು ಸಾಧ್ಯವಾದಷ್ಟು ಸಹಾಯ ಮಾಡಬೇಕೆಂದುಕೊಂಡಳು.

ಪೆದಗೊಲ್ಲಪಾಲೆಂ ಗ್ರಾಮ ಕೃತ್ತಿವೆನ್ನು ಮಂಡಲಕ್ಕೆ ಸೇರುವ ಸಮುದ್ರ ತೀರ. ಅಲ್ಲಿಗೆ ಹೋಗಬೇಕಾದರೆ ಮಚಲಿಪಟ್ನಂನಿಂದ ಬಸ್ಸಿನಲ್ಲಿ ಲಕ್ಷ್ಮೀಪುರಂ ಎಂಬ ಊರು ಸೇರಬೇಕು. ಅಲ್ಲಿಂದ ಎಂಟು ಕಿ.ಮೀ. ನಡೆದುಕೊಂಡು ಹೋದರೆ ಪೆದಗೊಲ್ಲಪಾಲೆಂ ಸಿಗುತ್ತದೆ. ಆ ಪ್ರಾಂತವೆಲ್ಲಾ ಮರಳಿನಿಂದ ತುಂಬಿದ್ದು ಪ್ರಯಾಣಕ್ಕೆ ಯಾವ ವಾಹನವೂ ಒದಗಿಬರುವುದಿಲ್ಲ. ಆ ಹಳ್ಳಿಯ ಬಡ ಮಕ್ಕಳ ಪರಿಸ್ಥಿತಿಯನ್ನು ಕಂಡು ಅವರಿಗೆ ತನ್ನ ಸೇವೆಯನ್ನು ಧಾರೆಯೆರೆಯಲು ದೃಢವಾಗಿ ನಿಶ್ಚಯಿಸಿದಳು ಜೇನ್. ಕ್ಯಾಲಿಫೋರ್ನಿಯಾಕ್ಕೆ ಹೋಗಿ ಹದಿನೈದು ಸಾವಿರ ಡಾಲರುಗಳಷ್ಟು ನಿಧಿ ಸಂಗ್ರಹಿಸಿಕೊಂಡು 1988ರಲ್ಲಿ ಪೆದಗೊಲ್ಲಪಾಲೆಂ ಸೇರಿಕೊಂಡಳು.

ಎಲ್ಲಿಂದಲೋ ಬಂದ ಒಬ್ಬ ವಿದೇಶಿ ವನಿತೆ ತಮ್ಮ ಹಳ್ಳಿಯಲ್ಲಿ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವೆನೆಂದಾಗ ಮೊದಲು ಊರ ಜನ ನಂಬಲಿಲ್ಲ. ಆಕೆಯನ್ನು ಅನುಮಾನದಿಂದ ನೋಡಿದರು. ದೇಶ ತೊರೆದು, ಕೇವಲ ಸಮಾಜ ಸೇವೆಯೇ ತನ್ನ ಕರ್ತವ್ಯವೆಂದು ಇಷ್ಟು ದೂರ ಬಂದ ಆಕೆಯನ್ನು ಕೆಲವರು ನೋಯಿಸಿದ್ದೂ ಇದೆ. ಇದೇ ಅವಕಾಶವೆಂದು ಆಕೆಯನ್ನು

ಮೋಜಲು ಪ್ರಯತ್ನಿಸಿದವರೂ ಇದ್ದಾರೆ.

''ಸ್ವಲ್ಪ ಹೊಲವನ್ನು ಕೊಂಡು ಪಾಠಶಾಲೆಯನ್ನು ಪ್ರಾರಂಭಿಸಬೇಕೆಂದು ಪ್ರಯತ್ನ ಮಾಡಿದಾಗ ಸಾಧಾರಣವಾಗಿ ಹದಿಮೂರು ಸಾವಿರ ರೂಪಾಯಿಗೆ ಎಕರೆಯಿದ್ದುದನ್ನು ನನಗೆ ಅರವತ್ತು ಸಾವಿರ ರೂಪಾಯಿ ಎಂದು ಹೇಳಿದರು,'' ಎನ್ನುತ್ತಾಳೆ ಈ ವಿದೇಶಿ ಮಹಿಳೆ.

ಒಮ್ಮೆ ವಸತಿಗೃಹಕ್ಕೆ ಬೇಕಾದ ಅಡುಗೆ ಸಾಮಾನುಗಳನ್ನು ವಿಜಯವಾಡದಿಂದ ಒಂದು ಚಿಕ್ಕ ಲಾರಿಯಲ್ಲಿ ಹಾಕಿಕೊಂಡು ಹಳ್ಳಿಗೆ ಹೊರಟಳು. ಆದರೆ ಲಾರಿ ಸ್ವಲ್ಪ ದೂರ ಹೋದಮೇಲೆ ಮರಳಿನಲ್ಲಿ ಕುಸಿದು ಮುಂದೆ ಹೋಗಲಿಲ್ಲ. ಸಾಮಾನುಗಳನ್ನು ನಿಂತಲ್ಲೇ ಅನ್‌ಲೋಡ್ ಮಾಡಿ ಹೊರಟು ಹೋಯಿತು ಲಾರಿ. ಅಲ್ಲಿಂದ ಪೆದಗೊಲ್ಲಪಾಲೆಂಗೆ ನಾಲ್ಕು ಮೈಲಿಗಳು. ಆಕೆ ಎಷ್ಟು ಬೇಡಿಕೊಂಡರೂ ಯಾರೂ ಸಹಾಯ ಮಾಡಲು ಮುಂದೆ ಬರಲಿಲ್ಲ. ಅವರಿವರಿಗೆ ದುಂಬಾಲು ಬಿದ್ದು ಕೊನೆಗೂ ಸಾಮಾನುಗಳನ್ನು ಹಳ್ಳಿಗೆ ಸಾಗಿಸಿದಳು ಜೇನ್.

ಒಮ್ಮೆ ಜೇನ್ ಮೆಕ್ ಬ್ರೈನ್‌ಳಿಗೆ ಜ್ವರ ಬಂದಿತು. ಲಕ್ಷ್ಮೀಪುರದಿಂದ ಕಾಲುನಡಿಗೆಯಲ್ಲೇ ಪೆದಗೊಲ್ಲಪಾಲೆಂಗೆ ಬರುತ್ತಿದ್ದಳು. ನಡೆಯುವುದು ಪ್ರಯಾಸಕರವಾಗಿ ಒಬ್ಬ ಎತ್ತಿನ ಬಂಡಿಯವನನ್ನು ಪೆದಗೊಲ್ಲಪಾಲೆಂಗೆ ಕರೆದೊಯ್ಯಲು ಕೇಳಿದಾಗ ನಲವತ್ತೈದು ರೂಪಾಯಿ ಬಾಡಿಗೆ ಕೇಳಿದ. (ಬೇರೆಯವರಾದರೆ ಕೇವಲ ಹದಿನೈದು ರೂಪಾಯಿಗಳು.) ಇಂತಹ ಹಲವಾರು ಕಹಿ ಅನುಭವಗಳನ್ನು ಎದುರಿಸಿದ ಆಕೆ ಎದೆಗುಂದಲಿಲ್ಲ.

ಒಂದೂವರೆ ಎಕರೆ ಭೂಮಿಯನ್ನು ಖರೀದಿಸಿ ಅದರಲ್ಲಿ ಒಂದು ಗುಡಿಸಲನ್ನು ನಿರ್ಮಿಸಿ ಬಡ ಮಕ್ಕಳಿಗೆ ಊಟ - ವಸತಿ ಗೃಹವನ್ನು ಪ್ರಾರಂಭಿಸಿದಳು. ''ಬಡ ಮಕ್ಕಳಿಗೆ ಸಹಾಯ ಮಾಡಬೇಕೆಂದು ಪ್ರಾರಂಭಿಸಿದೆ. ಆದರೆ ಮೊದಮೊದಲು ನನ್ನ ನಿಸ್ವಾರ್ಥವನ್ನು ಜನ ನಂಬಲಿಲ್ಲ. ಉಚಿತವಾಗಿ ಊಟಕ್ಕೆ ನೀಡುತ್ತೇನೆಂದರೂ ಹಳ್ಳಿ ಜನ ತಮ್ಮ ಮಕ್ಕಳನ್ನು ಕಳುಹಿಸಲು ಹಿಂಜರಿದರು. ಮೂವರು ಮಕ್ಕಳಿಂದಲೇ ಪ್ರಾರಂಭಿಸಿದೆ'' ಎನ್ನುತ್ತಾಳೆ.

ಈಕೆಗೆ ಎದುರಾದ ಮತ್ತೊಂದು ದೊಡ್ಡ ಸಮಸ್ಯೆಯೆಂದರೆ ಭಾಷೆಯದು. ಆಕೆಗೆ ತೆಲುಗು ಬರುವುದಿಲ್ಲ. ಆ ಸಣ್ಣ ಹಳ್ಳಿಯಲ್ಲಿ ಇಂಗ್ಲಿಷ್ ಚೆನ್ನಾಗಿ ಬಲ್ಲವರಿಲ್ಲ. ಊರಿನ ಆರ್.ಎಂ.ಪಿ. ಡಾಕ್ಟರೊಬ್ಬರಿಗೆ ಮಾತ್ರ ಸ್ವಲ್ಪ ಗೊತ್ತು. ಆತನ ಸಹಾಯದಿಂದ ಮುಂದುವರಿದಳು.

ಮಕ್ಕಳಿಗೆ ಮೂರು ಹೊತ್ತು ಊಟ ಹಾಕುತ್ತಾ, ಹೇಗೆ ಶುಭ್ರವಾಗಿರಬೇಕೆಂಬುದನ್ನು ಹೇಳಿಕೊಡುತ್ತಾ ವಿದ್ಯೆಕಲಿಸಲು ಶುರುಮಾಡಿದಳು. ಮಕ್ಕಳಿಗೆ ಬೇಕಾದ ಬಟ್ಟೆ, ಪುಸ್ತಕಗಳನ್ನು ತಾನೇ ಕೊಂಡು ತಂದಳು. ತಮಗಿಂತಲೂ ಶ್ರದ್ಧೆಯಿಂದ ಮಕ್ಕಳ ಪಾಲನೆಯನ್ನು ನೋಡಿಕೊಳ್ಳುತ್ತಿರುವ ಜೇನ್‌ಳನ್ನು ಕಂಡ ಆ ಮಕ್ಕಳ ತಂದೆ ತಾಯಂದಿರು ಚಕಿತಗೊಂಡರು. ಆ ಹಳ್ಳಿಗರಿಗೆ ಕ್ರಮೇಣ ಆಕೆಯ ಮೇಲೆ ವಿಶ್ವಾಸ ಉಂಟಾಯಿತು. ಆಕೆಯ ಸೇವೆಯನ್ನು ಮೆಚ್ಚಿಕೊಂಡು ಗೌರವಿಸತೊಡಗಿದರು. ಮಕ್ಕಳ ಸಂಖ್ಯೆಯೂ ಬೆಳೆಯಿತು. ಮತ್ತೆ ಒಂದೂವರೆ ಎಕರೆ ಭೂಮಿಯನ್ನು ಖರೀದಿಸಿದಳು. ನಾಲ್ಕು ಕುಟೀರಗಳನ್ನು ನಿರ್ಮಿಸಿದಳು. ಸುತ್ತಲೂ ತೆಂಗು ಮಾವು ತರಕಾರಿ ಬೆಳೆಸುತ್ತಿದ್ದಾಳೆ. ಮಕ್ಕಳು ಬೆಳಗಿನ ಸಮಯದಲ್ಲಿ ಎದ್ದು ಸ್ನಾನಮಾಡಿ ಜಾನ್ ಬಳಿ ಪಾಠ ಹೇಳಿಸಿಕೊಳ್ಳುತ್ತಾರೆ. ಆಕೆಗೆ ತೋಟದ ಕೆಲಸದಲ್ಲೂ ಸಹಾಯಮಾಡುತ್ತಾರೆ.

ಅಮೆರಿಕದಿಂದ ಬಂದ ಮತ್ತೊಬ್ಬ ಸ್ವಯಂ ಸೇವಕಿ ಕುಮಾರಿ ಲಿಜಾ ಕೂಡಾ ಇಲ್ಲೇ ಇದ್ದು ಜೇನ್‌ಳಿಗೆ ಸಹಾಯ ಮಾಡುತ್ತಿದ್ದಾಳೆ. ಪ್ರತಿ ಆರು ತಿಂಗಳಿಗೊಮ್ಮೆ ಅಮೆರಿಕಕ್ಕೆ ಹೋಗಿ ಸಹಾಯ ಧನವನ್ನು ಸಂಗ್ರಹಿಸಿ ತರುತ್ತಾಳೆ ಜೇನ್. ಈಗ ವರ್ಷಕ್ಕೆ ಒಂದು ಲಕ್ಷ ಮೂವತ್ತು ಸಾವಿರ ರೂಪಾಯಿ ವೆಚ್ಚವಾಗುತ್ತಿದೆ. ಅಮೆರಿಕಕ್ಕೆ ಹೋದಾಗಲೇ ತನ್ನ ಕುಟುಂಬದ ದರ್ಶನ.

ಹೀಗೂ ಉಂಟೆ ಎಂದು ಹುಬ್ಬುಗಳು ಮೇಲೇರುತ್ತವಲ್ಲವೇ? ಅದು ಸಹಜ! ●

ಕನ್ನಡ ಕಥೆ

ಅಸಹ್ಯ ಪೆನ್ನು

● ಶಾಂತಾರಾಮ ಸೋಮಯಾಜಿ

ನಾನು ಸೈಕಲ್ಲಿನಲ್ಲಿ ಆಫೀಸಿಗೆ ಹೋಗುವ ದಾರಿಯಲ್ಲಿ ಒಂದು ಚಿಕ್ಕ ಗುಡ್ಡ ಅಡ್ಡ ಬರುತ್ತದೆ. ಹತ್ತು ಸ್ಪೀಡಿನ ಸೈಕಲ್ಲಾದರೂ ದೇಹ ಬಾಗಿಸಿಕೊಂಡು ಸೈಕಲ್ಲು ದೂಡಿಕೊಂಡೇ ಗುಡ್ಡ ಹತ್ತುವುದು ನನ್ನ ಹಣೆಬರಹದಲ್ಲಿ ಬರೆದದ್ದು.

ಗುಡ್ಡ ದಾಟಿದ ನಂತರ ಒಂದು ಹೈವೇ. ಅದನ್ನು ದಾಟಿ ಹೋಗಲು ದಾರಿ ಬದಿಯ ಲೈಟು ಕಂಬದಲ್ಲಿ ಒಂದು ಕಿರು ಬೆರಳ ಗಾತ್ರದ ಕಪ್ಪು ಗುಂಡಿ. ಈ ಗುಂಡಿ ಒತ್ತಿ 'ವಾಕ್' ಎನ್ನುವ ಹಸಿರು ಸೈನ್ ಬರುವವರೆಗೆ ಕಾಯಬೇಕು. ಸೈನ್ ಬಂದು ಮಾರ್ಗದಾಟಿದರೆ ಮತ್ತೆ ಇಳಿಜಾರಿನ ದಾರಿ, ಸೈಕಲ್ ಮೇಲೆ ಭತ್ತದ ಮೂಟೆ ಹಾಗೆ ಕೂತುಕೊಂಡು ಬಿಟ್ಟರೆ ಸಾಕು; ಸೈಕಲ್ ತಂತಾನೇ ದಾರಿ ಕಂಡುಹಿಡಿಯುತ್ತಾ ಮುಂದೆ ಹೋಗುತ್ತದೆ.

ಒಂದು ಸೋಮವಾರ ಬೆಳಿಗ್ಗೆ, ಏಳೂಕಾಲು ಕಳೆದಿದೆ. ಆಕಾಶದ ಕೆಳಗೆಲ್ಲಾ ಮೋಡ ಮುತ್ತಿಕೊಂಡಿತ್ತು. ಗಾಳಿಯಲ್ಲಿ ಚಳಿ ಹೂತು ಹೋಗಿತ್ತು. ಎದುರಿನ ಕಿತ್ತಳೆ ಹಣ್ಣಿನ ತೋಟದಲ್ಲಿ ಸೂರ್ಯ ಅಂಜಿ ಕುಳಿತಿದ್ದ.

ನಾನು ಉಸಿರು ಬಿಡುತ್ತಾ, ಎಳೆದುಕೊಳ್ಳುತ್ತಾ ಸೈಕಲ್ಲು ದೂಡಿಕೊಂಡು ಗುಡ್ಡ ಹತ್ತಿ ಕಪ್ಪುಗುಂಡಿ ಒತ್ತಲು ಬಂದೆ.

ಅಲ್ಲೇ ಕಾಲ ಬದಿ ಹೆಣದ ಹಾಗೆ ಬಿದ್ದುಕೊಂಡಿತ್ತು - ಕ್ಯಾಪ್ ಇರದ ತುದಿಮುರಿದುಕೊಂಡ ಕಪ್ಪು ಬಣ್ಣದ ಒಂದು ಬಾಲ್ ಪಾಯಿಂಟ್ ಪೆನ್, ಮಂಡೆ ಮುರಿದುಕೊಂಡು ಕೊಳೆತ ಹೆಣದಂತೆ ಅಸಹ್ಯವಾಗಿತ್ತು.

ನೋಡಿಯೂ ನೋಡದಂತೆ ನಾನದನ್ನು ಹಾದು ಹೋದೆ.

ಮರುದಿನ ಬೆಳಿಗ್ಗೆ ಯಥಾ ಪ್ರಕಾರ ಸೈಕಲ್ಲು ದೂಡಿಕೊಂಡು ಗುಡ್ಡ ಹತ್ತಿ ಕಪ್ಪು ಗುಂಡಿಯನ್ನೊತ್ತಿ ಕಾಯುತ್ತಾ ನಿಂತೆ. ಎದುರಲ್ಲಿ ವಾಹನಗಳು ಒಂದೇ ತರ ಗಡಿಬಿಡಿಯಲ್ಲಿ ಓಡಿ ಹೋಗುತ್ತಿದ್ದವು. ಎಡಕ್ಕೆ ತಿರುಗಿ ನೋಡಿದೆ. ಪುನಃ ಕಣ್ಣಿಗೆ ಬಿತ್ತು. ಅದೇ ಪೆನ್ನು - ಕ್ಯಾಪ್ ಕಳಚಿಕೊಂಡು ತುದಿ ಚಪ್ಪಟೆಯಾಗಿ ಶ್ವಾಸಕಳೆದುಕೊಂಡ ಕಪ್ಪು ಬಣ್ಣದ ಬಾಲ್ ಪಾಯಿಂಟ್ ಪೆನ್, ನಿನ್ನೆ ನೋಡಿದ ಸ್ಥಳಕ್ಕಿಂತ ಐದಾರಡಿ ದೂರದಲ್ಲಿ ಚಿಕ್ಕ ಪೈನ್ ಮರದಡಿ ಬಿದ್ದುಕೊಂಡಿತ್ತು.

ಎದುರಿನ ಅವಸರದ ವಾಹನಗಳು ಬ್ರೇಕ್ ಒತ್ತಿಕೊಂಡು ನಿಂತವು. ನನ್ನ ಸೈನ್ ಬಂತು. ಸೈಕಲ್ಲೇರಿ ಹೈವೇ ದಾಟಿ ಮುಂದೆ ಹೋದೆ.

ಮರುದಿನ ಬೆಳಿಗ್ಗೆ ನಾನು ಸೈಟಿಗೆ ಹೋಗಬೇಕಾಗಿ ಬಂತು. ಅಲ್ಲಿನ ಕೆಲಸ ಮುಗಿಸಿ ಹಿಂದೆ ಬಂದು ಸೈಕಲ್ಲಲ್ಲಿ ಆಫೀಸಿಗೆ ಹೊರಟೆ. ಬಿಸಿಲೆಂದ್ರೆ, ಹೇಳುವುದೇ ಬೇಡ. ಮುಖ, ತಲೆ, ಬೆನ್ನೆಲ್ಲಾ ಸುಟ್ಟು ಹಾಕಿಬಿಡುತ್ತೇನೆ ಎನ್ನುವಂತಿದ್ದ ಸೂರ್ಯ, ಗಾಳಿ ಮರೆತೇಬಿಟ್ಟಿದ್ದ. ನಾನು ಬೆವರಿಳಿಸುತ್ತಾ ಗುಡ್ಡ ಏರುತ್ತಿದ್ದೆ. ವಾಹನಗಳು ಇನ್ನೂ ಜೋರಾಗಿ ಓಡಾಡುತ್ತಿದ್ದವು. ಕಿತ್ತಳೆ ಹಣ್ಣಿನ ಗಿಡಗಳು ಸಾಕಪ್ಪಾ ಇದು ಎನ್ನುತ್ತಾ ಬಾಯಿ ಬಿಟ್ಟು ನಿಂತಿದ್ದವು. ಫಕ್ಕನೆ ಕೇಳಿ ಬಂತು -


'ಪ್ಲೀಸ್'.

ಸೈಕಲ್ ದೂಡುತ್ತಲೇ ತಲೆ ತಿರುಗಿಸುತ್ತಿದ್ದಂತೆಯೇ ಮತ್ತೆ ಕೇಳಿ ಬಂತು -

'ಪ್ಲೀಸ್ ಎತ್ತಿಕೊಳ್ಳಿ.'

ತಿರುಗಿ ನೋಡಿದೆ. ಯಾರೂ ಕಂಡು ಬರಲಿಲ್ಲ. ನಾನು ಸೈಕಲ್ ದೂಡುತ್ತಲೇ ಇದ್ದೆ. ಮತ್ತೆ ಕೇಳಿ ಬಂತು - 'ಪ್ಲೀಸ್'.

ಸೈಕಲ್ಲು ನಿಲ್ಲಿಸಿ ಮಾತು ಕೇಳಿ ಬರುವ ಕಡೆ ತಿರುಗಿದೆ. ಯಾರೂ ಕಂಡು ಬರಲಿಲ್ಲ.



ಆದರೆ ನನ್ನಿಂದ ಒಂದಿಷ್ಟು ದೂರದಲ್ಲಿ - ಮೂರು ಅಡಿಗಿಂತಲೂ ಕಡಿಮೆ - ಬಿದ್ದಿತ್ತು ಅದೇ ಪೆನ್ನು. ಕ್ಯಾಪ್ ಕಳಚಿಕೊಂಡು ತುದಿ ಮುರಿದುಕೊಂಡು ಚಪ್ಪಟೆಯಾದ ಕಪ್ಪು ಬಾಲ್ ಪಾಯಿಂಟ್ ಪೆನ್ನು.

ಸ್ವರ ಬರುತ್ತಿದ್ದುದು ಅಲ್ಲಿಂದಲೇ. ಸಂಶಯವೇ ಇಲ್ಲ. ನಾನು ಹತ್ತಿರ ಬಂದೆ. ಪುನಃ ಕ್ಷೀಣ ಸ್ವರದಲ್ಲಿ ಕೇಳಿಬಂತು. -

'ಪ್ಲೀಸ್, ತಕ್ಕೊಳ್ಳಿ ನನ್ನನ್ನು.'


ಸಂಶಯ ಏನೂ ಇಲ್ಲ. ಪೆನ್ನಿನಿಂದಲೇ ಸ್ವರ ಬರುತ್ತಿದ್ದುದು.

ಮೈಗಾಡ್! ಮಾತಾಡುವ ಪೆನ್ನು. ಇಂಥದ್ದನ್ನು ನೋಡಿಯೂ ಇಲ್ಲ, ಕೇಳಿಯೂ ಇಲ್ಲ.

ಪೆನ್ನಿನ ಪಕ್ಕದಲ್ಲೇ ನಿಂತು ಬಾಗಿದೆ. ನಾನು ನೋಡ ನೋಡುತ್ತಿರುವಂತೇ ಇನ್ನೂ ಕ್ಷೀಣ ಸ್ವರದಲ್ಲಿ ಕೇಳಿ ಬಂತು. -

'ಪ್ಲೀಸ್, ತಕ್ಕೊಳ್ಳಿ ನನ್ನನ್ನು.'

ಸ್ವರ ಬರುತ್ತಿದ್ದುದು ಪೆನ್ನಿನ ತುದಿ ಮುರಿದಲ್ಲಿಂದಲೇ. ನಾನು ಬಾಗಿ ನಡುಗುವ ಬೆರಳುಗಳಿಂದ ಪೆನ್ನನ್ನೆತ್ತಿಕೊಂಡೆ. ಧೂಳು ಅಷ್ಟು ಮುತ್ತಿಕೊಂಡಿತ್ತು. ಕೈ ಬೆರಳುಗಳಿಗೆ ಧೂಳು ತಗಲಿತು. ಪೆನ್ನಿನ ದೇಹದ ಬುಡವೆಲ್ಲಾ ವಿಕಾರವಾಗಿ ಚಪ್ಪಟೆಯಾಗಿತ್ತು.



ನನ್ನ ಬೆರಳುಗಳಿಂದಲೇ ಈಗ ಸ್ವರ ಹೊರಟಿತು - 'ಥ್ಯಾಂಕ್ಸ್'. ಸ್ವರ ಮೊದಲಿನಂತೆಯೇ ಕ್ಷೀಣವಾಗಿತ್ತು.

ಪೆನ್ನೆತ್ತಿಕೊಂಡೆ ಸರಿ. ಆದರೆ ಯಾಕೊ ಬೇಡವಾದ ಅಸಹ್ಯವಾದ ಪೆನ್ನನ್ನು ಏನು ಮಾಡಬೇಕೆಂದೇ ತಿಳಿಯಲಿಲ್ಲ. ಹಿಂದೆ ಬಿಸಾಕೋಣ ಎಂದರೆ ಎತ್ತಿಕೊಂಡಾಗಿತ್ತು. ಉಪಯೋಗವಾದೀತೆಂದುಕೊಂಡರೆ ತುದಿಯೇ ಮುರಿದು ಹೋಗಿದೆ. ಏನು ಮಾಡುವುದು? ಏನು ಮಾಡುವುದು?

ಹಾಗೂ ಹೀಗೂ ಯೋಚನೆ ಮಾಡಿ ಕೋಟಿನ ಕಿಸೆಯೊಳಗೆ ತುರುಕಿದೆ. ಅದೇ ಕ್ಷಣದಲ್ಲಿ ಕೇಳಿ ಬಂತು - 'ಥ್ಯಾಂಕ್ಸ್'.

ಆಫೀಸಿಗೆ ಬಂದವನೇ ಕೋಟಿನ ಕಿಸೆಯಿಂದ ಪೆನ್ನೆತ್ತಿ ತೆಗೆದೆ. ಇಲೆಕ್ಟ್ರಿಕ್ ದೀಪದ ಬೆಳಕಲ್ಲಿ ಪೆನ್ನು ಹಿಡಿದು ನೋಡಿದೆ. ತುದಿ ಸಂಪೂರ್ಣ ಕಿತ್ತು ಹೋಗಿತ್ತು. ಶಾಯಿ ಆರಿ ಹೋಗಿ ಯುಗಗಳೇ ಕಳೆದಂತಿತ್ತು. ಹಿಂಭಾಗ ಸಂಪೂರ್ಣ ಚಪ್ಪಟೆಯಾಗಿತ್ತು. ದೇಹ ಅಸ್ಥಿಪಂಜರದಂತೆ ವಿಕಾರವಾಗಿತ್ತು.

ಏನಾದರೂ ಶಬ್ದ ಹೊರಬಂದೀತೆಂದು ಕಾದೆ. ಮತ್ತೆ ಕೆಲ ನಿಮಿಷ ಕಾದು ನೋಡಿದೆ. ಕೈಯಿಂದ ಕೆಳಗಿಳಿಸಿ ಮೇಜಿನ ಮೇಲೆ ಡೆಸ್ಕ್ ಕ್ಯಾಲೆಂಡರಿನ ಪಕ್ಕ ಇಟ್ಟೆ. ಕೂಡಲೇ ಸ್ವರ ಹೊರಟಿತು.'ಥ್ಯಾಂಕ್ಸ್'

ಇನ್ನೇನಾದರೂ ಕೇಳಿ ಬಂದೀತೆಂದು ಕಾದೆ. ಕಾಯುತ್ತಾ ನಿಂತೆ. ಏನೂ ಕೇಳಿ ಬರಲಿಲ್ಲ. ಕೈಯಿಂದ ಎತ್ತಿಕೊಂಡೆ. ಮತ್ತೂ ಮೌನ. ಸರಿ ಎಂದು ಕೆಳಗಿರಿಸಿದೆ. ಕೂಡಲೇ ಕೇಳಿಬಂತು - 'ಥ್ಯಾಂಕ್ಸ್'. ಕೈ ತಂದು ಪೆನ್ನಿನ ದೇಹದ ಮೇಲಿಟ್ಟೆ. ಪೆನ್ನು ನಿಧಾನವಾಗಿ ಉಸಿರಾಡುವಂತಿತ್ತು. ಬಣ್ಣ ಮಾಸಿದ ಮೈಯಿಂದ ಉಸಿರು ನಿಧಾನವಾಗಿ ಲಯವಾಗಿ ಹೊರಬರುವಂತಿತ್ತು. ಕಳೆದುಕೊಂಡ ತುದಿಯಿಂದ ಬಲು ಚಿಕ್ಕದಾಗಿ ಟಪ ಟಪ ಸದ್ದು - ಎದೆ ಬಡಿದಂತೆ. ಚಪ್ಪಟೆಯಾದ ಹಿಂಬದಿ ಮುಟ್ಟಿದೆ. ಕೈ ತಣ್ಣಗೆನಿಸಿತು - ಈಗ ತಾನೇ ಹೆಪ್ಪುಗಟ್ಟಿದ ರಕ್ತ ಮುಟ್ಟಿದಂತೆ.

ಏನಾದರೂ ಸ್ವರ ಬಂದೀತೆಂದು - ಮಾತು ಹೊರಟೀತೆಂದು - ಕಾದು ನೋಡಿದೆ. ಏನೂ ಕೇಳಿ ಬರಲಿಲ್ಲ.

ಫೋನ್ ಸದ್ದಾಯಿತು. ರಿಸೀವರ್ ಎತ್ತಿ ಹಲೋ ಎಂದೆ. ಆ ತುದಿಯಲ್ಲಿ ಆಫೀಸಿನ ಮತ್ತೊಬ್ಬ ಇಂಜಿನಿಯರ್ ಗೆಳೆಯ ಮೈಕ್, 'ಪೀಟರ್‌ನ ಹತ್ರ ಇತ್ತೀಚೆಗೇನಾದ್ರು ಮಾತನಾಡಿದ್ದೀಯಾ?' ಅಂತ ಕೇಳಿದ.


'ಇಲ್ಲ' ಎಂದೆ. ಪೀಟರ್ ನಮ್ಮ ಡಿವಿಜನ್ನಿನ ಹೆಡ್ ಆಗಿದ್ದ - ಮೊನ್ನೆ ಮೊನ್ನೆವರೆಗೆ. ನನ್ನ ಮತ್ತು ಮೈಕ್‌ನ ಸಂಬಳ ಕೂಡಿಸಿದರೂ ಆತನ ಸಂಬಳಕ್ಕೆ ಹತ್ತಿರ ಬರುವುದಕ್ಕಾಗುತ್ತಿರಲಿಲ್ಲ. ಬಹಳ ಒಳ್ಳೆ ಮನುಷ್ಯ. ಒಳ್ಳೇ ಗೆಳೆಯ. ಯಾವಾಗ್ಲೂ ನಗುಮುಖ. ಯಾವಾಗ್ಲೂ ತಮಾಷೆ. ಯಾವುದಕ್ಕೂ ಕೂಗಾಡಿ ರೇಗುವುದೆಂದಿಲ್ಲ. ಎಲ್ಲದಕ್ಕೂ ಅಚ್ಚುಕಟ್ಟು.

ಆದರೆ ಟೆಲಿಫೋನ್ ಕಂಪೆನಿಯ ಬಿಲ್ಡಿಂಗ್ ಪ್ರೊಜೆಕ್ಟಿನಿಂದಾಗಿ ಎಲ್ಲಾ ಅಡಿಮೇಲಾಯ್ತು. ಆ ಪ್ರೊಜೆಕ್ಟಿನ ಮೂರನೇ ಮಾಳಿಗೆ ಕಟ್ಟುವಾಗ ಏನೋ ಆಗಿ ಮಾಳಿಗೆಯ ಮಾಡು ಮುರಿದು ಬಿದ್ದು ಹನ್ನೊಂದು ಜನ ಸತ್ತುಹೋದರು. ಅನಂತರ ಎಲ್ಲಾ ತನಿಖೆ ನಡೆದು ಪೀಟರ್‌ನ ಅಜಾಗ್ರತೆಯಿಂದಲೇ ಇದು ನಡೆದದ್ದು ಅಂತ ತೀರ್ಮಾನ ಆಗಿ ಅವನ ಲೈಸೆನ್ಸ್, ಕೆಲಸ, ಮರ್ಯಾದೆ ಎಲ್ಲಾ ಕಳೆದುಹೋಯ್ತು. ಈಗ ನಾಲ್ಕು ತಿಂಗಳಿಂದ ಯಾವ ಕೆಲಸವೂ ಇಲ್ಲ. ಕೆಲಸ ಸಿಗುವುದಾದ್ರೂ ಹೇಗೆ? ಅದೂ, ಇಡೀ ಲೋಕಕ್ಕೇ ಸುದ್ದಿ ತಿಳಿದಿರುವಾಗ.

ಮೈಕ್ ಈಗ ಪೀಟರ್‌ನ ವಿಷಯ ಎತ್ತಿದಾಗ 'ಯಾಕೆ' ಎಂದೆ. 'ಹಾಗಾದ್ರೆ ನಿಂಗೇನೂ ಗೊತ್ತಿಲ್ಲ ಅಂತಾಯ್ತು' ಎಂದ.

'ಏನು?' ಎಂದೆ.

'ಅವನ - ಪೀಟರನ - ಹೆಂಡತಿ ಈವತ್ತು ಬೆಳಿಗ್ಗೆ ಟೆಲಿಫೋನ್ ಮಾಡಿದ್ಲು. ಏನೋ ಒಂದು ಸರ್ಟಿಫಿಕೇಟ್ ಬೇಕೂಂತ. ಪೀಟರ್ ಎಲ್ಲಿ ಅಂತ ವಿಚಾರಿಸಿದೆ. ಆಸ್ಪತ್ರೆಯಲ್ಲಿ ಅಂತ ಹೇಳಿದ್ಲು. ಯಾಕೆ ಏನಾಯ್ತು ಅಂತ ವಿಚಾರಿಸಿದ್ದಕ್ಕೆ



ಪ್ರತಿ ದೀಪಾವಳಿಗೂ ತಪ್ಪದೇ ಒಂದು ಪತ್ರಸ್ತಾನೆ ಅಂತಾ ಹೇಳ್ತಿದ್ರಿ ಇವರೇನಾ.... ನಿಮ್ಮ ಅಳಿಯ...!

ಹೇಳಿದ್ದು, ಅವನಿಗೆ ಇನ್ ಆಪರೇಬಲ್ ಕ್ಯಾನ್ಸರ್ ಅಂತೆ. ಲಂಗ್‌ಗೆ, ಬೋನಿಗೆ, ಎಲ್ಲಾ ಹೋಗಿದೆಯಂತೆ. ನಿಂಗೇನಾದ್ರೂ ಗೊತ್ತಿರಬಹುದಂತ ಕಾಲ್ ಮಾಡಿದೆ' ಎಂದು ಪ್ರೈಸಲ್ಲಿ ನೀರಿಳಿದಂತೆ ಹೇಳಿದ.

'ನಂಗೇನೂ ಗೊತ್ತಿಲ್ಲ, ಥ್ಯಾಂಕ್ಸ್ - ವಿಷಯ ತಿಳಿಸಿದ್ದಕ್ಕೆ,' ಎಂದೆ.

ರಿಸೀವರ್ ಕೆಳಗಿಡುವ ಮೊದಲು ನನ್ನ ಮಾತನಾಡುವ ಪೆನ್ನಿನ ನೆನಪಾಯ್ತು.

'ಏ ಮೈಕ್, ನಿಂಗೇನಾದ್ರೂ ಟೈಮಿದ್ರೆ ಇಲ್ಲಿ ಬಾ' ಎಂದೆ.

'ಈಗೆಷ್ಟು ಟೈಂ? ಎರಡೂ ಕಾಲಲ್ವಾ. ಮೂರರ ಹೊತ್ತಿಗೆ ಬರ್ತೇನೆ' ಎಂದ.

ನಾನು ಪೀಟರ್‌ನ ಮನೆಗೆ ಟೆಲಿಫೋನ್ ಮಾಡಿದೆ. ಪೀಟರ್ ಇರಲಿಲ್ಲ. ಪೀಟರ್‌ನ ಹೆಂಡತಿಯಿರಲಿಲ್ಲ. ದೊಡ್ಡ ಮಗಳಿದ್ದಳು. ಅವಳ ಹತ್ರ ವಿಚಾರಿಸುವುದು ಸರಿಯಲ್ಲ ಎಂದುಕೊಂಡೆ, ನನ್ನ ಹೆಸರು ಹೇಳಿ ರಿಸೀವರ್ ಕೆಳಗಿಟ್ಟೆ.

ಒಂದು ಅರ್ಧ ಗಂಟೆ ಕಳೆದಿರಬಹುದು. ಟೆಲಿಫೋನ್ ಸದ್ದು ಮಾಡಿತು. ಎತ್ತಿದೆ. ಆಚೆ ತುದಿಯಲ್ಲಿ ಪೀಟರ್‌ನ ಹೆಂಡತಿ.

ಈಗೆರಡು ದಿನದಿಂದ ಪೀಟರ್ ಆಸ್ಪತ್ರೆಯಲ್ಲಿದ್ದಾನಂತೆ - ಕ್ರಿಟಿಕಲ್ ಕಂಡೀಶನ್ನಿನಲ್ಲಿ. ಕೀಮೋಥೆರಪಿ ನಡೆಯುತ್ತಾ ಇದೆ. ನಿನ್ನೆ ಮಧ್ಯಾಹ್ನದಿಂದ ಸ್ಮೃತಿ ತಪ್ಪಿದೆ. ನೂರಾಐದು ಡಿಗ್ರಿ ಜ್ವರ. ಮಧ್ಯಪಾನ ಕಾರಣದಿಂದಲೇ ಏನೋ ಗೊತ್ತಿಲ್ಲ. ಡಾಕ್ಟರರು ಏನೂ ಹೇಳೋದಿಲ್ಲ. ಎಂದೆಲ್ಲಾ ವಿವರಿಸಿದಳು. ಪಾಪ ಪೀಟರ್ ಒಳ್ಳೇ ಮನುಷ್ಯ. ಒಳ್ಳೇ ಫ್ಯಾಮಿಲಿ. ಹೀಗಾಗಬಾರದಿತ್ತು.

ಮೈಕ್ ಬಂದಾಗ ಮೂರೂವರೆ ಕಳೆದಿತ್ತು. ನಾನು ಫೋನಿನಲ್ಲಿದ್ದೆ. ಆತ ನನಗೆದುರಾಗಿ ಕುಳಿತುಕೊಂಡ. ಫೋನಿನಲ್ಲಿ ನನ್ನ ಮಾತು ಮುಗಿದಾಗ ಹೇಳಿದ - 'ಸ್ಸಾರಿ, ತಡವಾಗಿ ಹೋಯ್ತು.'

ಪೀಟರ್‌ನ ಹೆಂಡತಿ ಹೇಳಿದ ವಿಷಯ ವಿವರಿಸಿದೆ. ಪಾಪ, ಪೀಟರ್‌ಗೆ ಹೀಗಾಗಬಹುದಂತ ಯಾರು ಎಣಿಸಿದ್ದರು, ಎಂದ. ಒಂದು ದಿನವಾದರೂ ಅವ ಜ್ವರ ಬಿದ್ದು ಮಲಗಿದ್ದು ಉಂಟಾ? ಒಂದು ದಿನವಾದ್ರೂ ಹೆಡ್ಡೇಕ್ ಅಂತ ದೂರಿಕೊಂಡದ್ದುಂಟಾ? ಈ ತನಿಖೆ ಗಿನಿಖೆ ಅವಮಾನ ಎಲ್ಲಾ ಕಾರಣ ಆಗಿದ್ದಿರಬಹುದು, ಎಂದ.

'ಇರಬಹುದು' ಎಂದೆ.

ಅವನ ಕಣ್ಣು ನನ್ನ ಖಾಲಿ ಮೇಜಿನ ಮೇಲಿದ್ದ ಅಸಹ್ಯ ಪೆನ್ನಿನ ಮೇಲೆ ನೆಟ್ಟಿತು.

'ಅದ್ಯಾಕೆ? ಆಫೀಸಲ್ಲಿ ಒಂದು ಪೆನ್ನಿಗೂ ಗತಿಯಿಲ್ವಾ?' ಎಂದು ಕೇಳಿದ.

ನಾನು ನಡೆದುದನ್ನು ಹೇಳಿದೆ.

'ಮಾತ್ನಾಡುವ ಪೆನ್ನಾ; ನಿಂಗೆ ಹುಚ್ಚು ಹಿಡಿದಿದೆಯಾ ಏನು?' ನಕ್ಕ. 'ಹುಚ್ಚು ಗಿಚ್ಚು ಏನೂ ಇಲ್ಲ. ತೋರಿಸ್ತೇನೆ ನೋಡು' ಎಂದೆ.

ಕೈಯಿಂದ ಪೆನ್ನೆತ್ತಿಕೊಂಡೆ.

ಸದ್ದು ಬಂದೀತೆಂದು ಒಂದೆರಡು ನಿಮಿಷ ಕಾದೆ. ಬರಲಿಲ್ಲ. ಪುನಃ ಕೆಳಗಿಟ್ಟೆ. ಊ-ಹುಂ. ಸದ್ದಿಲ್ಲ. ಪುನಃ ಎತ್ತಿದೆ. ಇಲ್ಲವೇ ಇಲ್ಲ. ಆ ಕೈಯಿಂದ ಈ ಕೈಗೆ ಹಾಕಿದೆ. ಶರ್ಟಿನ ಕಿಸೆಯೊಳಗೆ ಹಾಕಿದೆ. ಸದ್ದೇ ಇಲ್ಲ.

ಮೈಕ್ ನನ್ನನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದ - ಅಸಹ್ಯ ಕಣ್ಣುಗಳಿಂದ. ಮತ್ತೆ ಹೇಳಿದ, ತಲೆಯಾಡಿಸುತ್ತಾ -

'ಏನಾಯ್ತು ನಿನ್ನ ಮಾತ್ನಾಡುವ ಪೆನ್ನಿಗೆ?'

ನಾನು ಬೆಪ್ಪನಾಗಿದ್ದೆ. ಬೆಪ್ಪನಂತೆ ನೋಡುತ್ತಿದ್ದೆ,

'ನೀನು ಒಂದೋ ಕುಡಿದಿದ್ದಿರಬೇಕು. ಇಲ್ಲಾ ಕನಸು ಕಾಣುತ್ತಿದ್ದಿರಬೇಕು. ಮಾತನಾಡುವ ಪೆನ್ನಂತೆ. ನಾಳೆ ನೀನು ಹಾಡು ಹೇಳುವ ಗೋಣೀಚೀಲ ಕಂಡರೂ ಅಚ್ಚರಿಯೇನಿಲ್ಲ.'

ಆತ ಹೊರಗೆ ಹೋದ. ನಾನೀಗಲೂ ಬೆಪ್ಪನಾಗಿದ್ದೆ.

ಕಿಸೆಯಿಂದ ಪೆನ್ನು ಹೊರ ತೆಗೆದೆ. ಮೇಜಿನ ಮೇಲೆ ಮೊದಲಿನ ಸ್ಥಳದಲ್ಲಿಟ್ಟೆ. ಕೂಡಲೇ ಕೇಳಿ ಬಂತು, ದಿಟ್ಟ ಸ್ವರದಲ್ಲಿ - 'ಥ್ಯಾಂಕ್ಸ್'.

ಐದೂವರೆಗೆ ಮನೆಗೆ ಹೊರಟೆ. ಪೆನ್ನು ಕೋಟಿನ ಕಿಸೆಯಲ್ಲಿತ್ತು.

ಮನೆಗೆ ಬಂದವನೇ ಸೈಕಲ್ಲಿಂದಿಳಿದು ಕೋಟಿನ ಕಿಸೆಗೆ ಕೈ ಹಾಕಿ ಪೆನ್ನು ಮುಟ್ಟಿದೆ. ಕೂಡಲೇ ಕೇಳಿಬಂತು - 'ಥ್ಯಾಂಕ್ಸ್.'

ಅಡಿಗೆ ಕೋಣೆಗೆ ನಡೆದು ಬದನೆ ಗೊಜ್ಜಿಗೆ ನೀರುಳ್ಳಿ ಕತ್ತರಿಸುತ್ತಿದ್ದ ನನ್ನವಳಲ್ಲಿ ಹೇಳಿದೆ - ಮಾತಾಡುವ ಪೆನ್ನಿನ ಬಗ್ಗೆ.

ಕತ್ತರಿಸುವುದನ್ನು ನಿಲ್ಲಿಸಿ ಕಣ್ಣು ಒರಸಿಕೊಂಡು ನನ್ನನ್ನು ಒಂದೇ ಕಣ್ಣಿಂದ ನೋಡುತ್ತಾ ಹೇಳಿದಳು-'ಎಲ್ಲುಂಟು, ತೋರಿಸಿ...'

ಕಿಸೆಯಿಂದ ಪೆನ್ನು ತೆಗೆದೆ, 'ಇದೆಂಥಾದ್ದು ಪೆನ್ನು?' ಎಂದಳು. 'ನೋಡು, ತೋರಿಸ್ತೇನೆ' ಎಂದು ಕೌಂಟರಿನ ಮೇಲಿಟ್ಟೆ, ಸ್ವರ? ಸ್ವರ ಬರಲಿಲ್ಲ. ಬಂದೀತು! ಕಾದೆ, ಏನೂ ಇಲ್ಲ, ಪೆನ್ನಿನ ಮೈಮೇಲೆ ಕೈಯಾಡಿಸಿದೆ. ಊಹುಂ, ಏನೂ ಇಲ್ಲ.

'ಏನು? ಎಲ್ಲುಂಟು ಮಾತು?' ಎಂದಳು, ನೀರುಳ್ಳಿ ಕತ್ತರಿಸುವುದನ್ನು ಮುಂದುವರಿಸುತ್ತಾ.

ಕೌಂಟರಿಂದ ಪೆನ್ನೆತ್ತಿಕೊಂಡೆ, ಏನೂ ಸದ್ದಿಲ್ಲ, ಪೆನ್ನಿನೊಂದಿಗೆ ಹಿಂದಿನ ಅಂಗಳಕ್ಕೆ ನಡೆದೆ, ಟವೆಲಲ್ಲಿ ಕೈ ಒರಸಿಕೊಳ್ಳುತ್ತ ನನ್ನವಳು ಹಿಂಬಾಲಿಸಿದಳು.

ಹೊರಗೆ ಪೆನ್ನನ್ನು ಅಂಗೈ ಮೇಲಿಟ್ಟೆ, ಬೆರಳಿಂದ ತಟ್ಟಿದೆ. ಕೆಳಗೆ ಮೇಲೆ ಮಾಡಿದೆ, ಅಂಗಳದ ಹುಲ್ಲಿನ ಮೇಲಿಟ್ಟೆ, ಮಾತೇ ಇಲ್ಲ. ಇಲ್ಲವೇ ಇಲ್ಲ.

'ಸುಮ್ಮಗೆ, ಎಂಥಾ ತಮಾಷೆ ನಿಮ್ದು. ಬಿಸಾಕಿ ನೋಡೋಣ ಅದನ್ನು' ಎಂದು ಕಟುವಾಗಿ ಹೇಳಿ ಒಳ ಹೋದಳು.

ನಾನು ನೆಲವನ್ನೇ ನೋಡುತ್ತಿದ್ದೆ. ಶಬ್ದ ಗಿಬ್ದ ಏನೂ ಇಲ್ಲ. ಪೆನ್ನನ್ನು ಅಲ್ಲೇ ಬಿಟ್ಟು ಬಾಗಿಲ ಕಡೆ ಹೆಜ್ಜೆ ಹಾಕತೊಡಗಿದೆ. ಕೂಡಲೇ ಕೇಳಿ ಬಂತು - 'ಪ್ಲೀಸ್.'

ತಿರುಗಿ ನೋಡಿದೆ. ಪುನಃ ಅದೇ ಸ್ವರ - 'ಪ್ಲೀಸ್.'

ಹಿಂದೆ ನಡೆದು ಪೆನ್ನೆತ್ತಿಕೊಂಡೆ. ಅತ್ಯಂತ ಮಧುರ ಸ್ವರದಲ್ಲಿ ಕೇಳಿಬಂತು - 'ಥ್ಯಾಂಕ್ಸ್.'

ಬೆರಳಿಂದ ಪೆನ್ನಿನ ಮೈಸವರಿದೆ. ಹುಲ್ಲಿನ ಮೇಲಿನ ನೀರಿಂದ ಅದರ ಮೈ ಒದ್ದೆಯಾಗಿ ತಣ್ಣಗಾಗಿತ್ತು. ಶರ್ಟಿನ ತುದಿಯಿಂದ ಮೈ ಒರೆಸಿದೆ.

ಪೆನ್ನಿನೊಂದಿಗೆ ಮನೆಯೊಳಗೆ ಬಂದೆ. ಕೇಳಿದೆ ನನ್ನವಳಲ್ಲಿ - 'ಕೇಳಲಿಲ್ಲಾ ನಿಂಗೆ?'

ಏನು, ಎಂದಳು.

'ಪ್ಲೀಸ್ ಮತ್ತೆ ಥ್ಯಾಂಕ್ಸ್ ಅಂತ ಹೇಳಿದ್ದು? ಕೇಳಲಿಲ್ವಾ?'

'ಹೌದು ಕೇಳಿತು. ಮತ್ತೇನು ಹೇಳಿತು ಹೇಳಿ? ಕಾಫಿ, ಟೀ ಬೇಕಾ ಅಂತ ಕೇಳಿತಾ?'

ಇವಳೊಂದಿಗೆ ಮಾತನಾಡುವುದರಲ್ಲಿ ಅರ್ಥವಿಲ್ಲ ಎಂದುಕೊಂಡು ಆಚೆ ನಡೆದೆ, ಪೆನ್ನಿನೊಂದಿಗೆ. ಲಿವಿಂಗ್ ರೂಮಿನ ಮರದ ಟೇಬಲ್ ಮೇಲೆ ನನ್ನ ಕೀ ಬಂಚ್ ಮತ್ತು ಪರ್ಸಿನೊಂದಿಗೆ ಪೆನ್ನನ್ನಿಟ್ಟೆ.

ಮರುದಿನ ರಜೆ. ಚರ್ಚಿಗೆ ಹೋಗಿ ಬರೋಣ ಎಂದಳು ನನ್ನವಳು. ಬೆಳಿಗ್ಗೆ ಹತ್ತುವರೆಯ ಮಾಸ್‌ಗೆ ಹೋಗಲು ಹೊರಟು ನಿಂತೆ. ನನ್ನವಳು ಬಾತ್‌ರೂಮಲ್ಲಿ ಡ್ರೆಸ್ ಮಾಡಿಕೊಳ್ಳುತ್ತಿದ್ದಳು. ನಾನು ಕೀ ಬಂಚ್ ಮತ್ತು ಪರ್ಸನ್ನೆತ್ತಿಕೊಂಡು ಈಚೆ ಬಂದೆ. ಕೂಡಲೇ ಕೇಳಿ ಬಂತು - 'ಪ್ಲೀಸ್.'

ಸರಿ, ಇನ್ನು ಇದನ್ನಿಲ್ಲಿ ಬಿಟ್ಟು ಹೋಗುವುದು ಅಸಾಧ್ಯ ಎಂದುಕೊಂಡು ಪೆನ್ನೆತ್ತಿ ಕಿಸೆಯಲ್ಲಿಟ್ಟುಕೊಂಡೆ. ಕೂಡಲೇ ಕೇಳಿಬಂತು - 'ಥ್ಯಾಂಕ್ಸ್.'



" ಒಂದೇ ಒಂದು ಸಲ ವರದಕ್ಷಿಣೆ ತಕ್ಕೊಂಡಿದ್ದಕ್ಕೆ ದಿನವೂ ಗೋಳು ಹುಯ್ಕೊತಿಯಲ್ಲೆ"

ಕಾರಿನೆಡೆಗೆ ನಡೆದು ನನ್ನವಳಿಗೆ ಕಾಯುತ್ತಾ ಕುಳಿತೆ.

ಚರ್ಚಿನಲ್ಲಿ ಈಗ ಮೊದಲಿನ ಪಾದರಿಯವರು ರಜೆ ಕಳೆದು ವಾಪಸ್ಸಾಗಿದ್ದರು. ಅವರದು ನಡು ವಯಸ್ಸು. ಹಿಂದೆ ಬಾಚಿದ ಕೂದಲು, ಸ್ವಲ್ಪ ಗಂಟು ಮುಖ. ನಿಧಾನ ಮಾತು. ಸರ್ಮನ್ ಸುರುವಾಯ್ತು. ನಂಬಿಕೆ ಮತ್ತು ರಷಿಯಾದಲ್ಲಿ ಕಮ್ಯುನಿಜಂ ಪತನ ಕುರಿತು ಭಾಷಣ. ಧರ್ಮಶ್ರದ್ಧೆಯಿರದೆ ದೇವರ ಆಶೀರ್ವಾದ ಅಸಾಧ್ಯವೇ ಸರಿ ಎಂದರು ಪಾದರಿಗಳು.

ಮಾಸ್ ಮುಗಿದ ನಂತರ ಪಕ್ಕದ ಕೋಣೆಯಲ್ಲಿ ಕಾಫಿ ಮತ್ತು ಬಿಸ್ಕೀಟುಗಳು. ನನ್ನವಳೊಂದಿಗೆ ನಾನು ಕೋಣೆ ಪ್ರವೇಶಿಸಿದೆ. ಕೈಯಲ್ಲಿ ಹಳದಿ ಬಣ್ಣದ ಬಿಸ್ಕೀಟು ಹಿಡಿದಿದ್ದ ಪಾದರಿಗಳು ನನ್ನ ಕೈ ಕುಲುಕಿ ಕೇಳಿದರು - 'ಹೇಗಿದ್ದಿ?'

ಚೆನ್ನಾಗಿದ್ದೇನೆ ಎಂದೆ. ಥಕ್ಕನೆ ಕಿಸೆಯಲ್ಲಿದ್ದ ಪೆನ್ನಿನ ನೆನಪಾಯ್ತು. 'ಫಾದರ್, ನೀವು ನಂಬ್ತೀರೋ ಇಲ್ವೋ. ಆದ್ರೆ ನನ್ನ ಹತ್ರ ಒಂದು ವಿಚಿತ್ರ ವಸ್ತು ಉಂಟು' ಅಂತ ಹೇಳಿ ಕಿಸೆಯಿಂದ ಪೆನ್ನೆತ್ತಿದೆ. ವಿವರಿಸಿದೆ.

ಅವರು ಹಾಂ ಎನ್ನಲೂ ಇಲ್ಲ, ಹುಂ ಎನಲೂ ಇಲ್ಲ. ಕುತೂಹಲ ತೋರಿಸುತ್ತ ತುಂಟ ನಗೆ ಹೊರಡಿಸಿ ನನ್ನ ಕೈಯನ್ನೇ ನೋಡತೊಡಗಿದರು.

'ನಿಲ್ಲಿ, ತೋರಿಸ್ತೇನೆ' ಅಂತ ಹೇಳಿ ಪೆನ್ನಿನ ಮೈಮೇಲೆ ಕೈಯಾಡಿಸಿದೆ. ಊಹುಂ. ಯಾವ ಸದ್ದಿಲ್ಲ. ಎತ್ತಿ ಗಾಳಿಯಲ್ಲಿ ಹಾರಿಸಿ ಹಿಡಿದೆ. ಇಲ್ಲ, ಪಾದರಿಯವರ ಮುಖದಲ್ಲಿ ಈಗಲೂ ಅದೇ ತುಂಟ ನಗು. ಮರುನಿಮಿಷದಲ್ಲಿ ನನ್ನಿಂದ ಆಚೆ ನಡೆಯುತ್ತ ಹೇಳಿದರು - 'ಇರ್ಲಿ ಇರ್ಲಿ. ದೇವರು ಮನಸ್ಸು ಮಾಡಿದರೆ ಎಂಥಾ ಪವಾಡವೂ ನಡೆದೀತು.'

ನಾನು ಪೆನ್ನನ್ನು ಕಿಸೆಗೆ ಹಾಕಿದೆ. ನನ್ನವಳು ಕೈಯಲ್ಲಿರಡು ಬಿಸ್ಕೀಟು ಹಿಡಿದುಕೊಂಡು ಹೇಳಿದಳು - 'ಸರಿ, ಹೋಗುವಾ ಬನ್ನಿ.'

ಮರುದಿನ ಪೆನ್ನನ್ನು ಕೋಟಿನ ಕಿಸೆಗೆ ಹಾಕ್ಕೊಂಡು ಆಫೀಸಿಗೆ ಹೊರಟೆ. ಅದನ್ನು ಮನೆಯಲ್ಲಿ ಅದರಷ್ಟಕ್ಕೇ ಬಿಡಲು ಮನಸ್ಸು ಬರಲಿಲ್ಲ.

ಬೆಳಗ್ಗಿನ ಮುಕ್ಕಾಲು ಪಾಲು ಸಮಯ ಕಂಟ್ರಾಕ್ಟರನೊಬ್ಬನ ಇಬ್ಬರು ಇಂಜಿನಿಯರೊಂದಿಗೆ ಕಳೆದು ಹೋಯ್ತು. ಮಧ್ಯಾಹ್ನ ಊಟಕ್ಕೆ ಕ್ಯಾಫೆಟೇರಿಯಾದಲ್ಲಿ ಹುರಿದ ಮೀನು ತಿಂದೆ. ಕಿಸೆಯಲ್ಲಿದ್ದ ಪೆನ್ನು ಹಾಗೇ ಇತ್ತು. ಮಾತಿಲ್ಲ, ಕತೆಯಿಲ್ಲ. ಇಡೀ ಬೆಳಗ್ಗೆ ಸ್ಮಶಾನ ಮೌನ.

ಊಟ ಮುಗಿಸಿ ಹಿಂದೆ ಬಂದಾಗ ಆಫೀಸಿನ ಬಾಗಿಲ ಮೇಲೆ ಒಂದು ಚೀಟಿಯಿತ್ತು. ಮೈಕ್‌ನ ಕೈ ಬರಹ. ರೂಮಿಗೆ ವಾಪಸ್ಸು ಬಂದ ಕೂಡಲೇ ತನಗೆ ಫೋನ್ ಮಾಡು ಅಂತ ಬರೆದಿದ್ದ.

ಕೋಣೆಯ ಬಾಗಿಲು ತೆರೆದವನೇ ಫೋನ್ ಎತ್ತಿದೆ. ಆಚೆ ಕಡೆ ಮೈಕ್‌ನ ಸ್ವರ. 'ಸುದ್ದಿ ಗೊತ್ತಾಯ್ತಾ?' ಅಂತ ಕೇಳಿದ.

'ಯಾವ ಸುದ್ದಿ? ಗೊತ್ತಿಲ್ಲಲ್ವಾ' ಅಂತ ಹೇಳಿದೆ.

'ಗೊತ್ತಿಲ್ವಾ? ಪೀಟರ್ ತೀರಿ ಹೋದ. ಈವತ್ತು ಬೆಳಗ್ಗೆ ಐದು ಗಂಟೆಗೆ'.

ಎಲ್ಲಾ ವಿಷಯ ಹೇಳಿ ಫೋನು ಕೆಳಗಿಳಿಸುವ ಮೊದಲು ಕೇಳಿದ - 'ಹೇಗಿದೆ ನಿನ್ನ ಮಾತ್ನಾಡುವ ಪೆನ್ನು? ಅದಕ್ಕೆ ಟೆಲಿಫೋನಲ್ಲಿ ಮಾತ್ನಾಡಲು ಕಲಿ ಕೊಡ್ತಿದ್ದೀಯಾ?'

ಪೀಟರ್ ತೀರಿಕೊಂಡ. ಒಳ್ಳೇ ಮನುಷ್ಯ. ಹೇಗಿದ್ದವ. ಶೀತ, ಜ್ವರ, ತಲೆನೋವು ಯಾವುದೂ ಇರದ ಸುಂದರ ಪುರುಷ. ತೀರಿ ಕೊಂಡ. ಒಂದು ಕಾಲಕ್ಕೆ ಈ ಕಂಪನಿಯ ಯಜ ಮಾನನ ಹಾಗೆ ಗೌರವ ಪಡೆಯುತ್ತಿದ್ದ ಗಂಡಸು ಈ ಲೋಕದ ಪಾಲಿಗೆ ಕೀಳಾಗಿ ಕಸವಾಗಿ ನರಳಿ ಸತ್ತು ಹೋದ. ಒಂದು ಸಲ ನೋಡಿಯಾದ್ರೂ ಬರಬಹುದಿತ್ತು. ಅದೂ ಆಗಲಿಲ್ಲ.

ಕಿಸೆಯಿಂದ ಪೆನ್ನು ಎತ್ತಿ ಮೇಜಿನ ಮೇಲಿಟ್ಟೆ. ಯಾವ ಸುದ್ದಿಯೂ ಇಲ್ಲ. 'ಪ್ಲೀಸ್' ಆಗಲೀ 'ಥ್ಯಾಂಕ್ಸ್' ಆಗಲೀ.....ಸ್ವಲ್ಪ ತಡೆದು ಕಿಸೆಗೆ ಹಾಕಿದೆ. ಈಗಲೂ ಇಲ್ಲ, ಯಾವ ಸ್ವರವೂ ಇಲ್ಲ, ಗುಡ್ಡದ ಮೇಲಿನ ಪಾದೆಕಲ್ಲಿನಂತೆ.

ಸಂಜೆ ಮನೆಗೆ ಸೈಕಲ್ಲೇರಿ ಹೊರಟೆ. ಗುಡ್ಡ ಏರಿ ಲೈಟು ಕಂಬದ ಬಳಿ ಬಂದೆ, ಕಿಸೆಯಲ್ಲಿದ್ದ ಪೆನ್ನು ನೆನಪಿಗೆ ಬಂತು. ಈ ಉಪಯೋಗಕ್ಕೆ ಬಾರದ ಅಸಹ್ಯರೂಪದ ಪೆನ್ನು ಹಿಡಿದುಕೊಂಡು ನಾನೇನು ಮಾಡುವುದು? ಅದಕ್ಕೆ ಬೇಕಾದಾಗ ಲಷ್ಟೇ 'ಪ್ಲೀಸ್', 'ಥ್ಯಾಂಕ್ಸ್' ಎಂದು ಹೇಳುವ ಪೆನ್ನಿನಿಂದ ನನಗೇನು ಲಾಭ?

ದಾರಿ ದಾಟುವ ಗುಂಡಿಯೊತ್ತಿ ಕಿಸೆಗೆ ಕೈ ಹಾಕಿ ಪೆನ್ನೆತ್ತಿದೆ. ಎದುರಿಗೆ ಒಂದು ಕಾಂಕ್ರೀಟು ಟ್ರಕ್ ಬರುತ್ತಿತ್ತು ಗುಡು ಗುಡು ಅಂತ ಶಬ್ದ ಮಾಡುತ್ತ. ಕೈಯಲ್ಲಿ ಪೆನ್ನು ಹಿಡಿದೆತ್ತಿ ರಭಸದಿಂದ ಮಾರ್ಗದ ನಡುವೆ ಬಿಸಾಕಿದೆ. ಆ ಕೂಡಲೇ, ಪೆನ್ನು ನೆಲಕ್ಕಪ್ಪಳಿಸಿದಲ್ಲಿಂದ, ಜೋರಾಗಿ ವಿಕಾರ ಸ್ವರದಲ್ಲಿ ಅರಚಿತು - 'ಪ್ಲೀಸ್, ಪ್ಲೀಸ್, ಪ್ಲೀಸ್......' ಒಂದೇ ಸಮನೆ ಅರಚಾಟ ಕೇಳಿ ಬರುವುದಕ್ಕೂ ಕಾಂಕ್ರೀಟು ಟ್ರಕ್ಕಿನ ಬಕಾಸುರ ಗಾತ್ರದ ಟೈರಿನಡಿ ಪೆನ್ನು ಸಿಕ್ಕಿ ಅದರ ದೇಹ ನೂರು ಪಾಲಾಗಿ ಸಾವಿರ ಪಾಲಾಗಿ ಎಣಿಕೆಗೆ ಮೀರಿ ಚೂರು ಚೂರಾಗಿ ಸುತ್ತಲಿನ ಕಿತ್ತಳೆ ತೋಟದ ಮೇಲೆಲ್ಲಾ ಹರಡುವುದಕ್ಕೂ ಸರಿ ಹೋಯ್ತು.

ಮಾರ್ಗ ದಾಟಿ ಹೋಗಲು ನನ್ನ ಹಸಿರು ದೀಪ ನನಗೆದುರಾಗಿ ನಿಂತಿತ್ತು. ●

'ಡೇವಿಡ್ ಹಿಲ್ಬರ್ಟ್'

ಅತ್ಯಂತ ಪ್ರತಿಭಾವಂತ ಗಣಿತ ಶಾಸ್ತ್ರಜ್ಞರೆಂದು ಹೆಸರು ಗಳಿಸಿದ 'ಡೇವಿಡ್ ಹಿಲ್ಬರ್ಟ್'ರವರು ಗಾಂಟಿಗೆನ್ ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿಗಳಲ್ಲೊಬ್ಬರಾಗಿದ್ದರು.

ಒಮ್ಮೆ ಅವರ ಮನೆಯಲ್ಲಿ ಒಂದು ಭೋಜನಕೂಟ ಏರ್ಪಾಟಾಗಿತ್ತು. ಅತಿಥಿಗಳೆಲ್ಲ ಬಂದು ನೆರೆದರು. ಹಿಲ್ಬರ್ಟ್‌ರವರು ಅಸಹ್ಯಕರವಾದ ಒಂದು ಹಳೆಯ ಟೈ ಕಟ್ಟಿಕೊಂಡಿದ್ದರು. ಅವರ ಪತ್ನಿ ಅದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ವಿಧೇಯರಾದ ಹಿಲ್ಬರ್ಟ್‌ರವರು ಟೈ ಬದಲಾಯಿಸ ಲೆಂದು ಮಹಡಿಯ ಮೇಲಕ್ಕೆ ಹೋದರು. ಸುಮಾರು ಅರ್ಧಗಂಟೆಯಾದರೂ ಅವರು ಹಿಂದಿರುಗಿ ಬರಲಿಲ್ಲ. ಅವರ ಪತ್ನಿ ಚಿಂತೆಗೊಳಗಾಗಿ, ಏಕೆ ಹಿಂದಿರುಗಲಿಲ್ಲವೋ ನೋಡೋಣವೆಂದು ಮೇಲಕ್ಕೆ ಹೋದರು. ಹಿಲ್ಬರ್ಟ್‌ರವರು ಹಾಸಿಗೆಯಲ್ಲಿ ಮಲಗಿ ಗಾಢನಿದ್ರೆ ಮಾಡುತ್ತಿದ್ದರು.

ನಡೆದ ವಿಷಯ ಇಷ್ಟು -

ಅವರ ಟೈ ಬಿಚ್ಚಿದರು. ಮಲಗುವ ಮುನ್ನ ಅವರು ಯಾವಾಗಲೂ ಮೊದಲು ಟೈ ಬಿಚ್ಚುತ್ತಿದ್ದುದು ರೂಢಿ. ಸಧ್ಯದಲ್ಲಿ ಅವರ ಕೈಗಳು ಕೀಲುಗೊಂಬೆಯ ಕೈಗಳಂತೆ ತಮ್ಮ ಕೆಲಸವನ್ನು ಯಥಾರೀತಿ ಮುಂದುವರಿಸಿದುವು. ಒಂದೊಂದಾಗಿ ಬಟ್ಟೆಗಳನ್ನೆಲ್ಲ ಕಳಚಿದರು, ಮಲಗುವ ಉಡುಪು ಧರಿಸಿ ಹಾಸಿಗೆಯಲ್ಲಿ ಮಲಗಿಕೊಂಡರು. ಭೋಜನಕೂಟವನ್ನೂ ಅದಕ್ಕಾಗಿ ಬಂದಿದ್ದ ಅತಿಥಿಗಳನ್ನೂ ಸಂಪೂರ್ಣವಾಗಿ ಮರೆತು ನಿದ್ದೆ ಮಾಡಿಬಿಟ್ಟರು.

ಸಂಗ್ರಹ: **ಶಂಕರಗೌಡ. ವೈ. ಪಾಟೀಲ**

ರಾಷ್ಟ್ರಗೀತೆಗಳು

ರೂಪುಗೊಂಡ ಬಗೆ

● ಎಚ್.ಗವಿಸಿದ್ಧಯ್ಯ

ರಾಷ್ಟ್ರಗೀತೆ ಎಂದರೆ ಒಂದು ದೇಶದ ಸ್ವಾಭಿಮಾನದ ಸಂಕೇತ. ಪ್ರಜೆಗಳಲ್ಲಿ 'ರಾಷ್ಟ್ರಪ್ರೇಮ'ದ ಹೊನಲನ್ನು ಹರಿಸುವ ತಾಕತ್ತನ್ನು ಅದು ತನ್ನೊಳಗೆ ಸಾಂದ್ರಗೊಳಿಸಿಕೊಂಡಿರುತ್ತದೆ. ಇಂದು ಪ್ರಪಂಚದ ಬಹುಪಾಲು ರಾಷ್ಟ್ರಗಳು ತಮ್ಮದೇ ಆದ ರಾಷ್ಟ್ರಗೀತೆಗಳನ್ನು ನುಡಿಸುತ್ತಿವೆ. ರಾಷ್ಟ್ರಗೀತೆಗಳು ಹೇಗೆ ಮತ್ತು ಯಾವಾಗ ಬೆಳೆದು ಬಂದವೆಂಬ ನಿಖರ ಮಾಹಿತಿ ಸಿಕ್ಕದಾದರೂ ಒಂಬತ್ತನೇ ಶತಮಾನದಲ್ಲಿ ಜಪಾನಿನಲ್ಲಿ ಹಾಡುತ್ತಿದ್ದ 'ಕಿಂಗಾವೊ' ಎಂಬ ಹಾಡನ್ನು ಪ್ರಪಂಚದಲ್ಲೇ ಮೊದಲನೆಯ ರಾಷ್ಟ್ರಗೀತೆಯೆಂದು ಒಪ್ಪಿಕೊಳ್ಳಬಹುದು.

'ರಾಣಿಯನ್ನು ದೇವರು ಕಾಪಾಡಲಿ' ಎನ್ನುವ ರಾಷ್ಟ್ರಗೀತೆಯನ್ನು ಬ್ರಿಟನ್ನಿನಲ್ಲಿ ಕ್ರಿ.ಶ. 1619ರಲ್ಲಿ ಮೊದಲ ಬಾರಿಗೆ ಹಾಡಲಾಯಿತು. ಹೆನ್ರಿ ಕ್ಯಾರಿ ಆ ಹಾಡನ್ನು ರಚಿಸಿದ ಕವಿ. ಈ ಹಾಡು ಸಾರ್ವಜನಿಕವಾಗಿ ತೇಲಿ ಬಂದದ್ದು 1745, ಸೆಪ್ಟೆಂಬರ್ 28ರಂದು.

ಅಮೆರಿಕ ಸಂಯುಕ್ತ ಸಂಸ್ಥಾನದ ರಾಷ್ಟ್ರಗೀತೆ ರಚನೆಗೊಂಡದ್ದು ಕ್ರಿ.ಶ. 1812ರಲ್ಲಿ. ಅಮೆರಿಕದ ಈ ರಾಷ್ಟ್ರಗೀತೆಯನ್ನು ಸೃಜಿಸಿದ ಫ್ರಾನ್ಸಿಸ್ ಸ್ಕಾಟ್‌ಗೆ ಒದಗಿಬಂದ ಪ್ರೇರಣೆಯಂತೂ ಸ್ವಾರಸ್ಯಕರವಾದದು.

ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಬ್ರಿಟಿಷ್ ಹಡಗುಗಳು 'ಫೋರ್ಟ್ ಮೆಕ್ ಹೆನ್ರಿ' ಎಂಬ ಕೋಟೆಗೆ ಮುತ್ತಿಗೆ ಹಾಕಿದವು. ಭೀಕರ ಕದನ ತನ್ನೆಲ್ಲ ಭಾವರಂಗುಗಳನ್ನು ಚೆಲ್ಲಾಡುತ್ತಿರುವಾಗ ಒಂದು ಯುದ್ಧ ಹಡಗಿನಲ್ಲಿ ಫ್ರಾನ್ಸಿಸ್ ಸಹ ಇದ್ದನು. ರಾತ್ರಿಯಿಡೀ ನಡೆದ ಯುದ್ಧಕ್ಕೆ ಆತನ ಮನಸ್ಸು ಸಾಕ್ಷಿಯಾಗಿತ್ತು. ಮರುದಿನದ ಬೆಳಗಿನ ಕಿರಣಗಳೊಂದಿಗೆ ಫ್ರಾನ್ಸಿಸ್‌ನೊಳಗಿನ ಕವಿತ್ವದ ಕಣಗಳು ಚಿಗುರೊಡೆದವು. ಮುಂಜಾನೆಯ ಸೂರ್ಯರಶ್ಮಿ ಆ ಕೋಟೆಯ ಮೇಲೆ ಪರಡಿಕೊಂಡಾಗ ಅಮೆರಿಕದ ಬಾವುಟ ಫಡಫಡಿಸಿ ಹಾರಾಡುತ್ತಿತ್ತು. ರಾಷ್ಟ್ರಪ್ರೇಮದ ರಸಬುಗ್ಗೆ ಚಿಮ್ಮಿಸಿದ ಆ ಸನ್ನಿವೇಶವೇ ಫ್ರಾನ್ಸಿಸ್‌ನನ್ನು ಪ್ರಚೋದಿಸಿ ರಾಷ್ಟ್ರಗೀತೆಯನ್ನು ಬರೆಯಿಸಿತು.

ಜಪಾನ್ ಮತ್ತು ಜೋರ್ಡಾನ್ ದೇಶಗಳ ರಾಷ್ಟ್ರಗೀತೆಗಳು ಅತಿ ಪುಟ್ಟವು; ಎಷ್ಟೆಂದರೆ ಅವು ಹೊಂದಿರುವುದು ಕೇವಲ ನಾಲ್ಕು ಸಾಲುಗಳನ್ನು ಮಾತ್ರ!

ಭಾರತದ ರಾಷ್ಟ್ರಗೀತೆಯ ಕರ್ತೃ ರವೀಂದ್ರನಾಥ ಟಾಗೂರರೆಂದು ಯಾರಿಗೆ ತಾನೆ ತಿಳಿದಿರುವುದಿಲ್ಲ? ಇದನ್ನು ಮೊಟ್ಟಮೊದಲು ಹಾಡಿದ್ದು ಕಲ್ಕತ್ತದಲ್ಲಿ; 1911ರ ಡಿಸೆಂಬರ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ. ಈ ಗೀತೆಗೆ ರಾಷ್ಟ್ರಗೀತೆಯೆಂಬ ಅಧಿಕೃತ ಅಂಗೀಕಾರದ ಮುದ್ರೆ ಬಿದ್ದದ್ದು 1950, ಜನವರಿ 24ರಂದು. ●

ಹಾರ್ವರ್ಡ್ ಬಿಸಿನೆಸ್ ಸ್ಕೂಲಿನಲ್ಲಿ ನಿಮಗೆ ಏನು ಕಲಿಸುವುದಿಲ್ಲ?

● ಎಚ್.ಎಸ್.ರಾಜಶೇಖರ್

ಹೌದು, ''ಹಾರ್ವರ್ಡ್ ಬಿಸಿನೆಸ್ ಸ್ಕೂಲಿನಲ್ಲಿ ನಿಮಗೆ ಏನು ಕಲಿಸುವುದಿಲ್ಲ?'' ಎಂಬ ಪುಸ್ತಕವಿದೆ. 1984ರಿಂದ ಇದು ಇಪ್ಪತ್ತು ಬಾರಿ ಪುನರ್ಮುದ್ರಣ ಕಂಡಿದೆ. ವಿಶ್ವಾದ್ಯಂತ ಲಕ್ಷಾಂತರ ಪ್ರತಿ ಮಾರಾಟವಾಗಿವೆ. ಬ್ಯಾಂಟಮ್ ಬುಕ್ಸ್‌ನವರ ಪೇಪರ್‌ಬ್ಯಾಕ್ ಆವೃತ್ತಿ ಸಹ ದೊರೆಯುತ್ತವೆ ಈಗ. 'ಟೈಮ್' ಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ರೇ ಕೇವ್ ಈ ಪುಸ್ತಕದ ಬಗ್ಗೆ ಬರೆಯುತ್ತಾ - ''ಈ ಪಸ್ತಕವನ್ನು ಪಠ್ಯವಸ್ತುವಾಗಿ ಮಾಡದಿರುವ ಎಂ.ಬಿ.ಎ. ಕೋರ್ಸನ್ನು ನಾನು ಕಲ್ಪಿಸಿಕೊಳ್ಳಲಾರೆ !'' ಎಂದಿದ್ದಾರೆ.

ಈ ಪುಸ್ತಕದ ಲೇಖಕ ಮಾರ್ಕ್ ಎಚ್. ಮೆಕ್ ಕರ್‌ಮ್ಯಾಕ್ [Mark H.Mc - Cormak] ಎಂದೂ ಹಾರ್ವರ್ಡ್ ಬಿಸಿನೆಸ್ ಶಾಲೆಗೆ ಹೋಗಲಿಲ್ಲ. ಯೇಲ್ ಲಾ ಸ್ಕೂಲಿನಲ್ಲಿ ಕಾನೂನು ಕಲಿತ ಮೇಲೆ ಕ್ಲೀವ್‌ಲ್ಯಾಂಡ್‌ನ ವಕೀಲರ ಸಂಸ್ಥೆಯೊಂದರಲ್ಲಿ ಕೆಲಸ ಮಾಡಲು ಆರಂಭಿಸಿದ್ದನಷ್ಟೆ. ವಿದ್ಯಾರ್ಥಿಯಾಗಿದ್ದಾಗ ಗಾಲ್ಫ್ ಆಡುತ್ತಿದ್ದ ಹಿನ್ನೆಲೆಯಿಂದ, ಆರ್ನಾಲ್ಡ್ ಪಾಮರ್ ಎಂಬ ಅಷ್ಟೇನೂ ಪ್ರಸಿದ್ಧವಾಗಿಲ್ಲದ ಕ್ರೀಡಾಪಟುವಿನ ಕಾನೂನು ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ. ಅಲ್ಲಿಂದ ಆರಂಭವಾಯಿತು ಕ್ರೀಡಾ ಜಗತ್ತಿನ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ. ''ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್'' [Sports Management] ಎಂಬ ಹೊಸ ಕ್ಷೇತ್ರವನ್ನೇ ಸೃಷ್ಟಿಸಿದ ಮೆಕ್ ಕರ್‌ಮ್ಯಾಕ್. ಸುಪ್ರಸಿದ್ಧ ಕ್ರೀಡಾಪಟುಗಳ ವ್ಯವಹಾರಗಳನ್ನು ನೋಡಿಕೊಳ್ಳುವುದು - ಕಾನೂನು, ವೈಯಕ್ತಿಕ ಹಣಕಾಸು, ಸಾರ್ವಜನಿಕ ಸಂಪರ್ಕ, ಪ್ರಚಾರ, ಜಾಹಿರಾತುಗಳಲ್ಲಿ ಭಾಗವಹಿಸುವಿಕೆ, ಇತ್ಯಾದಿ ಮೆಕ್ ಕರ್‌ಮ್ಯಾಕ್‌ನ ಕೆಲಸ. 1960ರಲ್ಲಿ ಇದಕ್ಕಾಗಿ 500 ಡಾಲರಿಗಿಂತ ಕಡಿಮೆ ಬಂಡವಾಳದಿಂದ ಆರಂಭಿಸಿದ ಕಂಪೆನಿ ಇಂದು ಕೋಟ್ಯಂತರ ಡಾಲರ್ ವ್ಯವಹಾರ ನಡೆಸುವ ಬಹುರಾಷ್ಟ್ರೀಯ

ಆಸಕ್ತಿಗಳಿರುವ-ಇಂಟರ್‌ನ್ಯಾಷನಲ್ ಮ್ಯಾನೇಜ ಮೆಂಟ್ ಗ್ರೂಪ್ [IMG] ಆಗಿ ಬೆಳೆದಿದೆ. ಜೀನ್‌ಕ್ಲಾಡ್‌ಕಿಲ್ಲೀ, ಜ್ಯಾಕೀ ಸ್ಟೀವರ್ಟ್, ಬ್ಯೋರ್ನ್‌ಬೋರ್ಗ್, ಮಾರ್ಟಿನಾ ನವ್ರಾಟಿ ಲೋವಾ, ಕ್ರಿಸ್ ಎವರ್ಟ್ ಲಾಯ್ಡ್ ಎಲ್ಲರೂ ಐಎಂಜಿಯ ಗಿರಾಕಿಗಳೇ! ಐಎಂಜಿ ಈಗ ಕ್ರೀಡಾ ಪಟುಗಳಲ್ಲದೆ ನೂರಾರು ಕಂಪೆನಿಗಳ ಉಚ್ಚ ಅಧಿಕಾರಿಗಳ ವ್ಯವಹಾರಗಳನ್ನೂ ನೋಡಿಕೊ ಳ್ಳುತ್ತದೆ. ಕ್ರೀಡಾ ಜಗತ್ತಿನ ಬಗ್ಗೆ ಸಾವಿರಾರು ಗಂಟೆಗಳ ಟಿವಿ ಕಾರ್ಯಕ್ರಮಗಳನ್ನು ತಯಾರಿ ಸುತ್ತದೆ. ಕ್ರೀಡಾ ಕಾರ್ಯಕ್ರಮಗಳನ್ನು ನಡೆ ಸುವ [Sponsor] ಹಕ್ಕುಗಳನ್ನು ಮಾರಾಟ ಮಾಡುತ್ತದೆ. ಫ್ಯಾಶನ್ ರೂಪದರ್ಶಿಗಳ ಏಜೆನ್ಸಿ ಗಳನ್ನು [Model Agency] ಸಹ ನಡೆಸುತ್ತದೆ.

ಮೆಕ್ ಕರ್‌ಮ್ಯಾಕ್ ಪುಸ್ತಕದಲ್ಲಿ ಮಾನವ ಸಂಬಂಧಗಳಿಗೆ ಪ್ರಾಶಸ್ತ್ಯ. ತನ್ನ ಪುಸ್ತಕದ ಮುನ್ನುಡಿಯಲ್ಲಿ ಆತ ಬರೆಯುತ್ತಾನೆ - ''ಕಳೆದ ಇಪ್ಪತ್ತು ವರ್ಷಗಳಲ್ಲಿ ನಾನು ಕಲ್ಪನೆ ಮಾಡಬ ಹುದಾದ ಎಲ್ಲ ವ್ಯಾವಹಾರಿಕ ಸನ್ನಿವೇಶ [Business Situation]ಗಳನ್ನೂ ಎದುರಿಸಿ ದ್ದೇನೆ..... ಕ್ರೀಡಾತಾರೆಗಳ ಉಬ್ಬಿಹೋಗಿರುವ ಅಹಂಗಳ ವಿಚಿತ್ರಗಳನ್ನೂ, ಅವರ ಸಂಬಂಧಿಕರ ರಂಪಾಟಗಳನ್ನೂ ನೋಡಿದ್ದೇನೆ..... ಅಕ್ಷರಶಃ ಜಗತ್ತಿನ ಎಲ್ಲ ರಾಷ್ಟ್ರೀಯತೆಯ ವ್ಯಕ್ತಿಗಳೊಂ ದಿಗೆ ವ್ಯವಹರಿಸಿದ್ದೇನೆ..... ಏನನ್ನು ಸ್ವತಃ ಅನುಭವಿಸಿಲ್ಲವೋ ಅದನ್ನು ನಾನು ಗಮನಿಸಿ ದ್ದೇನೆ.....''

''ಉದ್ಯಮ, ವ್ಯಾಪಾರ, ವ್ಯವಹಾರ ಎಂದರೆ ನವೋನ್ವೇಷಣೆ [Innovation] ಎಂತಲೇ ಅರ್ಥ. ಬಿಸಿನೆಸ್ ಸ್ಕೂಲ್‌ಗಳು ಎಡವುವುದು ಇಲ್ಲಿಯೇ. ಏಕೆಂದರೆ ಅಲ್ಲಿ ಕಲಿಸುವುದು ಭೂತ ಕಾಲವನ್ನು....ಒಂದು ನಿರ್ದಿಷ್ಟ ಪರಿಮಿತಿಯೊ ಳಗೇ ಯೋಚಿಸುವುದನ್ನು ಕಲಿಸಲಾಗು ವುದು.....ಪ್ರಾಯೋಗಿಕ ಉತ್ಸಾಹವನ್ನೇ ಚಿವುಟಿ ಹಾಕಲಾಗುವುದು....'' ಹಾಗೆಂದು ಮೆಕ್ ಕರ್‌ಮ್ಯಾಕ್ ಪೂರ್ವಾಗ್ರಹ ಪೀಡಿತ ಎಂದು ತಿಳಿಯುವ ಅಗತ್ಯವಿಲ್ಲ. ಮುಂದು ವರಿದು ''.....ನನ್ನ ಕಂಪೆನಿಯಲ್ಲಿ ನಾನೇ ಹಲವಾರು ಎಂ.ಬಿ.ಎ.ಗಳನ್ನು ನೇಮಿಸಿದ್ದೇನೆ. ಅವರು ಯಶಸ್ವಿಯಾಗುವುದನ್ನೂ ನೋಡಿ ದ್ದೇನೆ..... ವಾಸ್ತವಿಕ ಜಗತ್ತಿಗೆ ಬೇಕಾದ ಬದ ಲಾವಣೆಗಳನ್ನು ಮಾಡಿಕೊಳ್ಳುವುದನ್ನೂ ನೋಡಿದ್ದೇನೆ,'' ಎಂದು ಅಭಿಪ್ರಾಯಪಡು ತ್ತಾನೆ. ಕುತೂಹಲದ ವಿಷಯವೆಂದರೆ ಹಾರ್ವರ್ಡ್ ಸೇರಿ ಬಹುತೇಕ ಪ್ರಸಿದ್ಧ ಬಿಸಿನೆಸ್ ಶಾಲೆಗಳಲ್ಲಿ ಆಹ್ವಾನಿತನಾಗಿ ಉಪನ್ಯಾಸ ನೀಡಿ ದ್ದಾನೆ ಮ್ಯಾಕ್ ಕರ್‌ಮ್ಯಾಕ್! ಹದಿನಾಲ್ಕು ಅಧ್ಯಾ ಯಗಳ ಈ ಪುಸ್ತಕ ಉದಾಹರಣೆ, ಉಪ ಕತೆಗಳಿಂದ ತುಂಬಿದ್ದು, ಅತ್ಯಂತ ಸ್ಪಷ್ಟವಾದ ಶೈಲಿಯಿಂದಾಗಿ ಓದುವಾಗ ಖುಷಿ ಕೊಡುತ್ತದೆ. ಪುಸ್ತಕದ ರುಚಿ ನೋಡಲೆಂದು ಆಯ್ದ ಕೆಲ ಭಾಗಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

★ ವ್ಯಕ್ತಿಯ ನಿಜವಾದ ವ್ಯಕ್ತಿತ್ವ - ಗುಣ - ನಡತೆಯನ್ನು ಎಲ್ಲ ವಾತಾವರಣ ಪರಿಸ್ಥಿತಿ ಗಳಲ್ಲೂ ಮುಚ್ಚಿಡಲು ಸಾಧ್ಯವಿಲ್ಲ. ವ್ಯಾವಹಾ ರಿಕ ಸನ್ನಿವೇಶಗಳಲ್ಲಿ ಈಗಲ್ಲದಿದ್ದರೆ ತುಸು ತಡವಾಗಿ, ಪ್ರತ್ಯಕ್ಷ ಯಾ ಪರೋಕ್ಷವಾಗಿ ಅದು ಹೊರಗೆ ಬರಲೇಬೇಕು. ನೀವು ವ್ಯವಹರಿಸುತ್ತಿ ರುವ ವ್ಯಕ್ತಿಯ ನಿಜ ಸ್ವರೂಪ ತಿಳಿದಷ್ಟೂ, ಆತನ ವ್ಯಾವಹಾರಿಕ ವೇಷಗಳನ್ನು ಭೇದಿಸಬಲ್ಲ ನಾದಷ್ಟೂ ಅವನ ಮುಂದಿನ ಹೆಜ್ಜೆಗಳು ಸ್ಪಷ್ಟ ವಾಗತೊಡಗುತ್ತವೆ. ವ್ಯಾಪಾರದಲ್ಲಿ ಇದು ಎಷ್ಟು ಉಪಯುಕ್ತ ಎಂದು ಹೇಳಬೇಕಿಲ್ಲ ವಷ್ಟೆ..... ಇದನ್ನು ಸಾಧಿಸುವ ಮೊದಲನೆ ನಿಯಮ 'ನಿಮ್ಮ ಬಾಯ್ಮುಚ್ಚಿ-Shut up.' ಹೌದು! ನಿಮ್ಮ ಬಾಯಿ ಮುಚ್ಚಿ; ಕಿವಿಗಳನ್ನು ತೆರೆದಿಡಿ; ಕಣ್ಣುಗಳನ್ನು ಅರಳಿಸಿ. ನಿಮ್ಮ ವಚನ: ಶ್ರವಣ ಅನುಪಾತವನ್ನು ಹತೋಟಿಯಲ್ಲಿಡಿ, ಸಾಕು!

ಜನ ತಮ್ಮ ನಿಜ ಮುಗ್ಧ ಸ್ವರೂಪ/ಅಂತ ರ್ಯವನ್ನು ಸಾಮಾನ್ಯವಾಗಿ ಅತ್ಯಂತ ಸಾಧಾರಣ ಸಹಜ ಸನ್ನಿವೇಶಗಳಲ್ಲಿ ಹೊರಬಿಟ್ಟುಬಿಡು

ತ್ತಾರೆ. ಒಬ್ಬ ವ್ಯಕ್ತಿ ಹೊಟೇಲ್ ವೇಟರ್‌ನೊಂದಿಗೋ, ಟ್ಯಾಕ್ಸಿ ಚಾಲಕನೊಂದಿಗೋ, ವಿಮಾನದಲ್ಲಿ ಪರಿಚಾರಕ/ಕಿಯೊಂದಿಗೋ ವರ್ತಿಸುವಾಗ ಪ್ರಾಯಶಃ ತಾನು ತಾನಾಗಿರುತ್ತಾನೆ ಎಂಬುದನ್ನು ಮರೆಯಬೇಡಿ......''ನೀರಿನ ಹೊರಗೆ ಮೀನು'' ರೀತಿಯ ಸನ್ನಿವೇಶಗಳನ್ನು ಅಲಕ್ಷಿಸಬೇಡಿ. ವ್ಯಕ್ತಿಯೊಬ್ಬ ತನ್ನ ಸುಪರಿಚಿತ ಸುರಕ್ಷಿತ ವಲಯ [Comfort Zone] ದ ಹೊರಗೆ ಹೇಗೆ ನಡೆದುಕೊಳ್ಳುತ್ತಾನೆಂಬುದನ್ನು ಗಮನಿಸುವ ಅವಕಾಶ ತಪ್ಪಿಸಿಕೊಳ್ಳಬೇಡಿ.

★ ನುಡಿಯಲು ಅತಿ ಕಷ್ಟಕರವಾದ ಈ ಮೂರು ಮಾತುಗಳನ್ನು ಕಲಿಯಿರಿ - ''ನನಗೆ ಗೊತ್ತಿಲ್ಲ''; ''ನನಗೆ ಸಹಾಯಬೇಕು''; ''ನಾನು ತಪ್ಪು ಮಾಡಿದೆ''. ನನಗೆ ಗೊತ್ತಿಲ್ಲ [I don't know]ಎಷ್ಟೊಂದು ಜನ ಈ ಪದಗಳನ್ನು ಉಪಯೋಗಿಸಲು ಹೆದರುತ್ತಾರೆಂಬುದು ಅಚ್ಚರಿ ತರುತ್ತದೆ. ಮಾತುಕತೆಗಳಲ್ಲಿ ಸುಳ್ಳು ಹೇಳಿಯಾದರೂ 'ಗೊತ್ತಿಲ್ಲ'ವನ್ನು ತಪ್ಪಿಸಿಕೊಳ್ಳಲು ಯತ್ನಿಸುತ್ತಾ ಒದ್ದಾಡುವ ಜನ ಒಳ್ಳೇ ಮಜಾ ನೀಡುತ್ತಾರೆ. ನಾನಂತೂ ಎಷ್ಟೋ ಸಲ ವಿಷಯ ಗೊತ್ತಿರುವಾಗಲೂ ನನಗೆ ಗೊತ್ತಿಲ್ಲ ಅನ್ನುವುದುಂಟು - ಹೆಚ್ಚು ವಿಷಯ ತಿಳಿಯಲು ಅಥವಾ ನನಗೆ ತಿಳಿದಿರುವುದನ್ನು ಖಚಿತಪಡಿಸಿಕೊಳ್ಳಲು. ''ನನಗೆ ಎಲ್ಲಾ ಗೊತ್ತಿದೆ'' ಪ್ರವೃತ್ತಿಗಿಂತ ''ನನಗೆ ಇದು ಗೊತ್ತಿಲ್ಲ'' ವರ್ತನೆ ಹೆಚ್ಚು ಯಶಸ್ವಿಯಾಗುತ್ತದೆಂದು ನನ್ನ ಖಚಿತ ಅಭಿಪ್ರಾಯ.

ನನಗೆ ಸಹಾಯ ಬೇಕು [I need help] - ಈ ಮಾತು ಹೇಳಲು ಹೆದರುವ ಜನ ಒಂದು ಕ್ಷಣ ಯೋಚಿಸಲಿ; ವ್ಯವಸ್ಥೆಯನ್ನು [System] ನಿರ್ಮಿಸುವುದೇ ಸಹಾಯ ನೀಡಲು ಮತ್ತು ಸಹಾಯ ಪಡೆಯಲು, ಅಲ್ಲವೇ? ಆಧುನಿಕ ವ್ಯವಹಾರ, ಉದ್ಯೋಗ, ಉದ್ಯಮ ವ್ಯವಸ್ಥೆಗಳೆಲ್ಲಾ 'ಕೆಲವು ಕೆಲಸಗಳನ್ನು ವ್ಯಕ್ತಿಗಿಂತ ಗುಂಪುಗಳು [Team] ಪರಿಪೂರ್ಣವಾಗಿ ಮಾಡಬಲ್ಲವು' ಎಂಬ ಅಂಶದ ಮೇಲೆ ಕಟ್ಟಲ್ಪಟ್ಟಿವೆ.

ನಾನು ತಪ್ಪು ಮಾಡಿದೆ [I was wrong]: ನನ್ನದೊಂದು ಸಿದ್ಧಾಂತವಿದೆ - ನೀವು ತಪ್ಪುಗಳನ್ನು ಮಾಡುತ್ತಿಲ್ಲವೆಂದಾದರೆ, ನೀವು ನಿಮ್ಮ ಶಕ್ತಿ ಇರುವಷ್ಟು ಪ್ರಯತ್ನಿಸುತ್ತಿಲ್ಲವೆಂದೇ ಅರ್ಥ; ನಿಮಗಿರುವ ಸಾಧ್ಯತೆಗಳನ್ನೆಲ್ಲಾ ಉಪಯೋಗಿಸುತ್ತಿಲ್ಲವೆಂದೇ ಅರ್ಥ! ಸ್ವಲ್ಪ ಯೋಚಿಸಿ - ನೀವು. ''ನಾನು ತಪ್ಪು ಮಾಡಿದೆ'' ಎಂದಾಕ್ಷಣ ತಪ್ಪನ್ನು ಭೂತಕಾಲಕ್ಕೆ ತಳ್ಳಿ ಮುನ್ನಡೆದರೆಂದೇ ಆಯಿತಲ್ಲವೆ?

★ ಬಹಳ ವರ್ಷಗಳ ಹಿಂದೆ, ರೋಲೆಕ್ಸ್ ಕಂಪೆನಿಯ ಅಧ್ಯಕ್ಷ ಆಂಡ್ರೆ ಹೀನಿಜರ್‌ನ ಜತೆ ಭೋಜನ ಕೂಟದಲ್ಲಿದ್ದೆ. ಆಂಡ್ರೆಯ ಸ್ನೇಹಿತನೊಬ್ಬ ಟೇಬಲ್ ಬಳಿ ಬಂದು ಹಲೋ ಹೇಳಿ 'ವಾಚ್ ಉದ್ಯಮ ಹೇಗಿದೆ?' ಎಂದು ಕೇಳಿದ. ಆಂಡ್ರೆಯ ಉತ್ತರ - 'ನನಗೆ ಐಡಿಯಾ ಇಲ್ಲ' (ನನಗೆ ಗೊತ್ತಿಲ್ಲ)! ಸ್ನೇಹಿತ ನಕ್ಕ, ವಿಶ್ವದ ಅತಿ ಪ್ರಸಿದ್ಧ ಕೈ ಗಡಿಯಾರ ತಯಾರಕ ಹೇಳಿದ ಮಾತು ಕೇಳಿ. ಆಂಡ್ರೆ ಗಂಭೀರವಾಗಿ ನುಡಿದ 'ರೋಲೆಕ್ಸ್ ಕಂಪೆನಿ ವಾಚ್‌ಗಳ ಉದ್ಯಮದಲ್ಲಿಲ್ಲ.' ಮುಂದುವರೆದು, 'ನಾವು ವೈಭವ, ವೈಭೋಗದ ವ್ಯಾಪಾರವನ್ನು ಮಾಡುತ್ತೇವೆ.' [Rolex is not in Watch Business; We are in the Luxury Business.] ನನಗಂತೂ ಆಂಡ್ರೆ ಹೀನಿಜರ್‌ನ ಮಾತು 'ಮಾರಾಟಗಾರಿಕೆ' ಎಂದರೇನು ಅನ್ನುವುದನ್ನು ಅರ್ಥ ಮಾಡಿಸಿತು. ನೀವು ಮಾರುವ ವಸ್ತುವನ್ನು, ನಿಮ್ಮ ಗಿರಾಕಿಗೆ ಸಂಬಂಧಿಸುವುದು ಏನು ಎನ್ನುವುದನ್ನು ಮೊದಲು ತಿಳಿದುಕೊಳ್ಳಿ. ಒಂದು ವೇಳೆ ಈ ಪುಸ್ತಕಕ್ಕೆ 'ಮ್ಯಾನೇಜ್‌ಮೆಂಟ್ - ತತ್ವಗಳು ಮತ್ತು ಪ್ರಯೋಗ' ಎಂದು ಹೆಸರಿಟ್ಟಿದ್ದರೆ ನೀವು ಕೊಳ್ಳುತ್ತಿದ್ದಿರೇನು?! ಯಾರೂ ಕೊಳ್ಳುತ್ತಿರಲಿಲ್ಲವೆಂದಲ್ಲ - ಆದರೆ ಆ ಓದುಗ ವರ್ಗವೇ ಬೇರೆ, ಸಂಖ್ಯೆಯಲ್ಲಿ ಬಹಳ ಸಣ್ಣದು!

★ ಯಾವುದೇ ಕ್ಷೇತ್ರದಲ್ಲಿ ಬೆಳೆಯುತ್ತಾ ಮುಂದೆ ಮುಂದೆ ನುಗ್ಗುತ್ತಾ ಕೊನೆಗೆ ಉತ್ತುಂಗಕ್ಕೆ ತಲುಪುವವರನ್ನು ನೋಡಿದ್ದೀರಲ್ಲವೇ? ಅವರ ಈ

ಏಳಿಗೆಯ ಗುಟ್ಟಾದರೂ ಏನು? ಅವರು ಉಳಿದ ವರಿಗಿಂತ ಹೆಚ್ಚು ಸಮರ್ಥರೆಂದೇ? ಇರಬ ಹುದು. ಇಲ್ಲದೆಯೂ ಇರಬಹುದು. ನನ್ನ ದೃಷ್ಟಿಯಲ್ಲಿ ಒಬ್ಬ ವ್ಯಕ್ತಿಯ ಶಕ್ತಿ - ಸಾಮರ್ಥ್ಯ ಗಳೇನು ಎನ್ನುವದರಷ್ಟೇ ಅವುಗಳನ್ನು ಆತ ಎಷ್ಟು ಪ್ರಭಾವಶಾಲಿಯಾಗಿ ಉಪಯೋಗಿಸ ಬಲ್ಲ - ತನ್ನ ಉದ್ದೇಶಿತ ಗುರಿ ತಲುಪುವತ್ತ - ಎನ್ನುವುದು ಮುಖ್ಯ. ಕಂಪೆನಿ ಅಧಿಕಾರ ವ್ಯವಸ್ಥೆಯಲ್ಲಿ ಮೇಲೇರುವುದೊಂದು ಆಟ. ಎಲ್ಲಾ ಆಟದಂತೆ ಇಲ್ಲಿಯೂ ನಿಯಮಗಳಿವೆ.

ಬಲಿಷ್ಠವಾದುದರ ಉಳಿವು [Survival of the fittest] - ಪಿರಮಿಡ್ ಆಕಾರದ ಯಾವುದೇ ವ್ಯವಸ್ಥೆಯನ್ನು ಡಾರ್ವಿನ್ನನ ಈ ತತ್ವ ಬಿಡುವು ದಿಲ್ಲ ಅನ್ನಿಸುತ್ತದೆ. ಕಂಪನಿ ಆಡಳಿತ/ಅಧಿಕಾರ ವ್ಯವಸ್ಥೆಯೂ ಒಂದು ಪಿರಮಿಡ್ಡೇ. ಉಪಾಧ್ಯಕ್ಷ ರಿರುವಷ್ಟು ಜನ ಅಧ್ಯಕ್ಷರಿರುವುದಿಲ್ಲ; ಮ್ಯಾನೇ ಜರ್‌ಗಳಿರುವಷ್ಟು ಉಪಾಧ್ಯಕ್ಷರಿರುವುದಿಲ್ಲ, ಇತ್ಯಾದಿ. ಆದ್ದರಿಂದ ಸ್ವಾಭಾವಿಕವಾಗಿಯೇ ಪಿರ ಮಿಡ್‌ನ ವಿವಿಧ ಸ್ತರಗಳ ಮಧ್ಯೆ ಸೂಕ್ಷ್ಮವಾಗಿ ಯಾದರೂ ಹಗೆತನ (ಸ್ಪರ್ಧೆ?) ಇರಲೇಬೇಕು!

ನಿಮ್ಮ ವರಿಷ್ಠರು ಸ್ವಾಭಾವಿಕವಾಗಿ ನಿಮ್ಮ ಬಂಧುಗಳಾಗಬೇಕು - ಎಷ್ಟೊಂದು ಬುದ್ಧಿವಂತ ಜನ ಸಹ ಇದನ್ನು ಗ್ರಹಿಸುವುದಿಲ್ಲವಲ್ಲ ಎಂದು ಆಶ್ಚರ್ಯ ಪಡುತ್ತೇನೆ ನಾನು. ವರಿಷ್ಠರ ಜತೆಗೇ ಕುಸ್ತಿ ಆಡಿದರೆ ನಿಮಗೆ ಬೇರೆ ಕೆಟ್ಟ ಶತ್ರುಗಳ ಅವಶ್ಯಕತೆಯೇ ಇಲ್ಲವಲ್ಲ!

ಒಂದು ವ್ಯವಸ್ಥೆ ಇದ್ದೇ ಇರುತ್ತದೆ - ನಿಮಗೆ ಇಷ್ಟವಿರಲಿ, ಇಲ್ಲದಿರಲಿ. - ನಿಮ್ಮ ಬೆಳವಣಿಗೆಗೆ ಇರುವ ದಾರಿ ಒಂದೇ; ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವುದು. ನೆನಪಿಡಿ - ನೀವು ಬೆಳೆ ಯುವುದು ವ್ಯವಸ್ಥೆಯ ಒಳಗೆ [within], ವ್ಯವಸ್ಥೆಯ ಮೂಲಕ [through], ವ್ಯವಸ್ಥೆ ಯನ್ನು ಸುತ್ತುವರೆದು [around]. ವ್ಯವಸ್ಥೆ ಯನ್ನು ಪರಿಚಯಿಸಿಕೊಳ್ಳದೇ ದಾರಿ ಹುಡುಕ ಬೇಡಿ; ಅದು ಸಿಗುವುದಿಲ್ಲ. ಏಕೆಂದರೆ ಹಾಗೊಂದು ದಾರಿ ಇಲ್ಲ. ●

ಹಲ್ಲು ಹೃದಯಗಳ ಸಂಬಂಧ


ಅನಾರೋಗ್ಯಕರ ಹಲ್ಲುಗಳ ಹೃದಯಾಘಾತಕ್ಕೆಡೆ ಕೊಡುತ್ತವೆ. ಫಿನ್ಲೆಂಡ್ ಸಂಶೋಧಕರ ಪ್ರಕಾರ ಕೊಲೆಸ್ಟರಾಲ್, ರಕ್ತದೊತ್ತಡ ಹಾಗೂ ಧೂಮಪಾನಗಳು ಹೃದಯಾಘಾತವನ್ನು ತ್ವರಿತಗೊಳಿಸುವಂತೆ, ಹಲ್ಲು ಮತ್ತು ವಸಡುಗಳಿಗೆ ತಗುಲುವ ಸೋಂಕು ಕೂಡ ಹೃದಯಾಘಾತದ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

'ಬ್ರಿಟಿಷ್ ಮೆಡಿಕಲ್ ಜರ್ನಲ್‌ನ ವರದಿಯ ಪ್ರಕಾರ ಹಲ್ಲು ಮತ್ತು ವಸಡುಗಳ ರೋಗದಿಂದ ನರಳು'ವವರು ಅದೇ ವಯಸ್ಸಿನ ಆರೋಗ್ಯವಂತ ವ್ಯಕ್ತಿಗಳಿಗಿಂತ ಹೃದಯಾಘಾತಕ್ಕೊಳಗಾಗುವದು ಹೆಚ್ಚು.

ಸಂಶೋಧಕರ ಪ್ರಕಾರ ಹಲ್ಲಿನ ರೋಗದಿಂದುಂಟಾದ ನಂಜು ರಕ್ತನಾಳಗಳಿಂದ ಹೀರಲ್ಪಟ್ಟು, ರಕ್ತ ನಾಳಗಳ ಅಂಚಿಗೆ ಅಪಾಯವನ್ನುಂಟು ಮಾಡುತ್ತವೆ. ಇದರೊಂದಿಗೆ ರಕ್ತನಾಳಗಳಲ್ಲಿ (ಆರ್ಟರಿ) ಕೊಲೆಸ್ಟರಾಲ್ ಸಂಗ್ರಹವಾಗಿ ರಕ್ತನಾಳಗಳನ್ನು ಅದು ಸಂಕುಚಿತಗೊಳಿಸುತ್ತದೆ. ಇದರಿಂದ ರಕ್ತ ಸಂಚಾರಕ್ಕೆ ಅಡ್ಡಿಯುಂಟಾಗುತ್ತವೆ.

45 ವಯಸ್ಸಿಗೆ ಮೊದಲೇ ಹೃದಯಾಘಾತಕ್ಕೊಳಪಟ್ಟ ವ್ಯಕ್ತಿಗಳು ಚಿಕ್ಕ ವಯಸ್ಸಿನಲ್ಲೇ ಹಲ್ಲು ರೋಗಕ್ಕೊಳಗಾಗಿದ್ದುದು ಸಾಮಾನ್ಯವಾಗಿ ಕಂಡು ಬರುವ ಅಂಶ.

ಸಂಗ್ರಹ: **ಟಿ.ಎಸ್.ಲಲಿತ**



ತ್ಯಾಗ

ಮೂಲ: ಶ್ರೀಮತಿ ಷಪನಾಜ್

ಅನುವಾದ: ಕೋಲಾರ್ ಕೃಷ್ಣ ಅಯ್ಯರ್

ಸಾಯಂಕಾಲದ ಸಮಯ.

ತಂಪಾದ ಗಾಳಿ ಬೀಸುತ್ತಿತ್ತು. ಆಫೀಸುಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸಮಾಡುತ್ತಿದ್ದವರೆಲ್ಲ ತಂತಮ್ಮ ಮನೆಗಳಿಗೆ ಹೊರಡುತ್ತಿದ್ದರು. ನಾನೂ ನನ್ನ ಸ್ಕೂಟರನ್ನು ನಮ್ಮ ಮನೆ ಕಡೆಗೆ ತಿರುಗಿಸಿದೆ. ಮನೆ ತಲುಪಿದ ಕೂಡಲೆ ಸ್ಕೂಟರನ್ನು ಒಂದು ಮೂಲೆಗೆ ನಿಲ್ಲಿಸಿ ಮನೆ ಒಳಕ್ಕೆ

ಸುಗ್ಗಿವೆ. ಡ್ರಾಯಿಂಗ್ ರೂಮಿನಲ್ಲಿ ಸುಜಾತ ಆರಾಮವಾಗಿ ಕುಳಿತಿದ್ದಳು. ಅವಳ ಕೈಯಲ್ಲಿ ಫೋಟೋ ಆಲ್ಬಂ. ಹೋಗಿ ಅವಳ ಪಕ್ಕದಲ್ಲಿ ಕುಳಿತು ಕೇಳಿದೆ,

''ಸುಜಿ, ಏನನ್ನು ನೋಡ್ತಾ ಇದ್ದೀಯಾ?''

''ನಾವು ಮೊನ್ನೆ ಹುಟ್ಟಿದ ಹಬ್ಬದ ದಿನ ತೆಗೆಯಿಸಿಕೊಂಡ ಫೋಟೋಗಳನ್ನು ಆಲ್ಬಂನಲ್ಲಿ ಹಾಕ್ತಾ ಇದ್ದೇನೆ'' ಎಂದು ಹೇಳುತ್ತಾ ಕಾಫಿ ತರುವುದಕ್ಕೆ ಅಡಿಗೆಮನೆ ಕಡೆ ಹೋದಳು.

ನಾನು ಆಲ್ಬಂ ಕೈಗೆ ತೆಗೆದುಕೊಂಡು ಹಳೆ ಫೋಟೋಗಳನ್ನು ತಿರುವಿ ಹಾಕತೊಡಗಿದೆ. ನನ್ನ ದೃಷ್ಟಿ ಒಂದು ಗ್ರೂಪ್ ಫೋಟೋ ಮೇಲೆ ನಿಂತು ಕೊಂಡಿತು. ನಾನು ಹೈದರಾಬಾದಿನಲ್ಲಿ ಕೆಲಸ ಮಾಡುತ್ತಿದ್ದಾಗ ನನಗೆ ಪ್ರಮೋಷನ್ ಬಂದು, ಅನಂತಪುರಕ್ಕೆ ವರ್ಗವಾದಾಗ ನಮ್ಮ ಸ್ಟಾಫ್‌ನೊಡನೆ ತೆಗೆಸಿಕೊಂಡ ಫೋಟೋ ಅದು. ಮುಂದಿನ ಸಾಲಿನಲ್ಲಿ ನನ್ನ ಪಕ್ಕದಲ್ಲಿ ಕುಳಿತಿದ್ದ ಜಾನಕಿಯ ಮೇಲೆ ಬಿತ್ತು ನನ್ನ ನೋಟ. ತದೇಕ ದೃಷ್ಟಿಯಿಂದ ಅವಳನ್ನೇ ನೋಡುತ್ತಿದ್ದ ನನ್ನ ಕಣ್ಣುಗಳಲ್ಲಿ ಅಶ್ರು ಬಿಂದುಗಳು ತುಂಬಿಕೊಂಡವು.

''ಏನಾಯಿತು? .....ಯಾಕೆ ಕಣ್ಣುಗಳಲ್ಲಿ...?'' ಕಾಫಿ ಕಪ್ಪನ್ನು ಹಿಡಿದುಕೊಂಡು ಬಂದ ಸುಜಾತ ಕೇಳಿದಳು. ಕಾಫಿ ಕಪ್ಪನ್ನು ಅವಳ ಕೈಯಿಂದ ತೆಗೆದುಕೊಂಡು ಟೀಪಾಯ್ ಮೇಲಿಟ್ಟು,

''ಏನೂ ಇಲ್ಲ ಸುಜೀ. ಬಾ, ಕುಳಿತುಕೊ'' ಜಾನಕಿಯನ್ನು ಫೋಟೋದಲ್ಲಿ ತೋರಿಸುತ್ತಾ ಹೇಳಿದೆ, ''ನಿನಗೆ ಈ ಜಾನಕಿಯನ್ನು ಕುರಿತು ಯಾವಾಗಲೂ ಹೇಳಲಿಲ್ಲ.... ಅಲ್ಲವೆ?''

''ಇಲ್ಲ.... ಕಾಫಿ ತಣ್ಣಗಾಗುತ್ತೆ. ಕುಡಿಯಿರಿ ಮತ್ತೆ ಹೇಳುವಿರಂತೆ.'' ಕಾಫಿ ಕಪ್ಪಿನಿಂದ ಬರುತ್ತಿದ್ದ ಹಬೆಯನ್ನೇ ನೋಡುತ್ತಾ ಇದ್ದು ಬಿಟ್ಟೆ. ನನ್ನ ಕಣ್ಣುಗಳ ಮುಂದೆ ಜಾನಕಿಯ ರೂಪ ಚಲಿಸುತ್ತಿತ್ತು.

* *

ಬಿ.ಕಾಂ. ಪಾಸಾಗಿ ಎರಡು ವರ್ಷ ನಾನಾ ಕಷ್ಟಪಟ್ಟ ಮೇಲೆ ಬ್ಯಾಂಕಿನಲ್ಲಿ ನನಗೆ ಉದ್ಯೋಗ ಸಿಕ್ಕಿತು. ಡ್ಯೂಟಿಗೆ ಸೇರಲು ಬ್ಯಾಂಕಿಗೆ ಹೋಗಿ ಮೇನೇಜರನ್ನು ಭೇಟಿಯಾದೆ. ಅವರು ಒಂದೆರಡು ಮಾತುಗಳನ್ನಾಡಿ ಸಿಪಾಯಿಯನ್ನು ಕರೆದು ''ಹೆಡ್ ಗುಮಾಸ್ತೆ ಜಾನಕಿದೇವಿಯವರನ್ನು ಬರ ಹೇಳು'' ಎಂದು ಹೇಳಿ ಕಳುಹಿಸಿದರು.

ಜಾನಕಿ ಒಬ್ಬ ನಲ್ವತ್ತು ವರ್ಷ ಮೀರಿದ ದೃಢಕಾಯಳಾದ, ಕನ್ನಡಕವನ್ನು ಧರಿಸಿದ ಪ್ರೌಢೆಯಾಗಿ ಇರಬಹುದೆಂದು ಊಹಿಸಿದ್ದೆ.

ಆಕೆ ಬಂದಳು!

ಬಿಳಿ ಕಲ್ಲಿನ ಬೊಂಬೆಯಂತೆ ಅಂದವಾಗಿದ್ದಳು. ಅಂದವೇ ಅಲ್ಲದೆ ಮುಖದಲ್ಲಿ ನಿರ್ಮಲ ಭಾವ, ಕಂಠದಲ್ಲಿ ಮಂಗಳ ಸೂತ್ರ ಅವಳಿಗೊಂದು ಗಂಭೀರತೆಯನ್ನು ಕೊಡುತ್ತಿದ್ದವು. ಚಿಗುರಿದ ಎಲೆ ಬಣ್ಣದ ಸೀರೆ, ಅದೇ ಬಣ್ಣದ ರವಿಕೆ ತೊಟ್ಟಿದ್ದಾಳೆ. ಕೈಗಳಲ್ಲಿ ಒಂದೊಂದು ದಪ್ಪವಾದ ಚಿನ್ನದ ಬಳೆ. ಕ್ಷಣಕಾಲ ನನ್ನ ಕಣ್ಣುಗಳು ಅವಳನ್ನೇ ನೋಡುತ್ತಾ ಇದ್ದುಬಿಟ್ಟವು.

ಮೇನೇಜರ್ ನನ್ನನ್ನು ಆಕೆಗೆ ಪರಿಚಯ ಮಾಡಿಕೊಟ್ಟು, ನನಗೆ ಒಪ್ಪಿಸಬೇಕಾದ ಕೆಲಸವನ್ನು ನಿರ್ಧರಿಸುವುದು ಎಲ್ಲಾ ಯಾಂತ್ರಿಕವಾಗಿ ನಡೆದುಹೋಯಿತು.

ಆಕೆ ನನ್ನನ್ನು ತನ್ನ ಸೀಟಿನ ಹತ್ತಿರಕ್ಕೆ ಕರೆದುಕೊಂಡು ಹೋಗಿ ಸ್ಟಾಫ್ ಮೆಂಬರುಗಳಿಗೆಲ್ಲ ನನ್ನನ್ನು ಪರಿಚಯ ಮಾಡಿದಳು. ತನ್ನ ಸೌಮ್ಯವಾದ ಮಾತುಗಳಿಂದ ನಾನು ಮಾಡಬೇಕಾದ ಕೆಲಸಗಳನ್ನು ವಿವರಿಸಿದಳು.

ದಿನಗಳು ಕಳೆಯುತ್ತಾ ಬಂದವು. ಸಲಿಗೆ ಬೆಳೆಯುತ್ತಾ ಬಂತು.

ಅವಳೆಂದರೆ ಒಂದು ತಿಳಿಯದ ಅಭಿಮಾನ, ಗೌರವ ಬೆಳೆಯಿತು. ಕೃತ್ರಿಮತೆಯಿಲ್ಲದ ನಿರ್ಮಲವಾಗಿ, ಸರಳವಾಗಿರುವ ಅವಳು ಎಂದರೆ ಯಾರಿಗೆ ಮಾತ್ರ ಅಭಿಮಾನವಿರುವುದಿಲ್ಲ?

ಆಕೆ ನನ್ನೊಂದಿಗೆ ಬಹಳ ಸ್ನೇಹದಿಂದ ನಡೆದುಕೊಳ್ಳುತ್ತಿದ್ದಳು. ಅದೊಂದು ಸೋದರ ಸ್ನೇಹ. ತನ್ನ ಮನೆಯಿಂದ ತಂದ ಫಲಹಾರವನ್ನು ನನಗೆ

ಹಂಚುತ್ತಿದ್ದಳು. ಆಫೀಸಿನ ಅನೇಕ ವಿಷಯಗಳನ್ನು ಆಗಾಗ್ಗೆ ಚರ್ಚಿಸುತ್ತಿದ್ದೆವು. ಆದರೆ ಒಂದು ಸಲವಾದರೂ ನಮ್ಮ ವ್ಯಕ್ತಿಗತ ವಿಷಯವನ್ನು ಕುರಿತು ಮಾತನಾಡಲಿಲ್ಲ.

ಎಷ್ಟು ನಿಷ್ಕಲ್ಮಷ, ಎಷ್ಟು ಪವಿತ್ರ ಈ ನಮ್ಮಿಬ್ಬರ ಸ್ನೇಹ?!


ಆ ದಿನ -

ಶಾಂತಿ ನಗರದಲ್ಲಿದ್ದ ನನ್ನ ಸ್ನೇಹಿತರ ಮನೆಗೆ ಹೋಗಿ ಪಾರ್ಟಿಯಲ್ಲಿ ಭಾಗವಹಿಸಿ ಹಿಂತಿರುಗಿ ಬರುತ್ತಿದ್ದೆ.

ಹಿಂದಿನಿಂದ ''ಶ್ರೀನಿವಾಸ್'' ಎಂಬ ಕೂಗು ಮಧುರವಾದ ಕಂಠದಿಂದ ಬಂತು. ಯಾರೆಂದು ಹಿಂತಿರುಗಿ ನೋಡಿದೆ. ಒಂದು ಮನೆಯ ಗೇಟಿನ ಹತ್ತಿರ ನಿಂತಿದ್ದಾಳೆ ಜಾನಕಿ.

''ಈ ದಾರಿಯಲ್ಲಿ ಎಲ್ಲಿಗೆ ನಿಮ್ಮ ಗಮನ? ಕೇಳಿದಳು. ''ನಮ್ಮ ಮನೆಯಲ್ಲಿ ಕಾಫಿ ಸೇವಿಸಿ ಹೋಗುವಿರಂತೆ. ಒಳಕ್ಕೆ ಬನ್ನಿ'' ಆಹ್ವಾನಿಸಿದಳು.

ಅಂದವಾದ ಚಿಕ್ಕ ಮನೆ. ನಾಜೂಕಾಗಿ ಇಟ್ಟುಕೊಂಡಿದ್ದಾಳೆ. ಎಲ್ಲ ನಿಶ್ಶಬ್ದ.



''ನನಗೆ ಉದ್ಯೋಗಕ್ಕಾಗಿ ಸಾಲ ಬೇಕು ಸಾರ್, ..
ಹತ್ತು ಸಾವಿರ ಲಂಚ ಕೇಳಿದ್ದಾರೆ..!!''

ಆಕೆಯ ಗಂಡ, ಮಕ್ಕಳು ಬಹುಶಃ ಇನ್ನೂ ಮನೆಗೆ ಬರಲಿಲ್ಲವೆಂದು ಕಾಣುತ್ತೆ. ಭಾನುವಾರ ಎಲ್ಲಿಗಾದರೂ ಹೋಗಿರಬಹುದು. ಸೋಫಾ ಮೇಲೆ ಆಸೀನನಾದೆ. ಆಕೆ ಒಂದು ಕುರ್ಚಿಯನ್ನು ಎಳೆದುಕೊಂಡು ನನ್ನ ಎದುರಿಗೆ ಕುಳಿತಳು.

ಸಂಭಾಷಣೆ ಹೇಗೆ ಪ್ರಾರಂಭಿಸುವದು?

''ಮನೆಯಲ್ಲಿ ಯಾರೂ ಇಲ್ಲವೆಂದು ಕಾಣುತ್ತೆ. ನಿಮ್ಮವರೂ ಮಕ್ಕಳೂ ಎಲ್ಲಿಗಾದರೂ ಹೋಗಿರಬೇಕು.''

ಅವಳು ತೊಡಕಿನಲ್ಲಿ ಸಿಕ್ಕಿದಂತೆ ಕಾಣಿಸಿತು.

ತಲೆ ಬಗ್ಗಿಸಿಕೊಂಡು, ತನ್ನ ಬೆರಳುಗಳ ಉಗುರುಗಳನ್ನು ವೀಕ್ಷಿಸುತ್ತಾ ಹೇಳಿದಳು ನಿರ್ಲಿಪ್ತವಾಗಿ,

''ನನಗೆ ಸಂತಾನವಿಲ್ಲ! ನಮ್ಮವರು ಕ್ಲಬ್‌ಗೆ ಹೋಗಿದಾರೆ.''

ತೊಡಕಿನಲ್ಲಿ ಬೀಳುವ ಪ್ರಮೇಯ ಈಗ ನನಗೆ ಉಂಟಾಯಿತು. ನನ್ನ ಮುಖದಲ್ಲಿ ಪಶ್ಚಾತ್ತಾಪ ಕಂಡಿತು. ''ಕ್ಷಮಿಸಿ... ತಿಳಿಯದೆ ವಿಚಾರಿಸಿದೆ'' ಎಂದೆ.

ಅಷ್ಟರಲ್ಲಿ ಐವತ್ತು ವರ್ಷ ಮೀರಿದ ಹೆಂಗಸು ಒಳಗಿನಿಂದ ಬಂದು, ''ಅಯ್ಯೋ ಹಣೆಬರಹ! ಮದುವೆಯಾಗಿ ಹತ್ತು ವರ್ಷಗಳಾದರೂ ಒಂದು ಕೂಸಾದರೂ ಇಲ್ಲ. ಎಲ್ಲಾ ಕರ್ಮ! ಆ ಬಂಜೆ ಸಂಬಂಧ ನಮಗೆ ಬೇಡಾ ಎಂದರೂ ಕೇಳದೆ ಕಟ್ಟಿಕೊಂಡ. ಈಗ ಅನುಭವಿಸುತ್ತಿದ್ದಾನೆ,'' ಎಂದು ಗೊಣಗುತ್ತಾ ಆಚೆಗೆ ಹೋದಳು.

ಜಾನಕಿಯ ಮುಖ ಲಜ್ಜೆಯಿಂದ ಕಳೆಗೆಟ್ಟಿತು.

''ಆಕೆ ನನ್ನ ಅತ್ತೆ....ಕಾಫಿ ತರುತ್ತೇನೆ'' ಮೇಲಕ್ಕೆ ಎದ್ದಳು.

''ಈಗ ಬೇಡ. ಮತ್ತೊಮ್ಮೆ ಬರುತ್ತೇನೆ'' ಎಂದು ಹೇಳಿ ಹೊರಕ್ಕೆ ಬಂದು ಮನೆ ಕಡೆ ನಡೆದೆ.

ಮರುದಿನ ಲಂಚ್ ವಿರಾಮದಲ್ಲಿ ಅವಳು ಕೆಲವು ವ್ಯಕ್ತಿಗತ ವಿಷಯಗಳನ್ನು ತಿಳಿಸಿದಳು.

ಆಕೆ ಚಿಕ್ಕಂದಿನಲ್ಲೇ ತಾಯಿ ತಂದೆಗಳನ್ನು ಕಳೆದುಕೊಂಡಳು. ಅಜ್ಜಿಯ ಆಶ್ರಯದಲ್ಲಿ ಬೆಳೆದಳು. ಡಿಗ್ರಿ, ತೆಗೆದುಕೊಂಡು ಬ್ಯಾಂಕಿನಲ್ಲಿ ಸೇರಿ

ದಳು. ಅಜ್ಜಿಯ ಬಲವಂತದಿಂದ ದೂರದ ನೆಂಟ ಶೇಷಗಿರಿಯನ್ನು ಮದುವೆಯಾದಳು. ಮದುವೆಯಾದ ವರ್ಷದೊಳಗೆ ಅಜ್ಜಿ ತೀರಿಕೊಂಡಳು. ಅವಳಿಗೆ ಗಂಡ ಬಿಟ್ಟರೆ ಮತ್ತಾರೂ ತನ್ನವರು ಇಲ್ಲ!

ನನ್ನ ಮನಸ್ಸು ಸಹಾನುಭೂತಿಯಿಂದ ತುಂಬಿಕೊಂಡಿತು.

''ಕ್ಷಮಿಸಿ...ನಿಮ್ಮವರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆಂದು ಭಾವಿಸುತ್ತೇನೆ!'' ಕೇಳಬಾರದ ಪ್ರಶ್ನೆ ಕೇಳಿದೆ. ನನಗೇಕೋ ಅನುಮಾನ.

''ನೋಡಿಕೊಳ್ಳುತ್ತಾರೆ!'' ಕ್ಲುಪ್ತ ಸಮಾಧಾನ. ಆ ಮಾತುಗಳಲ್ಲಿ ನನಗೇಕೊ ನಿಜಾಂಶ ಕಾಣಲಿಲ್ಲ.

''ನನ್ನನ್ನು ನಿಮ್ಮ ಸೋದರನೆಂದು ಭಾವಿಸಿ. ಯಾವ ಸಹಾಯ ಬೇಕಾದರೂ ಕೇಳಿ'' ಎಂದೆ.

''ತುಂಬಾ ಥ್ಯಾಂಕ್ಸ್ ಶ್ರೀನಿವಾಸ್'' ಎಂದು ಮಾತ್ರ ಹೇಳಿ ಸುಮ್ಮನಾದಳು.

ನಾನು ಹದಿನೈದು ದಿನಗಳು ರಜಾ ಹಾಕಿ ನಮ್ಮೂರಿಗೆ ಹೋದೆ. ಅಮ್ಮ ಅಲ್ಲಿಂದ ನನಗೆ ಹೆಣ್ಣನ್ನು ನೋಡಲು ಕರೆದುಕೊಂಡು ಹೋದಳು. ಸುಜಾತ ಮೊದಲನೆಯ ನೋಟದಲ್ಲೇ ನನಗೆ ಮೆಚ್ಚುಗೆಯಾದಳು. ಮದುವೆ ನಿಶ್ಚಯವಾಯಿತು. ನಾನು ಹೈದರಾಬಾದಿಗೆ ಹಿಂದಿರುಗಿ ಬಂದೆ.

ನನ್ನ ಮದುವೆಯ ಶುಭವಾರ್ತೆಯನ್ನು ಜಾನಕಿಗೆ ತಿಳಿಸಲು ಆತುರ ಪಡುತ್ತಿದ್ದೆ. ಉತ್ಸಾಹದಿಂದ ಬ್ಯಾಂಕಿಗೆ ಹೋದರೆ ನನಗೆ ನಿರಾಶೆ ಎದುರಾಯಿತು.

ಆ ದಿನ ಜಾನಕಿ ಬರಲಿಲ್ಲ. ಮಾರನೆ ದಿನವೂ ಅವಳು ಬರಲಿಲ್ಲ. ನಿರುತ್ಸಾಹವಾಯಿತು.

ಆ ಸಾಯಂಕಾಲ ಅವಳ ಮನೆಗೆ ಹೋದೆ. ಎಂದಿನಂತೆ ನಗುನಗುತ್ತಾ ಎದುರಾಗಲಿಲ್ಲ. ಒಂಟಿಯಾಗಿ ಕಳವಳದ ಮುಖ ಹೊತ್ತು ಕೂತಿದ್ದಳು.

ಕಣ್ಣುಗಳಲ್ಲಿ ವ್ಯಥೆ. ತಲೆಯನ್ನು ಬಾಚಿಕೊಂಡಿರಲಿಲ್ಲ.

''ಯಾಕೆ ಮೈಯಲ್ಲಿ ಚೆನ್ನಾಗಿಲ್ವೆ, ಜಾನಕಿ?'' ಕೇಳಿದೆ.

''ಚೆನ್ನಾಗಿದೆ. ಏನು ವಿಶೇಷಗಳು ಶ್ರೀನಿವಾಸ್?'' ಕೇಳಿದಳು. ಅತಿ ಪ್ರಯತ್ನದಿಂದ ವಿಷಾದ ಛಾಯೆಗಳು ಮುಖದ ಮೇಲೆ ಕಾಣವೆ ಇರಲು, ನಗುತ್ತಾ ಹೇಳಿದಳು. ಅದು ಅವಳ ನಡವಳಿಕೆ. ಅವಳ ವ್ಯಥೆಗೆ ಕಾರಣ ವೇನಿರಬಹುದು?

''ಯಾಕೆ ಹೀಗಿರುವಿರಿ? ನೀವು ಯಾವುದೋ ಬಾಧೆಪಡುತ್ತಿರುವಂತಿದೆ ....ಹೇಳಿ, ಜಾನಕಿ'' ಅವಳ ಸಮೀಪಕ್ಕೆ ಹೋಗಿ ಕೇಳಿದೆ.

ಅವಳು ತನ್ನ ಎರಡು ಅಂಗೈಗಳಲ್ಲಿ ಮುಖವನ್ನು ಬಚ್ಚಿಟ್ಟು ಅಳಲು ಪ್ರಾರಂಭಿಸಿದಳು.

ನನಗೇನೂ ಅರ್ಥವಾಗಲಿಲ್ಲ. ಅಯೋಮಯ ಸ್ಥಿತಿಗೆ ಬಂದೆ.

''ಎಲ್ಲಾ ಆಗೋಯಿತು ಶ್ರೀನಿವಾಸ್. ನನಗಿದ್ದ ಒಂದು ಆಧಾರ ಸಹಿತ ಇನ್ನು ಮೇಲೆ ಇಲ್ಲ. ನಾನು ಅವರಿಂದ ಏನೂ ಬಯಸಿಲ್ಲ. ಸ್ವಲ್ಪ, ಪ್ರೇಮ, ಅನುರಾಗ, ಅಭಿಮಾನ ಅಷ್ಟೇ. ಅವರೆ ಅವರು ನನಗೆ ಈ ರೀತಿ ಅನ್ಯಾಯ ಮಾಡುತ್ತಾರೆಂದು ಎಂದೂ ಊಹಿಸಲಿಲ್ಲ. ನನಗೆಷ್ಟು ದ್ರೋಹ ಮಾಡಿದರು. ನನ್ನಿಂದ ಸಂತಾನವಿಲ್ಲವೆಂಬ ನೆಪದಿಂದ ಬೇರೆ ಮದುವೆ ಮಾಡಿಕೊಂಡರು. ಕೊನೆಯವರೆಗೂ ನನಗೆ ಆ ವಿಷಯ ತಿಳಿಯಲಿಲ್ಲ,'' ಎಂದು ಆಕ್ರೋಶದಿಂದ ದುಃಖ ಉಕ್ಕಿಬರುತ್ತಿರಲು ಕಣ್ಣೀರು ಸುರಿಸುತ್ತಾ ಹೇಳಿದಳು.

ನನ್ನ ಮನಸ್ಸೆಲ್ಲಾ ವಿಕಲವಾಯಿತು. ಓ ದೇವರೆ! ಆಕೆಯ ಗಂಡ ಎಂತಹ ಕೆಲಸ ಮಾಡಿದ! ಮಾನವತೆಯುಳ್ಳ ಮನುಷ್ಯನು ಮಾಡುವ ಕೆಲಸವೇ ಇದು?

''ನನಗೆ ನೀವು ಬಿಟ್ಟರೆ ಮತ್ತಾರು ಆಪ್ತರಿಲ್ಲ. ಈಗ ನಾನು ಏನು ಮಾಡಲಿ ಹೇಳು..''

''ನೀವು ಅವರ ಮೇಲೆ ಮೊಕದ್ದಮೆ ಹಾಕಿ, ನಿಮ್ಮ ಅನುಮತಿ ಇಲ್ಲದೆ ಮತ್ತೊಂದು ಮದುವೆ

ಮಾಡಿಕೊಂಡರೆಂದು.''

ಜಾನಕಿ ದೀರ್ಘಾಲೋಚನೆಯಲ್ಲಿ ಬಿದ್ದಳು.

''ನೀವು ವಿದ್ಯಾವಂತರು. ಆಸ್ತಿ ಉಳ್ಳವರು, ನಿರಾಶೆಪಡಬೇಡಿ'' ಇನ್ನೂ ಏನೋ ಹೇಳಬೇಕೆಂದೆ.

ಅವಳ ತುಟಿಗಳ ಮೇಲೆ ಶುಷ್ಕನಗೆ ಕಂಡಿತು.

''ನಾನು ಅವರ ಮೇಲೆ ಮೊಕದ್ದಮೆ ಹಾಕಿದರೆ ನನಗೆ ಬರುವುದಾದರೂ ಏನು? ಇದ್ದ ಆ ಒಂದು ಆಧಾರವೂ ಕಳೆದು ಹೋಗುವುದಷ್ಟೆ! ನನ್ನ ಮೇಲೆ ಅವರಿಗೆ ಪ್ರೇಮ ಅಭಿಮಾನಗಳಿದ್ದಿದ್ದರೆ ಅವರು ಹೀಗೆ ಯಾಕೆ ಮಾಡುತ್ತಿದ್ದರು? ಈಗ ಅವರು ನನ್ನವರಲ್ಲ. ಈ ಮನೆ ನನಗೆ ಈಗ ಪರರ ಮನೆಯಂತೆ ಕಾಣುತ್ತಿದೆ. ಎಲ್ಲಿಗಾದರೂ ದೂರ ಹೋಗಿ ಒಂಟಿಯಾಗಿ ಜೀವಿಸಬೇಕೆಂದೆನಿಸುತ್ತದೆ.'' ಅವಳ ದುಃಖಕ್ಕೆ ಮೇರೆ ಇಲ್ಲ. ಕಣ್ಣುಗಳಿಂದ ನೀರು ಹರಿದು ಬರುತ್ತಿದೆ.

''ಬೇಡ ಜಾನಕಿ ಬೇಡ. ಒಂಟಿಯಾಗಿ ನೀನು ಜೀವಿಸಲಾರೆ. ನೀನು ಸ್ವಲ್ಪ ಧೈರ್ಯ ವಹಿಸಬೇಕು. ಸಹನೆಯಿಂದ ವರ್ತಿಸಬೇಕು. ನನ್ನ ಆಶ್ರಯ ನಿನಗೆ ಯಾವಾಗಲೂ ಉಂಟು'' ಧೈರ್ಯ ಹೇಳಿದೆ.

ನಾವು ಆಮೇಲೆ ಅನೇಕ ವಿಷಯಗಳನ್ನು ಕುರಿತು ಮಾತನಾಡಿದೆವು. ಆಕೆಯ ಅತ್ತೆಯೂ ಹೊಸ ಸೊಸೆಯನ್ನೇ ಸೇರಿದಳು. ಈಗ ಜಾನಕಿ ಒಂಟಿಯಾಗಿದ್ದಾಳೆ. ನಾನು ಭಾರವಾಗಿ ಹೆಜ್ಜೆಗಳನ್ನು ಹಾಕುತ್ತಾ ನನ್ನ ರೂಮಿಗೆ ಬಂದೆ. ಆ ರಾತ್ರಿ ನನಗೆ ತುಂಬಾ ಹೊತ್ತಿನ ವರೆಗೂ ನಿದ್ದೆ ಬರಲಿಲ್ಲ. ಜಾನಕಿಯನ್ನು ಕುರಿತೇ ಯೋಚನೆ. ದೇವರ ಮೇಲೂ ನನಗೆ ಕೋಪ ಬಂತು. ಅವನು ಎಲ್ಲರಿಗೂ ಯಾವುದಾದರೊಂದು ವ್ಯಸನವಿಟ್ಟಿರುತ್ತಾನೆ.

ಜಾನಕಿಗೆ ಅಂದವಿದೆ.

ಉದ್ಯೋಗವಿದೆ.


ಐಶ್ವರ್ಯವಿದೆ.


ಆದರೆ ಪತಿಪ್ರೇಮ ಇಲ್ಲ, ಸಂತಾನ ಕೊಟ್ಟಿಲ್ಲ.

ತಾಯಿ ತಂದೆಗಳು ಚಿಕ್ಕಂದಿನಲ್ಲೇ ತೀರಿಕೊಂಡರು.

ಕೆಲವರ ಜನ್ಮವೇ ಅಷ್ಟು!

ಅಡಿಗಡಿಗೂ ಮುಳ್ಳುಗಳಿರುವ ರಸ್ತೆ!





ಜಾನಕಿ ಗಂಡ ತನ್ನ ನೂತನ ಹೆಂಡತಿಯೊಂದಿಗೆ ಬೇರೆ ಮನೆಯಲ್ಲಿ ಸನತ್ ನಗರದಲ್ಲಿ ಇದ್ದಾನೆ. ತನಗೆ ಹಣ ಬೇಕಾದಾಗ ಮಾತ್ರ ಜಾನಕಿ ಹತ್ತಿರಕ್ಕೆ ಬಂದು ಹೋಗುತ್ತಾನೆ.

ನನಗೆ ಅಲ್ಲಿಂದ ವರ್ಗವಾಯಿತು. ಆಫೀಸರಾಗಿ ಪ್ರಮೋಷನ್ ಬಂತೆಂದು ಒಂದು ಕಡೆ ಸಂತೋಷ, ಮತ್ತೊಂದು ಕಡೆ ಜಾನಕಿಯಿಂದ ದೂರವಾಗಬೇಕೆಂಬ ದುಃಖ. ಬೇಡವೆಂದರೂ ಕೇಳದೆ ರೈಲು ಸ್ಟೇಷನ್‌ಗೆ ಬಂದು ಕಣ್ಣೀರಿನೊಂದಿಗೆ ನನಗೆ ಸೆಂಡ್‌ಆಫ್ ಕೊಟ್ಟಳು.

ಆಮೇಲೆ ನನಗೆ ಸುಜಾತಳೊಡನೆ ಮದುವೆಯಾಯಿತು. ಆಮಂತ್ರಣಕ್ಕೆ ಅವಳು ಗ್ರೀಟಿಂಗ್ಸ್ ಕಳುಹಿಸಿದಳು.

ಕಾಲಚಕ್ರ ಯಾರಿಗಾಗಿಯೂ ನಿಲ್ಲುವುದಿಲ್ಲ! ದಿನಗಳು ವಾರಗಳಾಗಿ, ವಾರಗಳು ತಿಂಗಳುಗಳಾಗಿ, ತಿಂಗಳುಗಳು ವರ್ಷಗಳಾಗಿ ಬದಲಾಗಿ ಹೋದವು.

ಸುಜಾತಳೊಡನೆ ನನ್ನ ಜೀವನ ಆನಂದಮಯವಾಗಿ ಸಾಗುತ್ತಿತ್ತು. ಮೂವರು ಮಕ್ಕಳು ನಮಗೆ. ಇಷ್ಟು ಕಾಲ ಕಳೆದರೂ ಜಾನಕಿ ನನ್ನ ಹೃದಯದಿಂದ ಮಾಸಿಹೋಗಲಿಲ್ಲ.

''ಸುಜಾತಾ, ಇದು ಜಾನಕಿ ಕಥೆ!''

★ ★

ಹತ್ತು ಹದಿನೈದು ವರ್ಷಗಳು ಉರುಳಿರಬಹುದು.

ಹೈದರಾಬಾದಿನಲ್ಲಿ ನಡೆಯುವ ನಮ್ಮ ಯೂನಿಯನ್ ಮೀಟಿಂಗ್‌ಗೆ ಹಾಜರಾಗಲು ಹೋದೆ. ಜಾನಕಿ ಹೈದರಾಬಾದಿನಲ್ಲೆ ಇದ್ದಾಳೆಂದು ತಿಳಿಯಿತು. ಅವಳ ಗಂಡ ಒಂದು ದುರ್ಘಟನೆಗೆ ಬಲಿಯಾಗಿ ತೀರಿಹೋದರೆಂದು ತಿಳಿಯಿತು. ಅವಳನ್ನು ನೋಡಲೇಬೇಕೆಂಬ ಆತುರ ಜಾಸ್ತಿಯಾಯಿತು.

ಶಾಂತಿನಗರದಲ್ಲಿದ್ದ ಅವಳ ಮನೆಗೆ ಹೋದೆ.

ಮನೆ ಬಾಗಿಲು ಹಾಕಿತ್ತು. ಡೋರ್ ಬೆಲ್ ಮಾಡಿದೆ.

ಬಾಗಿಲು ತೆಗೆದುಕೊಂಡಿತು. ಎದುರಾಗಿ ಹದಿನಾರು ವರ್ಷದ ಹೆಣ್ಣು ಕಾಣಿಸಿಕೊಂಡು,

''ಯಾರು ಬೇಕಾಗಿತ್ತು?'' ಎಂದು ಕೇಳಿದಳು.

''ಜಾನಕಿದೇವಿ...''

''ಇದ್ದಾರೆ...ಒಳಕ್ಕೆ ಬನ್ನಿ...ಅಮ್ಮಾ! ನಿಮಗಾಗಿ ಯಾರೋ ಅಂಕಲ್ ಬಂದಿದಾರೆ'' ಎಷ್ಟು ವಿನಯ ವಿಧೇಯತೆ ಆ ಹುಡುಗಿಗೆ.

ಅವಳ ಕೂಗಿಗೆ ಸ್ತಂಭಿಸಿ ನಿಂತೆ.

'ಅಮ್ಮ....ಅಂದರೆ!'

''ಯಾರು?'' ಎನ್ನುತ್ತಾ ಜಾನಕಿ ಬಂದಳು.

ಎಷ್ಟು ಬದಲಾವಣೆ. ಈಗ ವಿಷಾದ ಛಾಯೆ ಅವಳ ಮುಖದಲ್ಲಿಲ್ಲ. ನಗುತ್ತಾ ಸ್ವಾಗತಿಸಿದಳು.

ಬಿಳಿ ಸೀರೆ... ಬಿಳಿ ಜಾಕೆಟ್ಟು... ಅದೆ ಚಿನ್ನದ ಬಳೆಗಳು. ಮತ್ತಾವ ಅಲಂಕಾರವೂ ಇಲ್ಲ.

''ಎಷ್ಟು ಜನ ಮಕ್ಕಳು?'' ಕೇಳಿದಳು.

ಹೇಳಿದೆ.

''ಸುಜಾತಾ ಮಕ್ಕಳೂ ಬರಲಿಲ್ಲವೆ?'' ಆಪ್ಯಾಯಮಾನದಿಂದ ಕೇಳಿದಳು.

''ಇಲ್ಲ.... ಯೂನಿಯನ್ ಮೀಟಿಂಗ್‌ಗೆ ಬಂದಿದ್ದೆ.''

''ಕಮಲಾ...ಕಾಫಿ ಟಿಫಿನ್ ತೆಗೆದುಕೊಂಡು

ಬಾ'' ಹೇಳಿ, ಎದುರಿಗೆ ಕುರ್ಚಿ ಹಾಕಿಕೊಂಡು ಕುಳಿತಳು.

''ಜಾನಕಿ ನಿನ್ನನ್ನು ನೋಡಿದರೆ ಸಂತೋಷವಾಗಿರುವಂತೆ ಇದೆ.''

''ಹೌದು ಶ್ರೀನಿವಾಸ್. ಈಗ ನನಗೆ ಚಿಂತೆಯೇ ಇಲ್ಲ. ದೊಡ್ಡವನು ಮೆಡಿಕಲ್ ಸೇರಿದಾನೆ. ಹುಡುಗಿಯರಿಬ್ಬರೂ ಇಂಟರ್ ಓದುತ್ತಿದ್ದಾರೆ.''

ನನಗೇನೂ ಅರ್ಥವಾಗದೆ ಅವಳನ್ನೇ ದಿಟ್ಟಿಸಿ ನೋಡುತ್ತಿದ್ದೆ. ದೊಡ್ಡವನು? ಹುಡುಗಿಯರು?

''ಈ ಮಕ್ಕಳು 'ಅಮ್ಮ...ಅಮ್ಮ' ಎನ್ನುತ್ತಾ ನನ್ನನ್ನು ಒಂದು ಕ್ಷಣವೂ ಬಿಟ್ಟಿರುವುದಿಲ್ಲ. ಈ ಬಾಧ್ಯತೆಗಳನ್ನು ನನಗೆ ಒಪ್ಪಿಸಿ ಅವರು ತೀರಿಕೊಂಡರು. ನನ್ನ ಹೊಟ್ಟೆಯಲ್ಲಿ ಹುಟ್ಟಲಿಲ್ಲ, ನಿಜ. ಆದರೆ ನನ್ನ ಗಂಡನ ಮಕ್ಕಳು ನನ್ನ ಮಕ್ಕಳಲ್ಲವೆ? ನೀವೆ ಹೇಳಿ ಶ್ರೀನಿವಾಸ್.''

ಈಗ ಎಲ್ಲಾ ಅರ್ಥವಾಯಿತು.

''ಅವಳು...ಏನಾದಳು?'' ವಿಸ್ಮಯದಿಂದ ಕೇಳಿದೆ.

''ದೂರ ದೇಶದಲ್ಲಿ ಹೊಸ ಸಂಸಾರ; ಹೊಸ ಜೀವನ! ತನ್ನ ಹಳೆಯ ಸ್ನೇಹಿತನನ್ನು ರಿಜಿಸ್ಟರ್ಡ್ ಮದುವೆ ಮಾಡಿಕೊಂಡು ದುಬಾಯ್‌ಗೆ ಹೊರಟು ಹೋದಳು. ಆದ್ದರಿಂದಲೆ ಈ ಮಕ್ಕಳ ಬಾಧ್ಯತೆಯನ್ನು ನಾನು ವಹಿಸಬೇಕಾಯಿತು!''

ನಾನು ಅವಳ ವ್ಯಕ್ತಿತ್ವಕ್ಕೆ, ತ್ಯಾಗಕ್ಕೆ ಸ್ತಂಭೀಭೂತನಾದೆ. ಕಮಲ ಕಾಫಿ ಟಿಫಿನ್ ತಂದಳು.

''ಇವರು ಯಾರಮ್ಮಾ?'' ಕೇಳಿದಳು.

''ನನಗೆ ಒಬ್ಬ ತಮ್ಮ ಇದಾನೆಂದು ಹೇಳುತ್ತಿದ್ದೆನಲ್ಲಾ. ಅವರೇ ಇವರು'' ಜಾನಕಿ ಹೇಳಿದಳು ನಗುತ್ತಾ. ●

ರಾಮನ್ ಪರಿಣಾಮ

ಡಾ. ಸಿ.ವಿ.ರಾಮನ್‌ರವರು ಸ್ಟಾಕ್‌ಹೋಮ್ ನಗರಕ್ಕೆ ಹೋಗಿ ನೊಬೆಲ್ ಬಹುಮಾನವನ್ನು ಸ್ವೀಕರಿಸುವ ಸಂದರ್ಭದಲ್ಲಿ, ಪದ್ಧತಿಯಂತೆ ತಮ್ಮ ಸಂಶೋಧನೆಯನ್ನು ಕುರಿತು ಒಂದು ಉಪನ್ಯಾಸ ನೀಡಿದರು. ಆಗ ಉದಾಹರಣೆಗಾಗಿ ಬೆನ್ಜೀನ್, ಆಲ್ಕೋಹಾಲ್(Alcohol) ಮುಂತಾದ ಕೆಲವು ಸಂಯುಕ್ತಗಳ ಪ್ರಸ್ತಾಪ ಮಾಡಿದರು.

ಸಮಾರಂಭ ಮುಗಿದ ಮೇಲೆ ಬಹುಮಾನ ವಿಜೇತರ ಗೌರವಾರ್ಥ ಒಂದು ಭೋಜನಕೂಟವನ್ನು ಏರ್ಪಡಿಸಿದ್ದರು. ಅಲ್ಲಿ 'ವೈನ್' ನೀಡಿದಾಗ ರಾಮನ್ ಅದನ್ನು ತೆಗೆದುಕೊಳ್ಳಲಿಲ್ಲ. ಅವರು ಎಂದಿಗೂ ಮಾದಕ ಪಾನೀಯಗಳನ್ನು ಸೇವಿಸುವವರಲ್ಲ. ಆದರೆ, ವಿಶೇಷ ಸಮಾರಂಭಕ್ಕೆಂದು ತರಿಸಿದ್ದ ಬಹು ಹಳೆಯ 'ವೈನ್' ಅದು. ಆದುದರಿಂದ ಸ್ವಲ್ಪವಾದರೂ ನೀವು ರುಚಿ ನೋಡಲೇಬೇಕೆಂದು ರಾಮನ್‌ರಿಗೆ ಯಾರೋ ಒಬ್ಬರು ಒತ್ತಾಯ ಪಡಿಸಿದರು.

ಆಗ ಸಿ.ವಿ. ರಾಮನ್ - ''ಆಲ್ಕೋಹಾಲ್ ಮೇಲೆ ರಾಮನ್ ಪರಿಣಾಮ ಏನೆಂಬುದನ್ನು ಇದುವರೆಗೂ ವಿವರಿಸಿದೆ. ಈಗ ರಾಮನ್ ಮೇಲೆ ಆಲ್ಕೋಹಾಲ್ ಪರಿಣಾಮ ಏನೆಂಬುದನ್ನು ತಿಳಿಯುವುದು ನಿಮ್ಮ ಪ್ರಮುಖ ಉದ್ದೇಶವೇನೋ? ಅದಕ್ಕೆ ನಾನು ಆಸ್ಪದ ಕೊಡುವುದಿಲ್ಲ'' ಎಂದರು.

(ಆಧಾರ:- ವಿಜ್ಞಾನಿಗಳೊಡನೆ ರಸನಿಮಿಷಗಳು)

ಸಂಗ್ರಹ: ಶಂಕರಗೌಡ. ವೈ. ಪಾಟೀಲ

ನಿಮ್ಮ ಶಬ್ದ ಭಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಪತ್ತೇಮಾರಿ
   (ಅ) ಹಾಯಿದೋಣಿ
   (ಆ) ಗುಪ್ತಚಾರ
   (ಇ) ಲೂಟಿ
   (ಈ) ಯುದ್ಧದಲ್ಲಿ ಗೆಲುವು
2. ಅಪತ್ರಪೆ
   (ಅ) ಕಾಗದವಿಲ್ಲದಿರುವುದು
   (ಆ) ತಿರುಕಲು ತಿಪ್ಪಿ
   (ಇ) ನಾಚಿಕೆಗೆಟ್ಟ ವಳು
   (ಈ) ಸೋತವಳು
3. ನಿರ್ದಿಷ್ಟ
   (ಅ) ದೋಷವಿಲ್ಲದ
   (ಆ) ಖಚಿತವಾದ
   (ಇ) ಆಕಸ್ಮಾತ್
   (ಈ) ಧೈರ್ಯಹೀನ
4. ಹಾಲಂಗೋಚಿ
   (ಅ) ಉಪದ್ರವಕಾರಿ
   (ಆ) ಮಕ್ಕಳನ್ನು ಆಡಿಸುವವಳು
   (ಇ) ಕೌಪೀನ
   (ಈ) ಗಾಳಿಪಟದ ಬಾಲ
5. ಬಾವುಗ
   (ಅ) ನಂಬಿಗಸ್ತ
   (ಆ) ಗಂಡುಬೆಕ್ಕು
   (ಇ) ಅಕ್ಕನ ಗಂಡ
   (ಈ) ಬಾತಿರುವ
6. ನಾಗವಲ್ಲಿ
   (ಅ) ಹಾವುಗಳ ಸಾಲು
   (ಆ) ವೀಳ್ಯದ ಎಲೆ
   (ಇ) ನಾಗಪೂಜೆ
   (ಈ) ಆನೆಗಳ ಸಾಲು
7. ನಾಡಿಗ
   (ಅ) ನುಡುಕುವವ
   (ಆ) ಕಟ್ಟಿಗೆಯ ವರ್ತಕ
   (ಇ) ಗ್ರಾಮದ ಯಜಮಾನ
   (ಈ) ಗಿಡ ನಡುವಾತ
8. ಮಾಲು
   (ಅ) ಬಾಗಿರು
   (ಆ) ಸ್ಪರ್ಶ
   (ಇ) ಅರಮನೆ
   (ಈ) ಪಕ್ಕ
9. ಮುಕ್ಕಾಗು
   (ಅ) ಬಿಡುಗಡೆಹೊಂದು
   (ಆ) ಮಾತುಬಾರದಾಗು
   (ಇ) ಸ್ವಲ್ಪ ಮುರಿದು
   (ಈ) ಬಹಳ ನಷ್ಟವಾಗು
10. ಮೊಕ್ಕಾಮು
    (ಅ) ಮೌನ
    (ಆ) ಅನಿಶ್ಚಿತತೆ
    (ಇ) ವ್ಯರ್ಥವಾಗಿರುವಿಕೆ
    (ಈ) ತಾತ್ಕಾಲಿಕ ವಾಸಸ್ಥಾನ
11. ಮೊಂಯು
    (ಅ) ತಮಾಷೆ
    (ಆ) ಒಂದು ಜಾತಿಯ ಮಂಗ
    (ಇ) ತಿಕ್ಕು
    (ಈ) ರೂಪಗೆಡು
12. ಶ್ರಾವ್ಯ
    (ಅ) ನಿರ್ಜನತೆ
    (ಆ) ಇಂಪು
    (ಇ) ವಿಪಕ್ಷ
    (ಈ) ನಿಶ್ಶಬ್ದ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಪತ್ತೇಮಾರಿ

(ಅ) ಹಾಯಿ ದೋಣಿ, ಒಂದು ಕೂವೆಯ ದೊಡ್ಡ ದೋಣಿ ಉದಾ: ಪತ್ತೇಮಾರಿಯ ಹಾಗೆ ಬೆಳೆದಿದ್ದಾಳೆ. (ಮರಾಠಿ - ಫತ್ತೇಮಾರೀ)

2. ಅಪತ್ರಪೆ

(ಇ) ನಾಚಿಕೆಗೆಟ್ಟ ಹೆಂಗಸು, ನಿರ್ಲಜ್ಜೆ ಉದಾ: ಅಪತ್ರಪೆಯಾಗಿ ಅವಳು ಅವನನ್ನು ತಬ್ಬಿಕೊಂಡಳು. (ಸಂ. ಅಪತ್ರಪಾ-ಅಪ=ಇಲ್ಲದ+ತ್ರಪಾ=ಲಜ್ಜೆ)

3. ನಿರ್ದಿಷ್ಟ

(ಅ) ಖಚಿತವಾದ, ನಿಶ್ಚಿತವಾದ, ಗೊತ್ತುಮಾಡಿದ; ಅಪ್ಪಣೆಯಾದ. ಉದಾ: ನಿರ್ದಿಷ್ಟ ಮಾಹಿತಿ ಇಲ್ಲ. (ಸಂ.)

4. ಬಾಲಂಗೋಚಿ

(ಈ) ಗಾಳಿಪಟಕ್ಕೆ ಸಮತೋಲನಕ್ಕಾಗಿ ಕಟ್ಟುವ ಬಾಲ ಅಥವಾ ಕಚ್ಚೆ; ತೀರ ನಿಕೃಷ್ಟ ಅನುಯಾಯಿ. ಉದಾ: ಯಜಮಾನನ ಬಾಲಂಗೋಚಿ. (ದೇಶ್ಯ ಬಾಲ+ಗೋಚಿ-ಕಚ್ಚೆ, ಲಂಗೋಟಿ)

5. ಬಾವುಗ

(ಅ) ಗಂಡು ಬೆಕ್ಕು, ಮಾರ್ಜಾಲ. ಉದಾ: ಬಾವುಗದಂತೆ ಕಾದಿದ್ದಾನೆ. (ದೇಶ್ಯ/ಮರಾಠಿ-ಬೋಕಾ)

6. ನಾಗವಲ್ಲಿ

(ಅ) ವೀಳ್ಯದ ಬಳ್ಳಿ, ಎಲೆಬಳ್ಳಿ, ಮದುವೆಯಲ್ಲಿ ಮದುಮಕ್ಕಳಿಂದ ವೀಳೆಯದ ವಿನಿಮಯ. ಉದಾ: ನಾಗವಲ್ಲಿ ಶಾಸ್ತ್ರದೊಡನೆ ಮದುವೆ ಮುಕ್ತಾಯವಾಯಿತು. (ಸಂ.)

7. ನಾಡಿಗ

(ಇ) ಹಳ್ಳಿಯ ಮುಖ್ಯಸ್ಥ, ಊರೊಡೆಯ. ಉದಾ: ನಾಡಿಗಮನೆತನ. (ದೇಶ್ಯ-ನಾಡು=ಪ್ರದೇಶ+ಇಗ)

8. ಮಾಲು

(ಅ) ಬಾಗು, ಓರೆಯಾಗು, ವಾಲು. ಉದಾ: ನ್ಯಾಯಾಧೀಶರ ಅಭಿಪ್ರಾಯ ಅವನತ್ತ ಮಾಲಿತು. (ದೇಶ್ಯ-ಓಲು, ವಾಲು, ತುಳು-ಮಾಲು)

9. ಮುಕ್ಕಾಗು

(ಇ) ಸ್ವಲ್ಪ ಮುರಿದಿರು, ಒಂದೆಡೆ ತುಂಡೆದ್ದಿರು. ಊನವಾಗು. ಉದಾ: ಮುಕ್ಕಾದ ಗಿಂಡಿ. (ದೇಶ್ಯ ಮುಕ್ಕು=ಮೂಲೆ)

10. ಮೊಕ್ಕಾಮು

(ಈ) ತಾತ್ಕಾಲಿಕ ವಾಸಸ್ಥಾನ, ಬೀಡು ಬಿಡುವಿಕೆ. ಉದಾ: ಈ ಸಲ ಮೊಕ್ಕಾಮು ಎಲ್ಲಿ? (ಅರಬ್ಬಿ-ಮುಕಾಂ)

11. ಮೋಜು

(ಅ) ತಮಾಷೆ, ಮಜಾ, ವಿನೋದ, ಮನೋರಂಜನೆ. ಉದಾ: ಇಬ್ಬರೂ ಹೋರಾಡುವಾಗ ಅವಳು ಮೋಜು ನೋಡುತ್ತಿದ್ದಳು. (ಅರಬ್ಬಿ-ಮೌಜ್=ಉತ್ಸಾಹ, ಹುಮ್ಮಸು)

12. ಶ್ರಾವ್ಯ

(ಅ) ಕೇಳಬೇಕಾದ, ಕೇಳಲು ತಕ್ಕುದಾದ, ಇಂಪಾದ. ಉದಾ: ಹಾಡು ಬಲು ಶ್ರಾವ್ಯವಾಗಿತ್ತು. (ಸಂ. ಶ್ರು=ಕೇಳು ಎಂಬುದರಿಂದ)

ನಿಮ್ಮ ಶಬ್ದಶಕ್ತಿ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6–8 ಸರಿಯಿದ್ದರೆ … ಸಾಧಾರಣ

9–10 ಸರಿಯಿದ್ದರೆ … ಉತ್ತಮ

11–12 ಸರಿಯಿದ್ದರೆ … ಅತ್ಯುತ್ತಮ

ಲಿಬಿಯಾವ


ಮಾನವನಿರ್ಮಿತ ಮಹಾ ಸರೋವರ

● ಡಾ. ಕೆ.ಎಸ್. ಪ್ರಕಾಶ್

ಸದಾಕಾಲ ತುಂಬಿಹರಿದು ಮಳೆಗಾಲದಲ್ಲಿ ಪ್ರವಾಹಗಳಿಂದ ಹಾನಿಯನ್ನುಂಟುಮಾಡುವ ಉತ್ತರ ಭಾರತದ ನದಿಗಳಿಗೂ ಮತ್ತು ಮಳೆಗಾಲದಲ್ಲಿ ಮಾತ್ರ ತುಂಬಿಹರಿದು ಬೇಸಿಗೆಯಲ್ಲಿ ಬತ್ತಿಹೋಗುವ ದಕ್ಷಿಣ ಭಾರತದ ನದಿಗಳಿಗೂ ಒಂದು ಬೃಹತ್ ಕಾಲುವೆಯನ್ನು ತೋಡಲು ಹಾಕಿಕೊಂಡ ಯೋಜನೆ ಕೆಲವು ದಶಕಗಳಷ್ಟು ಹಳೆಯದು. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಹಾಗೂ ರಾಜಕಾರಣಿ ಡಾ. ಕೆ.ಎಲ್.ರಾವ್ ಈ ಯೋಜನೆಯನ್ನು ಬೆಂಬಲಿಸಿದರೂ ರಾಜಕೀಯ, ತಾಂತ್ರಿಕ, ಹಾಗೂ ಆರ್ಥಿಕ - ಹೀಗೆ ಅನೇಕ ಸಮಸ್ಯೆಗಳಿಂದಾಗಿ ಈ ಯೋಜನೆಗೆ ತಡೆಹಾಕಲಾಗಿದೆ. ಆದರೆ ಮನಸ್ಸಿದ್ದರೆ ಮಾರ್ಗ ಎಂಬಂತೆ ಲಿಬಿಯಾದಲ್ಲಿ ರೂಪುಗೊಳ್ಳುತ್ತಿರುವ ಮಾನವನಿರ್ಮಿತ ಮಹಾಸರೋವರವನ್ನು ಉದಾಹರಣೆಯಾಗಿಟ್ಟುಕೊಂಡು ಈ ಯೋಜನೆಯ ಗುಣಾವಗುಣಗಳನ್ನು ಕೂಲಂಕಷವಾಗಿ ಪರೀಕ್ಷಿಸುವುದು ಅಪೇಕ್ಷಣೀಯ ಕಾರ್ಯವೆನ್ನಿಸುತ್ತದೆ.

ಲಿಬಿಯಾ, ಉತ್ತರ ಆಫ್ರಿಕಾ ಖಂಡದ ಸಹರಾ ಮರುಭೂಮಿಯ ಅಂಚಿನಲ್ಲಿರುವ ಖನಿಜತೈಲ ಸಂಪನ್ನ ಅರಬ್‌ರಾಷ್ಟ್ರ. ಇದರ ವಿಸ್ತೀರ್ಣ 1.7 ದಶಲಕ್ಷ ಚದರ ಕಿ.ಮೀ. ಮತ್ತು ಮೆಡಿಟರೇನಿಯನ್ ಸಮುದ್ರದುದ್ದಕ್ಕೂ ಹರಡಿರುವ ತೀರಪ್ರದೇಶದ ಉದ್ದ 1600 ಕಿ.ಮೀ.ಗಳು. ಬಹಳಷ್ಟು ಜನರು ತೀರದ ಫಲವತ್ತು ಪ್ರದೇಶದಲ್ಲಿರುವ ಎರಡು ಮುಖ್ಯ ನಗರಗಳಾದ ಬೆಂಘಾಜಿ ಮತ್ತು ಟ್ರಿಪೋಲಿಯಲ್ಲಿ ವಾಸಿಸುತ್ತಾರೆ. (ಚಿತ್ರ ನೋಡಿ). ಮೊದಲಿನಿಂದಲೂ ಲಿಬಿಯಾ ಒಂದು ಕೃಷಿ ಪ್ರಧಾನ ರಾಷ್ಟ್ರ. ರೋಮನ್ ಸಾಮ್ರಾಜ್ಯದ ಕಾಲದಲ್ಲಿ 'ಧಾನ್ಯಕಣಜ' ಎಂದು ಹೆಸರುವಾಸಿಯಾಗಿತ್ತು. ಪೂರ್ವಭಾಗದ ಸಿರೇನಿಯಾ ಮತ್ತು ಪಶ್ಚಿಮಭಾಗದ ಟ್ರೈಪೋಲಿಟಾನಿಯಾ ಪ್ರದೇಶಗಳು ಗೋಧಿ ಹಾಗೂ ವಿವಿಧ ಜಾತಿಯ ಹಣ್ಣುಗಳನ್ನು ಉತ್ಪಾದಿಸುತ್ತವೆ.

ಲಿಬಿಯಾ 1942-43ರವರೆಗೂ ಇಟಲಿಯ ಆಡಳಿತಕ್ಕೊಳಪಟ್ಟಿದ್ದು ಎರಡನೆಯ ಮಹಾಯುದ್ಧಾನಂತರ 1951ರವರೆಗೂ ಬ್ರಿಟಿಷರ ವಶದಲ್ಲಿದ್ದು ನಂತರ ಸ್ವಾತಂತ್ರ್ಯ ಪಡೆಯಿತು. 1961ರಲ್ಲಿ ಖನಿಜತೈಲದ ರಫ್ತು ಆರಂಭಿಸಿದಾಗ ಅದು ದೇಶದ ಆದಾಯದ ಶೇಕಡಾ 40ರಷ್ಟಿದ್ದಿತು. ಇಟಲಿಯ ಆಡಳಿತದಲ್ಲಿದ್ದಾಗ ಇಟಾಲಿಯನ್ನರಿಂದಾಗಿ ಸಾಗುವಳಿ ಪ್ರದೇಶ ದ್ವಿಗುಣಗೊಂಡಿತು. ನಂತರ ಹಿಡುವಳಿಗಳು ಇಟಾಲಿಯನ್ನರಿಂದ ಲಿಬಿ



ಯಾದ ರಾಷ್ಟ್ರವಾಸಿಗಳಿಗೆ ಹಸ್ತಾಂತರಗೊಂಡವು. ಇದರಿಂದಾದ ಪರಿಣಾಮವೆಂದರೆ ಅವೈಜ್ಞಾನಿಕ ಕೃಷಿವಿಧಾನ ಮತ್ತು ಭೂ ಅಂತರ್ಜಲದ ಅತಿಯಾದ ಬಳಕೆಯಿಂದ ಭೂ ಅಂತರ್ಜಲಪಾತಳಿಯ ಮಟ್ಟದಲ್ಲಿ ಕಳವಳದ ಕುಸಿತ. ಅತಿಕಡಿಮೆ ಮಳೆ ಮತ್ತು ಅತಿಹೆಚ್ಚು ಬಾಷ್ಪೀಕರಣದ ಪರಿಣಾಮವಾಗಿ ಲಿಬಿಯಾ ಯಾವತ್ತೂ ತನ್ನ ಜಲಸಂಪತ್ತನ್ನು ಅತಿ ಜಾಗರೂಕತೆಯಿಂದ ಬಳಸಬೇಕಾದ ಸನ್ನಿವೇಶವಿರುತ್ತದೆ. ಆದ್ದರಿಂದ ಈ ದೇಶ ಮಳೆ ನೀರನ್ನು ಅಣೆಕಟ್ಟುಗಳು, ಕೆರೆಗಳು ಮತ್ತು ತೀರಪ್ರದೇಶದಲ್ಲಿರುವ ಬಾವಿಗಳಿಂದ ಕಾಪಾಡಿಕೊಂಡು ಬಂದಿತ್ತು. ಆದರೆ ನಗರಗಳ ಲಂಗುಲಗಾಮಿಲ್ಲದ ಬೆಳವಣಿಗೆ ಮತ್ತು 1969ರಲ್ಲಿ ಆಡಳಿತ ವಹಿಸಿಕೊಂಡ ಗಡಾಫಿಯ ಕ್ರಾಂತಿಕಾರಿ ಸರಕಾರ ಕೃಷಿಗೆ ನೀಡಿದ ಪ್ರೋತ್ಸಾಹದಿಂದಾಗಿ ನಾಜೂಕಾಗಿದ್ದ ಜಲಸಂಪತ್ತಿನ ಸ್ಥಿತಿ ಕಳವಳಕಾರಿ ಹಂತ ತಲಪಿತು.


ಹೀಗೆ ತೀರಪ್ರದೇಶದ ಜಲಸಂಪತ್ತು ಸರಕಾರ ಹಾಕಿಕೊಂಡ ಕೃಷಿ ಅಭಿವೃದ್ಧಿ ನೀತಿಗೆ ನೆರವು ನೀಡಲು ಅಸಮರ್ಥವಾದಾಗ ಸರಕಾರದ ದೃಷ್ಟಿ ಸಹರಾ ಮರುಭೂಮಿಯ ಕಡೆಗೆ ಹರಿಯಿತು. ಮೂವತ್ತರಿಂದ ಅರವತ್ತು ಸಹಸ್ರ ವರ್ಷಗಳ ಹಿಂದೆ ಸಹರಾ ಮರುಭೂಮಿಯ ವಾತಾವರಣ ಭಿನ್ನವಾಗಿದ್ದು ಭೂ ಅಂತರ್ಜಲರೂಪದಲ್ಲಿ ಶೇಖರವಾದ ಭಾರಿ ಪ್ರಮಾಣದ ಪಳೆಯುಳಿಕೆ ನೀರನ್ನು ಐವತ್ತರ ದಶಕದಲ್ಲಿ ಖನಿಜತೈಲ ನಿಕ್ಷೇಪವನ್ನು ಅರಸುತ್ತಿದ್ದ ಭೂ ವಿಜ್ಞಾನಿಗಳ ತಂಡವೊಂದು ಶೋಧಿಸಿತು. ಬೃಹತ್ ಮಧ್ಯ ಬಿಂದು ತುಂತುರು ನೀರಾವರಿ ಸಾಧನಗಳಿಂದ ಪಳೆಯುಳಿಕೆ ಜಲವನ್ನು ಉಪಯೋಗಿಸಿ ದಕ್ಷಿಣದ ಸಹರಾ ಮರುಭೂಮಿಯಲ್ಲಿಯೇ ಧಾನ್ಯ ಬೆಳೆಗಳನ್ನು ಬೆಳೆಯಬಹುದೆಂಬ ಒಂದು ತಾಂತ್ರಿಕ ಸಲಹೆಯನ್ನು ಸರಕಾರಕ್ಕೆ ನೀಡಲಾಯಿತು. ನಂತರ ಪಶುಪಾಲನೆಗೆ ಮೇವುಬೆಳೆಗಳನ್ನು ಬೆಳೆಯಲು ನಿರ್ಧರಿಸಿ ಅದನ್ನು 1970ರ ವೇಳೆಗೆ ಮತ್ತೆ ಧಾನ್ಯ ಬೆಳೆಗಳಿಗಾಗಿ ಉಪಯೋಗಿಸಲು ಯೋಜಿಸಲಾಯ್ತು.

ಕಟ್ಟಕಡೆಗೆ 1980ರ ವೇಳೆಗೆ ಒಂದು ಹೊಸ ಯೋಜನೆಯ ದಿಟ್ಟ ನಿರ್ಧಾರವನ್ನೇ ಕೈಕೊಳ್ಳಲಾಯಿತು. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ: ಪ್ರತಿದಿನವೂ ನೈಋತ್ಯದಿಂದ ಒಂದು ದಶಲಕ್ಷ ಘನಮೀಟರ್ ನೀರನ್ನೂ ಆಗ್ನೇಯ ಪ್ರದೇಶದಿಂದ ಎರಡು ದಶಲಕ್ಷ ಘನಮೀಟರ್ ಜಲವನ್ನೂ, ಪಳೆಯುಳಿಕೆ ಜಲಸ್ತರಗಳಿಂದ ಸಂಗ್ರಹಿಸಿ ನಾಲ್ಕು ಮೀಟರ್ ವ್ಯಾಸವುಳ್ಳ ಕೊಳವೆಗಳ ಮುಖಾಂತರ 1900 ಕಿ.ಮೀ. ದೂರದಲ್ಲಿರುವ ತೀರ ಪ್ರದೇಶಕ್ಕೆ ಸರಬರಾಜು ಮಾಡುವುದು. ಈ ಯೋಜನೆಯಿಂದ ಲಿಬಿಯಾದ ಮುಂದಿನ 50 ವರ್ಷಗಳಲ್ಲಿನ ನೀರಿನ ಬೇಡಿಕೆಯನ್ನು ಪೂರೈಸಲಾಗುವುದೆಂದು ಅಂದಾಜು ಮಾಡಲಾಗಿದೆ. ಈ ನೀರಿನ ಪ್ರಮಾಣವನ್ನು ಈಜಿಪ್ಟ್ ದೇಶದ ನೈಲ್ ನದಿಯಲ್ಲಿ ಪ್ರತಿವರ್ಷವೂ ಹರಿಯುವ ನೀರಿನ ಪ್ರಮಾಣಕ್ಕೆ ಹೋಲಿಸಲಾಗಿದೆ. ಇದರ ಮೊದಲ ಹಂತಕ್ಕೆ ತಗಲುವ ಖರ್ಚು 3.3 ದಶಕೋಟಿ ಡಾಲರ್‌ಗಳಾಗಿದ್ದು ಈ ವರ್ಷವೇ ನೀರು 900 ಕಿ. ಮೀ ದೂರದ ಮೆಡಿಟರೇನಿಯನ್ ತೀರಪ್ರದೇಶಕ್ಕೆ ತಲುಪುವ ನಿರೀಕ್ಷೆ ಇದೆ. ತಾಂತ್ರಿಕ ಸಂಕೀರ್ಣತೆ, ಮರುಭೂಮಿಯ ಮೇಲ್ಮೈಲಕ್ಷಣ, ತೀರಪ್ರದೇಶದ ಲವಣಯುಕ್ತ ಜೌಗುಮಣ್ಣು, ಮರಳು ದಿಣ್ಣೆಗಳ ಸರಿಯುವಿಕೆ, ಭೂಸವಕಳಿ ಹಾಗೂ ಭೋರ್ಗರೆವ ದಿಘೀರ್ ಪ್ರವಾಹ ಇವೆಲ್ಲ ಮಾನವನ ಕರ್ತೃತ್ವಶಕ್ತಿಗೆ ಎಸೆದ ಸವಾಲು ಸಣ್ಣದೇನಲ್ಲ.

ಅಮೆರಿಕದ ತಾಂತ್ರಿಕ ಸಲಹೆಗಾರರಾದ ಹೂಸ್ಟನ್ ನಗರದ ಬ್ರೌನ್ ಅಂಡ್ ರೂಟ್ ಕಂಪೆನಿ ಆಳವಾದ ಅಧ್ಯಯನ ನಡೆಸಿದ್ದರ ಫಲವಾಗಿ 1981ರಲ್ಲಿ ಸರಕಾರ ಪೂರ್ವದೃಢೀಕೃತ ಕಾಂಕ್ರೀಟ್ ಕೊಳವೆಗಳನ್ನು ತಯಾರಿಸುವ ಸಂಯುಕ್ತ ಅಮೆರಿಕದ ಪ್ರೈಸ್ ಮತ್ತು ಸಹೋದರರ ಕಂಪೆನಿ ಹಾಗೂ ದಕ್ಷಿಣ ಕೋರಿಯಾದ ಡೊಂಗ್ ಆಹ್ ಕಂಪೆನಿಗಳ ಜಂಟೀ ಯೋಜನೆಗೆ ಅಂಗೀಕಾರ ನೀಡಿತು. ಈ ವಹಿವಾಟು ಜಗತ್ತಿ

ನಲ್ಲೇ ಒಬ್ಬ ಗುತ್ತಿಗೆದಾರನಿಗೆ ವಹಿಸಿಕೊಟ್ಟ ಅತಿ ದೊಡ್ಡ ಯೋಜನೆಯಾಗಿದೆ. ಈ ಕರಾರಿನ ಪ್ರಕಾರ ಆರಂಭದಲ್ಲಿ ದೊಂಗ್ ಆಹ್ ಕಂಪೆನಿಯು ನೀರ್ಗೊಳವೆ ಮಾರ್ಗದಲ್ಲಿ ಮುಖ್ಯವಾದ ಎಡೆಗಳಲ್ಲಿ ಕಾಂಕ್ರೀಟ್ ಕೊಳವೆಗಳನ್ನು ತಯಾರಿಸುವ ಎರಡು ಬೃಹತ್ ಕಾರ್ಖಾನೆಗಳನ್ನು ಸ್ಥಾಪಿಸಬೇಕಿತ್ತು. ನಂತರದ ಹಂತಗಳೆಂದರೆ: 250,000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನಾಲ್ಕು ಮೀಟರ್ ಆಂತರಿಕ ವ್ಯಾಸವುಳ್ಳ ಪೂರ್ವದೃಢೀಕೃತ ಬೃಹತ್ ಕಾಂಕ್ರೀಟ್ ಕೊಳವೆಗಳನ್ನು ತಯಾರಿಸುವುದು, 1900 ಕಿ. ಮೀ. ಉದ್ದದ ಹಾದಿಯಲ್ಲಿ ಕೊಳವೆಗಳನ್ನು ಜೋಡಿಸುವುದು, ತಜೇರ್ಬೋ ಮತ್ತು ಸರೀರ್ ಎಂಬ ಸ್ಥಳಗಳಲ್ಲಿ (ಚಿತ್ರನೋಡಿ) ತಾತ್ಕಾಲಿಕ ಬೃಹತ್ ತೊಟ್ಟಿಗಳನ್ನು ನಿರ್ಮಿಸುವುದು, ಮತ್ತು ತೀರ ಪ್ರದೇಶದ ಅಜಾಬಿಯಾ ಎಂಬಲ್ಲಿ ನಾಲ್ಕು ದಶಲಕ್ಷ ಘನ ಮೀಟರ್ ಸಾಮರ್ಥ್ಯವುಳ್ಳ ಒಂದು ಜಲಾಶಯದ ನಿರ್ಮಾಣ. ಅಂತಿಮವಾಗಿ ಒಂದು ವರ್ಷಕಾಲ ಪೂರ್ಣ ನೀರು ಸರಬರಾಜು ಸಂಕೀರ್ಣವನ್ನು ತೊಂದರೆಯಿಲ್ಲದಂತೆ ಕಾರ್ಯಗತಗೊಳಿಸಿದ ನಂತರ ಲಿಬಿಯಾ ಸರಕಾರದ ಸರೋವರ ನಿಗಮದ ವಶಕ್ಕೆ ವಹಿಸಿಕೊಡಬೇಕು.

ಪ್ರೈಸ್ ಸಹೋದರರ ಕಂಪೆನಿಯು ಈ ಯೋಜನೆಯಲ್ಲಿ ಸಹಕಾಂಟ್ರಾಕ್ಟುದಾರರಾಗಿದ್ದು ಪೂರ್ವದೃಢೀಕೃತ ಕಾಂಕ್ರೀಟ್ ಪೈಪ್ ತಯಾರಿಸುವ ಯಂತ್ರಗಳ ಸರಬರಾಜಿಗೆ ಹಾಗೂ ಚರಿತ್ರೆಯಲ್ಲೇ ಅದ ದೊಡ್ಡ ನೀರ್ಗೊಳವೆ ಮಾರ್ಗದ ತಾಂತ್ರಿಕ ಸಲಹೆಗೆ ಹೊಣೆಗಾರರು. 1985ರಲ್ಲಿ ಅಮೇರಿಕಾ ಮತ್ತು ಕೆನಡಾಗಳಲ್ಲಿ ತಯಾರಿಸಿದ ಯಂತ್ರಗಳನ್ನು ಭಾರಿ ಹಡಗುಗಳಲ್ಲಿ ಸಾಗಿಸಲಾಯಿತು. ಇದೇ ವೇಳೆಯಲ್ಲಿ ದೊಂಗ್ ಆಹ್ ಕಂಪೆನಿಯ ಇಂಜನಿಯರುಗಳಿಗೆ ಒಹಾಯೋ ಮತ್ತು ಮಿಸಿಸಿಪ್ಪಿ ಪ್ರಾಂತ್ಯಗಳಲ್ಲಿರುವ ಪ್ರೈಸ್ ಸಹೋದರರ ಕಾರ್ಖಾನೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಈ ನಿರ್ಮಾಣಕ್ಕೆ ಬೇಕಾಗುವ ಪ್ರತಿಯೊಂದು



ಯಂತ್ರದ ಬಿಡಿಭಾಗಗಳು, ಕ್ರೇನ್‌ಗಳು, ಟ್ರಕ್‌ಗಳು ಹಾಗೂ ಭಾರಿ ಕೊಳವೆಗಳನ್ನು ಎತ್ತಿಡಲು, ಸಾಗಿಸಲು ಮತ್ತು ಜೋಡಿಸಲು ಬೇಕಾದ ಉಪಕರಣಗಳನ್ನು ಸಂಗ್ರಹಿಸಲಾಯಿತು.

1986ರ ಅಂತಿಮವೇಳೆಯಲ್ಲಿ ಸಿದ್ಧತೆಗಳೆಲ್ಲವೂ ಮುಗಿದು 1500 ಕಿ.ಮೀ. ಉದ್ದದ ರಸ್ತೆಯ ನಿರ್ಮಾಣ ಕೂಡ ಪೂರ್ತಿಯಾಗಿದ್ದಿತು. ಎರಡನೆಯ ಜಾಗತಿಕ ಯುದ್ಧದಲ್ಲಿ ನೆಲದಲ್ಲಿ ನೆಟ್ಟಿದ್ದ ಸಿಡಿಮದ್ದುಗಳನ್ನು ಕಿತ್ತು ನಾಶಗೊಳಿಸಲಾಯಿತು. ಕೊಳವೆ ನಿರ್ಮಾಣಕ್ಕೆ ಬೇಕಾದ ಯಂತ್ರಗಳು ಹಾಗೂ ಉಪಕರಣಗಳನ್ನು ಪರೀಕ್ಷಿಸಿ ಬಳಕೆಗೆ ಸಿದ್ಧಗೊಳಿಸಲಾಯಿತು.

ಡೊಂಗ್ ಆಹ್ ಕಂಪೆನಿಯ ತಂತ್ರಜ್ಞರು ಏಳು ಮೀಟರ್ ಆಳದ ಕಂದಕದಲ್ಲಿ ಬೃಹತ್ ಕ್ರೇನ್‌ಗಳನ್ನು ಉಪಯೋಗಿಸಿ ಪ್ರತಿ ಹದಿನೈದು ನಿಮಿಷಕ್ಕೆ 70 ಟನ್ ಭಾರವುಳ್ಳ ಕೊಳವೆಯ ಒಂದು ತುಂಡನ್ನು ಕೊಳವೆ ಮಾರ್ಗಕ್ಕೆ ಅಳವಡಿಸಲು ಯೋಜಿಸಿದರು. ಇದೇ ಗತಿಯಲ್ಲಿ ಐದು ಜೋಡಣೆ ತಂಡಗಳು ಪೂರ್ಣ ಕೊಳವೆ ಮಾರ್ಗವನ್ನು ನಿರ್ಮಿಸಲು ನಾಲ್ಕು ವರ್ಷಗಳು ಬೇಕಾಗುವುದೆಂದು ಲೆಕ್ಕ ಹಾಕಲಾಯಿತು.

ತೀರ ಪ್ರದೇಶದ ಬ್ರೇಗಾ ಮತ್ತು ಸಹರಾ ಮರುಭೂಮಿಯ ಒಳನಾಡಿನಲ್ಲಿರುವ ಸರೀರ್‌ಗಳಲ್ಲಿ ಕೊಳವೆ ತಯಾರಿಸುವ ಎರಡು ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ. ಸರೀರ್‌ನಲ್ಲಿ ನಾಲ್ಕು ಮೀಟರ್ ವ್ಯಾಸದ ಕೊಳವೆಗಳನ್ನಲ್ಲದೆ

ಗಂಗಾ-ಕಾವೇರಿ ಕೈಗೂಡದ ಕನಸು!

ದಕ್ಷಿಣ ಭಾರತದಲ್ಲಿ ಮುಂಗಾರು ಮುನಿಸಿಕೊಂಡ ವೇಳೆಯಲ್ಲಿಯೇ ಉತ್ತರದಲ್ಲಿ ಅತಿವೃಷ್ಟಿ ತಾಂಡವವಾಡುತ್ತಿರುತ್ತದೆ. ಜೀವನದಿ ಜಾಹ್ನವಿಯಂತೂ ತನ್ನ ಪಾತ್ರವನ್ನು ಅಷ್ಟಗಲ ಹಿಗ್ಗಿಸಿ ಜೀವಸಂಕುಲಕ್ಕೆ ಸವಾಲೆಸೆದಿರುತ್ತಾಳೆ. ಇಂಥ ವೈಪರೀತ್ಯವನ್ನು ಧನಾತ್ಮಕ ಪರಿವರ್ತನೆಗೊಡ್ಡುವುದೇ ಗಂಗಾ-ಕಾವೇರಿ ಜೋಡಣೆ.

ಈ ಯೋಜನೆಯ ಗಾತ್ರ, ಮತ್ತು ವಿಳಂಬ ನೇರ ಅನುಪಾತದಲ್ಲಿ ನಿಲ್ಲುತ್ತವೆ; ಯೋಜನೆಯ ಉದ್ದದಷ್ಟೇ ದೀರ್ಘವಾದುದು ನೆನೆಗುದಿಯ ಅವಧಿ! ಶತಮಾನಕ್ಕೂ ಹಿಂದೆಯೇ ರೂಪಿಸಲ್ಪಟ್ಟ ಈ ಯೋಜನೆ ಸರ್ ಆರ್ಥರ್ ಕಾಟನ್‌ನ ಮಿದುಳ ಕೂಸು. ಭಾರತದ ನದಿಗಳೆಲ್ಲವನ್ನೂ ಒಗ್ಗೂಡಿಸಿ ಸಾಗಣೆಗಾಗಿ ಜಲಮಾರ್ಗವನ್ನೇ ಬಳಸುವ ಉದ್ದೇಶವನ್ನು ಈ ಯೋಜನೆ ಹೊಂದಿತ್ತು. ಆ ಸಂದರ್ಭದಲ್ಲಿ ರೈಲು ಮಾರ್ಗವೇ ಮೇಲುಗೈ ಸಾಧಿಸಿದ್ದರಿಂದ ಜಲಮಾರ್ಗ ನೀರುಪಾಲಾಯ್ತು! ಅನಂತರ ವಿಶ್ವೇಶ್ವರಯ್ಯನವರು ದಿವಾನರಾದಾಗ ಗಂಗಾ-ಕಾವೇರಿಯನ್ನು ಬೆಸೆಯುವ ಬಗ್ಗೆ ಪ್ರತಿಪಾದಿಸಿದರು. ನೆಹರೂ ಸಹ ಮೆಚ್ಚಿದರು. ಮುಂದೆ ಮುಂಬಯಿಯ ದಸ್ತೂರ್ ಅಂಡ್ ಕಂಪನಿಯವರು ಸಂಪೂರ್ಣ ರೂಪುರೇಷೆ ತಯಾರಿಸಿದರು. 1972ರಲ್ಲಿ ಡಾ. ಕೆ. ಎಲ್. ರಾವ್ ಅವರು ಚಾಲನೆ ನೀಡಲು ಯತ್ನಿಸಿದರು. ಆದರೆ ಯೋಜನೆಯ ಒಂದಂಶವೂ ಹಾಳೆಯಿಂದ ನೆಲಕ್ಕೆ ಜಿಗಿಯಲಿಲ್ಲ!

ಎರಡೂವರೆ ಸಾವಿರ ಕಿಲೋಮೀಟರು ಉದ್ದದ ಗಂಗಾ-ಕಾವೇರಿ ಯೋಜನೆಯ ಆರಂಭ ಬಿಂದು ಪಾಟ್ನಾ. ಈ ಪಟ್ಟಣದ ಬಳಿ ಗಂಗೆಯನ್ನು ಹಿಡಿದು ನಿಲ್ಲಿಸಲಾಗುತ್ತದೆ. ಅಲ್ಲಿಂದ ಹಂತಹಂತವಾಗಿ ಹರಿಯುತ್ತ, ಜಲಾಶಯಗಳನ್ನು ತುಂಬುತ್ತ, ಅಕ್ಕ ಪಕ್ಕ ಹಸಿರು ಉಕ್ಕಿಸುತ್ತ ಅಂತಿಮವಾಗಿ ಗಂಗೆ ಕಾವೇರಿಯನ್ನು ತಬ್ಬಬೇಕು. ಈ ದೀರ್ಘ ನಡಿಗೆಯ ಹಾದಿ 2,500 ಕಿ. ಮೀ. ಆಗುತ್ತದೆ. ಇದು ಪೂರ್ಣ ಸಂಪರ್ಕ ಕಾಲುವೆಯ ಉದ್ದವಲ್ಲ. ಮಾರ್ಗ ಮಧ್ಯೆ ಅಸ್ತಿತ್ವದಲ್ಲಿರುವ ನದಿಗಳ ಪಾತ್ರವನ್ನೇ ಬಳಸುವುದರಿಂದ ಒಂದೂವರೆ ಸಾವಿರ ಕಿಲೋಮೀಟರು ಕಾಲುವೆಯ ಉದ್ದ ಉಳಿತಾಯವಾಗುತ್ತದೆ. ಒಳನಾಡಿನ ಜಲಮಾರ್ಗವನ್ನು ಗಮನದಲ್ಲಿರಿಸಿಕೊಂಡಿರುವ 1972ರ

1.6 ಮೀ, 2 ಮೀ, ಮತ್ತು 2.8 ಮೀಟರ್ ವ್ಯಾಸಗಳುಳ್ಳ ಕೊಳವೆಗಳನ್ನು ತಯಾರಿಸುವ ಘಟಕಗಳನ್ನೂ ಸ್ಥಾಪಿಸಲಾಗಿದೆ. ಕೊಳವೆ ತಯಾರಿಸುವ ಘಟಕಗಳ ಉದ್ದ 2.5 ಕಿ.ಮೀ.ಗಳಾಗಿದ್ದು ಪೈಪುಗಳನ್ನು ಸಾಗಿಸಲು ರೈಲು ಮಾರ್ಗದಲ್ಲಿ ಚಲಿಸುವ ಕ್ರೇನ್‌ಗಳನ್ನು ಉಪಯೋಗಿಸಲಾಗುತ್ತವೆ. ಈ ಕ್ರೇನ್‌ಗಳು ವಾಯುಚಾಲಿತೆ ಇಕ್ಕುಳಗಳಿಂದ ಪೈಪುಗಳನ್ನು ಹಿಡಿದು ಘಟಕದ ಹೊರ ಕೊಂಡೊಯ್ಯುತ್ತವೆ. ತಯಾರಿಕೆ ಘಟಕಗಳಿಂದ 70 ಟನ್ ಭಾರದ ಕೊಳವೆಗಳು ಹೊರಬರುತ್ತಲೇ, ಭಾರೀ ಟ್ರಕ್‌ಗಳಲ್ಲಿ ಇವುಗಳನ್ನು ಕೊಳವೆ ಜೋಡಿಸುವ ಜಾಗಕ್ಕೆ ಸ್ಥಳಾಂತರಿಸಲಾಗುತ್ತದೆ.

ಕೊಳವೆಗಳನ್ನು ತಯಾರಿಸುವ ಘಟಕಗಳಲ್ಲಿ ಗುಣಮಟ್ಟ ಪರಿಶೀಲನೆಗೆ ಆದ್ಯತೆ ನೀಡಲಾಗಿದ್ದು, ಕರೊರ್ ಮರುಭೂಮಿ ವಾತಾವರಣದಲ್ಲಿ ದೀರ್ಘಕಾಲ ತೊಂದರೆಯಿಲ್ಲದಂತೆ ಬಾಳುವ ಕೊಳವೆಗಳನ್ನು ಉಪಯೋಗಿಸಲಾಗುತ್ತಿದೆ. ಬಹಳಷ್ಟು ಕೊಳವೆ ಮಾರ್ಗ ನೇರವಾಗಿದ್ದು ಕೆಲವೆಡೆ ವಿಶೇಷ ಭಾಗಗಳನ್ನೂ, ಹಾಗೂ ಜೋಡಣೆಗಳನ್ನೂ ಅಳವಡಿಸಲಾಗಿದೆ. ಇವುಗಳಿಗೆ ವಿಶೇಷ ತಾಂತ್ರಿಕತೆ, ಕರಾರುವಾಕ್ಕು ಯೋಜನೆ ಮತ್ತು ವಿಶೇಷ ಸಾಮಗ್ರಿಗಳನ್ನು ಉಪಯೋಗಿಸಲಾಗಿದೆ. ಈ ಎಡೆಗಳಲ್ಲಿ ಪೂರ್ಣ ಉಕ್ಕಿನಿಂದ ತಯಾರಿಸಲ್ಪಟ್ಟ ಕೊಳವೆಗಳನ್ನು ಜೋಡಿಸಲಾಗಿದೆ. ಕ್ಷಾರದಿಂದಾಗುವ ಕೊರೆತವನ್ನು ನಿವಾರಿಸಲು ಹೊರ ಮತ್ತು ಒಳಬದಿಗ



ಗಂಗಾ-ಕಾವೇರಿ ಮಾರ್ಗ

ಗಂಗಾ-ಕಾವೇರಿ ಸಂಪರ್ಕ ಕಾಲುವೆಯ ನೀಲನಕ್ಷೆಯ ಪ್ರಕಾರ ನಾಲೆ 75 ಮೀಟರು ಅಗಲವೂ, 20 ಮೀ. ಆಳವೂ ಇರುತ್ತದೆ.

ಯೋಜನೆಯ ಕನಸಿನ ಗಂಟು ನಿಜದಲ್ಲೂ ದಕ್ಕಿದ್ದೇ ಆದರೆ ಭಾರತದ ಹತ್ತು ರಾಜ್ಯಗಳ ಬರಗಾಲದ ದಾಹ ನೀಗಲು ಸಾಧ್ಯ. ಒಂದು ಕೋಟಿ ಎಕರೆ ಭೂಮಿಯಲ್ಲಿ ಹಸಿರು ಹಾಸಿಕೊಳ್ಳುತ್ತದೆ.

ಈ ಯೋಜನೆಯ ಅನುಷ್ಠಾನದ ಕಾಲಮಿತಿ ಸುಮಾರು 30 ವರ್ಷಗಳು. ಕಾರ್ಯಗತಕ್ಕೆ ಕೈ ಹಾಕುವ ಮುಂಚೆ 10 ವರ್ಷಗಳ ಪೂರ್ವಭಾವಿ ಅಧ್ಯಯನದ ಅಗತ್ಯವಿದೆ.

ಇಂಥದೊಂದು ಬೃಹತ್ ಯೋಜನೆ ಕುರಿತು ಸರ್ಕಾರದ ನಿಲುವು ಅಷ್ಟಗೋಡೆ ಮೇಲಿನ ದೀಪದಂತಿದೆ. ಕೈಗೆತ್ತಿಕೊಳ್ಳುತ್ತಲೂ ಇಲ್ಲ, ತಿರಸ್ಕರಿಸುತ್ತಲೂ ಇಲ್ಲ. ದೇವನೂರು, ತೇಜಸ್ವಿ, ಲಂಕೇಶ್, ಶಿವರುದ್ರಪ್ಪ, ರಾಮದಾಸ್, ಕೇಶವಮೂರ್ತಿ, ಪ್ರಸನ್ನ ಮುಂತಾದವರು ಪ್ರಧಾನಿಗೆ ಮನವಿ ಸಲ್ಲಿಸಿ ಗಂಗಾ-ಕಾವೇರಿಗೆ ಜೀವ ತುಂಬಲು ಪ್ರಯತ್ನಿಸಿದ್ದಾರೆ. ಅಮೆರಿಕದ ಅನಿವಾಸಿ ಭಾರತೀಯರು ಗಂಗಾ-ಕಾವೇರಿ ಜೋಡಣೆಗಾಗಿ ಒತ್ತಾಯಿಸಿ ಮಿಚಿಗನ್‌ನಲ್ಲಿ 100 ಕಿ.ಮೀ. ಪಾದಯಾತ್ರೆ ಮಾಡಿ; ಯೋಜನೆಯನ್ನು ಪ್ರತಿಪಾದಿಸಲೆಂದೇ 'ಗಂಗಾಯನ' ಎಂಬ ಪತ್ರಿಕೆಯನ್ನು ಹೊರತಂದಿದ್ದಾರೆ.

ಪುರಾಣದ ಭಗೀರಥ ಸ್ವರ್ಗನದಿ ಗಂಗೆಯನ್ನು ಧರೆಗೆ ಇಳಿಸಿದ್ದಾಗಿದೆ. ಉತ್ತರದ ಗಂಗೆಯನ್ನು ದಕ್ಷಿಣಕ್ಕೆ ಕರೆತರುವ ಆಧುನಿಕ ಭಗೀರಥ ಎಲ್ಲಿ?

● ತಿಂಗಳೇಶ

ಳಲ್ಲಿ ಸಿಮೆಂಟ್‌ಭರಿತ ಗಾರೆಯ ಲೇಪನ ಹಾಕಲಾಗಿದೆ.

ಕಂದಕಗಳನ್ನು ಬಂಡೆ, ಮರಳು ಹಾಗೂ ಲವಣಯುಕ್ತ ಭೂಮಿಗಳಲ್ಲಿ ಕೊರೆಯಲಾಗುತ್ತದೆ. ಕ್ಷಾರಯುಕ್ತ ಮಣ್ಣು ಇರುವಲ್ಲಿ ಕೊಳವೆಗಳಿಗೆ ಎಪಾಕ್ಸಿ ಲೇಪನ ಹಾಕಲಾಗುತ್ತದೆ. ನೀರು ಹೊರಚಿಮ್ಮುವೆಡೆ ನೀರನ್ನು ಪಂಪ್ ಮಾಡಿ ಹೊರಹಾಕಲಾಗುತ್ತದೆ. ಪೈಪ್‌ಗಳನ್ನು ಕಂದಕದಲ್ಲಿ ವಿಶೇಷವಾಗಿ ತಯಾರಿಸಿದ ಹಾಸಿನ ಮೇಲೆ ಕ್ರೇನ್‌ಗಳನ್ನು ಉಪಯೋಗಿಸಿ ನಾಜೂಕಾಗಿ ಇರಿಸಿ ಬುಲ್‌ಡೋಜರ್‌ಗಳಿಂದ ದೂಡಿ ಜಾಯಿಂಟ್‌ಗಳನ್ನು ಹಾಕಲಾಗುತ್ತದೆ. ನಂತರ ಪ್ರತಿ 40 ಕಿ. ಮೀ. ಉದ್ದದ ಭಾಗದುದ್ದಕ್ಕೂ ಸ್ಥಿರಜಲಒತ್ತಡದ ಪರೀಕ್ಷೆ ನಡೆಸಲಾಗುತ್ತದೆ.

ತಜೇರ್ಬೋ ಹಾಗೂ ಸರೀರ್ ತೊಟ್ಟಿಗಳಿಂದ ಒತ್ತಡದಿಂದ ನೂಕಲ್ಪಟ್ಟು, ಅಜಾಬಿಯಾ ಜಲಾಶಯಕ್ಕೆ ಪ್ರತಿದಿನಕ್ಕೆ ಎರಡು ದಶಲಕ್ಷ ಘನಮೀಟರಿನ ಪ್ರಮಾಣದ ನೀರು ಬಂದು ಶೇಖರವಾಗುವುದೆಂದು ಅಂದಾಜು ಮಾಡಲಾಗಿದೆ. ಮುಂದೆ ಆಗುವ ಜಲ ವಿತರಣೆಗಾಗಿ ಬೂಸ್ಟರ್ ಪಂಪ್ ಠಾಣೆಗಳನ್ನು ಯೋಜಿಸಲಾಗಿದೆ.

ಅಜಾಬಿಯಾ ಜಲಾಶಯಕ್ಕೆ ಮೊಟ್ಟಮೊದಲ [illegible] ನವೆಂಬರ್ 1989ರಲ್ಲಿ ನೀರು ಹಾಯಿಸಲಾಯಿತು. ಈ ವರ್ಷ ಕೊಳವೆ ಮಾರ್ಗವನ್ನು ನಿರ್ಮಿಸುವ ಕಾರ್ಯ ಪೂರ್ಣಗೊಳ್ಳಲಿದೆ. ಆದರೆ ನೀರಾವರಿ ವಿತರಣಾ ಜಾಲಗಳನ್ನು ನಿರ್ಮಿಸಲು ಇನ್ನೂ ಕೆಲವು ವರ್ಷಗಳೇ ಬೇಕಾಗುತ್ತದೆ. ಲಿಬಿಯಾದ ಪಶ್ಚಿಮಭಾಗದಲ್ಲಿ ಟ್ರಿಪೋಲಿ ಪ್ರಾಂತಕ್ಕೆ ನೀರು ಹಾಯಿಸಲು ಇನ್ನೊಂದು ಕೊಳವೆ ಮಾರ್ಗಕ್ಕಾಗಿ ಯೋಜನೆ ಹೂಡಲಾಗಿದೆ. ಮಾನವನಿರ್ಮಿತ ಮಹಾ ಸರೋವರದ ಅಧಿಕಾರಿಗಳು ಈ ಯೋಜನೆ ಲಿಬಿಯಾದ ತೀರಪ್ರದೇಶವನ್ನು ಒಂದು ಧಾನ್ಯದ ಕಣಜವನ್ನಾಗಿ ಪರಿವರ್ತಿಸಲು ಸಾಧ್ಯವಾಗುವ ಕಾಲಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ. ಆದರೆ ಕೃಷಿಗಿಂತ ಆರ್ಥಿಕವಾಗಿ ಲಾಭದಾಯಕವಾದ ಕೈಗಾರಿಕೆ, ನಗರಪಾಲನೆ ಹಾಗೂ ಪ್ರೇಕ್ಷಣೀಯ ಚಟುವಟಿಕೆಗಳಿಗೆ ಈ ನೀರನ್ನು ಹೆಚ್ಚು ಉಪಯೋಗಿಸಬಹುದೆಂದು ಕೆಲವು ತಜ್ಞರ ಊಹೆ. ಆದರೆ ಈಗಂತೂ ಸರಕಾರವು ಕೃಷಿಪಾಲನೆಗೆ ಮತ್ತು ಆಹಾರ ಸ್ವಾವಲಂಬನೆಯನ್ನು ಸಾಧಿಸಲು ಈ ನೀರನ್ನು ಮೀಸಲಾಗಿಟ್ಟಿದೆ. ಈ ಮಹಾಸರೋವರ ಯೋಜನೆಯ ಫಲಿತಾಂಶ ಕೆಲವೇ ವರ್ಷಗಳಲ್ಲಿ ನಮ್ಮ ಕಣ್ಣೆದುರಿನಲ್ಲಿ ದೊರಕಿ ಭಾರತದ ಗಂಗಾ ಕಾವೇರಿ ಕಾಲುವೆಯಂತಹ ಯೋಜನೆಗಳಿಗೆ ದಾರಿದೀಪವಾದೀತು. ●

ಸಾಧಾರಣ

ಒಮ್ಮೆ ಗೋವಿಂದ ವಲ್ಲಭ ಪಂತ್ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರು ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಆಗ ಕಾರು ಅಪಘಾತಕ್ಕೀಡಾಗಿ ಇಬ್ಬರೂ ಹೊರಕ್ಕೆ ಎಸೆಯಲ್ಪಟ್ಟರು.

ಅಪಘಾತದ ವಿಷಯವನ್ನು ತಿಳಿದ ನೆಹರೂ, ಗಾಬರಿಯಿಂದ ಧಾವಿಸಿ ಬಂದು ಅವರಿಬ್ಬರ ಆರೋಗ್ಯವನ್ನು ವಿಚಾರಿಸಿದರು.

'ಈಗ ನಡೆದುದು ಸಾಧಾರಣ ಅಪಘಾತ' ಎಂದರು ಶಾಸ್ತ್ರಿ ನಗುತ್ತ.

'ಹಾಗೆಂದರೇನು?' ಗೊಂದಲದಲ್ಲಿ ಬಿದ್ದ ನೆಹರೂ ಪ್ರಶ್ನಿಸಿದರು.

'ನಾವು ಹೊರಗೆ ಎಗರಿಬಿದ್ದಾಗ ನಾನು ಪಂತ್‌ಜೀ ಮೇಲೆ ಬಿದ್ದೆ. ಅದು ತಿರುಗು ಮುರುಗಾಗಿದ್ದರೆ ಆಗಿನ ಕತೆ ಬೇರಾಗುತ್ತಿತ್ತು!' ಎಂದರು ಶಾಸ್ತ್ರಿ.

ಪಂತ್‌ಜೀ ಸ್ಥೂಲಕಾಯರು!

ಸಂಗ್ರಹ: ಬಾಲಯೋಗಿ

ಅವಳಿಗೆ ಗೊತ್ತು

● ಪ್ರತಿಭಾ ನಂದಕುಮಾರ್

ಅವಳಿಗೆ ಗೊತ್ತು

ಆ ಬಾವಿಯ ಕತ್ತಲಾಳದಲ್ಲಿ ವಾಸನೆಯ
ಬಗ್ಗಡ ನೀರು ಆಕಸ್ಮಿಕ ಬಿದ್ದ ರಾಟೆ ಹಗ್ಗ
ಕೊಡ ಕೊಳೆತ ಎಲೆ ಗಣೇಶನ ನೈರ್ಮಾಲ್ಯ.

ತೆರೆ ಸರಿದರೆ ಆಚೆ ಬದಿ ಸುಣ್ಣಗೆ
ಬೋಳಿಸಿದ ಮುಖ ಅಸಹಾಯ ರುಂಡ
ಮುಂಡದ ನಡುವೆ ಚಡಪಡಿಸಿ ಚೀರುವ
ಬಾವಲಿ ಹಳ್ಳಕೊಳ್ಳಗಳೂ ಬಹಳ.

ಬತ್ತಿದೆದೆಯಲ್ಲಿ ಗಾಯದ ಮಚ್ಚೆ ತುಸು
ಉಬ್ಬಿದ ಹೊಟ್ಟೆ ಚಪ್ಪಟೆ ಪೃಷ್ಠ ಹಲ್ಲಿನ ಕುಳಿ
ಬೆಳೆದ ಕೊಳೆ ಉಗುರು ಆ ಕೂದಲ ಸುರಳಿ
ಕಂಪಿಸುವ ಕೈ ಸುಮ್ಮನೇ ಬಿದ್ದುಕೊಂಡ ಅದು


ಒಳಚಡ್ಡಿ ಬನೀನು ಹರುಕು ಜಾಹಿರಾತಿನ
ಸೂಟು ಬೂಟು ಜೆಲ್ ನಗೆಯ ಕವಚ
ಮೇಲಿಂದಲೇ ತಗುಲಿಸಿ ನಾಜೂಕು ಪುಟ್ಟ
ರೋಮಾಂಚನಕ್ಕೇ ನಿಗುರಿ ಗೆದ್ದೆನೆನ್ನುವಹಂಕಾರ

ಅವಳು ಕಣ್ಣು ಮುಚ್ಚಿ ತಂದಿಡುತ್ತಾಳೆ
ತಿಂಡಿ ತಂಪು ಪಾನೀಯದ ಟ್ರೇ

ಅವಳಿಗೆ ಗೊತ್ತು

ಪ್ಲಾಸ್ಟಿಕ್ ವೈರಿನ ಚಾಪೆ ಹೆಣೆಯುವ ವಿದ್ಯೆ
ಮುಚ್ಚಿದ್ದು ಮುಚ್ಚಿದಂತೆಯೇ ಮಾಡುತ್ತಾಳೆ ನಿದ್ದೆ.

ಅವಳಿಗೆ ಗೊತ್ತು.



★ ಆಸ್ಟ್ರೇಲಿಯದ ಹೊರಗೆ ಇದು ಬದುಕುವುದಿಲ್ಲ.
★ ಹತ್ತಾರು ಮೈಲು ದೂರದ ನೀರನ್ನು ಪತ್ತೆ ಹಚ್ಚುತ್ತದೆ.
★ ಆಹಾರದೊಂದಿಗೆ ಇದು ಮಣ್ಣು ತಿನ್ನುತ್ತದೆ.
★ ಹಾವಿನಂತೆ ತತ್ತಿಯಿಟ್ಟು ಮರಿಗಳಿಗೆ ಸಸ್ತನಿಯಂತೆ ಮೊಲೆಯೂಡುತ್ತದೆ.

ವಿಸ್ಮಯಗಳ ಆಗರ ಪ್ಲಾಟಿಪಸ್

● ಪ. ರಾಮಕೃಷ್ಣ ಶಾಸ್ತ್ರಿ

ಆಸ್ಟ್ರೇಲಿಯದ ನದಿ ತೀರ, ಸರೋವರ ಮತ್ತು ತೊರೆಗಳ ಬಳಿ ಬಹು ವಿಚಿತ್ರವಾದ ಪ್ಲಾಟಿಪಸ್ ಎಂಬ ಜೀವಿ ವಾಸಿಸುತ್ತದೆ. ಕೋಟ್ಯಂತರ ವರ್ಷಗಳ ಹಿಂದಿನ ಸರಿಸೃಪಗಳೆಲ್ಲ ಈಗ ಅಳಿದಿವೆ. ಅದೇ ವಂಶದಲ್ಲಿ ಸುಮಾರು 10 ದಶಲಕ್ಷ ವರ್ಷಗಳ ಹಿಂದೆ ಸೃಷ್ಟಿಗೊಂಡ ಮೊನೋಟ್ರೆಮಸ್ ವರ್ಗದ ಪ್ಲಾಟಿಪಸ್‌ನ ಸಂತಾನ ಈಗಲೂ ಉಳಿದುಕೊಂಡಿದೆ. ಇದರ ಪೂರ್ವಜರು 135 ರಿಂದ 200 ದಶಲಕ್ಷ ವರ್ಷಕ್ಕೂ ಹಿಂದೆ ಆ ವರ್ಗದಿಂದ ಕವಲಾಗಿ ಆಸ್ಟ್ರೇಲಿಯಕ್ಕೆ ಬಂದಿರಬೇಕೆಂಬುದು ವಿಕಾಸವಾದ ತಜ್ಞ ಜಾರ್ಜ್ ಗೇಲಾರ್ಡ್ ಸಿಂಪ್ಸನ್ ಊಹೆ. ಪುರಾತನ ಪಳೆಯುಳಿಕೆಗಳನ್ನು ಗಮನಿಸಿದರೆ ಅದರ ದೇಹರಚನೆಯು ಅಂದಿನಂತೆಯೇ ಇಂದೂ ಉಳಿದುಕೊಂಡಿದೆ. ಸುಮಾರು 15 ಕೋಟಿ ವರ್ಷಗಳ ಹಿಂದೆ ಪ್ಲಾಟಿಪಸ್‌ನಿಂದ ವರ್ಣಸಂಕರಗೊಂಡ ಎಚಿದ್ನಾ ಎಂಬ ವಿಚಿತ್ರ ಪ್ರಾಣಿ ಹೋಲಿಕೆಯಲ್ಲಿ ಅದರಂತೆಯೇ ಇದೆ.

ಹಾವಿಗೂ ಸಸ್ತನಿಗೂ ಮಧ್ಯಂತರದಲ್ಲಿರುವ ಪ್ಲಾಟಿಪಸ್ ಹಾವಿನಂತೆ ತತ್ತಿಯಿಟ್ಟು ಮರಿಗಳಿಗೆ ಸಸ್ತನಿಯಂತೆ ಮೊಲೆಯೂಡಿಸುತ್ತದೆ. ಅದರ ತುಪ್ಪಳದ ತೊಗಲು ನೋಡಿದರೆ ಬೇರೆ ಪ್ರಾಣಿಗಳ ತೊಗಲಿನ ತುಣುಕುಗಳನ್ನು ಸೇರಿಸಿ ಹೊಲಿದಂತೆ ಕಾಣಿಸುತ್ತದೆ. 18ನೆಯ ಶತಮಾನದಲ್ಲಿ ಚೀನೀ ಯಾತ್ರಿಕರು ಯುರೋಪಿಗೆ ಈ ತೊಗಲನ್ನು ತಂದಾಗ ವಿಜ್ಞಾನಿಗಳು ಅದನ್ನು ಕಂಡು ಮೋಸವೆಂದೂ ಕುತಂತ್ರವೆಂದೂ ಟೀಕಿಸಿದರು. ಆದರೆ ಜೀವಂತ ಪ್ಲಾಟಿಪಸ್‌ನ ಮೈಯಲ್ಲಿ ತೇಪೆ ಹಾಕಿದಂತೆ ವಿಚಿತ್ರ ತೊಗಲಿರುವುದನ್ನು ಕಂಡಾಗ

ಜೀವಿ ಎಂಬರ್ಥದಲ್ಲಿ ಅದನ್ನು ''ಓರಿಂಥೋರಿಂಚೆಸ್ ಪ್ಯಾರಡೋಕ್ಸಸ್'' ಎಂದು ಕರೆದರು. ಒಂದು ದೃಷ್ಟಿಯಲ್ಲಿ ತುಪ್ಪಳ ನೀಡುವ ಮೊತ್ತ ಮೊದಲ ಪ್ರಾಣಿ ಕೂಡ ಇದೇ. ಇದು ಬಿಸಿರಕ್ತದ ಪ್ರಾಣಿ ವರ್ಗಕ್ಕೆ ಸೇರಿದೆ.

1797ರಲ್ಲಿ ಆಸ್ಟ್ರೇಲಿಯದಲ್ಲಿ ಸಂಶೋಧನೆಯಲ್ಲಿ ನಿರತರಾದ ವಿಜ್ಞಾನಿಗಳು ಬೀವರ್ ಮತ್ತು ಹಕ್ಕಿಯ ಸಂಯೋಗದಂತಿರುವ ಪ್ಲಾಟಿಪಸ್ ಕೃತಕ ಸೃಷ್ಟಿಯ ಕುರುಹೆಂದು ಭಾವಿಸಿದ್ದರು. ಅದರ ಭುಜದ ಎಲುಬು ಸರೀಸೃಪದಂತಿದೆ. ಬಾತುಕೋಳಿಗಿರುವಂಥ ಕೊಕ್ಕು ಇದೆ. ಈ ಕೊಕ್ಕು ಅಂಟಿಸಿದಂತೆ ಕೃತ್ರಿಮವಾಗಿ ಕಾಣಿಸುತ್ತದೆ. ಈ ಬಗ್ಗೆ ಸಂಶೋಧನೆ ನಡೆಸಿ ನೈಜತೆಯನ್ನು ಒಪ್ಪಿಕೊಳ್ಳಲು ನೂರು ವರ್ಷ ಬೇಕಾಯಿತು.

ಜಲಸ್ಥಲ ಸಂಚಾರಿ

ಪ್ಲಾಟಿಪಸ್‌ನ ಕೊಕ್ಕನ್ನು ಅದರ ಶರೀರದ ಅತಿ ಸೂಕ್ಷ್ಮ ಅಂಗಗಳಲ್ಲಿ ಒಂದೆಂದು ಗುರುತಿಸಲಾಗಿದೆ. ಚರ್ಮ ಮತ್ತು ಮಜ್ಜಾತಂತುಗಳಿಂದ ನಿರ್ಮಾಣವಾದ ಬಲವಾದ ಜಾಳಿಗೆಯಂತಿರುವ ಕೊಕ್ಕು ಬಹು ನುಣುಪು ಮತ್ತು ಮೃದು. ಚುಂಚಿನಂತಿರುವ ಕೊಕ್ಕಿನ ತುದಿಯಲ್ಲಿ ಮೂಗಿನ ಹೊರಳೆಗಳಿವೆ. ತನ್ನ ಆಹಾರವನ್ನು ಕಣ್ಣು ಅಥವಾ ಮೂಗಿನ ನೆರವಿನಿಂದ ಅದು ಗುರುತಿಸುವುದಿಲ್ಲ. ನೀರಿನಲ್ಲಿ ತನ್ನ ಜಾಲಪಾದಗಳಂತಹ ಮುಂಗಾಲುಗಳನ್ನು ಕದಲಿಸಿ, ಹಿಂಗಾಲುಗಳನ್ನು ಚುಕ್ಕಾಣಿಯಂತೆ ಬಳಸುತ್ತದೆ. ಕೊಕ್ಕನ್ನು ಎಡಕ್ಕೊಮ್ಮೆ



ಕ್ರಿಮಿ ಕೀಟಗಳನ್ನು ಅವುಗಳ ಚಲನೆಯಿಂದಲೇ ಗುರುತಿಸುವುದು. ಈ ಕೊಕ್ಕು ಒಂದು ರೀತಿಯ ರೆಡಾರಿನಂತಿದೆ. ನೀರಿನಂತೆಯೇ ನೆಲದಲ್ಲೂ ಓಡಾಡಬಲ್ಲ ಪ್ಲಾಟಿಪಸ್ ಕೊಕ್ಕಿನ ನೆರವಿನಿಂದ ನೆಲದೊಳಗಿನ ಬಿಲಗಳನ್ನು ಗುರುತಿಸುತ್ತದೆ. ತನ್ನ ಬಿಲ ನೂರು ಬಿಲಗಳ ನಡುವಿದ್ದರೂ ತನ್ನದೇ ಮನೆಗೆ ತಪ್ಪದೆ ಹೋಗುವುದಲ್ಲದೆ ಇನ್ನೊಬ್ಬರ ಮನೆಗೆ ಪ್ರವೇಶಿಸದು. ಬಿಲವನ್ನು ಕೊಕ್ಕಿನಿಂದಲೇ ತೋಡಿ ಮಣ್ಣನ್ನು ಬಿಲದ ಬದಿ ಮತ್ತು ತಳಕ್ಕೆ ಮೆತ್ತುವುದಲ್ಲದೆ ನೀರಿನಲ್ಲಿ ಈಜುವಾಗ ಮೆತ್ತಗಿನ ಈ ಕೊಕ್ಕಿನಿಂದ ನೀರನ್ನು ಸೀಳಿಕೊಳ್ಳುತ್ತದೆ.

ನದಿ ನೀರಿನ ತಳದಲ್ಲಿ ಮುಳುಗಿದಾಗ ಅದರ ಕಣ್ಣು, ಕಿವಿಗಳನ್ನು ಚರ್ಮದ ರೆಪ್ಪೆಯೊಂದು ಏಕಕಾಲಕ್ಕೆ ಮುಚ್ಚುತ್ತದೆ. ಕಿವಿಗಳೆಂದರೆ ಬರೇ ಎರಡು ತೂತು ಮಾತ್ರ. ಮೂಗಿನಲ್ಲಿ ನರಗಳ ದೊಡ್ಡ ಜಾಲವಿದೆ. ಅದು ನೀರಿನಲ್ಲಿ ಮುಳುಗಿ 5 ನಿಮಿಷಗಳ ಕಾಲ ಇರಬಲ್ಲುದು. ಭಾರಿ ಪುಕ್ಕಲು ಪ್ರಾಣಿ. ಕೊಂಚ ಸದ್ದಾದರೂ ಓಡಿ ಹೋಗಿ ಅವಿತುಕೊಳ್ಳುತ್ತದೆ. ಅದರ ಸೂಕ್ಷ್ಮವಾದ ಕಣ್ಣು, ಕಿವಿಗಳು ಅಪಾಯದ ಅರಿವನ್ನು ಶೀಘ್ರವಾಗಿ ತಲುಪಿಸುತ್ತವೆ. ಹಗಲು ಹೊತ್ತು ಅದು ಬಿಲದಲ್ಲೇ ಇರುತ್ತದೆ. ಸೂರ್ಯ ಪ್ರಕಾಶವನ್ನು ಸಹಿಸುವ ಶಕ್ತಿ ಕಣ್ಣುಗಳಿಗಿಲ್ಲವಾದ್ದರಿಂದ ಹಗಲು ಬಿಲದಿಂದ ಹೊರಟರೆ ಎದುರಿಗಿದ್ದ ವಸ್ತುಗಳಿಗೆ ಢಿಕ್ಕಿ ಹೊಡೆಯುತ್ತದೆ. ರಾತ್ರಿಯಿಡೀ ಆಹಾರಕ್ಕಾಗಿ ನೀರಿನಲ್ಲಿ

ದುಷ್ಟರಿಂದ ದೂರವುಳಿಯುವುದು ಒಂದು ಮಾರ್ಗವಾದರೆ ದುಷ್ಟರನ್ನೂ ಸಜ್ಜನರ ಪರಿಧಿಗೆಳೆಯುವುದು ಮತ್ತೊಂದು ವಿಧಾನ.

ನೀತಿಕಥೆ

ಪ್ರಪಂಚವನ್ನು ಗೆಲ್ಲುವ ಬಗೆ

ಯೂಲಿಸೆಸ್ ಇಟಲಿಯ ದೊರೆ. ಆತ ಸಾಹಸಿ ನಾವಿಕನೂ ಹೌದು. ಅವನು ತನ್ನ ಜೀವಮಾನದಲ್ಲಿ ಅನೇಕ ಸಮುದ್ರಪ್ರವಾಸಗಳನ್ನು ಕೈಕೊಂಡು ಅನೇಕ ದೇಶಗಳನ್ನು ಗೆದ್ದುಕೊಂಡ. ಈ ಪ್ರವಾಸಗಳಲ್ಲಿ ಅನೇಕ ಸಲ ಅವನು ತುಂಬ ಅಪಾಯಗಳನ್ನು ಎದುರಿಸಬೇಕಾಯಿತು. ಇಂಥದೊಂದು ಪ್ರವಾಸದಲ್ಲಿ ದ್ವೀಪವೊಂದರ ಬಳಿಯಿಂದ ಹಾಯ್ದುಹೋಗಬೇಕಾಗಿ ಬಂತು. ಜಲಕನ್ನಿಕೆಯರಿಗೆ ಸೇರಿದ ದ್ವೀಪವಾಗಿತ್ತದು. ತಮ್ಮ ದ್ವೀಪದ ಬಳಿ ಬಂದ ಯಾವ ಹಡಗನ್ನೂ ಅವರು ಸುರಕ್ಷಿತವಾಗಿ ಮುಂದೆ ಹೋಗಲು ಬಿಡುತ್ತಿರಲಿಲ್ಲ. ಹಡಗು ತಮ್ಮ ದ್ವೀಪದ ಬಳಿ ಸಾಗುತ್ತಿದ್ದಂತೆಯೇ ಆ ಜಲಕನ್ನಿಕೆಯರು ಸುಮಧುರ ಸಂಗೀತದಿಂದ ಆ ನಾವಿಕರನ್ನು ಆಕರ್ಷಿಸಿ, ಹಡಗು ದ್ವೀಪದ ಅಂಚಿನಲ್ಲಿರುವ ಬಂಡೆಗಳಿಗೆ ಅಪ್ಪಳಿಸಿ ನುಚ್ಚುನೂರಾಗುವಂತೆ ಮಾಡುತ್ತಿದ್ದರು. ಈ ವಿಷಯವನ್ನು ಬಲ್ಲವನಾಗಿದ್ದ ಯೂಲಿಸೆಸ್. ಸಮುದ್ರದಲ್ಲಿ ಮಧುರ ಸಂಗೀತ ಕೇಳಿ ಬರತೊಡಗಿದೊಡನೆಯೇ ತನ್ನ ಸೈನಿಕರು ಮತ್ತು ನಾವಿಕರು ಆಕರ್ಷಿತರಾಗದಂತೆ ಅವರ ಕಿವಿಗಳಿಗೆ ಮೇಣವನ್ನು ತುಂಬಿಸಿ ತಾನು ಹಡಗಿನ ಚುಕ್ಕಾಣಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತನು. ಹೀಗಾಗಿ ಅಪಾಯಕಾರಿ ದ್ವೀಪದ ಬಳಿಯಿಂದ ಹಡಗನ್ನು ಸುರಕ್ಷಿತವಾಗಿ ಪಾರುಗಾಣಿಸಿದ.

ಸುಪ್ರಸಿದ್ಧ ವೈಣಿಕ ಒರಫಿಯಸ್ ಕೂಡ ಒಮ್ಮೆ ಅದೇ ಮಾರ್ಗವಾಗಿ ಪ್ರವಾಸ ಮಾಡುತ್ತಿದ್ದನು. ಅವನು ದೂರದಿಂದಲೇ ಜಲಕನ್ನಿಕೆಯರ ಮಧುರ ಸಂಗೀತವನ್ನು ಕೇಳಿ ತಾನು ಕೂಡ ಹಾಡಲುತೊಡಗಿದ. ಅವನ ಧ್ವನಿ ಎಷ್ಟೊಂದು ಇಂಪಾಗಿತ್ತೆಂದರೆ ಜಲಕನ್ನಿಕೆಯರು ತಮ್ಮ ಸಂಗೀತವನ್ನು ನಿಲ್ಲಿಸಿ ಒರಫಿಯಸ್‌ನ ಸಂಗೀತವನ್ನು ಆಲಿಸತೊಡಗಿದರು.

ಜೀವನಯಾತ್ರೆಯಲ್ಲಿ ನಮಗೆದುರಾಗುವ ಕೆಡಕುಗಳನ್ನು ಗೆಲ್ಲಲು ಈ ಎರಡು ಮಾರ್ಗಗಳಲ್ಲಿ ಒಂದನ್ನು ನಾವು ಆರಿಸಿಕೊಳ್ಳಬೇಕಾಗುತ್ತದೆ: ಯೂಲಿಸೆಸ್ ಮಾಡಿದಂತೆ ಈ ಪ್ರಪಂಚದ ಕೆಡಕುಗಳಿಂದ ವಿಮುಖರಾಗುವುದು ಒಂದು ಮಾರ್ಗ, ಒರಫಿಯಸ್‌ನಂತೆ ನಮ್ಮ ಉತ್ತಮ ನಡವಳಿಕೆಯಿಂದ ಪ್ರಪಂಚವೇ ನಮ್ಮೆಡೆಗೆ ಆಕರ್ಷಿತವಾಗುವಂತೆ ಮಾಡುವುದು ಇನ್ನೊಂದು ವಿಧಾನ. ಮೊದಲನೆಯದು ಸಾಮಾನ್ಯರ ಮಾರ್ಗವಾದರೆ ಎರಡನೆಯದು ಸಂತರ ಮಾರ್ಗ. ದುಷ್ಟರಿಂದ ದೂರವುಳಿಯುವುದು ಒಂದು ಮಾರ್ಗವಾದರೆ ದುಷ್ಟರನ್ನೂ ಸಜ್ಜನರ ಪರಿಧಿಗೆಳೆಯುವುದು ಮತ್ತೊಂದು ವಿಧಾನ.

● ಮುರಲೀಧರ ಕುಲಕರ್ಣಿ

ಆಡಳಿತ ರಂಗದಲ್ಲಿ ಪಾರ್ಕಿನ್‌ಸನ್ ಸೂತ್ರ ಮತ್ತು ಪೀಟರ್ ನಿಯಮಗಳ ಪ್ರಭಾವ

● ಜಿ.ಎ.ಎಸ್. ರಾವ್

ಜಗತ್ತಿನಾದ್ಯಂತ ಅಸಂಖ್ಯಾತ ಲೇಖಕರು ಆಡಳಿತ ಶಾಸ್ತ್ರದ ಕುರಿತಾದ ಉದ್ಗ್ರಂಥಗಳನ್ನು ರಚಿಸಿದ್ದಾರೆ. ಇತ್ತೀಚೆಗಂತೂ ಕೈಗಾರಿಕೆ - ಉದ್ದಿಮೆಗಳ ಆಡಳಿತಕ್ಕೆ ಸಂಬಂಧಿಸಿದಂತೆ ವಿಪುಲವಾಗಿ ಸಾಹಿತ್ಯ ಹೊರಬಂದಿದೆ. ಅಲ್ಲದೆ ಸರ್ಕಾರಿ ಆಡಳಿತಕ್ಕೆ ಸಂಬಂಧಿಸಿದಂತೆಯೂ ಸಾಕಷ್ಟು ಗ್ರಂಥಗಳು ಪ್ರಕಟವಾಗಿವೆ. ಉದ್ದಿಮೆಗಳ ನಿರ್ವಹಣೆ ಮತ್ತು ಸರ್ಕಾರಿ ಆಡಳಿತಗಳ ನಡುವೆ ಬಹಳ ಅಂತರವಿದ್ದರೂ ಸಾಕಷ್ಟು ಸಾಮ್ಯವೂ ಇದೆಯೆನ್ನಬಹುದು. ಇವೆರಡೂ ಕ್ಷೇತ್ರಗಳ ಬಗೆಗೆ ವಿನೂತನ ದೃಷ್ಟಿಯಿಂದ ಬರೆದಿರುವ ಇಬ್ಬರು ಲೇಖಕರೆಂದರೆ, ಪ್ರೊ.ನಾರ್ಥ್‌ಕೋಟ್ - ಸಿ - ಪಾರ್ಕಿನ್ಸನ್ ಮತ್ತು ಪ್ರೊ. ಲಾರೆನ್ಸ್ - ಜೆ - ಪೀಟರ್.

ತಮ್ಮ 'Parkison's Law of the Pursuit of progress' ಎಂಬ ಪುಸ್ತಕದ ಪ್ರಕಟಣೆಯೊಂದಿಗೆ ಪ್ರೊ. ಪಾರ್ಕಿನ್ಸನ್ನರು ಇಂಗ್ಲಿಷ್ ಭಾಷೆಗೆ Parkinson's Law ಎಂಬ ಒಂದು ಹೊಸ ಅಭಿವ್ಯಕ್ತಿಯ ಕೊಡುಗೆಯನ್ನಿತ್ತಿದ್ದಾರೆ. ಅವರು ಆ ಗ್ರಂಥದಲ್ಲಿ ಆಡಳಿತಕ್ಕೆ ಸಂಬಂಧಿಸಿದ ಹತ್ತು ವಿವಿಧ ವಿಷಯಗಳನ್ನು ಪ್ರತಿಪಾದಿಸಿದ್ದಾರಾದರೂ ಸರಕಾರಿ ನೌಕರಶಾಹಿಯ ನಿರಂತರ ಬೆಳವಣಿಗೆಯ ವಿಷಯಕವಾದ ಅವರ ಸೂತ್ರ ಎಲ್ಲರ ಗಮನವನ್ನೂ ಹೆಚ್ಚಾಗಿ ಆಕರ್ಷಿಸಿದೆ. ''ಒಂದು ಕೆಲಸವನ್ನು ಮಾಡಲು ಉಪಲಬ್ಧವಿರುವ ಸಮಯಕ್ಕನುಸಾರವಾಗಿ ಆ ಕೆಲಸದ ಪ್ರಮಾಣ ಹೆಚ್ಚುತ್ತದೆ'' ಎಂಬುದೇ ಆ ಸೂತ್ರ. ಇದಕ್ಕೆ ಪಾರ್ಕಿನ್ಸನ್ನರು ಕೊಡುವ ಒಂದು ಉದಾಹರಣೆ ಹೀಗಿದೆ: ಒಂದು ಕೆಲಸವನ್ನು ಒಬ್ಬ ವ್ಯಕ್ತಿ ಐದು ನಿಮಿಷಗಳಲ್ಲಿ ಮಾಡಿ ಮುಗಿಸಿದರೆ ಅದೇ ಕೆಲಸವನ್ನು ಮಾಡಲು ಇನ್ನೊಬ್ಬ ವ್ಯಕ್ತಿ ಅರ್ಧ ದಿನವನ್ನೇ ತೆಗೆದುಕೊಳ್ಳುತ್ತಾನೆ. ಇದು ಹೇಗೆಂದು ನಾವು ಆಶ್ಚರ್ಯಚಕಿತರಾಗಬಹುದು. ಈಗ ಒಂದು ಪತ್ರವನ್ನು ಬರೆದು ಅದನ್ನು ಅಂಚೆಗೆ ಹಾಕುವ ಕೆಲಸವನ್ನೇ ತೆಗೆದುಕೊಳ್ಳೋಣ. ತುಂಬಾ ವ್ಯಸ್ತನಾಗಿರುವ ವ್ಯಕ್ತಿ ಸರಸರನೆ ಪತ್ರವನ್ನು ಬರೆದು ಕಛೇರಿಗೆ ಹೋಗುವ ಹಾದಿಯಲ್ಲಿ ಅಂಚೆ ಪೆಟ್ಟಿಗೆಯಲ್ಲಿ ಹಾಕುತ್ತಾನೆ. ಆದರೆ ಬೇರೇನೂ ಕೆಲಸವಿಲ್ಲದ ಅಥವಾ ಒಬ್ಬ ನಿವೃತ್ತನಾದ ಉದ್ಯೋಗಿ ಅದೇ ಕೆಲಸವನ್ನು ಆರಾಮವಾಗಿ ಎಳೆದೆಳೆದು ಅರ್ಧದಿನವನ್ನೇ ಕಳೆಯುತ್ತಾನೆ. ಈ ನಿದರ್ಶನ ಬಹಳ ಉತ್ಪ್ರೇಕ್ಷೆಯಾಯಿತೆಂದರೂ ಇದರಲ್ಲಿ ಯಥಾರ್ಥವಿಲ್ಲದಿಲ್ಲ.

ಪ್ರೊ. ಪಾರ್ಕಿನ್ಸನ್ನರು ಮುಂದುವರಿದು ತಮ್ಮ ಸೂತ್ರವನ್ನು ಈ ರೀತಿ ವಿಶದೀಕರಿಸುತ್ತಾರೆ. ''ಒಂದು ಸಂಸ್ಥೆಯ ನೌಕರರ ಸಂಖ್ಯೆಯಲ್ಲಾಗುವ ವೃದ್ಧಿಯು ಯಾವಾಗಲೂ ಪಾರ್ಕಿನ್ಸನ್ ಸೂತ್ರಕ್ಕೆ ಬದ್ಧವಾಗಿರುತ್ತದೆಯೇ

ಹೊರತು, ಆ ಸಂಸ್ಥೆಯ ಕಾರ್ಯಭಾರ ಒಂದೇ ರೀತಿಯಿರಲಿ, ಕುಗ್ಗಲಿ ಅಥವಾ ಪೂರ್ಣವಾಗಿ ನಶಿಸಲಿ, ಈ ಯಾವ ಪರಿಸ್ಥಿತಿಗಳೂ ನೌಕರರ ಸಂಖ್ಯೆಯ ವೃದ್ಧಿಯ ಮೇಲೆ ಯಾವ ಪರಿಣಾಮ ವನ್ನು ಬೀರುವುದಿಲ್ಲ''. ಇದರ ತಾತ್ಪರ್ಯವೇನೆಂದರೆ, ಕೆಲಸದ ಪ್ರಮಾಣವೇನೇ ಇರಲಿ ನೌಕರಶಾಹಿಯು ನಿರಂತರವಾಗಿ ಬೆಳೆಯುತ್ತಲೇ ಹೋಗುತ್ತದೆ. ಕೆಲಸದ ಪ್ರಮಾಣ ಮತ್ತು ಗುಣ ಮತ್ತೆಗಳೇನೇ ಇರಲಿ ಮತ್ತು ಅಂತಹ ಕೆಲಸದ ಅವಶ್ಯಕತೆಯೇ ಇಲ್ಲದಿದ್ದರೂ ಸರ್ಕಾರಿ ಇಲಾಖೆಗಳು ವರ್ಷದಿಂದ ವರ್ಷಕ್ಕೆ ತಮ್ಮ ಗಾತ್ರವನ್ನು ಹೆಚ್ಚಿಸಿಕೊಳ್ಳುತ್ತವೆ. ಬ್ರಿಟಿಷ್ ನೌಕಾ ಇಲಾಖೆ ಮತ್ತು ವಸಾಹತುಗಳ ಕಛೇರಿಗಳ ಸಿಬ್ಬಂದಿಯಲ್ಲಿ ವರ್ಷಂಪ್ರತಿ ಆದ ಹೆಚ್ಚಳವನ್ನು ಅಭ್ಯಸಿಸಿ ಪ್ರೊ. ಪಾರ್ಕಿನ್ಸನ್ನರು ಮೇಲಿನ ತೀರ್ಮಾನಕ್ಕೆ ಬಂದರು. ಅವರು ಕಂಡುಹಿಡಿದ ಅಚ್ಚರಿಗೊಳಿಸುವ ಸಂಗತಿಯೆಂದರೆ, ಬ್ರಿಟಿಷ್ ನೌಕಾಪಡೆಗಳನ್ನು ಕಡಿಮೆ ಮಾಡುತ್ತಿದ್ದ ಕಾಲದಲ್ಲೂ ಮತ್ತು ಬ್ರಿಟಿಷ್ ಸಾಮ್ರಾಜ್ಯ ಕ್ಷೀಣಿಸುತ್ತಿದ್ದ ವರ್ಷಗಳಲ್ಲೂ ಈ ಇಲಾಖೆಗಳಲ್ಲಿ ಹೆಚ್ಚು ಹೆಚ್ಚು ನೌಕರರನ್ನು ನೇಮಿಸಿಕೊಳ್ಳಲಾಗಿತ್ತು! ಬ್ರಿಟಿಷ್ ಆಡಳಿತ ಪದ್ಧತಿಯನ್ನೇ ಅನುಸರಿಸುತ್ತಿರುವ ನಮ್ಮ ದೇಶಕ್ಕೆ ಪಾರ್ಕಿನ್ಸನ್ನರ ಸೂತ್ರ ಅನ್ವಯಿಸುವುದಿಲ್ಲವೆಂದು ಹೇಳುವುದಾದರೂ ಹೇಗೆ?

ಕಚೇರಿಗಳಲ್ಲಿ ಆರಾಮವಾಗಿ ಕೂಡದೆ ಎಲ್ಲರೂ ಕೆಲಸದಲ್ಲಿ ಮಗ್ನರಾಗಿರುತ್ತಾರಾದ್ದರಿಂದ, ಕಾರ್ಯಭಾರ ನಿರಂತರವಾಗಿ ಹೆಚ್ಚುತ್ತಿದೆಯೆಂದು ತಿಳಿಯಬಹುದು ಎಂದು ಕೆಲವರ ಅನಿಸಿಕೆ. ಇದಕ್ಕೆ ಪ್ರೊ.ಪಾರ್ಕಿನ್ಸನ್ನರ ಉತ್ತರ: ಕಚೇರಿಯ ವೇಳೆಯಲ್ಲಿ ಯಾರೂ ಆರಾಮವಾಗಿ ಕೂಡದಿದ್ದರೂ ನಿಜ ಸ್ಥಿತಿಯೇನೆಂದರೆ, ಪ್ರತಿಯೊಬ್ಬ ಉದ್ಯೋಗಿಯೂ ಮತ್ತೊಬ್ಬನಿಗೆ ಕೆಲಸವನ್ನು ಸೃಷ್ಟಿಸುತ್ತಾನೆ; ಕೇವಲ ಕಾಗದದ ಮೇಲಿನ ಕೆಲಸ, ಶುಷ್ಕ ಪತ್ರಾಚಾರ ಇತ್ಯಾದಿ. ಇದರಿಂದ ಪುರುಷಾರ್ಥವೇನೂ ಸಾಧಿತವಾಗದಿದ್ದರೂ ಎಲ್ಲರೂ ಹೀಗೆ 'ಕೆಲಸದಲ್ಲಿ' ತೊಡಗಿರುವುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಈ ಪರಿಸ್ಥಿತಿ ಬಹು ಮುಖ್ಯವಾದ ಪ್ರಶ್ನೆಯೊಂದನ್ನು ನಮ್ಮ ಮುಂದಿಡುತ್ತದೆ. ಅದೇನೆಂದರೆ, ಗುಣಾತ್ಮಕ, ಮೌಲ್ಯಾತ್ಮಕ ಕೆಲಸ ಮುಖ್ಯವೋ ಅಥವಾ ಕೇವಲ ಸಾಂಕೇತಿಕ ಕೆಲಸವೋ. ಕೆಲಸದ ಗುಣಮಟ್ಟ ಅಥವಾ ಪ್ರತಿಫಲವೇನೇ ಇರಲಿ, ಕೇವಲ ಕೆಲಸದ ಪ್ರಮಾಣವೇ ಪ್ರಗತಿಯ ದ್ಯೋತಕವೆಂದು ಅನೇಕರು ಭಾವಿಸುತ್ತಾರೆ. ಪ್ರಾಯಶಃ ಈ ಕಾರಣದಿಂದಲೇ ನಮ್ಮ ಸರ್ಕಾರಿ ಕಚೇರಿಗಳ ಸಾಧನೆಗಳನ್ನು ಅಲ್ಲಿ ತಯಾರಾದ ಹೊತ್ತಿಗೆಗಳು, ಕಡತಗಳಲ್ಲಿ ಬರೆದ ಟಿಪ್ಪಣಿಗಳು ಮತ್ತು ಫಲಕಗಳ ಮೇಲೆ ಅಂದವಾಗಿ ಪ್ರದರ್ಶಿಸಿದ ನಕ್ಷೆಗಳಿಂದಲೇ ಅಳೆಯುವ ಮನೋಭಾವ ಬೇರೂರಿದೆ. ಈ ಎಲ್ಲ ಕೆಲಸಗಳನ್ನು ಮಾಡಲು ಮತ್ತು ಇವುಗಳಲ್ಲಿ ಪ್ರಗತಿಯನ್ನು ಸಾಧಿಸಲು (!) ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಅಧಿಕಾರಿಗಳ ಮತ್ತು ಸಿಬ್ಬಂದಿಯ ನೇಮಕ ಅನಿವಾರ್ಯವಾಗುತ್ತದೆ. ಮತ್ತೆ ಹೀಗೆ ಹೆಚ್ಚಿದ ಸಿಬ್ಬಂದಿಗೆ ಸಾಕಷ್ಟು ಕೆಲಸ ಕೊಡಲು ಹೊಸ ಹೊಸ ಸಮಿತಿಗಳ, ವರದಿಗಳ, ಫೈಲುಗಳ ಸೃಷ್ಟಿಯಾಗುತ್ತದೆ. ಈ ಪರಿವೇಶಕ್ಕೆ ಅನುಗುಣವಾಗಿ ಮೊದಲು ಮಂಡಿಸಿದ ಪಾರ್ಕಿನ್ಸನ್ನರ ಸೂತ್ರವನ್ನು ಸ್ವಲ್ಪ ಮಾರ್ಪಡಿಸಿ ಹೀಗೆ ಪುನಾರಚಿಸಬಹುದು: ''ಉಪಲಬ್ಧವಿರುವ ಸಿಬ್ಬಂದಿಯ ಸಂಖ್ಯೆಗನುಗುಣವಾಗಿ ಕೆಲಸ ಹೆಚ್ಚುತ್ತದೆ.''

ನಮ್ಮ ಸರ್ಕಾರಿ ಇಲಾಖೆಗಳಲ್ಲಿ ವ್ಯಾಪಕವಾಗಿ ಹರಡಿರುವ ಮತ್ತೊಂದು ಪ್ರವೃತ್ತಿಯೆಂದರೆ, ಕಾಲಕಾಲಕ್ಕೆ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚು ಮಾಡಲು ನಡೆಸುವ ಸಮೀಕ್ಷೆ - Cadre Review. ಇಂತಹ ಸಮೀಕ್ಷೆಯ ಮೂಲಕವೇ ಕಾಲ ಕಾಲಕ್ಕೆ ಉಚ್ಚ ಶ್ರೇಣಿಯ ಅಧಿಕಾರಿಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುತ್ತದೆ. ಇದೇನೂ ಕೆಲಸದ ಹೆಚ್ಚಳದ ಸಬೂಬಿನ ಮೇಲೆ ಆಗುವುದಿಲ್ಲ. ಉಚ್ಚ ಶ್ರೇಣಿಯ ಅಧಿಕಾರಿಗಳಿಗೆ ಮೇಲಿನ ಹುದ್ದೆಗಳಿಗೆ ಬಡ್ತಿ ಸಿಗುವುದರಲ್ಲಿ

ವಿಳಂಬವಾಗುತ್ತಿದೆಯೆಂಬ ಒಂದೇ ಕಾರಣದಿಂದ ಹೆಚ್ಚು ಉಚ್ಚಸ್ತರದ ಹುದ್ದೆಗಳನ್ನು ನಿರ್ಮಿಸಲಾಗುತ್ತವೆ. ಪಾರ್ಕಿನ್ಸನ್ನರು ಆಡಳಿತ ರಂಗದ ಇಂತಹ ಪ್ರವೃತ್ತಿಗಳ ಮೇಲೂ ಸಾಕಷ್ಟು ಬೆಳಕು ಚೆಲ್ಲಿದ್ದಾರಾದರೂ, ಈ ಬಗ್ಗೆ ಸೂತ್ರವನ್ನು ರಚಿಸಿಲ್ಲ. ಪ್ರಾಯಶಃ ಇತರ ದೇಶಗಳಲ್ಲಿ ನಮ್ಮಲ್ಲಿ ನಡೆಯುತ್ತಿರುವ ರೀತಿಯಲ್ಲಿ ಇಂತಹ ಸಮೀಕ್ಷೆಗಳು ನಡೆಯುತ್ತಿಲ್ಲವೇನೋ. ನಮ್ಮ ದೇಶದ ಆಡಳಿತ ಯಂತ್ರದ ಈ ಗುಣಧರ್ಮವನ್ನು ಪ್ರತಿಬಿಂಬಿಸುವಂತೆ ಪಾರ್ಕಿನ್ಸನ್ನರ ಸೂತ್ರದ ಹಾದಿಯಲ್ಲಿ ಮತ್ತೊಂದು ಸೂತ್ರವನ್ನು ಈ ರೀತಿ ಘೋಷಿಸಬಹುದು.

''ಉಚ್ಚಸ್ತರದ ಅಧಿಕಾರಿಗಳ ಹುದ್ದೆಗಳು ಕಿರಿಯ ಅಧಿಕಾರಿಗಳ ವಾರ್ಷಿಕ ನೇಮಕದ ಸಂಖ್ಯೆಯ ನೇರ ಪ್ರಮಾಣದಲ್ಲಿ ಹೆಚ್ಚುತ್ತವೆ. ಈ ಪ್ರಕ್ರಿಯೆ ಮತ್ತಿನ್ನಾವ ಪರಿಸ್ಥಿತಿಗಳನ್ನೂ ಅವಲಂಬಿಸಿರುವುದಿಲ್ಲ.''

ಪ್ರೊ. ಪಾರ್ಕಿನ್ಸನ್ನರ ಅಧ್ಯಯನ, ವಿವೇಚನೆಗಳಿಂದ ಕಂಡುಬಂದ ಇನ್ನೊಂದು ಕುತೂಹಲಕರ ತಥ್ಯ ಹೀಗಿದೆ: ಬಹಳ ದುಬಾರಿಯಾದ ಮತ್ತು ಅತಿ ಭವ್ಯ ಕಟ್ಟಡಗಳನ್ನು ಕಟ್ಟತೊಡಗುವುದು ಒಂದು ಸಾಮ್ರಾಜ್ಯದ ಅಥವಾ ಸಂಸ್ಥೆಯ ಅವನತಿಯ ಸಂಕೇತ. ಅವರು, ಈ ಸಿದ್ಧಾಂತಕ್ಕೆ ನಿದರ್ಶನವಾಗಿ ಬ್ರಿಟಿಷ್ ಸಾಮ್ರಾಜ್ಯದ ಅವನತಿಯ ಕಾಲದಲ್ಲಿ ನಡೆದ ಅದ್ದೂರಿಯ ವಾಸ್ತುಶಿಲ್ಪರಚನಾ ಕಾರ್ಯಗಳ ಮತ್ತು ಅವನತಿಯ ಹಾದಿಯಲ್ಲಿದ್ದ ಕೆಲವು ಸಂಸ್ಥೆಗಳ ಕಾರ್ಯಚಟುವಟಿಕೆಗಳ ಉದಾಹರಣೆಗಳನ್ನು ನೀಡುತ್ತಾರೆ. ಈ ಸಂದರ್ಭದಲ್ಲಿ ನವದೆಹಲಿಯ ರಾಷ್ಟ್ರಪತಿ ಭವನ ಮತ್ತಿತರ ಭವ್ಯ ರಾಜಕೀಯ ಭವನಗಳ ನಿರ್ಮಾಣ ಬ್ರಿಟಿಷ್ ಸಾಮ್ರಾಜ್ಯದ ಅವನತಿ ಪ್ರಾರಂಭವಾದ ಮೇಲೆಯೇ ನಡೆಯಿತೆಂಬುದನ್ನು ನಾವಿಲ್ಲಿ ಸ್ಮರಿಸಬಹುದು. ಇದೇ ತಥ್ಯವನ್ನು ತೋರಿಸುವ ನನ್ನ ಒಂದು ಅನುಭವವನ್ನೂ ಇಲ್ಲಿ ಉದಾಹರಿಸಬಹುದು. ಹಲವು ವರ್ಷಗಳ ಹಿಂದೆ ನಮ್ಮ ದೇಶದ ಬೃಹತ್ ನಗರವೊಂದರಲ್ಲಿ ನಾನು ನೋಡಿದ ಸಂಗತಿಯಿದು. ಒಂದು ಖಾಲಿ ನಿವೇಶನದಲ್ಲಿ ಬಹಳ ಬಿರುಸಿನಿಂದ ಒಂದು ದೊಡ್ಡ ಕಟ್ಟಡದ ನಿರ್ಮಾಣ ನಡೆಯುತ್ತಿದ್ದು ಆ ಭವನ ಯಾವ ಉದ್ದೇಶಕ್ಕಾಗಿ ಇರಬಹುದೆಂದು ಮನಸ್ಸಿನಲ್ಲೇ ತರ್ಕಿಸುತ್ತಿದ್ದೆ. ಸ್ವಲ್ಪ ಸಮಯದ ನಂತರ ಆ ಭವನ ಭಾರತದ ಹಳ್ಳಿಗಳನ್ನು ಉದ್ಧಾರ ಮಾಡುವ ಉದಾತ್ತ ಧ್ಯೇಯವುಳ್ಳ ಒಂದು ಸಂಸ್ಥೆಯ ಕಚೇರಿಗೋಸ್ಕರ ಎಂದು ತಿಳಿಯಿತು. ಇದೆಂತಹ ವಿಪರ್ಯಾಸ! ಹಳ್ಳಿಗಳ ಉದ್ಧಾರಕ್ಕೆ ಪಣತೊಟ್ಟ ಸಂಸ್ಥೆ ಒಂದು ಬೃಹತ್ ನಗರದಲ್ಲಿ ಭವ್ಯ ಕಟ್ಟಡ ನಿರ್ಮಿಸುವುದೆ! ಈ ನಿರ್ಮಾಣ ಕಾರ್ಯ ಮುಗಿಯುವಷ್ಟರಲ್ಲಿ ಆ ಸಂಸ್ಥೆಯ ಸಂಪನ್ಮೂಲದ ಬಹುಪಾಲು ಖರ್ಚಾಗಿರುವುದರಲ್ಲಿ ಸಂಶಯವಿಲ್ಲ. ಹಳ್ಳಿಗಳ ಉದ್ಧಾರದ ಹೆಸರಿನಲ್ಲಿ ಸಂಸ್ಥೆ ಮೊದಲು ತನ್ನ ಸ್ವಂತ ಉದ್ಧಾರ ಮಾಡಿಕೊಂಡದ್ದಲ್ಲದೆ, ತನ್ನ ನೌಕರರಿಗೆ ಒಂದು ಭವ್ಯ ಕಚೇರಿಯನ್ನೂ ಒದಗಿಸಿಕೊಟ್ಟಿತ್ತು. ಈ ಎಲ್ಲ ಉದಾಹರಣೆಗಳು ಪಾರ್ಕಿನ್ಸನ್ನರ ಚಿಂತನೆ, ವಿವೇಚನೆಗಳು ಎಷ್ಟು ನಿಖರ, ಸಾರ್ವದೇಶಿಕ ಮತ್ತು ಸಾರ್ವಕಾಲಿಕ ಎಂಬ ಅಂಶಗಳನ್ನು ತೋರಿಸುತ್ತವೆ.

ಸಂಸ್ಥೆಗಳ ಸಂರಚನೆ, ಕಾರ್ಯಶೈಲಿ ಮತ್ತು ಅವುಗಳ ವಿಫಲತೆಗೆ ಕಾರಣಗಳು, ಈ ವಿಷಯಗಳ ಬಗೆಗೆ ಬರೆದಿರುವ ಒಬ್ಬ ಪ್ರಭಾವಿ ಲೇಖಕರೆಂದರೆ ಪ್ರೊ. ಲಾರೆನ್ಸ್-ಜೆ-ಪೀಟರ್. ಅವರ ಅಭಿಪ್ರಾಯದಲ್ಲಿ ಅನೇಕ ಸಂಸ್ಥೆಗಳಲ್ಲಿ ತಾಂಡವವಾಡುತ್ತಿರುವ ಅದಕ್ಷತೆ ಮತ್ತು ಅವ್ಯವಸ್ಥೆಗಳಿಗೆ ಮೂಲ ಕಾರಣ ಆ ಸಂಸ್ಥೆಗಳ ಅಧ್ಯಕ್ಷ, ಕಾರ್ಯಕಾರಿ ನಿರ್ದೇಶಕ, ಸಚಿವ ಮುಂತಾದ ಅತ್ಯುಚ್ಚ ಪದಾಧಿಕಾರಿಗಳ ಮೇಲಾಗಿರುವ 'ಪೀಟರ್ ನಿಯಮ'ದ ಪ್ರಭಾವ. ''ಪ್ರತಿಯೊಬ್ಬ ಉದ್ಯೋಗಿಯೂ ತನ್ನ ಅದಕ್ಷತೆಯ ರೇಖೆಯ ಹಂತಕ್ಕೆ ಏರುತ್ತಾನೆ'' ಎನ್ನುವುದೇ ಪೀಟರ್' ನಿಯಮ. [Peter Principle] ಸರಕಾರಿ ಇಲಾಖೆಗಳಲ್ಲಾಗಲಿ, ಖಾಸಗಿ ಉದ್ದಿಮೆ, ಸಂಸ್ಥೆಗಳ

ಲ್ಲಾಗಲಿ ಒಬ್ಬ ನೌಕರ ತನ್ನ ಸದ್ಯದ ಕೆಲಸದಲ್ಲಿ ದಕ್ಷತೆ ಪ್ರದರ್ಶಿಸಿದರೆ, ಅವನಿಗೆ ಮೇಲಿನ ಹುದ್ದೆಗೆ ಬಡ್ತಿ ದೊರೆಯುತ್ತದೆ. ಇದು ಸರಿಯಾದ ಕ್ರಮವೇ, ಇದರಲ್ಲಿ ಯಾವ ದೋಷವೂ ಇಲ್ಲ. ಈ ರೀತಿ ನೌಕರ ತನ್ನ ಸದ್ಯದ ಹುದ್ದೆಯಲ್ಲಿ ತೋರುವ ದಕ್ಷತೆಯ ಆಧಾರದ ಮೇಲೆ ಬಡ್ತಿ ಹೊಂದುತ್ತಾ ಮೇಲು ಮೇಲಿನ ಹುದ್ದೆಗಳನ್ನು ಗಳಿಸುತ್ತಾನೆ. ಆದರೆ ಕೊನೆಗೊಂದು ಬಾರಿ ಬಡ್ತಿ ದೊರೆತ ನಂತರ ಮೇಲಿನ ಹುದ್ದೆ ಪಡೆದಾಗ, ಉದ್ಯೋಗಿ ಆ ಹುದ್ದೆಗೆ ಸರ್ವಥಾ ಯೋಗ್ಯನಾಗಿರುವುದಿಲ್ಲ. ಅವನಲ್ಲಿ ಅದಕ್ಷತೆ, ಅನರ್ಹತೆಗಳು ತಲೆದೋರಿ ಅವನು ಸ್ವತಃ ತೊಂದರೆಗೀಡಾಗುವುದಲ್ಲದೆ, ಸಂಸ್ಥೆಗೂ ಹಾನಿಕಾರಕನಾಗುತ್ತಾನೆ. ಈ ಪ್ರಕ್ರಿಯೆಯಲ್ಲಿ ಒಂದು ಅನಿಶ್ಚಿತತೆಯ ಅಂಶವಿದೆ. ಒಬ್ಬ ಉದ್ಯೋಗಿ ತನ್ನ ಈಗಿನ ಕೆಲಸದಲ್ಲಿ ದಕ್ಷನಾಗಿದ್ದರೆ ಬಡ್ತಿಗೇನೋ ಅರ್ಹನಾಗುತ್ತಾನೆ. ಆದರೆ ಬಡ್ತಿ ದೊರೆತ ನಂತರ ಮೇಲಿನ ಹುದ್ದೆಯಲ್ಲಿ ಅಪೇಕ್ಷಿತ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಾನೆಂಬ ಯಾವ ಭರವಸೆಯೂ ಇಲ್ಲ. ಕೆಲವು ಉದ್ಯೋಗಿಗಳು ಮೊದಲನೆಯ ಬಡ್ತಿ ದೊರೆತಾಗಲೇ ತಮ್ಮ ಅದಕ್ಷತೆಯ ರೇಖೆಯ ಹಂತವನ್ನು ತಲುಪಿದರೆ, ಇತರರು ಎರಡನೆಯ, ಮೂರನೆಯ, ನಾಲ್ಕನೆಯ ಇತ್ಯಾದಿ ಬಡ್ತಿ ದೊರೆತಾಗ ಆ ರೇಖೆಯನ್ನು ಮುಟ್ಟಬಹುದು. ಈ ಕಾರಣದಿಂದ ಎಲ್ಲ ಸಂಸ್ಥೆಗಳ ಎಲ್ಲ ಹಂತಗಳಲ್ಲೂ ಎಷ್ಟೋ ಮಂದಿ ಅದಕ್ಷ, ಅಸಮರ್ಥ ನೌಕರರಿರುತ್ತಾರೆ. ಅತ್ಯುಚ್ಚ ಅಧಿಕಾರಿಗಳೂ ಪೀಟರ್ ನಿಯಮಕ್ಕೆ ಬದ್ಧರಾಗಿರುವುದರಿಂದ ಅನೇಕ ಇಲಾಖೆಗಳಲ್ಲಿ, ಸಂಸ್ಥೆಗಳಲ್ಲಿ ಅದಕ್ಷತೆ, ಅರಾಜಕತೆಗಳು ತಲೆಯೆತ್ತುತ್ತವೆ. ನಮ್ಮ ದೇಶದಲ್ಲಿನ ಸರಕಾರಿ ಇಲಾಖೆಗಳಲ್ಲಿ ಮತ್ತು ಸರಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿರುವ ಅವ್ಯವಸ್ಥೆಗೆ ಪೀಟರ್ ನಿಯಮ ಎಷ್ಟು ಮಟ್ಟಿಗೆ ಕಾರಣ ಎನ್ನುವ ವಿಷಯದಲ್ಲಿ ಒಂದು ಅಧ್ಯಯನವನ್ನು ನಡೆಸಿದರೆ ಬಹಳ ರೋಚಕವಾದ ಸಂಗತಿಗಳು ಬೆಳಕಿಗೆ ಬರಬಹುದು.

ಸಂಸ್ಥೆಗಳ, ಉದ್ದಿಮೆಗಳ ಅದಕ್ಷತೆಗೆ ಕಾರಣ ತಿಳಿದ ಮೇಲೆ ಅದಕ್ಕೆ ಪರಿಹಾರ ಕಂಡುಹಿಡಿಯಬೇಕಲ್ಲವೇ? ಒಬ್ಬ ನೌಕರ ಅಥವಾ ಅಧಿಕಾರಿ ಸದ್ಯಕ್ಕೆ ದಕ್ಷನಾಗಿದ್ದರೂ ಬಡ್ತಿ ಕೊಟ್ಟ ನಂತರ ಮೇಲಿನ ಹುದ್ದೆಯಲ್ಲಿ ದಕ್ಷನಾಗಿಯೆ ಉಳಿಯುವನೋ ಅಥವಾ ಅವನು ತನ್ನ ಅದಕ್ಷತೆಯ ರೇಖೆಯ ಹಂತವನ್ನು ಮುಟ್ಟುವನೋ ಎಂಬುದನ್ನು ಮೊದಲೇ ತಿಳಿಯುವ ಸಾಧ್ಯತೆಯಿದ್ದರೆ, ಈ ಸಮಸ್ಯೆಗೆ ಪರಿಹಾರ ಸಿಕ್ಕಿದಂತಾಗುವುದು. ಆದರೆ ಪ್ರೊ. ಪೀಟರರ ಪ್ರಕಾರ ಇದು ಸಾಧ್ಯವಿಲ್ಲ. ಅವರು ಹೇಳುವ ಸಮಸ್ಯೆಯ ಸಮಾಧಾನವೆಂದರೆ; ಪ್ರತಿಯೊಬ್ಬ ನೌಕರನೂ ಬಡ್ತಿ ಸಿಗುವ ಸಮಯದಲ್ಲಿ ಆತ್ಮಶೋಧ ಮಾಡಿಕೊಳ್ಳಬೇಕು. ಮೇಲಿನ ಹುದ್ದೆಯನ್ನು ನಾನು ಸರಿಯಾಗಿ ನಿರ್ವಹಿಸಬಲ್ಲೆನೆ; ಈ ಬಡ್ತಿಯಿಂದ ನನಗೆ ಸ್ವಂತ ಮತ್ತು ಪಾರಿವಾರಿಕ ಸುಖ ಸಂತೋಷಗಳು ದೊರೆಯುವವೆ, ಅಲ್ಲದೆ ಸಂಸ್ಥೆಗೆ ನನ್ನಿಂದ ಹೆಚ್ಚಿನ ಉಪಯೋಗವಾಗುತ್ತದೆಯೇ ಇತ್ಯಾದಿ. ಈ ಪ್ರಶ್ನೆಗಳಿಗೆ ಪ್ರಾಮಾಣಿಕ ಉತ್ತರ ಸಿಗದಿದ್ದರೆ ನೌಕರ ಬಡ್ತಿಯನ್ನು ನಿರಾಕರಿಸಿ ತಾನಿರುವ ಹುದ್ದೆಯಲ್ಲೇ ಮುಂದುವರಿಯಬೇಕು. ಯಾವ ದೇಶದಲ್ಲಾದರೂ, ಉದ್ಯೋಗಿಗಳು ಸಂಸ್ಥೆಯ ಹಿತ ದೃಷ್ಟಿಯಿಂದ ಸ್ವಾರ್ಥ ತ್ಯಾಗ ಮಾಡಿ ಇಂತಹ ಆದರ್ಶ ಮಾರ್ಗವನ್ನು ಅನುಸರಿಸುತ್ತಾರೆಂದು ಹೇಳುವುದು ಕಷ್ಟ.

ಆಡಳಿತ ಪದ್ಧತಿ ಮತ್ತು ಬಡ್ತಿ ನಿಯಮಗಳ ವಿಚಾರದಲ್ಲಿ ನಮ್ಮಲ್ಲಿನ ಪರಿಸ್ಥಿತಿಗಳನ್ನು ಸ್ವಲ್ಪ ನೋಡೋಣ. ಸಾಮಾನ್ಯವಾಗಿ ಸರ್ಕಾರಿ ವಲಯದಲ್ಲಾಗಲಿ, ಖಾಸಗಿ ವಲಯದಲ್ಲಾಗಲಿ ಬಡ್ತಿ ಮುಖ್ಯವಾಗಿ ನೌಕರರಿಗೆ ಸಂಬಂಧಿಸಿದ ಗೋಪ್ಯ ವರದಿ [Confidential Report-C.R.] ಮೇಲೆ ಅವಲಂಬಿಸಿದೆ. ಈ ವರದಿಗಳಲ್ಲಿ ನೌಕರರ ಕಾರ್ಯ ಕುಶಲತೆ, ದಕ್ಷತೆ ಸಾಧನೆಗಳ ಬಗ್ಗೆ ಅವರ ಮೇಲಾಧಿಕಾರಿಗಳು ವರ್ಷಕ್ಕೊಮ್ಮೆ

ತೀರ್ಪು ಬರೆಯುತ್ತಾರೆ. ಈ C.R. ನೌಕರರ ಸರಕಾರಿ ಜಾತಕವೆಂದೇ ಹೇಳಬಹುದು. ಇದರಲ್ಲಿ ನೌಕರರನ್ನು 'ಸಮಾಧಾನಕರ', 'ಒಳ್ಳೆಯ', 'ಉತ್ತಮ', 'ಅತ್ಯುತ್ತಮ' [Outstanding] ಎಂದು ವರ್ಗೀಕರಿಸಲಾಗುತ್ತದೆ. ಕೆಳದರ್ಜೆಯ ನೌಕರರು ಸಾಮಾನ್ಯವಾಗಿ ಸೇವಾಜೇಷ್ಠತೆಗನುಗುಣವಾಗಿ ಬಡ್ತಿ ಹೊಂದುತ್ತಾರೆ. ಮೇಲ್ದರ್ಜೆಯ ಅಧಿಕಾರಿಗಳು ಬಡ್ತಿ ಪಡೆಯಲು 'ಉತ್ತಮ' ಅಥವಾ 'ಅತ್ಯುತ್ತಮ' ವರ್ಗೀಕರಣವನ್ನು ಪಡೆಯಲೇಬೇಕು. ಪೀಟರರ ನಿಯಮದ ಪ್ರಕಾರ ಈಗಿನ ಹುದ್ದೆಯಲ್ಲಿ ದಕ್ಷನಾಗಿರುವವನು ಮೇಲಿನ ಹುದ್ದೆಗೆ ಬಡ್ತಿ ಹೊಂದುತ್ತಾನೆ. ಆದರೆ ಇಲ್ಲಿ ಈ ನಿಯಮ ಎಲ್ಲ ಸಂದರ್ಭಗಳಲ್ಲೂ ಅನ್ವಯಿಸುವುದಿಲ್ಲ.

ಏಕೆಂದರೆ ಅಧಿಕಾರಿಯ ಬಗೆಗೆ ಗೋಪ್ಯ ವರದಿ ಬರೆಯುವವ ಮೇಲಾಧಿಕಾರಿಯ ಮರ್ಜಿಯನ್ನವಲಂಬಿಸಿ ಅದಕ್ಷನಾದವನೂ ಅತ್ಯುತ್ತಮನೆನಿಸಿ ಬಡ್ತಿ ಪಡೆಯಬಹುದು. ಮೇಲಧಿಕಾರಿಗಳ ಸ್ವಜನಪಕ್ಷಪಾತ, ಭ್ರಷ್ಟಾಚಾರ, ಸ್ತುತಿಪರತೆ ಇತ್ಯಾದಿ ಕಾರಣಗಳಿಂದ ಹೀಗಾಗಬಹುದು. ಈ ವಿಷಯದಲ್ಲಿ ಮೇಲೆ ಹೇಳಿದ ಕಾರಣಗಳಲ್ಲದೆ ಇನ್ನೊಂದು ವೈಪರಿತ್ಯವೂ ತನ್ನ ಪ್ರಭಾವ ಬೀರುತ್ತದೆ. ತಮ್ಮ ಬಗೆಗೆ ಮೇಲಾಧಿಕಾರಿ ವರದಿಯಲ್ಲಿ ಏನು ಬರೆದಿದ್ದಾರೆಂಬುದನ್ನು ತಿಳಿದುಕೊಳ್ಳುವುದರಲ್ಲಿ ಬಹಳಷ್ಟು ಮಂದಿ ಅಧಿಕಾರಿಗಳು ಕುಶಲರಾಗಿರುತ್ತಾರೆ. ಅಂತಹವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಮೇಲಧಿಕಾರಿಯನ್ನು ನೇರವಾಗಿ, ಯಾವ ಅಳುಕೂ ಇಲ್ಲದೆ ತಮಗೆ ಸದ್ಯದಲ್ಲೇ ಬಡ್ತಿ ದೊರೆಯಲಿರುವುದರಿಂದ ತಮ್ಮ ಬಗ್ಗೆ ರಿಪೋರ್ಟ್ ಚೆನ್ನಾಗಿ (ಅತ್ಯುತ್ತಮನೆಂದು) ಬರೆಯಬೇಕೆಂದು ಕೇಳುತ್ತಾರೆ. ಇಂತಹ ಬೇಡಿಕೆಗಳನ್ನು ತಿರಸ್ಕರಿಸುವಂತಿಲ್ಲ; ಉಪಾಯವಾಗಿ ತಪ್ಪಿಸಿಕೊಳ್ಳುವಂತೆಯೂ ಇಲ್ಲ. ನಿಜಸ್ಥಿತಿಯೇನೆಂದರೆ, ಗೋಪ್ಯ ವರದಿಗಳಲ್ಲಿ ಬರೆದಿರುವುದು ಗೋಪ್ಯವಾಗಿ ಉಳಿಯುವುದಿಲ್ಲ. ಕೆಳಗಿನ ಅಧಿಕಾರಿ ಕೋರಿದಂತೆ ಅವನ ರಿಪೋರ್ಟ್ ಸರಿಯಾಗಿ ಬರೆಯದಿದ್ದರೆ ಅದು ಅವನಿಗೆ ಗೊತ್ತಾಗಿ, ಆ ಧೂರ್ತ ನಡೆಸಬಹುದಾದ ಕಾರಸ್ಥಾನಗಳನ್ನು ಎದುರಿಸಲು ಮೇಲಧಿಕಾರಿ ಸಿದ್ಧನಿರಬೇಕು. ಇಂತಹ ವಿಕೃತ, ಕಲುಷಿತ ವಾತಾವರಣದಲ್ಲಿ ಪ್ರತಿಹಂತದಲ್ಲೂ ಯೋಗ್ಯ ವ್ಯಕ್ತಿಗೇ ಬಡ್ತಿ ಸಿಗುತ್ತದೆಂಬ ಭರವಸೆಯಿಲ್ಲ. ಏನಕೇನ ಪ್ರಕಾರೇಣ ಬಡ್ತಿ ದೊರಕಿಸಿಕೊಳ್ಳಲು ಸಾಮಾನ್ಯವಾಗಿ ಎಲ್ಲ ನೌಕರರು, ಅಧಿಕಾರಿಗಳು ಭಯಂಕರ ಸ್ಪರ್ಧೆಯಲ್ಲಿ ತೊಡಗುತ್ತಾರೆ. ಆದ್ದರಿಂದ ಇಲ್ಲಿ ನೌಕರರು ಇಲಾಖೆಯ, ಸಂಸ್ಥೆಯ ಹಿತದೃಷ್ಟಿಯಿಂದ ಬಡ್ತಿಯನ್ನು ನಿರಾಕರಿಸುವ ಪ್ರಶ್ನೆಯೇ ಏಳುವುದಿಲ್ಲ. ಪರಿಣಾಮವಾಗಿ ಸರಕಾರದ, ಉದ್ದಿಮೆ, ಸಂಸ್ಥೆಗಳ ಎಲ್ಲ ಹಂತಗಳಲ್ಲೂ ಅನೇಕ ಮಂದಿ ಅದಕ್ಷ ನೌಕರ, ಅಧಿಕಾರಿಗಳನ್ನು ಕಾಣಬಹುದು. ನಮ್ಮ ಪರಿವೇಶದಲ್ಲಿ ಪೀಟರರ ನಿಯಮದ ಸಂಪೂರ್ಣ ಅನ್ವಯ ಸಾಧ್ಯವಿಲ್ಲದಿದ್ದರೂ, ನಿಯಮ ಹೇಳುವಂತಹ ಪರಿಣಾಮ ಮಾತ್ರ ಇನ್ನೂ ತೀವ್ರವಾಗಿ ಆಗಿದೆಯೆಂದು ಹೇಳಬಹುದು. ನಮ್ಮ ಅನೇಕ ಸರಕಾರಿ ಇಲಾಖೆಗಳ, ಉದ್ದಿಮೆಗಳ ಕಾರ್ಯ ಶೈಲಿಯನ್ನು ನೋಡಿದರೆ ಅವುಗಳ ಪ್ರಮುಖರು ನಿಜವಾಗಿಯೂ ತಮ್ಮ ಅದಕ್ಷತೆಯ ರೇಖೆಯ ಹಂತಕ್ಕೆ ಏರಿದ್ದಾರೆಂದು ಹೇಳಬಹುದು! ●

ವಿವೇಚನೆಯಿಲ್ಲದೆ ಖರ್ಚು ಮಾಡಬಹುದಾದ ಒಂದೇ ಒಂದಾದ ಅತ್ಯಮೂಲ್ಯ ಪದಾರ್ಥವೆಂದರೆ ಕಾಲ.

– ಚೀನಾಗಾದೆ

ಇತಿಹಾಸ

ಬಾಲಕನ ಬಲಿದಾನ

● ಮೂರ್ತಿ ರಾಮನಾಥಪುರ

ಅಗ 1857ರ ಕ್ರಾಂತಿಯ ದಿನಗಳು. ವೀರ ಹುತಾತ್ಮರ ಚರ್ಚೆ ಜನರ ನಾಲಗೆಯ ಮೇಲೆ. ಎಲ್ಲೆಡೆ ಸ್ವಾತಂತ್ರ್ಯದ ಹುಮ್ಮಸ್ಸು ಹಬ್ಬಿತ್ತು.

ಜೋರಾಪುರ, ಹೈದ್ರಾಬಾದ್ ಬಳಿಯ ಒಂದು ಚಿಕ್ಕದಾದ ಪ್ರಾಂತ್ಯ. ಅಲ್ಲಿಯ ರಾಜಕುಮಾರ ರಾಮಚಂದ್ರ ರಾವ್. ಆಗ ಅವನ ವಯಸ್ಸು ಕೇವಲ ಹದಿನಾಲ್ಕು ವರ್ಷ. ಹುತಾತ್ಮರಾದ ಕ್ರಾಂತಿಕಾರಿಗಳ ಕಥೆಗಳನ್ನು ಕೇಳಿ ಅವನು ರೋಮಾಂಚಿತನಾಗಿದ್ದ. ಅವನು ಒಂದು ಪ್ರಾಂತ್ಯದ ರಾಜಕುಮಾರನಾಗಿದ್ದರೂ ಆಂಗ್ಲರ ಪಾರತಂತ್ರ್ಯದ ಪರಿಣಾಮವನ್ನು ಚೆನ್ನಾಗಿ ತಿಳಿದುಕೊಂಡಿದ್ದ. ಆಂಗ್ಲರ ಆಡಳಿತದ ವಿರುದ್ಧ ದಂಗೆ ಮಾಡಬೇಕೆಂಬುದು ಆತನ ದೃಢ ನಿಶ್ಚಯ.


ರಾಮಚಂದ್ರರಾವ್ ತನ್ನ ರಾಜ್ಯದ ರೂಹೇಲಿಗಳು ಹಾಗೂ ಪಠಾಣರನ್ನು ಒಗ್ಗೂಡಿಸಿ ಅವರಲ್ಲಿ ಸ್ವಾತಂತ್ರ್ಯದ ಭಾವನೆಯನ್ನು ತುಂಬತೊಡಗಿದ. ರಾತ್ರಿಯಲ್ಲಿ ಮೌನವಾಗಿ ಅರಮನೆಯಿಂದ ಕಾಡಿಗೆ ಬಂದು ತನ್ನ ಯುವ ಜತೆಗಾರರೊಂದಿಗೆ ಸ್ವಾತಂತ್ರ್ಯಗಳಿಸುವ ಉಪಾಯದ ಬಲೆಯನ್ನು ನೇಯುತ್ತಿದ್ದ.

ಆಂಗ್ಲರ ಮೇಲೆ ಮುತ್ತಿಗೆ ಹಾಕಲು ಉಪಾಯ ಹೂಡಿ ಒಮ್ಮೆ ಹೈದ್ರಾಬಾದಿಗೆ ಬಂದ. ಅವನಿಗೆ ಸಾಕಷ್ಟು ಪ್ರಮಾಣದಲ್ಲಿ ಮದ್ದು ಗುಂಡುಗಳು ಬೇಕಾಗಿತ್ತು. ಈ ಕೆಲಸಕ್ಕಾಗಿ ಆ ಪ್ರಾಂತ್ಯದ ಪ್ರಧಾನಮಂತ್ರಿ ಸಾಲಾರ್ ಜಂಗನಿಂದ ಸಹಾಯವನ್ನು ಬೇಡಿದ. ದುರಾದೃಷ್ಟವಶಾತ್ ಹೈದ್ರಾಬಾದಿನ ನಿಜಾಮ ಅಫಜಲುದ್ದೌಲಾನಿಗೆ ಇವೆಲ್ಲವೂ ತಿಳಿದು ಹೋಯಿತು. ಆಂಗ್ಲರ ಬಾಲಬಡುಕನಾಗಿದ್ದ ಅವನು ರಾಮಚಂದ್ರರಾವ್‌ನನ್ನು ಬಂಧಿಸುವಲ್ಲಿ ಸಫಲನಾದ.

ಈ ಮಗುವಿನಿಂದ ಕ್ರಾಂತಿ ಯೋಜನೆಯ ಕಿಡಿಗಳು ಸುಲಭವಾಗಿ ಹಾರಬಹುದು ಎಂದು ಆಗಿನ ಆಂಗ್ಲ ಅಧಿಕಾರಿ ಮೀಡೋಜ್ ಟೇಲರ್ ಯೋಚಿಸಿದ. ಅಲ್ಲದೆ ಹುಡುಗನ ಗೆಳೆತನ ಬೆಳೆಸಿ ಅನೇಕ ರೀತಿಯ ಆಮಿಷಗಳನ್ನು ಒಡ್ಡಿ ಅವನನ್ನು ಬುಟ್ಟಿಗೆ ಹಾಕಿಕೊಳ್ಳಲೂ ಯತ್ನಿಸಿದ. ಅವನು ಒಪ್ಪದಿದ್ದಾಗ ಅನೇಕ ಕಷ್ಟಗಳಿಗೆ ಗುರಿಪಡಿಸಲಾಯ್ತು. ಆದರೆ ಈ ಹುಡುಗ ಮಾತ್ರ ತನ್ನ ಜತೆಗಾರರ ಬಗೆಗೆ ಏನೂ ಹೇಳಲಿಲ್ಲ. ದೇಶದ ಒಳಿತಿಗಾಗಿ ತನ್ನ ಆತ್ಮಾರ್ಪಣೆಯಾದರೂ ಸರಿಯೇ, ಅದೊಂದು ಸೌಭಾಗ್ಯ ಎಂದು ಅಂಜದೆ ಎದುರಿಸಿದ.

ಕೊನೆಗೆ ರಾಜದ್ರೋಹದ ಆರೋಪ ಹೊರಿಸಿ ಅವನಿಗೆ ಜೀವನ ಪರ್ಯಂತ ನಿರ್ಜನ ದ್ವೀಪವೊಂದಕ್ಕೆ ಕಳಿಸುವ ಕಠಿಣ ಶಿಕ್ಷೆ ವಿಧಿಸಿದರು. ಅವನನ್ನು ಶಿಕ್ಷಿಸಲು ಕೊಂಡೊಯ್ಯುತ್ತಿದ್ದಾಗಲೇ ದಾರಿಯಲ್ಲಿ ಆಂಗ್ಲ ಕಾವಲುಗಾರನ ಕೈಯಿಂದ ಪಿಸ್ತೂಲೊಂದನ್ನು ಕಿತ್ತುಕೊಂಡು ತಾನೇ ಹೊಡೆದುಕೊಂಡು ಪ್ರಾಣಬಿಟ್ಟ.

ಈ ರಾಜಕುಮಾರನ ಬಲಿದಾನದ ಕಥೆಯನ್ನು ತನ್ನ ಸ್ಮರಣ ಪುಸ್ತಿಕೆಯಲ್ಲಿ ವರ್ಣಿಸುತ್ತಾ ಮೀಡೋಜ್ ಟೇಲರ್, "ಆ ಬಾಲಕನ ಬಾಯಿಯಿಂದ ದೇಶ ಭಕ್ತಿಯ ಮರ್ಮವನ್ನು ಕೇಳಿ ನಾನೂ ಸಹ ರೋಮಾಂಚಿತನಾದೆ. ಅಂತಹ ಬಾಲಕನ ಬದುಕು ಧನ್ಯ" ಎಂದು ಹೊಗಳಿದ್ದಾನೆ. ●



ಅವಸಾನದ ಅಂಚಿನಲ್ಲಿ ಅರಲ್ ಸಮುದ್ರ

● ಅರುಣ

ಮಧ್ಯ ಏಶಿಯದ ಕಾರಾಕುಮ್ ಮತ್ತು ಕಿಝ್ಯುಲ್‌ಕುಮ್ ಮರುಭೂಮಿಗಳ ಸಂಧಿಸ್ಥಾನದಲ್ಲಿ ಹೊಸದೊಂದು ಮರುಭೂಮಿ ಕಳೆದ ವರ್ಷ ಅಸ್ತಿತ್ವಕ್ಕೆ ಬಂದಿದೆ. ಸ್ಥಳೀಯ ಜನ ಅದಕ್ಕಿಟ್ಟ ಹೆಸರು 'ಅರಾಲ್ಕುಮ್' ಎಂದು. ಹಿಂದೆ ಇದೇ ವಲಯದಲ್ಲಿ ವಿಸ್ತಾರವಾಗಿ ಹರಡಿಕೊಂಡಿದ್ದ ಅರಲ್ ಸಮುದ್ರ ಪರಿಸರದಲ್ಲಿತ್ತು ಸಂಪತ್ಸಮೃದ್ಧ ನಗರ ಅರಾಲ್ಸ್ಕಿ. ಅದು ಇಂದು ಧೂಳು ಮತ್ತು ಉಸುಕುಮಯ ಪ್ರೇತ ನಗರವಾಗಿದೆ. ಅಲ್ಲಿ ವಾಸಿಸುತ್ತಿದ್ದವರಲ್ಲಿ ಅರ್ಧಕ್ಕರ್ಧ ಮಂದಿ ಗುಳೆ ಕಿತ್ತಿದ್ದಾರೆ. ತಮ್ಮ ಬದುಕಿನ ಆಧಾರವಾಗಿದ್ದ ಅರಲ್ ಸಮುದ್ರ ಸಾಯತೊಡಗಿದರೆ ಅವರಿನ್ನೇನು ಮಾಡಿಯಾರು?

''19ನೇ ಶತಮಾನದಲ್ಲಿ ರಶಿಯದ ಹೆಸರಾಂತ ಕವಿ ತರಾಸ್ ಶೆವ್ಚೆಂಕೊ ಗಡಿಪಾರಾಗಿ ಬಂದು ಇಲ್ಲಿ ನೆಲೆಸಿದ್ದ. ಆ ಕಾಲದಲ್ಲಿ ಅರಲ್ ನಂದನವನವಾಗಿತ್ತು. ಸಮುದ್ರದಲ್ಲಿ ನಾನಾ ಜಾತಿಯ ಮೀನುಗಳು ಹೇರಳವಾಗಿದ್ದವು. ಆಸುಪಾಸಿನಲ್ಲಿ ಮರಗಿಡಗಳು ಸಮೃದ್ಧವಾಗಿ ಬೆಳೆದಿದ್ದವು. ಕವಿ ಸ್ವತಃ ಈ ಪ್ರದೇಶದಲ್ಲಿ ಹಲವು ಬಗೆಯ ಹಣ್ಣಿನ ಮರಗಳನ್ನು ಬೆಳೆಸಿದ್ದ. ಆದರೆ ಇಂದು ಎಲ್ಲ ಬರಿದೋ ಬರಿದು. ಮರಭೂಮಿಯ ಒಣಹವೆ

> ನಿಸರ್ಗವನ್ನು ಮಾನವ ಯದ್ವಾತದ್ವಾ ಶೋಷಿಸಿದರೆ ಎಂತಹ ಭೀಕರ ಪರಿಣಾಮವಾಗಬಹುದು ಎಂಬುದಕ್ಕೆ ಅರಲ್ ಸಮುದ್ರದ ಅವಸಾನ ಜೀವಂತ ನಿದರ್ಶನ. ಒಂದು ಕಾಲದಲ್ಲಿ ನಂದನವನವಾಗಿದ್ದ ಅರಲ್ ಸಮುದ್ರದ ಪರಿಸರ ಇಂದು ಮರುಭೂಮಿ ಅಷ್ಟೇ ಅಲ್ಲ, ರೋಗಗಳ ಕೊಂಪೆಯೂ ಆಗುತ್ತಿದೆ.

ಹರಡಿವೆ, ಸಮುದ್ರದ ಜಲ ಬತ್ತಿದೆ. ತೇಪೆ ಹಾಕಿದಂತೆ ಅಲ್ಲಲ್ಲಿ ಕೊಳಗಳ ರೂಪದಲ್ಲಿ ಅಲ್ಪಸ್ವಲ್ಪ ನೀರು ಕಂಡು ಬರುತ್ತದೆ. ನಾವು ಯಾವುದೋ ದೊಡ್ಡ ಕಾನ್ಸಂಟ್ರೇಶನ್ ಕ್ಯಾಂಪ್‌ನಲ್ಲಿ ನೆಲೆಸಿದ್ದೇವೇನೋ ಅನಿಸುತ್ತದೆ'' - ಸ್ಥಳೀಯ ಇತಿಹಾಸಕಾರ ಖುದಾಯಿಬರ್ಗನ್ ಝಸೆಕೆನೊವ್‌ನ ಈ ಮಾತುಗಳು ಅರಲ್‌ನ ಸದ್ಯದ ದುಸ್ಥಿತಿಗೆ ಕನ್ನಡಿ ಹಿಡಿದಂತಿವೆ.

ಅರಲ್ ತಟದ ಕಿತೆಜ್ ನಗರದ ವೈದ್ಯ ಬುದತ್ ಅಲ್ಸೆಯಿತೊವ್ ನೀಡುವ ಚಿತ್ರ ನೋಡಿ: ''ಇಲ್ಲಿ ಜನಿಸುವ ಪ್ರತಿ ಸಾವಿರ ಮಕ್ಕಳಲ್ಲಿ ನೂರು ತಮ್ಮ ಮೊದಲ ಹುಟ್ಟು ಹಬ್ಬಕ್ಕೆ ಮುನ್ನವೆ ಕಣ್ಣು ಮುಚ್ಚುತ್ತವೆ. ಇನ್ನು ಅಂಗವಿಕಾರಕ್ಕೊಳಗಾಗಿ ಹುಟ್ಟುವ ಶಿಶುಗಳೆಷ್ಟೊ. ಕೆಲವಕ್ಕೆ ಮಿದುಳೇ ಬೆಳೆದಿರುವುದಿಲ್ಲ. ಮತ್ತೆ ಕೆಲವಕ್ಕೆ ಕರುಳಿನ ಭಾಗಗಳೇ ಇರುವುದಿಲ್ಲ. ಪಾದಗಳಿಲ್ಲದವು ಹಲವಾದರೆ ಕೆಲವು ಮಕ್ಕಳಿಗೆ ಮಿದುಳನ್ನು ಮುಚ್ಚಿರುವುದು ತಲೆ ಬುರುಡೆಯಲ್ಲ, ಚರ್ಮದ ತೆಳು ಪದರು!''

ಅರಲ್ ಸಮುದ್ರದ ಸಾವು ಮಧ್ಯ ಏಶಿಯದ 30 ಮಿಲಿಯ ಜನ ಎದುರಿಸುತ್ತಿರುವ ಪರಿಸರ ಮಾಲಿನ್ಯ ಸಮಸ್ಯೆಯ ಒಂದು ಪ್ರಮುಖ ಭಾಗ ಮಾತ್ರ. ಉಪ್ಪು ಮಿಶ್ರಿತ, ವಿಷಯುಕ್ತ ನೀರು ಅರಲ್‌ನ ತಗ್ಗು ಪ್ರದೇಶಗಳಿಗೆ ಹರಿದು ಅಲ್ಲಿನ ಪರಿಸರ ಸಂಪೂರ್ಣ ಕೆಟ್ಟುಹೋಗಿದೆ. ಇಡೀ ಸಮುದ್ರ ವಲಯ ಅಲ್ಲಲ್ಲಿ ಸಣ್ಣ ಪುಟ್ಟ ಕೊಳಕು ಹಳ್ಳವಾಗಿ ಒಡೆದಿದೆ. ಅರಲ್‌ನ ಪಶ್ಚಿಮಕ್ಕಿರುವ ಸಾರಿಕಾಮೀಶ್ ಹಳ್ಳಕ್ಕೆ ಪ್ರತಿ ವರ್ಷ ಐವತ್ತು ಕೋಟಿ ಘನ ಮೀಟರು ಕೊಳಕು ನೀರು ಹರಿದು ಬರುತ್ತದೆ. ಈ ಪ್ರದೇಶದ ಮೇಲೆ ವಿಮಾನದಲ್ಲಿ ಕುಳಿತು ಕೆಳಗೆ ದೃಷ್ಟಿ ಬೀರಿದರೆ ಅರಲ್‌ನ ತೀರಗಳೇ ಕಾಣಸುವುದಿಲ್ಲ. ಅದು ವಿಶಾಲವಾಗಿ ವ್ಯಾಪಿಸಿದ ಆರೋಗ್ಯವಂತ ಸಮುದ್ರದಂತೆಯೇ ಗೋಚರಿಸುತ್ತದೆ. ಆದರೆ ಸಮೀಪದಲ್ಲಿ ನಿಂತಾಗಲೇ ಅದೊಂದು ಮಹಾ ಕೊಚ್ಚೆ ಹೊಂಡದಂತೆ ಕಾಣುವುದು. ಅರಲ್‌ಸಮುದ್ರ ವಲಯದ ಆಸುಪಾಸಿನಲ್ಲಿ ನಲ್ವತ್ತು ಸರೋವರಗಳಿವೆ. ಇವುಗಳ ನೀರು, ನೆಲದ ಮಣ್ಣು ಅದೆಷ್ಟು ವಿಷಮಯವೆಂದರೆ ಒಂದು ಹುಲ್ಲು ಕಡ್ಡಿಯೂ ಅಲ್ಲಿ ಬೆಳೆಯುವುದಿಲ್ಲ.

ಅರಲ್ ಸಮುದ್ರ ಅಂಗಲಂಗುಲವಾಗಿ ಸಾವನ್ನಪ್ಪಲು ಮುಖ್ಯ ಕಾರಣ ಮಿತಿಮೀರಿದ ಪ್ರಮಾಣದಲ್ಲಿ ನೀರಾವರಿ ಕೈಗೊಂಡದ್ದು. ತತ್ಪರಿಣಾಮವಾಗಿ ಅಲ್ಲೆಲ್ಲ ಹ್ಯೂಮಸ್ (ನೆಲದಲ್ಲಿರುವ ಸಸ್ಯ ಸಂಬಂಧವಾದ ಗೊಬ್ಬರ) ಹರಿದು ಹೋಯಿತು. ಈ ನಷ್ಟವನ್ನು ಭರ್ತಿ ಮಾಡಲು ಹೇರಳ ರಾಸಾಯನಿಕ ರಸಗೊಬ್ಬರವನ್ನು ಮಣ್ಣಿಗೆ ಸೇರಿಸಲಾಯಿತು. ನೆಲದ ಮಣ್ಣು ರಸಗೊಬ್ಬರಕ್ಕೆ ಎಷ್ಟು ಒಗ್ಗಿ ಹೋಯಿತೆಂದರೆ ಅದಿಲ್ಲದೆ ಯಾವುದೇ ಬೆಳೆ ಬೆಳೆಯಲು ಅಸಾಧ್ಯವಾಯಿತು. ಸೋವಿಯತ್ ರಷ್ಯದಲ್ಲಿ ಉಳುಮೆ ಮಾಡಿದ ಪ್ರತಿ ಹೆಕ್ಟೇರ್ ಜಮೀನಿನಲ್ಲಿ ತಲಾ ಎರಡು ಕೆ.ಜಿ. ರಾಸಾಯನಿಕ ಗೊಬ್ಬರ ಚೆಲ್ಲುತ್ತಾರೆ. ಮಧ್ಯ ಏಶಿಯದಲ್ಲಂತೂ ಈ ಪ್ರಮಾಣ ಸುಮಾರು 25 ಪಟ್ಟು ಜಾಸ್ತಿ!

ರಾಸಾಯನಿಕ ವಿಷ


ಹತ್ತಿಯ ವ್ಯವಸಾಯದಲ್ಲಿ ರಾಸಾಯನಿಕಗಳ ಬಳಕೆ ಅಧಿಕ. ಯಂತ್ರದಿಂದ ಹತ್ತಿಯನ್ನು ಕೀಳುವ ಮೊದಲು ಎಲೆಗಳನ್ನು ಕಿತ್ತು ತೆಗೆಯಬೇಕು. ಈ ಉದ್ದೇಶದಿಂದ ಎಲೆಗಳನ್ನುದುರಿಸುವ ರಾಸಾಯನಿಕ ವಿಷವನ್ನು, ಮುಖ್ಯವಾಗಿ ''ಏಜೆಂಟ್ ಆರೆಂಜ್''ಅನ್ನು, ಹತ್ತಿ ಹೊಲಗಳ ಮೇಲೆ ಸಿಂಪಡಿಸುತ್ತಾರೆ. ಅಲ್ಲಿ ಕೆಲಸ ಮಾಡುವವರ ತಲೆಯ ಮೇಲೂ ಅದು ಉದುರುತ್ತದೆ. ಫಸಲು ಕುಯ್ದು ನಂತರ ಉಳಿಯುವ ಎಲೆ, ಕಸಕಡ್ಡಿಗಳು ಜಾನುವಾರುಗಳಿಗೆ ಮೇವು. (ಬಾಲ್ಟಿಕ್ ಗಣರಾಜ್ಯಗಳಲ್ಲಿ ಮಾರಾಟ ಮಾಡಿದ ಬೆಣ್ಣೆಯಲ್ಲಿ ರಾಸಾಯನಿಕ ವಿಷದ ಅಂಶಗಳು ಪತ್ತೆಯಾಗಿವೆಯಂತೆ.) ಜನ - ಜಾನುವಾರುಗಳಿಗೆ ಹೀಗೆ ನಿಧಾನ ವಿಷಪ್ರಾಶನ ನಮ್ಮ ಆಧುನಿಕ ಕೃಷಿ ಪದ್ಧತಿಯ ದಾಯವಾಗಿ ಬಂದಿದೆ.

ಅರಲ್ ಜಲಾನಯನ ಪ್ರದೇಶದಲ್ಲಿರುವ ನೀರನ್ನು ಗರಿಷ್ಠ ಪ್ರಮಾಣದಲ್ಲಿ ಕೃಷಿಗೆ ಬಳಸುವ



ಉದ್ದೇಶದಿಂದ 1960ರ ದಶಕದ ಕೊನೆಯಲ್ಲಿ ಜಲ ಸಂಪನ್ಮೂಲಗಳ ಸಚಿವಾಲಯ (ಮಿನ್‌ವೊದ್ಖೊಜ್) ವಿಸ್ತೃತ ಯೋಜನೆಯನ್ನು ರೂಪಿಸಿತು. 1991ರೊಳಗಾಗಿ ನೀರಾವರಿಗೊಳಪಡಬೇಕಾದ ಜಮೀನಿನ ಪ್ರಮಾಣ ಹತ್ತು ಮಿಲಿಯ ಹೆಕ್ಟೇರುಗಳಷ್ಟು; ಅನಂತರ ಕ್ರಮೇಣ ಅದು 23.5 ಮಿಲಿಯ ಹೆಕ್ಟೇರ್‌ಗಳಷ್ಟು ಹೆಚ್ಚಬೇಕು ಎಂಬುದು ಆ ಯೋಜನೆಯ ಗುರಿ. ಇಷ್ಟು ವ್ಯಾಪಕ ಪ್ರಮಾಣದಲ್ಲಿ ಜಮೀನಿಗೆ ನೀರುಣಿಸುವುದರಿಂದ ಅರಲ್ ಸಮುದ್ರದಲ್ಲಿ ನೀರಿನ ಪ್ರಮಾಣ ಕಮ್ಮಿಯಾಗುವುದಿಲ್ಲವೆ? ಅದಕ್ಕಾಗಿಯೇ "ಶತಮಾನದ ಮಹಾಯೋಜನೆ" (ಸೈಬೀರಿಯದ ಮಹಾ ನದಿಗಳು ಹರಿಯುವ ದಿಕ್ಕನ್ನು ಬದಲಿಸುವಿಕೆ) ಯನ್ನು ಹಮ್ಮಿಕೊಳ್ಳಲಾಯಿತು.

ಈ ಯೋಜನೆ ಅನುಷ್ಠಾನವಾದಾಗ ಮಧ್ಯ ಏಶಿಯದಲ್ಲಿ ಸಹಸ್ರ ಸಹಸ್ರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಕಾಲುವೆಗಳು ಹಾದು ಹೋಗುತ್ತವೆ. ಅಲ್ಲದೆ ಈ ನೀರಿನ ಪ್ರಮಾಣದಲ್ಲಿ ಒಂದೇ ಒಂದು ಲೀಟರ್ ನೀರು ಅರಲ್‌ಗೆ ಸೇರುವಂತಿಲ್ಲ. ಆ ಸಮುದ್ರದ ಸ್ಥಳ ವ್ಯಾಪ್ತಿ ಕುಗ್ಗಿ, ಅದು



ಸಂಪೂರ್ಣ ಕಣ್ಮರೆಯಾದರೂ ಆಸುಪಾಸಿನ ಹವಾಮಾನ ಮತ್ತು ಪರಿಸರದ ಮೇಲೆ ಗಂಡಾಂತರಕಾರಿ ಪರಿಣಾಮವೇನೂ ಆಗಲಾರದು. ಬದಲಾಗಿ, ದಕ್ಷಿಣದ ಪ್ರದೇಶಗಳಲ್ಲಿನ ಜೀವನ ಮಟ್ಟ ಖಂಡಿತ ಸುಧಾರಿಸುವುದು ಎಂದು ಮಿನ್‌ವೊದ್ಖೊಜ್ ಯೋಜನೆಗಾರರ ಲೆಕ್ಕಾಚಾರಗಳಾಗಿದ್ದವು. ಈ ಮಹಾಯೋಜನೆ ಸೋವಿಯತ್

ಎಂಜಿನಿಯರಿಂಗ್‌ನ ಅದ್ಭುತ ಸಾಮರ್ಥ್ಯವನ್ನು ಜಗಜ್ಜಾಹೀರುಗೊಳಿಸುವ ಯತ್ನವಾಗಿತ್ತಾದರೂ, ಅನುಷ್ಠಾನಗೊಳ್ಳುವ ಮೊದಲೇ ಅದು 'ಪರಮ ಮೂರ್ಖತನದ ಯೋಜನೆ' ಎಂಬುದು ಗೊತ್ತಾಯಿತು. (ಈ ಒಳಗಾಗಿ ಎಂಜಿನಿಯರುಗಳಾದ ಕೊನ್‌ಸ್ಟಾಂತಿನ್ ರಾಬಿತಿನ್‌ಗೆ ಉಜ್ಬೆಕಿಸ್ತಾನದ ಜಲಸಂಪನ್ಮೂಲಗಳ ರಾಜ್ಯ ಸಮಿತಿಯ ಉಪಾಧ್ಯಕ್ಷನಾಗಿ ಬಡ್ತಿ ದೊರಕಿದರೆ ಲಿತ್ವಾಕ್‌ನನ್ನು ಜಲಸಂಪನ್ಮೂಲ ಸಚಿವಾಲಯದ ತಾಂತ್ರಿಕ ವಿಭಾಗದ ಮುಖ್ಯಸ್ಥನಾಗಿ ನೇಮಿಸಲಾಗಿತ್ತು.) ಸ್ಥಳೀಯ ನದಿಗಳ ನೀರನ್ನು ಬೇಕಾಬಿಟ್ಟಿಯಾಗಿ ವ್ಯವಸಾಯಕ್ಕೆ ಬಳಸಿದ್ದರಿಂದಾಗಿ ಅರಲ್‌ಗೆ ಹರಿದು ಬರುವ ನೀರು ಕಡಿಮೆಯಾಗಿ ಆ ಸಮುದ್ರ ಗಾತದಲ್ಲಿ ಕುಗ್ಗುತ್ತಾ ಹೋಯಿತು.

1960ರ ವರೆಗೂ ಅರಲ್ ಸಮುದ್ರ ಉತ್ತಮ ಸ್ಥಿತಿಯಲ್ಲಿತ್ತು. ಆ ವರೆಗೂ 1064 ಘನ ಕಿಲೋಮೀಟರ್ ನೀರು ತುಂಬಿಕೊಂಡಿರುತ್ತಿದ್ದ ಅದು ಸುಮಾರು 53 ಮೀಟರ್ ಆಳವಾಗಿತ್ತು. ಅದರ ಮೇಲ್ಮೈ ಪ್ರದೇಶ 66,000 ಚದರ ಕಿಲೋಮೀಟರ್ ವಿಸ್ತಾರವಾಗಿತ್ತು. ಪ್ರತಿವರ್ಷ ಅದಕ್ಕೆ 56 ಘನ ಕಿಲೋಮೀಟರ್ ನೀರು ಹರಿದು ಬರುತ್ತಿತ್ತು. ಇಂದು ಅರಲ್ ಸಮುದ್ರದ ಮೇಲ್ಮೈ ...500 ಚದರ ಕಿಲೋಮೀಟರ್‌ಗಳಷ್ಟು ಕುಗ್ಗಿದೆ. ಶೇಕಡಾ 69 ಪ್ರಮಾಣದಷ್ಟು ನೀರು ನಷ್ಟವಾಗಿದೆ. 1974ರಿಂದ 1986ರ ವರೆಗೆ ಸಿರ್‌ದಾರ್ಯ ನದಿಯಿಂದ ಹಾಗೂ 1982ರಿಂದ 1989ರ ವರೆಗೆ ಅಮುದಾರ್ಯ ನದಿಯಿಂದ ಅರಲ್‌ಗೆ ನೀರು ಹರಿದು ಬರಲಿಲ್ಲ. ಇವೆಲ್ಲದರ ಪರಿಣಾಮವಾಗಿ ಅರಲ್ ಸಮುದ್ರದ ನೀರಿನ ಮಟ್ಟ ಕುಗ್ಗುತ್ತಾ ಬಂದಿದೆ. 1960ರ ದಶಕದ ಉದ್ದಕ್ಕೂ ಅರಲ್ ನೀರಿನ ಮಟ್ಟ 21 ಸೆಂ. ಮೀಟರ್‌ಗಳಷ್ಟು ತಗ್ಗಿತು. 1970ರ ದಶಕದಲ್ಲಿ 58 ಸೆಂ. ಮೀಟರ್ ಹಾಗೂ 1980ರ ದಶಕದ ಕೆಲವು ವರ್ಷಗಳಲ್ಲಿ 109 ಸೆಂ. ಮೀಟರ್‌ನಷ್ಟು ಇಳಿಯಿತು. 1989ರ ಕೊನೆಯಲ್ಲಿ ನೀರಿನ ಮಟ್ಟ 13 ಮೀಟರ್‌ನಷ್ಟು ತಗ್ಗಿ ಇಡೀ ಸಮುದ್ರ ದೊಡ್ಡ ಅರಲ್ ಹಾಗೂ ಚಿಕ್ಕ ಅರಲ್ ಆಗಿ ವಿಭಾಗವಾಯಿತು.

ಅರಲ್ ಸಮುದ್ರದ ವಾಯುವ್ಯದಲ್ಲಿ ಅರಾಲ್ಸ್ಕ್ ಮತ್ತು ದಕ್ಷಿಣದಲ್ಲಿ ಮುನಾಕ್ ಎರಡು ಪ್ರಮುಖ ಆರ್ಥಿಕ ಕೇಂದ್ರಗಳು. ಅರಾಲ್ಸ್ಕ್ ವಲಯದ ಉತ್ತರ ಹಾಗೂ ಪೂರ್ವ ತೀರದ ಉದ್ದಕ್ಕೂ ಬೆಸ್ತರ ಗ್ರಾಮಗಳು ಹರಡಿವೆ. ಸ್ಟುರ್ಜನ್, ಕಾರ್ಪ್, ಬಾರ್ಬೆಲ್, ಝಾಂಡರ್ ರಾಪ್‌ಪೆನ್ ಮುಂತಾದ ನಾನಾ ಜಾತಿಯ ಮೀನುಗಳಿಂದ ಸಮೃದ್ಧವಾಗಿದ್ದ ಅರಲ್ ಸಮುದ್ರದಿಂದ ಪ್ರತಿವರ್ಷ 25,000 ಟನ್ ಮತ್ಸ್ಯ ಲಾಭವಾಗುತ್ತಿತ್ತು. ಇಂದು ಅರಲ್‌ನಲ್ಲಿ ಮೀನು ಎಂಬುದೇ ಇಲ್ಲ. ಏನಿದ್ದರೂ, 'ಅರಲ್‌ನಲ್ಲಿ ಹಿಂದೆ ಲಭಿಸುತ್ತಿದ್ದ ಮೀನುಗಳು' ಎಂಬ ಫಲಕ ಹೊತ್ತ ಮ್ಯೂಸಿಯಂನ ಕೋಣೆಯೊಂದರಲ್ಲಿ ಇವನ್ನೀಗ ನೋಡಬೇಕು. ಮುನಾಕ್ ಬೆಸ್ತರ ನಗರದಲ್ಲಿ ನೆಲಸಿದ್ದವರಲ್ಲಿ ಅರ್ಧಕ್ಕರ್ಧ ಜನ ಜೀವನೋಪಾಯ ಹುಡುಕಿಕೊಂಡು ಬೇರೆಲ್ಲಿಗೋ ಹೋಗಿದ್ದಾರೆ. ತಮ್ಮ ಪೂರ್ವಜರ ಗೋರಿಗಳನ್ನು ರಕ್ಷಿಸುವ ಸಲುವಾಗಿ ಅಲ್ಲಿದ್ದಾರೇನೋ

ರಷ್ಯನ್ ಭಾಷೆಯಲ್ಲಿ 'ಅರಲ್‌ಸ್ಕೊಯೆ ಮೊರ್' ಎಂದು ಹೆಸರಾಗಿರುವ ಅರಲ್ ಸಮುದ್ರ, ಮೊಟ್ಟೆ ಆಕಾರದಲ್ಲಿರುವ 66,458 ಚದರ ಕಿಲೋಮೀಟರ್ ವಿಸ್ತಾರಕ್ಕೆ ಹರಡಿಕೊಂಡಿದೆ. ಭಾರಿ ಆಳವೇನೂ ಇಲ್ಲದ ಅರಲ್ ಜಗತ್ತಿನಲ್ಲಿ ನಾಲ್ಕನೇ ಅತಿ ದೊಡ್ಡ ಒಳನಾಡು ಸಮುದ್ರ. ಅದರ ಪೂರ್ವದಲ್ಲಿ ಕ್ಯಾಸ್ಪಿಯನ್ ಸಮುದ್ರವಿದೆ. ಮಾಸ್ಕೋ, ಬಾಗ್ದಾದ್, ಕರಾಚಿಯಿಂದ ಅಲ್ಲಿಗೆ ಸಮಾನ ದೂರ. ಕಿರ್ಘಿಜನ್ 'ಅರಲ್ - ದೆನ್ಗಿಗ್' ಪದದಿಂದ ಅರಲ್ ಸಮುದ್ರಕ್ಕೆ (ದ್ವೀಪಗಳಿಂದ ಸುತ್ತುವರಿದಿರುವ ಸಮುದ್ರ) ಆ ಹೆಸರು ಬಂದಿದೆ. ಅರಲ್‌ನ ಆಸುಪಾಸಿನಲ್ಲಿ 1130ಕ್ಕೂ ಹೆಚ್ಚು ದ್ವೀಪಗಳಿವೆ.

ಎಂಬಂತೆ ಇಂದು ಅಲ್ಲಿ 17,000 ಮಂದಿ ಉಳಿದಿದ್ದಾರೆ. ಸುಮಾರು 178 ಜಾತಿಯ ವನ್ಯ ಜೀವಿಗಳು ಅರಲ್‌ನ ಆಸುಪಾಸಿನಲ್ಲಿ ನೆಲೆಸಿದ್ದುವು. ಇಂದು ಅವುಗಳ ಸಂಖ್ಯೆ 38ಕ್ಕೆ ಇಳಿದಿದೆ.

ಅರಲ್ ಸರೋವರ?

ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರದ ದುರಂತದಿಂದ ಸುಮಾರು ಎಂಟು ಬಿಲಿಯ (ಎಂಬತ್ತು ಕೋಟಿ) ರೂಬಲ್ ನಷ್ಟವಾಯಿತು. ಮೌನ ಚೆರ್ನೊಬಿಲ್ ಎನಿಸಿರುವ ಅರಲ್ ಸಮುದ್ರದ ಸಾವಿನಿಂದ 350 ಕೋಟಿ ರೂಬಲ್‌ಗೂ ಮೀರಿ ನಷ್ಟವಾಗಲಿದೆ ಎಂದು ತಜ್ಞರು ಹೇಳುತ್ತಾರೆ. 1988 ಸೆಪ್ಟೆಂಬರ್‌ನಲ್ಲಿ ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿ ಮತ್ತು ಸಚಿವರುಗಳ ಮಂಡಳಿ ಅರಲ್ ಸಮುದ್ರದ ಆಸುಪಾಸಿನ ಪರಿಸರದ ಸುಧಾರಣಾ ಕ್ರಮಗಳ ಕುರಿತು ನಿರ್ಣಯವೊಂದನ್ನು ಅಂಗೀಕರಿಸಿತು. ಅಪಾರ ವೆಚ್ಚದ ಈ ಕ್ರಮಗಳಲ್ಲಿ ಎಂಜಿನಿಯರಿಂಗ್ ಕಾಮಗಾರಿಗಳಿಗಾಗಿಯೇ ಸುಮಾರು 350ರಿಂದ 370 ಕೋಟಿ ರೂಬಲ್‌ಗಳ ವೆಚ್ಚ ತಗಲುವುದೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ರಷ್ಯ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಅರಲ್ ಸಮುದ್ರದ ದುರಸ್ತಿಗೆ ಎಷ್ಟು ಹಣ ವಿನಿಯೋಗವಾದೀತೆಂದು ಹೇಳುವುದು ಕಷ್ಟ. ''ಬಹುಶಃ 2005ನೇ ವರ್ಷದ ವೇಳೆಗೆ ಅರಲ್ ಸಮುದ್ರ, ಎರಡು ಮೂರು ಮಧ್ಯಮ ಗಾತ್ರದ ಸರೋವರಗಳಾಗಿ ಪರಿವರ್ತನಗೊಳ್ಳುವ ಸಾಧ್ಯತೆ ಇದೆ'' ಎನ್ನುತ್ತಾರೆ ತಜ್ಞರು.

ನಿಸರ್ಗದ ಕೊಡುಗೆ ಸಮೃದ್ಧವಾಗಿದ್ದ ಮಧ್ಯ ಏಷಿಯದ ಅರಲ್ ಸಮುದ್ರ ವಲಯ ಬರಪೀಡಿತ ಪ್ರದೇಶವಾಗಿ ನಿಂತಿರುವುದು ಸರಕಾರದ ಯೋಜನೆಗಳ ಫಲ. ಅಲ್ಲಿರುವ ಜಮೀನನ್ನು ಜನರ ಹೊಟ್ಟೆ ತುಂಬಿಸುವ ಆಹಾರ ಧಾನ್ಯ ಬೆಳೆಯಲು ಉಪಯೋಗಿಸುವ ಬದಲು ಹತ್ತಿ ಬೆಳೆಯಿರೆಂದು ರೈತರಿಗೆ ಹಂಚಿದರು.

ಅರಲ್ ಸಮುದ್ರದ ಭವಿಷ್ಯದ ಬಗ್ಗೆ ಗಂಭೀರವಾಗಿ ಚಿಂತಿಸುವವರಿಗೆ ಒಂದು ಸಲಹೆ: ಒಣಗಿದ ಸಮುದ್ರ ತಳದಲ್ಲಿ, ಲವಣಾಂಶವಿರುವ ಮಣ್ಣಿನಲ್ಲಿ ಬದುಕಿ ಉಳಿಯಬಲ್ಲ ಮರಗಳನ್ನು ಬೆಳೆಸಬೇಕು. ಇದರಿಂದಾಗಿ ಗಾಳಿಯ ಮೂಲಕ ವಿಷ ವ್ಯಾಪಿಸುವುದನ್ನೂ ಮರುಭೂಮಿಯು ವಿಸ್ತಾರಗೊಳ್ಳುವುದನ್ನೂ ತಡೆಗಟ್ಟಬಹುದು. ●

ಅರಲ್ಸ್‌ನ ಫಾಸಲೆಯಲ್ಲಿರುವ ಚಿಮ್ಕೆಂತ್ ನಗರದಲ್ಲಿ ತಾಯಿ ಎದೆಹಾಲೇ ವಿಷವಾಗುವಂಥ ಸ್ಥಿತಿ. ಅಂಗೀಕೃತ ಮಟ್ಟಕ್ಕಿಂತ ಮೂರು ನಾಲ್ಕು ಪಟ್ಟು ಹೆಚ್ಚಿನ ಉಪ್ಪಿನಂಶ ಇಲ್ಲಿಯ ಹೆಂಗಸರ ಮೊಲೆ ಹಾಲಿನಲ್ಲಿ ಕಂಡು ಬಂದಿದೆ. ಅಲ್ಪಾಯು ಮಕ್ಕಳು ಜನ್ಮದಾರಭ್ಯ ಕಾಮಾಲೆಗೆ ಗುರಿಯಾಗಿ, ಆ ಪೈಕಿ ಶೇಕಡಾ 80ರಷ್ಟು, ಬದುಕಿರುವವರೆಗೂ ಅಶಕ್ತಿಯಿಂದ ನರಳುತ್ತವೆ. ಉಜ್ಬೇಕಿಸ್ತಾನದ ಹತ್ತಿ ಹೊಲಗಳಲ್ಲಿ ದುಡಿಯುವ ಹದಿಮೂರರೊಳಗಿನ ಮಕ್ಕಳಂತೂ ನಿತ್ಯ ವಿಷ ಸಂಪರ್ಕದಿಂದ ಕೈ ಉಗುರುಗಳನ್ನೇ ಕಳೆದುಕೊಳ್ಳುತ್ತವಂತೆ. ರಕ್ತಹೀನತೆಯಂತೂ ಈ ಮಕ್ಕಳಲ್ಲಿ ಸಾಮಾನ್ಯ. ಪ್ಯಾರಾಟೈಫಾಯ್ಡ್ ಅಂತೂ ಆ ಒಕ್ಕೂಟದ ಉಳಿದೆಡೆಗಳಿಗಿಂತ ಉಜ್ಬೇಕಿಸ್ತಾನದಲ್ಲಿ 23 ಪಟ್ಟು ಹೆಚ್ಚು.

ಅರಲ್ಸ್ ಸಮುದ್ರದ ಆಸುಪಾಸಿನ ನಗರಗಳಲ್ಲಿ ನೆಲೆಸಿರುವವರಲ್ಲಿ ಕಳೆದೊಂದು ದಶಕದ ಅವಧಿಯಲ್ಲಿ ಹೃದಯ ಮತ್ತು ಶ್ವಾಸಕೋಶ ಸಂಬಂಧಿ ವ್ಯಾಧಿಗಳು ಒಂದೂವರೆ ಪಟ್ಟು ಹೆಚ್ಚಿದರೆ, ಕ್ಷಯ ಎರಡು ಪಟ್ಟು ಮತ್ತು ಅನ್ನನಾಳದ ಕ್ಯಾನ್ಸರ್ ಹತ್ತು ಪಟ್ಟು ಜಾಸ್ತಿಯಾಗಿವೆ.

ಈ ಜನ ಉಸಿರುವ ಗಾಳಿಯಲ್ಲಿ ವಿಷ, ಉಣ್ಣುವ ಅನ್ನದಲ್ಲಿ ವಿಷ, ಕುಡಿದ ನೀರಲ್ಲಿ, ತಿನ್ನುವ ಆಹಾರದಲ್ಲೂ ವಿಷ!

ಪರಿಸರಪ್ರೇಮದ ಪರಂಪರೆ

ಗಿಡ ಮರ ಬಳ್ಳಿಗಳನ್ನು ನೆಟ್ಟು, ಬೆಳೆಸಿ, ರಕ್ಷಿಸುವುದು; ಒಡಹುಟ್ಟಿದವರಂತೆ ಆತ್ಮೀಯ ಸಂಬಂಧ ಹೊಂದುವುದು ಉನ್ನತ ಸಂಸ್ಕೃತಿಯ ಅವಿಭಾಜ್ಯ ಅಂಗ. ಹಿಂದಿನವರ ಪ್ರಕೃತಿಪ್ರಿಯ ಮನಸ್ಸನ್ನು ಪ್ರಾಚೀನ ಕಾವ್ಯ ನಾಟಕಗಳಲ್ಲಿ ಧಾಳಾಗಿಯೇ ಗುರುತಿಸಬಹುದು. ಕಾಳಿದಾಸನಂತೂ ವೃಕ್ಷಗಳ ಸೈಕಾಲಜಿಯನ್ನು ಓದಿದವನಂತೆ ಬಣ್ಣಿಸಿದ್ದಾನೆ.

ಅಭಿಜ್ಞಾನ ಶಾಕುಂತಲ ನಾಟಕದಲ್ಲಿ ಶಕುಂತಲೆ ಪತಿಗೃಹಕ್ಕೆ ಹೊರಟು ನಿಂತ ಸಂದರ್ಭ. ಪ್ರಾಪಂಚಿಕ ಮೋಹವನ್ನು ದೂರೀಕರಿಸಿದ ಕುಲಪತಿ ಕಣ್ವರು ಆಶ್ರಮದ ವನಸಿರಿಯೊಂದಿಗೆ ನಡೆಸುವ ಸಂಭಾಷಣೆ ಮನೋಜ್ಞವಾದುದು:

''ನನ್ನ ಪ್ರೀತಿಯ ಗಿಡ, ಮರ, ಬಳ್ಳಿಗಳೇ, ಯಾವ ಶಕುಂತಲೆಯು ನಿಮಗೆ ನೀರೆರೆಯದೇ ತಾನು ಕೂಡ ನೀರನ್ನು ಸೇವಿಸುತ್ತಿರಲಿಲ್ಲವೋ, ಗಿಡ ಬಳ್ಳಿಗಳ ಚಿಗುರು ಮತ್ತು ಹೂಗಳಿಂದ ಸಿಂಗರಿಸಿಕೊಳ್ಳುವ ಆದಮ್ಯ ಹಂಬಲವಿದ್ದರೂ ಎಲ್ಲಿ ನೋವಾದೀತೋ ಎಂದು ಅವುಗಳನ್ನು ಕೊಯ್ಯುತ್ತಿರಲಿಲ್ಲವೋ, ಮೊದಲ ಹೂ ಅರಳಿದೊಡನೆ ಗೆಳತಿಯರೊಂದಿಗೆ ಹಬ್ಬ ಆಚರಿಸುತ್ತಿದ್ದಳೋ ಆ ಶಕುಂತಲೆಯು ಇಂದು ಪತಿಗೃಹಕ್ಕೆ ಹೊರಟಿದ್ದಾಳೆ. ನೀವೆಲ್ಲರೂ ಅನುಮತಿಯನ್ನು ಕೊಡಿರಿ.''


ತಂಗಿ ಸೇವಂತಿಗೆಗೆ, ಅಕ್ಕ ಮಲ್ಲಿಗೆಗೆ, ತೆಂಗಿನಮರದಣ್ಣನಿಗೆ, ತಮ್ಮ ಮಾವಿನರಾಜನಿಗೆ ತಿಂಡಿ-ನೀರು ಉಣಿಸದೇ ತಾನೂ ಸೇವಿಸಲಾರೆ ಎನ್ನುವ ಆತ್ಮೀಯ ಭಾವನೆಯವಳು ಶಕುಂತಲೆ. ಮುಡಿಯುವ ಬಯಕೆಯಿಂದ ಅರಳಿದ ಹೂಗಳೆಡೆ ಕೈ ಚಾಚಿದರೂ ಕೊಯ್ದರೆ ಅವುಗಳಿಗೆಷ್ಟು ಬೇಸರವಾದೀತೋ ಎಂಬ ಕರುಣೆಯಿಂದ ಹಿಂಜರಿಯುವಳು. ಗಿಡಬಳ್ಳಿಗಳಲ್ಲಿ ಮೊದಲ ನಗು ಮೂಡಿದಾಗ ಸಂಭ್ರಮದಿಂದ, ''ಓ ಪ್ರಿಯಂವದೆ - ಅನಸೂಯೆ, ನಮ್ಮ ಗಿಡದಲ್ಲಿ ಮೊದಲ ಹೂ ಅರಳಿದೆ, ಬನ್ನಿರೇ ಹಬ್ಬ ಮಾಡೋಣ'' ಎಂದು ಗೆಳತಿಯರನ್ನು ಒಟ್ಟುಗೂಡಿಸಿ ಪುಟ್ಟ ಉತ್ಸವವನ್ನೇ ಆಚರಿಸುತ್ತಿದ್ದಳು. ಶಕುಂತಲೆಯ ಪ್ರಕೃತಿಪ್ರೇಮವನ್ನು ನಿತ್ಯ ಅವಲೋಕಿಸುತ್ತಿದ್ದ ಕಣ್ವರು ವನಸಿರಿಯನ್ನು ಅನುಮತಿಗಾಗಿ ಪ್ರಾರ್ಥಿಸಿದುದರಲ್ಲಿ ಔಚಿತ್ಯವಿದೆ.

ಇಲ್ಲಿ ಒಂದು ಪ್ರಶ್ನೆ ಏಳಬಹುದು. ಗಿಡಮರಬಳ್ಳಿಗಳಿಗೆ ಭಾಷೆ, ನೋವು, ನಲಿವು ಇವೆಯೇ?

ಸಸ್ಯಗಳೂ ಪ್ರಾಣವುಳ್ಳವುಗಳೆಂಬುದನ್ನು ವಿಜ್ಞಾನಿಗಳು ದೃಢಪಡಿಸಿದ್ದಾರೆ. ಈ ಶತಮಾನದ ಆದಿಯಲ್ಲೇ ಬಂಗಾಳದ ಖ್ಯಾತ ವಿಜ್ಞಾನಿ ಸರ್ ಜಗದೀಶ್‌ಚಂದ್ರಬೋಸರು ಸಸ್ಯಗಳೂ ಜೀವ, ಚೈತನ್ಯವುಳ್ಳವು ಎಂಬುದನ್ನು ಸಾಬೀತುಪಡಿಸಿದ್ದಾರೆ. ಅತಿ ಪ್ರಾಚೀನವಾದ ವೇದೋಪನಿಷತ್ತುಗಳಲ್ಲಿ ಸಹ ಸಸ್ಯಸಂಕುಲವನ್ನು ಚೈತನ್ಯ-ಪ್ರೀತಿ-ಸುಖದುಃಖವುಳ್ಳವೆಂದೇ ಭಾವಿಸಿ ಪೂಜಿಸಿ ಪ್ರಾರ್ಥಿಸುವ ವರ್ಣನೆಗಳನ್ನು ಕಾಣಬಹುದಾಗಿದೆ.

ಇಂಥದೊಂದು ಉನ್ನತ ಪರಂಪರೆಯಿಂದ ಸ್ಫೂರ್ತಿ ಪಡೆಯುವ ಅಗತ್ಯ ಹಿಂದೆಂದಿಗಿಂತ ಇಂದು ಹೆಚ್ಚಾಗಿದೆ, ಅಲ್ಲವೆ?

● ಬಸವಾನಿ ರಾಮಶರ್ಮಾ



'ಬೈಬಲ್' ಎಂಬ ಪಟ್ಟಣ!

● ಚಂದ್ರಕಾಂತ ವಡ್ಡು

ನೆತ್ತಿಯ ಮೇಲೆ ನಿಂತು ನಿಗಿ ನಿಗಿ ಕೆಂಡಗಳನ್ನು ಉಗುಳಿದ ಮಧ್ಯಾಹ್ನದ ಸೂರ್ಯ ನಿಧಾನ ಹೆಜ್ಜೆ ಊರುತ್ತ ಮೆಡಿಟರೇನಿಯನ್ ಕಡಲಲ್ಲಿ ಧುಮುಕಲು ಸಿದ್ಧಗೊಳ್ಳುತ್ತಿದ್ದ. ಕತ್ತಲು ಬೆಳಕು ತಳುಕು ಹಾಕಿಕೊಂಡು ತೇಕುತ್ತಿದ್ದವು. ಇನ್ನೇನು ಚುಕ್ಕೆ ಗುಚ್ಛ ಅರಳಿ ಆಗಸದಲ್ಲಿ ಜೀಕಬೇಕು.....

ನಾಲ್ಕಾರು ಜನ ಮೇಜೊಂದರ ಸುತ್ತ ಕೂತು ಚರ್ಚೆಗೆ ಚಾಲನೆ ನೀಡುತ್ತಿದ್ದರು. ಎಲ್ಲರದೂ ಮಧ್ಯಾಹ್ನದ ಉರಿಬಿಸಿಲಲ್ಲಿ ದಣಿದ ದೇಹ; ಯೋಚನೆಯ ಹೊಂಡದಲ್ಲಿ ಮಿಂದು ಬಳಲಿದ ಮನಸ್ಸು. ಗ್ಲಾಸೊಳಗಿನ ಮದ್ಯ ಗಂಟಲಿಗಿಳಿದಂತೆ ದಣಿವು ತಣಿಯುತ್ತಿತ್ತು. ಸಂಭಾಷಣೆಗೆ ಶೀಷೆಗಳ ಸಾಕ್ಷಿ!

ಅವರೆಲ್ಲ ಇತಿಹಾಸದ ಹಾದಿಗುಂಟ ಹಿಂತಿರುಗಿ ಹೊರಟ ಸಾಹಸಿಗಳು. ಧರಿತ್ರಿಯ ಒಡಲಲ್ಲಿ ಹುದುಗಿದ ಚರಿತ್ರೆಯ ಕುರುಹುಗಳನ್ನು ಹೆಕ್ಕಿ ಬೆಳಕಿಗೊಡ್ಡುವುದು ಅವರ ಪ್ರವೃತ್ತಿ.

ತುಸು ದೊಡ್ಡ ಗಾತ್ರದವೇ ಎನ್ನಬಹುದಾದ ನಾಲ್ಕು ಹೊಳೆವ ಮಡಕೆಯ ಚೂರುಗಳು, ರೋಮನ್ ಕಂದೀಲಿನ ಒಡೆದ ತುಣುಕುಗಳು - ಇಷ್ಟು ಪೀಟರ್ ಫೆನ್‌ವಿಕ್ ಅಂದು ಶೋಧಿಸಿದ ಇತಿಹಾಸದ ಅಂಗಗಳು. ಪೀಟರನ ಮಾರ್ಗದರ್ಶಿ ಇಲಿಯಸ್ ಮೂರು ಮಹತ್ವದ ನಾಣ್ಯಗಳನ್ನು ಹುಡುಕುವುದರ ಮೂಲಕ ಮೇಲುಗೈ ಸಾಧಿಸಿದ್ದ. ಉತ್ಸಾಹ ಕುಂದಿದ ಪೀಟರನ ಬೆನ್ನು ತಟ್ಟಿ ಧೈರ್ಯ ಸಿಂಚಿಸುವ ಮಾತುಗಳು ಮಾರ್ಗ

ದರ್ಶಿಯಿಂದ.

"ಭ್ರಮನಿರಸನಗೊಳ್ಳಬೇಡ...ಬೈಬ್ಲೋಸ್ ನಗರಕ್ಕೆ ಭೇಟಿ ಕೊಡುವ ಎಂಥ ಘನಂದಾರಿಗೂ ಹೆಚ್ಚು ದಕ್ಕಿದ್ದಿಲ್ಲ. ಆದಾಗ್ಯೂ ಸ್ಥಳೀಯರಾದ ನಮ್ಮೊಂದಿಗೆ ಅದೃಷ್ಟವಿದೆ. ಪ್ರಾಕ್ತನ ಶೋಧಕರು ಸಹ ತಮ್ಮ ವರ್ಷಾನುಗಟ್ಟಲೆ ಶ್ರಮವ್ಯಯಿಸಿ ಗಳಿಸಿದ್ದು ನಮ್ಮೂರಿನ ಹೆಣ್ಣುಮಗಳೊಬ್ಬಳು ಶೋಧಿಸಿದ್ದರ ಹತ್ತನೇ ಒಂದು ಭಾಗದಷ್ಟು ಮಾತ್ರ! ಅದೂ ಆಕೆ ಆಕಸ್ಮಿಕವಾಗಿ ಶೋಧಿಸಿದ್ದು."

ಆ ಘಟನೆ ನಡೆದದ್ದು ಹೀಗೆ:

ಮಳೆಗಾಲದ ಭೀಕರ ಪ್ರವಾಹ ಕುಗ್ಗಿದ ಸಮಯದಲ್ಲಿ ಆ ಹೆಂಗಸು ಸಮುದ್ರ ದಂಡೆಯಲ್ಲಿ ಉರುವಲು ಕಟ್ಟಿಗೆ ತುಂಡುಗಳನ್ನು ಆರಿಸುತ್ತಿದ್ದಳು. ಆಗ ಇದ್ದಕ್ಕಿದ್ದಂತೆ ಉಂಟಾದ ಮಳೆಯ ಸೆಳಕಿನಿಂದ ರಕ್ಷಣೆ ಪಡೆಯಲೋಸ್ಕರ ಅವಳು ಓಟ ಕೀಳಬೇಕಾಯ್ತು. ಆಶ್ರಯ ಸಿಕ್ಕಿದ್ದು ಕಲ್ಲುಪೊಟರೆಯೊಳಗೆ. ಬೃಹತ್ ಬಂಡೆಯ ಬುಡದಲ್ಲಿ ಏರ್ಪಟ್ಟಿದ್ದ ಆ ಕಿಂಡಿಯೊಳಗೆ ಪ್ರವೇಶಿಸಿದಾಗ ಅವಳಿಗೆ ಅದೃಷ್ಟದ ಕೋಣೆಯನ್ನೇ ಹೊಕ್ಕ ಅರಿವಿರಲಿಲ್ಲ. ನೂರು ಗಜಕ್ಕಿಂತಲೂ ಉದ್ದವಿದ್ದ ಆ ಗವಿಯಲ್ಲಿ ಬಂಗಾರದ ಗಟ್ಟಿಗಳ, ಆಭರಣಗಳ ಬೃಹತ್ ಸಂಗ್ರಹವೇ ಅಡಗಿ ಕುಳಿತಿತ್ತು. ಸಂತಸದಿಂದ ತುಯ್ದಾಡಿದ ಆಕೆ ತನ್ನ ಜಾಣ್ಮೆಯನ್ನೆಲ್ಲಾ ಬಳಸಿ ಸಾಧ್ಯವಾದಷ್ಟು ಸಂಪತ್ತನ್ನು ಗುಟ್ಟಾಗಿ ಸಾಗಿಸಿದಳು. ತಾನು ಸಂತೃಪ್ತಗೊಂಡ ನಂತರವೇ ಅಧಿಕಾರಿಗಳೆದುರು ವಿಷಯ ಬಹಿರಂಗಪಡಿಸಿ ಅಮೆರಿಕೆಗೆ ವಲಸೆ ಹೋದಳು. ಕೆಲವು ವರ್ಷ ಕಳೆದು ಹಿಂದಿರುಗಿದಾಗ ಆಕೆ ಕಟ್ಟಿಗೆ ತುಂಡು ಆಯುವ ಯಕಃಶ್ಚಿತ ಬಡ ಮಹಿಳೆಯಾಗಿರಲಿಲ್ಲ; ಶ್ರೀಮಂತಿಕೆಯ ಪ್ರತಿರೂಪವಾಗಿ ಅವತರಿಸಿದಳು.

ದಂತಕತೆಯಂತೆ ತೋರುವ ಈ ಪ್ರಸಂಗದ ಸತ್ಯಾಸತ್ಯತೆ ಒತ್ತಟ್ಟಿಗಿರಲಿ. ಇದು ಬೈಬ್ಲೋಸ್ ನಗರದ ವೈಭವೋಪೇತ ಹಿನ್ನೆಲೆಯನ್ನು ಮಾತ್ರ ಯಥಾವತ್ತಾಗಿ ಬಿಂಬಿಸುತ್ತದೆ.

ಬೈಬ್ಲೋಸ್ ನಗರದ ಚರಿತ್ರೆಯೆಂದರೆ ಒಂದು ಮಿತಿಯುಳ್ಳ ಅರ್ಥದಲ್ಲಿ ಮಾನವನ ಇತಿಹಾಸವೇ ಆಗುತ್ತದೆ. ಮೆಡಿಟರೇನಿಯನ್ ಕರಾವಳಿಯ ಈ ವಿಶಿಷ್ಟ ಊರು ನಿರಂತರ ಮಾನವ ವಾಸವನ್ನು ಕಂಡ ಪ್ರಪಂಚದಲ್ಲಿಯೇ ಅತಿ ಪುರಾತನ ನಗರ. ಈ ನಗರದ ಚರಿತ್ರೆ ಆರಂಭವಾಗುವುದು ಏಳು ಸಾವಿರ ವರ್ಷ ಹಿಂದಿನ ನವಶಿಲಾಯುಗದಿಂದ. ಕಂಚಿನ ಯುಗವಂತೂ ಬೈಬ್ಲೋಸ್ ಪಾಲಿಗೆ ದೀರ್ಘ ವಸಂತ.

ಬೆಸ್ತರು ಬೈಬ್ಲೋಸ್ ನಗರದ ಮೂಲ ನಿವಾಸಿಗಳು. ಇವರ ಹಳ್ಳಿಯೆಂದರೆ ಒರಟು ಕಲ್ಲುಗಳನ್ನು ಒಟ್ಟಿ ನಿರ್ಮಿಸಿದ ಗೂಡುಗಳ ಸಮೂಹವಾಗಿತ್ತು. ಇಲ್ಲಿಯ ಮನೆಯೊಳಗಿನ ನೆಲವನ್ನು ಅಗೆದರೆ ಈಗಲೂ ಹೂತ ಹೆಣಗಳು ತೇಲುತ್ತವೆ. ಸತ್ತವರು ಕೌಟುಂಬಿಕ ಜೀವನದೊಳಗೆ ಶಾಶ್ವತವಾಗಿ ಪಾಲ್ಗೊಳ್ಳಲಿ ಎಂಬ ಆಶೆಯಿಂದ ಮಧ್ಯಯುಗದಲ್ಲಿ ಹೀಗೆ ಮೃತವ್ಯಕ್ತಿಗಳನ್ನು ಮನೆಯಲ್ಲಿಯೇ ಹೂಳುವ ಪದ್ಧತಿ ಇತ್ತು. ಈ ಪಟ್ಟಣದ



ಆರು ಸಾವಿರ ವರ್ಷಗಳ ಹಿಂದೆ ಬೈಬ್ಲೋಸ್‌ನ ಗೃಹಿಣಿ ಬಳಸಿರಬಹುದಾದ ಶಿಲಾಪಾತ್ರೆಗಳು




ಫೊನಿಸಿಯನ್ ರಾಜರ ಶಿಲಾಸಮಾಧಿ

ಕಲ್ಲುಗಳು ಮನುಷ್ಯ ಇತಿಹಾಸದ ಕ್ರಾಂತಿಕಾರಿ ಬದಲಾವಣೆಗಳಿಗೆಲ್ಲ ಮೂಕಸಾಕ್ಷಿಯಾಗಿ ನಿಂತಿವೆ. ಮಾನವ ಕೃಷಿಯಲ್ಲಿ ತೊಡಗಿದ್ದು, ಸಾಕು ಪ್ರಾಣಿಗಳ ಪ್ರಯೋಜನ ಪಡೆದದ್ದು, ಭೂ ಒಡೆತನ, ಆಹಾರ ಸಂಗ್ರಹಣೆಯ ಮಜಲು ಏರಿದ್ದು - ಹೀಗೆ ಹಲವಾರು ವಿಕಾಸ ಹಂತಗಳನ್ನು ಬೈಬ್ಲೋಸ್‌ನ ಬಂಡೆಗಲ್ಲುಗಳು ತಮ್ಮ ಬಿರುಗಣ್ಣುಗಳಿಂದ ನಿರುಕಿಸಿವೆ.

ಇಷ್ಟಾಗಿಯೂ ಬೈಬ್ಲೋಸ್‌ಗೆ ಪಟ್ಟಣದ ಸ್ಥಾನಮಾನ ಸುಲಭದಲ್ಲಿ ಸಿಕ್ಕಲಿಲ್ಲ. ಅದಕ್ಕಾಗಿ ಕಂಚಿನಯುಗ (ಕ್ರಿ.ಪೂ.3000 - 2150)ದ ತನಕ ಕಾಯಬೇಕಾಯಿತು. ಆ ತಾಳ್ಮೆ, ವ್ಯವಧಾನ ಬೈಬ್ಲೋಸ್‌ಗೆ ಇತ್ತು. ಫೊನಿಸಿಯನ್ ವ್ಯಾಪಾರಿಯೊಬ್ಬ ಮೆಡಿಟರೇನಿಯನ್ ವಲಯದ ವಾಣಿಜ್ಯ ವಹಿವಾಟನ್ನು ತನ್ನ ಹಿಡಿತಕ್ಕೆ ತಂದುಕೊಂಡು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಿದ್ದು ಈ ಅವಧಿಯಲ್ಲಿಯೇ. ಪರಿಣಾಮವಾಗಿ ಬೈಬ್ಲೋಸ್ ಪಟ್ಟಣ ಧಾರ್ಮಿಕ, ವಾಣಿಜ್ಯ ಕೇಂದ್ರವಾಗಿ ಅಂತಾರಾಷ್ಟ್ರೀಯ ಮನ್ನಣೆಗೆ ಪಾತ್ರವಾಯಿತು.

ತರುವಾಯದ ಹದಿನೆಂಟು ಶತಮಾನಗಳ ಕಾಲ ಈ ನಗರ ವಾಣಿಜ್ಯಮುಖಿಯಾಗಿ ಬಿಂಬಿಸಿದರೂ ರಕ್ಷಣಾ ಕ್ಷೇತ್ರದಲ್ಲಿ ಮಾತ್ರ ಪ್ರಬಲಶಕ್ತಿಗಳ ನಡುವಿನ ಪಗಡೆಕಾಯಿಯಂತಿತ್ತು.

ಪಕ್ಕದ ಈಜಿಪ್ತ್ ಮಹಾರಾಜರ ವೈಭವಯುತ ಶವಸಂಸ್ಕಾರ ಪದ್ಧತಿಯ ಪ್ರಭಾವ ಸಹಜವಾಗಿಯೇ ಬೈಬ್ಲೋಸ್‌ರಾಜರ ಮೇಲೂ ಬಿತ್ತು. ಬೃಹತ್ ಕಲ್ಲುಕಂಬಗಳಿಂದ ಮಹಾರಾ



ಜರ ಶವಪೆಟ್ಟಿಗೆ ಸಿದ್ಧಗೊಳ್ಳುತ್ತಿತ್ತು. ಮುಂದಿನ ಜನ್ಮದ ಪ್ರಯೋಜನಕ್ಕೆಂದು ಅಪಾರ ಸಂಪತ್ತನ್ನು ಶವಪೆಟ್ಟಿಗೆಯಲ್ಲಿ ಹುದುಗಿಸಿಡುವುದು ಈ ಸಾಮ್ರಾಟ ಸಂಸ್ಕೃತಿಯ ಭಾಗ. ಇದುವರೆಗೆ ಇಂಥ ಒಂಬತ್ತು ಶವಪೆಟ್ಟಿಗೆಗಳು ದೊರಕಿದ್ದು ಅವುಗಳಲ್ಲೆಲ್ಲ ಕ್ರಿಸ್ತಪೂರ್ವ ಹನ್ನೊಂದನೇ ಶತಮಾನದ ರಾಜಾ ಅಹಿರಾಮನದು ಹಲವು ಕಾರಣಗಳಿಂದ ಅತಿ ಮಹತ್ವಪ್ಪೆನಿಸಿದೆ. ಇದರ ಮೇಲೆ ಕೆತ್ತಿದ ಭಾಷೆ ಚಿತ್ರಲಿಪಿಯಲ್ಲಿರದೆ ಅಕ್ಷರ ಮಾಲೆಯಲ್ಲಿರುವುದು ಒಂದು ಅದ್ಭುತ. ಈ ವರ್ಣಮಾಲೆಯೇ ಎಲ್ಲ ಆಧುನಿಕ ಅಕ್ಷರಲಿಪಿಯ ಪೂರ್ವಜ. ಅಹಿರಾಮನ ಮಗನಾದ ಇತೊಬಾಲ್‌ನು ತನ್ನ ತಂದೆ

'ಬೈಬಲ್'ನ ವ್ಯುತ್ಪತ್ತಿ

ಕ್ರಿಶ್ಚಿಯನ್ನರ ಧರ್ಮ ಗ್ರಂಥಕ್ಕೆ 'ಬೈಬಲ್' ಹೆಸರನ್ನು ನೀಡಿದ್ದೇ ಬೈಬ್ಲೋಸ್ ನಗರ. 'ಬೈಬ್ಲೋಸ್' ಪದದ ಅಪಭ್ರಂಶ ರೂಪವೇ ಬೈಬಲ್. ಅದರ ಜನ್ಮ ವೃತ್ತಾಂತ ಇಂತಿದೆ:

ಗ್ರೀಕರು ಬರೆಯಲು ಬಳಸುತ್ತಿದ್ದ ತಾಳಪತ್ರಗಳನ್ನು ಬೈಬ್ಲೋಸ್‌ನ ವರ್ತಕರೇ ಸರಬರಾಜು ಮಾಡುತ್ತಿದ್ದರಿಂದ ಈ ಸಾಮಗ್ರಿಗೆ ಬೈಬ್ಲೋಸ್ ಎಂಬ ಹೆಸರು ಅಂಟಿಕೊಂಡಿತು. ಬೈಬ್ಲೋಸ್‌ನ ಮೇಲೆ ಬರೆದ ಕೃತಿಗಳು 'ಬೈಬ್ಲಿಯಾ' ಎಂದು ಕರೆಸಿಕೊಂಡವು. ಕಾಲಾನುಕ್ರಮದಲ್ಲಿ ಈ ಹೆಸರೇ ಏಕವಚನದಲ್ಲಿ 'ಬೈಬಲ್' ಎಂದಾಯಿತು. ●

ಶಾಶ್ವತ ನೆಲೆಸಲೆಂಬ ಉದ್ದೇಶದಿಂದ ಶವಪೆಟ್ಟಿಗೆ ನಿರ್ಮಿಸಿದನೆಂದು ಕೆತ್ತಲಾಗಿದೆ. ಅಲ್ಲದೆ ಅದನ್ನು ನಾಶಮಾಡಿದವರಿಗೆ ಶಾಪದ ನುಡಿಗಳಿವೆ.

ಬೈಬ್ಲೋಸ್‌ನ ಮೂಲ ಹೆಸರು 'ಗುಬ್ಲಾ' ಎಂದಿತ್ತು. ಗ್ರೀಕ್ ಚಕ್ರವರ್ತಿ ಅಲೆಕ್ಸಾಂಡರನ ಆಗಮನದೊಂದಿಗೆ ಈ ಹೆಸರು 'ಗೆಬಾಲ್' ಆಗಿ ಸುವರ್ಣಯುಗದಲ್ಲಿ ಕಾಲಿರಿಸಿತು. 'ಗೆಬಾಲ್'ನ ಆಧುನಿಕ ಅರಬ್‌ರೂಪ 'ಜೆಬೈಲ್' ಎಂದಾಗುತ್ತದೆ. ಹಳೆಯ ಪಟ್ಟಣ ಬೆಟ್ಟವೊಂದರ ಮೇಲಿದ್ದರಿಂದ 'ಪುಟ್ಟ ಬೆಟ್ಟ' ಎಂಬರ್ಥದ ಈ ಹೆಸರು. ಇಲ್ಲಿಯ ಜನ ಪರಿಣತ ಕಲ್ಲು ಕೆಲಸಗಾರರಾಗಿದ್ದರು. ಜೆರುಸಲೇಮ್‌ನಲ್ಲಿ ಸೋಲೋಮನ್ ದೇವಸ್ಥಾನ ಕಟ್ಟಿಸಲು ಈ ಕುಶಲಕರ್ಮಿಗಳನ್ನು ಬಳಸಿದ್ದನಂತೆ. ಗ್ರೀಕರೇ ಬೈಬ್ಲೋಸ್ ಎಂದು ಪುನರ್ನಾಮಕರಣ ಮಾಡಿದ್ದು.

ಗ್ರೀಕರ ಪ್ರಭಾವದಿಂದಾಗಿ ಬೈಬ್ಲೋಸ್ ನಗರವು ಪ್ರಾಚೀನವಾದ ಅಡೋನಿಸ್, ಅಸ್ಟಾರ್ಟೆ ಪಂಥದ ಕೇಂದ್ರವಾಯಿತು. ದೂರ ದೂರದಿಂದ ಪ್ರವಾಸಿಗರು ಬಂದು ಇಲ್ಲಿಯ ಧಾರ್ಮಿಕ ಹಬ್ಬದಲ್ಲಿ ಪಾಲ್ಗೊಳ್ಳುತ್ತಿದ್ದರು. ಅಸ್ಟಾರ್ಟೆ ಗ್ರೀಕರ ಪ್ರೇಮದೇವತೆ. (ರೋಮನ್ನರ ವೀನಸ್) ಅಡೋನಿಸ್‌ನ ಅಸಾಮಾನ್ಯ ಸೌಂದರ್ಯಕ್ಕೆ ಮರುಳಾಗಿ ಅವನನ್ನು ಪ್ರೇಮಿಸುತ್ತಾಳೆ. ಲೆಬನಾನಿನ ಕಾನನದಲ್ಲಿ ಬೇಟೆಯಾಡುವುದು ಅಡೋನಿಸ್‌ನ ಪ್ರೀತಿಯ ಹವ್ಯಾಸ. ಪ್ರಿಯತಮೆಯ ಎಚ್ಚರಿಕೆಯ ಮಾತನ್ನು ಕಡೆಗಣಿಸಿ ಒಮ್ಮೆ ಆತ ಬೇಟೆಗೆ ಹೋದಾಗ ಮಾರ್ಸ್ ಕಳುಹಿಸಿದ ಕಾಡುಹಂದಿಯೊಂದು ಮರಣಾಂತಿಕ ಹಲ್ಲೆ ಮಾಡುತ್ತದೆ. ಶೋಕತಪ್ತ ಪ್ರೇಮದೇವತೆ ಗಿರಿಶಿಖರಗಳಲ್ಲೆಲ್ಲ ತಿರುಗಾಡಿ ಕೊನೆಗೂ ಅಡೋನಿಸ್‌ನನ್ನು ಪಾತಾಳ ಲೋಕದಿಂದ ಬಿಡಿಸಿಕೊಳ್ಳಲು ಯಶಸ್ವಿಯಾಗುತ್ತಾಳೆ. ಈ ಪುರಾಣಕತೆಯ ಪ್ರಸಂಗವನ್ನು ಬೈಬ್ಲೋಸ್ ಪ್ರತಿವರ್ಷ ಹಲವಾರು ರೀತಿಯಲ್ಲಿ ಆಚರಿಸುತ್ತದೆ.

ಪ್ರಸ್ತುತ ಈ ದಂತಕತೆ ಬೇರೊಂದು ರೀತಿಯಲ್ಲಿ ಪ್ರಚಲಿತದಲ್ಲಿದೆ. ಬೈಬ್ಲೋಸ್‌ನಿಂದ ಕೆಲವೇ ಮೈಲು ದೂರದಲ್ಲಿ ಅಡೋನಿಸ್ ನದಿ ಇದೆ. ಈ ನದಿ ಫೆಬ್ರುವರಿಯಲ್ಲಿ ಕಡುಗೆಂಪು


ನೀರು ಹೊತ್ತು ತರುವುದಕ್ಕೆ ಕಾರಣ ಮೃತ್ಯುವಶನಾದ ಅಡೋನಿಸ್‌ನ ರಕ್ತವೆಂದು ನಂಬಲಾಗುತ್ತದೆ.

ಗ್ರೀಕರ ನಂತರ ರೋಮನ್ನರ ಉಡಿಗೆ ಬಿದ್ದ ಬೈಬ್ಲೋಸ್ ಈ ಸಮಯದಲ್ಲಿ ಧಾರ್ಮಿಕ ಖ್ಯಾತಿಯ ಉತ್ತುಂಗ ತಲುಪಿತು. ರೋಮನ್ನರ ಭವ್ಯ ಮನಸ್ತತ್ವಕ್ಕೆ ತಕ್ಕಂತೆಯೇ ಬೈಬ್ಲೋಸ್ ಪಟ್ಟಣದಲ್ಲಿ ವಿಶಾಲ ಭವನಗಳು ಎದ್ದು ನಿಂತವು. ಅದರಲ್ಲೂ ಅಡೋನಿಸ್‌ನ ಗುಡಿ ಮನಸೆಳೆಯುವಂತಹುದು. ಈ ದೇವಸ್ಥಾನದವರೆಗೆ ಸಾಗುವ ನೀಳ ನಿಲುವಿನ ಕಲ್ಲು ಕಂಬಗಳ ಸಾಲು ಚಿತ್ತಾಪಹಾರಕವೇ ಸೈ.

ರೋಮನ್ ಆಡಳಿತದ ಶೈಥಿಲ್ಯದೊಂದಿಗೇ ಬೈಬ್ಲೋಸ್ ನಗರದ ಮುಖಕ್ಕೆ ಮುಸುಕು ಬಿತ್ತನ್ನಬೇಕು. ತದನಂತರ ಬೈಬ್ಲೋಸ್ ಮುಸಲ್ಮಾನರ ನಿಯಂತ್ರಣಕ್ಕೊಳಪಟ್ಟಿತು.

ಬೈಬ್ಲೋಸ್ ನಗರವನ್ನು ಆಕ್ರಮಿಸಿಕೊಂಡ ಯಹೂದಿ ಧರ್ಮಯೋಧರು ರೋಮನ್ನರ ಜಾಗೆಯಲ್ಲಿ ಲಭ್ಯವಿದ್ದ ಕಲ್ಲುಗಳನ್ನೇ ಬಳಸಿ ಕೋಟೆ ಕಟ್ಟುವ ಆಜ್ಞೆ ಪಾಲಿಸಬೇಕಿತ್ತು. ಇವರ ರಚನಾ ಕೌಶಲ ಬೈಬ್ಲೋಸ್‌ಗೆ ಹೊಸ ಆಯಾಮವನ್ನೇ ಕೊಟ್ಟಿತು. ಆದರೆ ಸೋಲು ಅನುಭವಿಸಿದ ಧರ್ಮಯೋಧರು ಪಟ್ಟಣದಿಂದ ಕಾಲ್ತೆಗೆದ ನಂತರ ಬೈಬ್ಲೋಸ್ ಪ್ರಶಾಂತ ಓನ್ನೀರಿನಂತೆ ಮತ್ತೆ ನೆಮ್ಮದಿಯಲ್ಲಿ ಮುಳುಗಿತು.

ಬೈಬ್ಲೋಸ್‌ನ ಚರಿತ್ರೆಗೆ ಇತ್ತೀಚೆಗೆ ದೊರೆತ ಮಹತ್ವದ ತಿರುವೆಂದರೆ 1840 ರಲ್ಲಿ ಬ್ರಿಟನ್ ತುರ್ಕಿಯ ನೆರವಿಗೆ ಹಸ್ತ ಚಾಚಿದ್ದು. ಈ ಸಂದರ್ಭದಲ್ಲಿ ಸರ್ ಚಾರ್ಲ್ಸ್ ನೇಪಿಯರ್ ನೇತೃತ್ವದ



ಜಜ್ಜಿಹೋದ ಕಾರಿನ ಲೋಹದಿಂದ ಏಸುಕ್ರಿಸ್ತನ ಆಕೃತಿ. ಕಲಾವಿದ ಹೆಲನ್ ಜೆನ್ನಿಂಗ್ಸ್.

ಸೈನ್ಯದಳ ಬೈಬ್ಲೋಸ್ ಪಟ್ಟಣದ ಮೇಲೆ ಫಿರಂಗಿ ದಾಳಿ ನಡೆಸಿತು. ಇಂದಿಗೂ ಕೋಟೆಗೋಡೆಯ ಮೇಲೆ ತುಪಾಕಿಯ ಗುಂಡುಗಳನ್ನು ಕಾಣಬಹುದಾಗಿದೆ.

ಪ್ರಸ್ತುತ ಬೈಬ್ಲೋಸ್ ನಗರ ಮೈತುಂಬ ದ್ರಾಕ್ಷಿತೋಟಗಳನ್ನು ಬೆಳೆಸಿಕೊಂಡು ಭೂತಕಾಲದ ನೆನಪುಗಳನ್ನು ಕೆದಕುತ್ತ ಬದುಕುತ್ತಿದೆ. ಮಳೆಗಾಲದ ಪ್ರವಾಹದ ನಂತರ ಜನ 'ಅದೃಷ್ಟ ಮಹಿಳೆಯ' ಜಾಡು ಅನುಸರಿಸಲು ಬೀಚುಗಳಲ್ಲಿ ದಟ್ಟೈಸುತ್ತಾರೆ. ಇತಿಹಾಸದ ಭಾರದಿಂದ ತೂಗುವ ನಗರದ ಈಗಿನ ಕಳೆಯೂ ವೈಶಿಷ್ಟ್ಯಹೀನ ಎನ್ನಿಸುವುದಿಲ್ಲ. ●

('ದಿ ಜಿಯಾಗ್ರಫಿಕಲ್ ಮ್ಯಾಗ್‌ಜಿನ್'ನಿಂದ ಸಾಭಾರ)

ತಾಯಿ: ಮಗು, ಇವತ್ತು ನಿನ್ನನ್ನು ಸ್ಕೂಲಲ್ಲಿ ಇಷ್ಟು ಹೊತ್ತು ಏಕೆ ಇಟ್ಟುಕೊಂಡಿದ್ದರು?

ಮಗ: ಟೀಚರ್ ಇವತ್ತು ಆಲಸ್ಯದ ಫಲಿತಾಂಶದ ಬಗ್ಗೆ ನಿಬಂಧ ಬರೆಯಲು ಹೇಳಿದರು. ನಾನು ಬಿಳಿ ಹಾಳೆ ಕೊಟ್ಟೆ ಅದಕ್ಕೆ.

* * *

ಅಮಿತ್: ಅನಿಲ್, ನೋಡಿದ್ಯಾ? ನಾನು ನಿನ್ನನ್ನು ರಾತ್ರಿಯಲ್ಲೂ ಕಂಡು ಹಿಡಿದೆ.

ಅನಿಲ್: ಅದಕ್ಕೆ ನಿನ್ನನ್ನು ಟೀಚರ್ ಗೂಬೆ ಅಂತ ಕರೆಯೋದು.

ಇದುವೆ ಜೀವ ಇದು ಜೀವನ

ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಮೂರು ಜನ ಮಿತ್ರರು ಸೇರಿಕೊಂಡು ಒಂದು ಕೋಣೆ ಬಾಡಿಗೆ ಹಿಡಿದಿದ್ದೆವು. ಊರಿನಿಂದ ತರಿಸುತ್ತಿದ್ದ ಹಣ ಒಮ್ಮೊಮ್ಮೆ ಸಾಕಾಗುತ್ತಿರಲಿಲ್ಲ. ಅದಕ್ಕೆ ನಾವು ಒಂದು ಉಪಾಯ ಕಂಡು ಹಿಡಿದೆವು. ಯಾರ ಹಣ ಮೊದಲು ಬರುತ್ತದೋ ಅವರು ಮೂರೂ ಜನರ ತಿಂಡಿ - ಕಾಫಿಯ ಖರ್ಚನ್ನು ನೋಡಿಕೊಳ್ಳಬೇಕು. ಆತನ ಹಣ ಮುಗಿದ ನಂತರ ಎರಡನೆಯ ಮಿತ್ರನ ಪಾಳಿ, ನಂತರ ಮೂರನೆಯವನದು. ಹೀಗೆ ಕೆಲವು ದಿನ ನಡೆಯಿತು.

ಒಂದು ಸಾರೆ ನಮ್ಮ ಒಬ್ಬ ಮಿತ್ರ ಅನಾರೋಗ್ಯದ ಮೂಲಕ ತಮ್ಮ ಊರಿಗೆ ಹೋದ. ಉಳಿದ ನಾವಿಬ್ಬರೂ ಸರದಿಯಂತೆ ಹಣ ಬಳಸಿದೆವು. ಆದರೂ ತಿಂಗಳ ಕೊನೆಯಲ್ಲಿ ಇಬ್ಬರ ಕೈಗಳೂ ಬರಿದಾದವು. ತಿಂಡಿಯಿಲ್ಲದೇ ಕೇವಲ ಕಾಫಿ - ಚಹಾ ಸೇವಿಸಿ ದಿನ ತಳ್ಳತೊಡಗಿದೆವು.

ಒಂದು ದಿನ ಮುಂಜಾನೆ ಕಾಫಿಯ ಕರೆಗಾಗಿ ಇಬ್ಬರೂ ಕಾದಿದ್ದೆವು. ಆತ ಕರೆಯಬಹುದೆಂದು ನಾನು, ನಾನು ಕರೆಯಬಹುದೆಂದು ಆತ. ಹೀಗೇ ಒಂದು ಗಂಟೆ ಕಳೆಯಿತು. ಕೊನೆಗೆ ನನ್ನ ಮಿತ್ರ, ತನ್ನ ಸಂಬಂಧಿಕರ ಮನೆಗೆ ಹೋಗುವುದಾಗಿ ಹೇಳಿ ಹೊರನಡೆದ. ಅವನ ಬಗ್ಗೆ ಸ್ವಲ್ಪ ಅಸೂಯೆ ಉಂಟಾದರೂ ಸ್ವಲ್ಪ ಹೊತ್ತು ಹಾಗೆಯೇ ಬಿದ್ದುಕೊಂಡಿದ್ದೆ. ನಂತರ ಎದ್ದು ನನ್ನ ಪೆಟ್ಟಿಗೆಯನ್ನು ಜಾಲಾಡಿದೆ. ಕೊನೆಗೂ ಒಂದು ಕಾಫಿಗೆ ಆಗುವಷ್ಟು ಪುಡಿಗಾಸು ದೊರಕಿತು. ಒಂದು ಕ್ಷಣ ನನ್ನ ಮಿತ್ರನ ಬಗ್ಗೆ ಯೋಚಿಸಿದೆ. ಅವನನ್ನು ಬಿಟ್ಟು ಹೋಗುವುದು ಸರಿಯಲ್ಲವೆನಿಸಿದರೂ, ಆತ ತನ್ನ ಸಂಬಂಧಿಕರ ಮನೆಯಲ್ಲಿ ಕಾಫಿ-ತಿಂಡಿ ಮುಗಿಸಿರಬಹುದೆಂದು ಯೋಚಿಸಿ ಹೋಟೆಲಿಗೆ ನಡೆದೆ. ನಮ್ಮ ಮಾಮೂಲು ಟೇಬಲ್ಲಿಗೆ ಬಂದಾಗ ಕಂಡದ್ದೇನು, ನನ್ನ ಮಿತ್ರ, ಅಲ್ಲಿ ತಲೆ ತಗ್ಗಿಸಿ ಕುಳಿತಿದ್ದಾನೆ! ಆಶ್ಚರ್ಯದಿಂದ ಅವನೆಡೆ ಸರಿದಾಗ ಆತ ದೈನ್ಯದಿಂದ ''ಕ್ಷಮಿಸು, ನಿನಗೆ ಸುಳ್ಳು ಹೇಳಿದೆ. ನನ್ನ ಹತ್ತಿರ ಒಂದು ಕಾಫಿಗಾಗುವಷ್ಟು ಮಾತ್ರ ದುಡ್ಡಿತ್ತು'' ಎಂದ.

''ಪರವಾಗಿಲ್ಲ; ನಾನೂ ನನ್ನ ಪೆಟ್ಟಿಗೆಯನ್ನು ತಲೆ ಕೆಳಗೆ ಮಾಡಿ, ಒಂದು ಕಾಫಿಗಾಗುವಷ್ಟು ಕಾಸನ್ನು ತಂದಿದ್ದೇನೆ'' ಎಂದೆ ನಗುತ್ತಾ. ಕಾಫಿ ಕುಡಿದು ರೂಮಿಗೆ ಬಂದಾಗ ನಮ್ಮ ಮೂರನೆಯ ಮಿತ್ರ ಊರಿಂದ ಬಂದಿದ್ದ.

● ಶ್ರೀಧರ್ ಹೊನ್ನಹಳ್ಳಿ

ನಾನೊಬ್ಬ ಬ್ಯಾಂಕ್ ನೌಕರ. ಅದೊಂದು ಶುಕ್ರವಾರ, ತಿಂಗಳ ಕೊನೆಯ ದಿನ. ಗ್ರಾಮ ಲೆಕ್ಕಿಗರೆಲ್ಲರೂ ತಮ್ಮ ತಮ್ಮ ಕಿರ್ದಿ ವಸೂಲಾತಿಯನ್ನು ನಮ್ಮ ಬ್ಯಾಂಕಿನ ಸರ್ಕಾರಿ ಖಾತೆಗೆ ಜಮಾ ಮಾಡಲು ಅಂದು ಕಡೆಯ ದಿನವಾಗಿತ್ತು.

ಅಂದು ಸುಮಾರು ಮಧ್ಯಾಹ್ನ ಎರಡು ಘಂಟೆ ಇಪ್ಪತ್ತು ನಿಮಿಷಗಳಾಗಿರಬಹುದು. ಬ್ಯಾಂಕಿನ ವಹಿವಾಟು ಮುಗಿಯಲು ಕೇವಲ ಹತ್ತು ನಿಮಿಷಗಳಿದ್ದವು. ಆಗ ತರಾತುರಿಯಿಂದ ಒಳಬಂದ ನಮ್ಮ ಸ್ನೇಹಿತರೊಬ್ಬರು ಒಬ್ಬ ವ್ಯಕ್ತಿಯನ್ನು ನನಗೆ ಪರಿಚಯಿಸಿದರು. ಆತ ಒಂದು ಊರಿನ ಗ್ರಾಮ ಲೆಕ್ಕಿಗ. ಸುಮಾರು 22 ವರುಷದ ಆ

ತರುಣನ ಮುಖದಲ್ಲಿ ದುಗುಡ ತಾಂಡವವಾಡುತ್ತಿದ್ದುದು ಸ್ಪಷ್ಟವಾಗಿತ್ತು. ಆತನನ್ನೇ ದಿಟ್ಟಿಸುತ್ತಾ ವಿಷಯವೇನೆಂದು ಕೇಳಿದೆ. ನನ್ನ ಸ್ನೇಹಿತರು, ''ನೋಡಿ, ಕಿರ್ದಿ ಕಟ್ಟಲು ಕಡೆಯ ದಿನವಾದ ಇಂದು ಯಾರೋ ಇವರಿಗೆ ದುಡ್ಡು ಕೊಡಬೇಕಾಗಿತ್ತು. ಆದರೆ ಸಮಯದಲ್ಲಿ ಇಲ್ಲ ಎಂದುಬಿಟ್ಟರು. ಸುಮಾರು 800/- ರೂ. ಕಡಿಮೆ ಇದೆ. ಈಗ ಹೋಗಿ ಹಣ ಹೊಂದಿಸಲು ಕೂಡಾ ಸಮಯವಿಲ್ಲದಂತಾಗಿದೆ. ನಿಮ್ಮಿಂದ ಏನಾದರೂ ಹಣ ಹೊಂದಿಸಲು ಸಾಧ್ಯವೇ?'' ಎಂದರು. ಕಣ್ಣಂಚಿನಲ್ಲಿ ನೀರು ತುಂಬಿದ್ದ ಆ ತರುಣನ ಮುಖವನ್ನು ನೋಡಿ ಪಾಪ ಎನ್ನಿಸಿತು. ''ನೋಡಿ ನನ್ನ ಸ್ವಂತ ಜವಾಬ್ದಾರಿಯ ಮೇಲೆ ಸಂಜೆ 5ರ ವರೆಗೆ ನಿಮಗೆ ಸಮಯ ಕೊಡಿಸುತ್ತೇನೆ. ನೀವು ಹೋಗಿ ಹಣ ಹೊಂದಿಸಿಕೊಂಡು ಬನ್ನಿ'' ಎಂದೆ. ಆಗ ಆ ತರುಣ, ''ಇಲ್ಲಾ ಸಾರ್, ಈಗ ಸಾಧ್ಯವಿಲ್ಲ. ನಾಳೆ ನನಗೆ ಸಂಬಳ. ಬೆಳಿಗ್ಗೆ 10.30ಕ್ಕೆ ನಿಮ್ಮ ದುಡ್ಡು ತಲುಪಿಸುತ್ತೇನೆ ಸಾರ್'' ಎಂದು ಅಂಗಲಾಚಿದ. ಹಿಂದಿನ ದಿನವಷ್ಟೇ ಸಂಬಳ ಪಡೆದಿದ್ದ ನಾನು ಹಿಂದೆ ಮುಂದೆ ಯೋಚಿಸದೆ 800 ರೂಪಾಯಿ ತೆಗೆದು ಕೊಟ್ಟೆ.

ಆದರೆ ನಾಳೆಯೇ ಕೊಡುತ್ತೇನೆಂದವನು ನಾಲ್ಕು ದಿನಗಳಾದರೂ ಬರದೇ ಇದ್ದಾಗ ಸ್ವಲ್ಪ ಮನಸ್ಸಿಗೆ ಕಸಿವಿಸಿಯಾಗತೊಡಗಿತು. ಹೆಸರು ವಿಳಾಸಗಳನ್ನು ಪಡೆದು ಆತನ ಮನೆಗೆ ಹೋದೆ. ಆತ ಮನೆಯಲ್ಲಿಲ್ಲ ಎನ್ನುವ ಉತ್ತರ. ಇದೇ ರೀತಿ ಸುಮಾರು 31 ಬಾರಿ ಅವರ ಮನೆಯ ಬಾಗಿಲಿಗೆ ಎಡತಾಕಿದರೂ ಫಲಿತಾಂಶ ಶೂನ್ಯ. ಕಡೆಯ ಪ್ರಯತ್ನವೆಂದು ಮತ್ತೊಂದು ಬಾರಿ ಪ್ರಯತ್ನಿಸಿದಾಗ ಆತ ಸಿಕ್ಕ. ನನಗೂ ಆತನಿಗೂ ಸ್ವಲ್ಪ ಮಾತಿನ ಘರ್ಷಣೆಯಾಗಿ, 20 ದಿನಗಳ ನಂತರ ಕಡೆಗೂ ನನ್ನ ಹಣ ವಾಪಸ್ ಬಂತು. ಆದರೆ ಆ ವ್ಯಕ್ತಿ ಹಣ ವಾಪಸ್ ಮಾಡುವ ಮುನ್ನ ಆಡಿದ ಅಣಿಮುತ್ತುಗಳು ಮಾತ್ರ ಮರೆಯಲಾರದವು: ''ಏನ್ರೀ ನನ್ನನ್ನ ಏನೂಂತ ತಿಳ್ಕೊಂಡಿದ್ದೀರಾ. ನಮ್ಮ ಚಿಕ್ಕಪ್ಪ A.C. ನನ್ನ ಹೆಸರಲ್ಲಿ 15 ಎಕರೆ ಜಮೀನಿದೆ. ಲಕ್ಷಾಂತರ ರೂಪಾಯಿ ವ್ಯವಹಾರ ಮಾಡಿದ್ದೀನಿ. ನಿಮ್ಮ 800ನ್ನ ತಿಂದ್ಕೊಂಡೋರ ತರ ಆಡ್ತೀರಲ್ಲ. ಸ್ವಲ್ಪ ಮರ್ಯಾದೆಯಿಂದ ಮಾತಾಡಿ.''

● ಎನ್.ವಿ. ನಾಗರಾಜ್

ನಮ್ಮವರಿಗೆ ಚಿಕ್ಕದೊಂದು ಆಪರೇಶನ್ ಆಗತ್ಕವಿತ್ತು. ಆಸ್ಪತ್ರೆಗೆ ಅಡ್ಮಿಟ್ ಆದ ಎರಡು ದಿನಗಳ ನಂತರ ಆಪರೇಶನ್ ಆಗಬೇಕಿತ್ತು. ದೇಹಸ್ಥಿತಿಯನ್ನು ಗಮನಿಸಿದ ಡಾಕ್ಟರ್ ಅಡ್ಮಿಟ್ ಆದ ದಿನದಂದೇ ಆಪರೇಶನ್ ಮಾಡುವುದಾಗಿ ತಿಳಿಸಿದರು. ಘಟನೆಗಳು ಮಿಂಚಿನಂತೆ ನಡೆದು ಹೋದದ್ದರಿಂದ ಅದೇ ಊರಿನಲ್ಲಿದ್ದ ಅಕ್ಕಂದಿರಿಗಾಗಲಿ ಅಣ್ಣಂದಿರಿಗಾಗಲಿ ತಿಳಿಸಲು ಸಾಧ್ಯವಾಗಲಿಲ್ಲ. ''ಮೈನರ್ ಆಪರೇಶನ್, ಕೇವಲ 15 ನಿಮಿಷ ಸಾಕು. ಯಾವುದೇ ಆತಂಕಕ್ಕೆ ಕಾರಣವಿಲ್ಲ''ವೆಂದು ಡಾಕ್ಟರ್ ಹೇಳಿದ್ದರು. ಆ ಭರವಸೆಯ ಮೇಲೆ ನಾನೇನೋ ಧೈರ್ಯವಾಗೇ ಇದ್ದೆ. ಆದರೆ ಕೈಗಾಡಿಯ ಮೇಲೆ ನಮ್ಮವರನ್ನು ಓ.ಟಿ.ಗೆ ಕರೆದುಕೊಂಡು ಹೋಗುವಾಗ ಮಾತ್ರ, ಏನೋ ಅಳುಕು, ಅಧೈರ್ಯ.

ಎದುರುಗಡೆಯ ವಾರ್ಡ್‌ನಲ್ಲಿ ಮುಸ್ಲಿಂ ಅಜ್ಜಿಯೊಂದು ಹೆರಿಗೆಗಾಗಿ ಸೇರಿಸಿದ ತನ್ನ ಮೊಮ್ಮಗಳನ್ನು ನೋಡಿಕೊಳ್ಳಲು ಬಂದಿತ್ತು. ನನ್ನನ್ನೇ ಗಮನಿಸುತ್ತಿದ್ದ ಆ ಅಜ್ಜಿ, ನನ್ನ ಮನಸ್ಸನ್ನು ಓದಿದಂತೆ, ಹತ್ತಿರ ಬಂದು ಕೈ ಹಿಡಿದು ''ಬೇಟಿ, ನೀನೇನೂ ಯೋಚ್ನೆ ಮಾಡ್ಬೇಡಾ. ಖುದಾ ಎಲ್ಲಾ ಒಳ್ಳೆಯದು ಮಾಡ್ತಾನೆ ಬಾ'' ಎಂದು ಆಪರೇಶನ್ ಮುಗಿಯುವವರೆಗೂ ಓ.ಟಿ.ಯ ಎದುರು ಹಾಕಿದ್ದ ಬೆಂಚಿನ ಮೇಲೆ ನನ್ನನ್ನು ಕೂರಿಸಿಕೊಂಡು ಕುಳಿತಿತ್ತು. ಅಜ್ಜಿಯ ಸಾಮೀಪ್ಯ ನನಗೆ ಸಮಾಧಾನ ತಂದಿತ್ತು.

ಜಾತಿಗೋಡೆ ಮೀರಿದ ಭಾವಸ್ಪಂದನದಿಂದ ನನ್ನ ಹೃದಯ ತುಂಬಿ ಅಜ್ಜಿಯ ಬಗ್ಗೆ ಕೃತಜ್ಞತೆ ಮೂಡಿತು.

● ಟಿ. ಎಸ್. ಲಲಿತ.

ಮನಸ್ಸಿನ ಕನ್ನಡಿಗೆ ಇಂಥ ಭಯದ ಜಿಡ್ಡು ಅಂಟಿಕೊಂಡರೆ ಬಾಳೊಂದು ಬವಣೆಯೆನಿಸಿಬಿಡುತ್ತದೆ.

ವ್ಯಾಧಿಭಯ

ರೋಗವಲ್ಲದ ರೋಗ

ಶಶಿಕಾಂತ ನಲವತ್ತೆರಡು ವರ್ಷದವ. ಹದಿಮೂರು ವರ್ಷಗಳಿಂದ, ಮೂರು ತಿಂಗಳಿಗೊಮ್ಮೆಯಂತೆ ವಮನದ (ವಾಂತಿ) ಪೀಡೆಯಂತೆ ಆತನಿಗೆ. ''ಬಿಟ್ಟೂ ಬಿಡದೆ ವಾಂತಿಯಾಗಲಾರಂಭಿಸುತ್ತದೆ. ಹೊಟ್ಟೆಯಲ್ಲಿ ಸೇವಿಸಿದ ಒಂದಂಶವೂ ಉಳಿಯದ ಹಾಗೆ. ಅಷ್ಟಾಯಿತೋ ನಿಶ್ಯಕ್ತನಾಗಿಬಿಡುತ್ತೇನೆ. ಯಾವುದಾದರೂ ನರ್ಸಿಂಗ್ ಹೋಮಿಗೆ ಹೋಗಿ ಡ್ರಿಪ್ಸ್ ಹಾಕಿಸಿಕೊಂಡಾಗ ಮಾತ್ರ ಅದರಿಂದ ತಾತ್ಕಾಲಿಕ ಮುಕ್ತಿ. ಹೊಟ್ಟೆನೋವು, ಭೇದಿ, ಜ್ವರ ಅಥವಾ ಇನ್ನಾವುದೇ ತೊಂದರೆಯಿಲ್ಲ. ಒಮ್ಮೊಮ್ಮೆ ತಲೆನೋವು ಕಾಣಿಸಿಕೊಳ್ಳುತ್ತವೆ,'' ಆತ ವಿವರಿಸಿದ, ''ಅನೇಕ ತಜ್ಞರನ್ನು ಕಂಡಿದ್ದೇನೆ. ರಕ್ತ, ಮೂತ್ರ, ಎಕ್ಸ್-ರೇ ಪರೀಕ್ಷೆಗಳಂತೂ ಬೇಸರಿಸುವಷ್ಟು ಸಲ ಆಗಿವೆ. ಎಂಡೋಸ್ಕೋಪಿಯೂ ಆಗಿದೆ. ಯಾವುದೇ ಕಾಯಿಲೆ ಇಲ್ಲವಂತೆ ನನಗೆ. ಕಡೆಗೆ ಸಿ.ಟಿ.ಸ್ಕ್ಯಾನ್* ಕೂಡ ಮುಗಿಯಿತು. ಆದರೆ ಪರಿಹಾರ ಮಾತ್ರ ದೊರೆತಿಲ್ಲ. ಎಲ್ಲ ಚಿಕಿತ್ಸಾ ಪದ್ಧತಿಗಳಾಯಿತು. ಮಾಟ-ಮಂತ್ರಗಳಾಯಿತು. ವಾಂತಿ ಮಾತ್ರ ನಿಲ್ಲಲಿಲ್ಲ..'' ತುಂಬ ಖಿನ್ನನಾಗಿ ವಿವರಿಸಿದ ಶಶಿಕಾಂತ.

ಆತನ ಸಂಬಂಧಿಯೊಬ್ಬರು ತಮ್ಮ ಕುಟುಂಬ ವೈದ್ಯರೊಂದಿಗೆ ಚರ್ಚಿಸಿ ಅವರ ಸಲಹೆಯಂತೆ ಬೆಂಗಳೂರಿಗೆ ಶಶಿಕಾಂತನನ್ನು ಕರೆಸಿಕೊಂಡಿದ್ದರು. ತನ್ನ ಚಿಕಿತ್ಸಾ ವಿವರಗಳ ದೊಡ್ಡ ಫೈಲ್ ಸಮೇತ ಬಂದ ಶಶಿಕಾಂತನನ್ನು ಆ ವೈದ್ಯರು

---

* ಇದೊಂದು ನವೀನ ವೈದ್ಯಕೀಯ ಪರೀಕ್ಷೆ. ಇದರಿಂದ ಮಿದುಳಿನ ಸ್ಥಿತಿ ಸ್ಪಷ್ಟವಾಗುತ್ತದೆ. ಮಿದುಳಿನ ಅಂತರಾಳದ ಅಸ್ತವ್ಯಸ್ತತೆಗಳಿಗೆಲ್ಲ ಇದು ಕನ್ನಡಿ ಹಿಡಿದಂತೆ. ತುಂಬ ದುಬಾರಿಯಾದ ಈ ಪರೀಕ್ಷೆಯನ್ನು ಅತ್ಯನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮಾಡುತ್ತಾರೆ. ಶಶಿಕಾಂತನ ವಮನಕ್ಕೆ ಕಾರಣ ತಿಳಿಯದೇ ಅವನನ್ನು ಈ ಪರೀಕ್ಷೆಗೂ ಗುರಿಪಡಿಸಿದ್ದರು ತಜ್ಞರು.

ನನ್ನೆಡೆ ಕಳಿಸಿದ್ದರು. ಅರ್ಧಗಂಟೆ ನಾನು ಆ ಫೈಲಿನ ಅಧ್ಯಯನ ಮಾಡಿದೆ.

ಐದೂವರೆ ಅಡಿ ಎತ್ತರದ (ಸುಮಾರು 60 ಕೆ.ಜಿ.ತೂಕದ) ಕೃಶಕಾಯ. ಒಪ್ಪಓರಣ ಗೊತ್ತಿಲ್ಲದವ. ನಿಸ್ತೇಜ ಮುಖ. ಎಲ್ಲದರಲ್ಲಿಯೂ ನಿರಾಸಕ್ತಿ. ಕೈ ಹಿಸುಕಿಕೊಳ್ಳುವುದು ಮತ್ತು ಲಟಿಕೆ ಮುರಿಯುವದು, ಆತಂಕ ಇಲ್ಲವೆ ಮುಜುಗುರ ಪಟ್ಟುಕೊಳ್ಳುವುದು ಆತನಲ್ಲಿ ಬೆಳೆದು ಬಂದ ಗುಣಗಳಾಗಿದ್ದವು. ಹಸಿವು - ನಿದ್ರೆ ಸರಿಯಾಗಿ ಆಗುತ್ತದೆಂದ. ''ಕನಸುಗಳು ಬೀಳುತ್ತವೆಯೆ? '' ಎಂದು ಕೇಳಿದೆ. ಯಾವಾಗಾದರೊಮ್ಮೆ ಅಣ್ಣನ ಬಗ್ಗೆ ಕನಸಾಗುತ್ತದೆ ಎಂದ. ಆದರೆ ಅಣ್ಣನ ಕುರಿತು ಮಾತ್ರ ಸರಿಯಾದ ವಿವರಗಳನ್ನು ಆತನಿಂದ ನೀಡಲಾಗಲಿಲ್ಲ. ಅವನ ಮಾತಿನಿಂದ ವೈದ್ಯರುಗಳ ಮೇಲೆ ಶಶಿಕಾಂತನಿಗೆ ತುಂಬ ಕೋಪವಿರುವುದು ಕಂಡು ಬಂತು. ''ವೈದ್ಯರಿಗೇ ತಿಳಿಯದಿರುವುದು ನನಗೇನು ತಿಳಿಯುತ್ತದೆ?'' ಎಂದ ಶಶಿಕಾಂತನಿಗೆ, ''ವೈದ್ಯರು ಏನಾದರೂ ಹೇಳಲಿ, ನಿನ್ನ ಕಾಯಿಲೆಯ ಬಗ್ಗೆ ನಿನಗೇನನ್ನಿಸುತ್ತದೆ? ಅದನ್ನು ಹೇಳು,'' ಎಂದೆ. ಅವನ ಮುಖದಲ್ಲಿ ಸ್ವಲ್ಪ ಗೆಲುವು ಮೂಡಿತು. ''ನೀವೊಬ್ಬರೇ ಈ ರೀತಿ ನನ್ನನ್ನು ಕೇಳಿದವರು. ವೈದ್ಯರಾದರೂ ಏನು ಮಾಡುತ್ತಾರೆ? ಎಲ್ಲ ನನ್ನ ಗ್ರಹಚಾರ'' ಎಂದು ಮತ್ತೆ ಸುಮ್ಮನಾದನಾಗಲೀ ತನ್ನ ಕಾಯಿಲೆಯ ಬಗ್ಗೆ ಮತ್ತೇನೂ ಹೇಳಲಿಲ್ಲ.

ಸರಕಾರಿ ನೌಕರನಾಗಿರುವ ತಾನು ಬೆಂಗಳೂರಲ್ಲಿ ಹೆಚ್ಚು ಕಾಲ ಉಳಿಯಲಾಗುವುದಿಲ್ಲವೆಂದ ಶಶಿಕಾಂತ. ಮನೆಯಲ್ಲಿ ಹೆಂಡತಿ ಮತ್ತು ಇಬ್ಬರು ಪುತ್ರಿಯರು ಮಾತ್ರ ಇರುವುದರಿಂದ ಆತ ಬೇಗ ಊರು ಸೇರಿಕೊಳ್ಳುವುದು ಅವಶ್ಯವಾಗಿತ್ತು. ಮೂರನೇ ದಿನ ನಾರ್ಕೊ ಪರೀಕ್ಷೆಗೆ ಬರಲು ಹೇಳಿ ಕಳಿಸಿದೆ.

ಮರುದಿನ ನಿಗದಿತ ಸಮಯಕ್ಕೆ, ಖಾಲಿ ಹೊಟ್ಟೆಯಲ್ಲಿ ಬಂದ ಶಶಿಕಾಂತನ ಮುಖದಲ್ಲಿ ಆತ್ಮವಿಶ್ವಾಸವನ್ನು ಕಂಡೆ. ''ನಿಮ್ಮ ಪರೀಕ್ಷಾ ವಿಧಾನದಿಂದಾಗಿ ನನಗೆ ಹೊಸ ಭರವಸೆಯುಂಟಾಗಿದೆ'' ಎಂದ. ಇದು ಒಳ್ಳೆಯ ಲಕ್ಷಣ. ನಾರ್ಕೊ ಪರೀಕ್ಷೆಗೆ ಸಜ್ಜಾದೆ.

ಈ ಪರೀಕ್ಷೆಯಲ್ಲಿ ಪೆಂಟೋಥಾಲ್ (Pentothol) ಎಂಬ ಔಷಧಿಯನ್ನು ರಕ್ತನಾಳದ ಮೂಲಕ ಕೊಟ್ಟು ವ್ಯಕ್ತಿಯ ಪ್ರಜ್ಞೆಯನ್ನು (conscious mind) ಮಲಗಿಸಲಾಗುವುದು. ಸುಪ್ತ ಮನಸ್ಸಿನಲ್ಲಿರುವುದನ್ನು ತಿಳಿದುಕೊಳ್ಳಲು ಇದು ವಶೀಕರಣದಂಥ ಒಂದು ವಿಧಾನ. ಈ ಪರೀಕ್ಷೆಯಲ್ಲಿ ಕೆಲವು ಬಹು ಮುಖ್ಯ ಅಂಶಗಳು ಬೆಳಕಿಗೆ ಬಂದವು. ಆತನ ಮಿದುಳಿನಲ್ಲಿ ಗಂತಿ (tumour) ಅಥವಾ ಇನ್ನಾವುದೆ ರೀತಿಯ ತೀವ್ರತರ ಕಾಯಿಲೆ ಇರಬಹುದೆಂಬ ಸಂಶಯ ನನಗಿತ್ತು. ಅವನಣ್ಣ ಹತ್ತು ವರ್ಷಗಳ ಹಿಂದೆ ಇದೇ ಕಾರಣದಿಂದ ತೀರಿಹೋಗಿದ್ದ. ತನ್ನ ಕಾಯಿಲೆ ಯೇನು? ಅದು ಯಾವ ವೈದ್ಯರಿಗೂ ಗೊತ್ತಾಗಲಿಲ್ಲವಲ್ಲ? ಇದರೊಂದಿಗೆ ಹೀಗೇ ಮುಂದುವರಿಯುವುದಕ್ಕಿಂತ ಸಾವೆ ಮೇಲಲ್ಲವೇ? ಎಂಬ ಚಿಂತೆಗಳೊಂದಿಗೆ, ಆತನ ವೃತ್ತಿ ಜೀವನದ ಸಮಸ್ಯೆಗಳ ಕಾಡುವಿಕೆ ಬೇರೆ. ಪ್ರಾಮಾಣಿಕ, ದಕ್ಷ ಕೆಲಸಗಾರನೆಂದು ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರನಾಗಿದ್ದರೂ, ನಾಲ್ಕು ಜನರ ಕೆಲಸದ ಭಾರ ಮೈಮೇಲೆ ಬಿದ್ದರೂ ಒಳಗೊಳಗೇ ನುಂಗಿಕೊಂಡಿದ್ದ. ಸಹೋದ್ಯೋಗಿಗಳ ಕುತಂತ್ರಕ್ಕೋ, ಅಧಿಕಾರ ವರ್ಗದ ಅವಕೃಪೆಗೋ ಪಾತ್ರನಾದೇನೆಂಬ ಭಯ. ಮಧ್ಯವಯಸ್ಕ ಬೇರೆ. ಈ ಕೆಲಸ ಬಿಟ್ಟರೆ ಬೇರೇನೂ ಗೊತ್ತಿಲ್ಲ. ಸಂಸಾರದ ಭವಿಷ್ಯತ್ತಿನ ಯೋಚನೆಯಿಂದಾಗಿ ಶಶಿಕಾಂತ ಒಳಗೊಳಗೇ ಹಣ್ಣಾಗಿದ್ದ. ನೌಕರಿಯಲ್ಲಿ ಹೆಚ್ಚು 'ತೊಡಗಿಕೊಳ್ಳು'ವುದು ಅನಿವಾರ್ಯವಾಗಿತ್ತು ಆತನಿಗೆ. ಸ್ನೇಹಿತರಾಗಲಿ, ಸಂಬಂಧಿಕರನ್ನಾಗಲಿ ಹಚ್ಚಿಕೊಳ್ಳದೆ,

ಇತರ ಹವ್ಯಾಸಗಳೆಡೆ ಲಕ್ಷ್ಯ ಹಾಕದೆ ಕೆಲಸ - ಮನೆ ಎಂದುಕೊಂಡಿದ್ದ. ರಜೆಗಳನ್ನು ಕೂಡಿಟ್ಟುಕೊಳ್ಳುತ್ತಿದ್ದ. ಕಚೇರಿ ಅವಧಿ ನಂತರದ ಕಾಲವನ್ನೆಲ್ಲ ಸಂಸಾರದೊಂದಿಗೆಯೇ ಕಳೆಯುತ್ತಿದ್ದ. ''ಇನ್ನೇನಾದರೂ ಹೇಳಬೇಕಾಗಿದೆಯೆ?'' ಎಂದು ಕೊನೆಯ ಪ್ರಶ್ನೆ ಕೇಳಿ, ಆತ ''ಇಲ್ಲ''ವೆಂದಾಗ ನಾರ್ಕೋ ಪರೀಕ್ಷೆಯನ್ನು ಕೊನೆಗೊಳಿಸಿದೆ. ಮಾರನೆ ದಿನ ಬಂದು ಕಾಣಲು ಹೇಳಿ ಕಳಿಸಿದೆ.

ರಜೆ ಪಡೆದು, ಬೇರೆ ಊರಿನಿಂದ ಬಂದವ ಶಶಿಕಾಂತ. ಹೆಚ್ಚು ಕಾಲ ಇಲ್ಲಿ ಉಳಿಸಿಕೊಳ್ಳಕೂಡದು. ಅತಿ ಜಾಗರೂಕತೆಯಿಂದ ಚಿಕಿತ್ಸಾ ವಿಧಾನವನ್ನು ರೂಪಿಸಬೇಕು. ಚಿಕಿತ್ಸೆಯನ್ನು ಬಹಳ ಬೇಗ ಮುಂದುವರಿಸಿದರೆ ಮಾನಸಿಕ ರೋಗಿಗೆ ತಡೆದುಕೊಳ್ಳುವುದು ಸಾಧ್ಯವಾಗಲಿಕ್ಕಿಲ್ಲ. ತೀರ ನಿಧಾನಗೊಳಿಸಿದರೆ ಶಶಿಕಾಂತನಿಗೆ ಆರ್ಥಿಕ, ವೃತ್ತಿ ಸಂಬಂಧಿತ ಮತ್ತು ಸಾಂಸಾರಿಕ ತೊಂದರೆಗಳುಂಟಾಗುತ್ತವೆ. ಒಂದು ವಾರದವರೆಗೆ ಪ್ರತಿದಿನವೂ ನನ್ನನ್ನು ಕಾಣಬೇಕೆಂದೂ, ನಂತರ ವರ್ಷದ ವರೆಗೆ ಪ್ರತಿ ತಿಂಗಳು ನಿಗದಿತ ದಿನದಂದು ಬರಬೇಕೆಂದೂ ಶಶಿಕಾಂತನಿಗೆ ಸೂಚಿಸಿದೆ.

ಒಂದು ವಾರದ 'ಪ್ರಶ್ನೋತ್ತರ'ಗಳಿಂದ, ಆತನಲ್ಲಿ ಚಿಕಿತ್ಸೆ ಮುಂದುವರಿದಂತೆಲ್ಲಾ ಅದನ್ನು ಸಹಿಸಿಕೊಳ್ಳುವ ಮನೋಬಲವಿರುವುದು ಗೊತ್ತಾಯಿತು. ನಾರ್ಕೋ ಪರೀಕ್ಷೆಯಲ್ಲಿ ತಿಳಿದ ವಿಷಯಗಳನ್ನೆಲ್ಲಾ ಒಂದೊಂದಾಗಿ ಹೇಳಿ, ಮನೋವಿಶ್ಲೇಷಣೆ ಮಾಡಲಾಯಿತು. ತನಗೆ ಮಿದುಳಿನ ಗಂತಿ ಅಥವಾ ಇನ್ನಾವುದೇ ಕಾಯಿಲೆ ಇರಬಹುದಾದ ಭಯ ಕಾಡುತ್ತಿರುವದನ್ನು ಶಶಿಕಾಂತ ಒಪ್ಪಿಕೊಂಡ.

''ನಿನಗೆ ಮಿದುಳಿನ ಗಂತಿಯಾಗಲಿ, ಇನ್ನಾವುದೆ ರೀತಿಯ ಶಾರೀರಿಕ ಕಾಯಿಲೆಯಾಗಲಿ ಇಲ್ಲ'' ಎಂದೆ.

''ಅದ್ಹೇಗೆ? ನಮ್ಮಣ್ಣನಿಗೂ ಡಾಕ್ಟ್ರು ಇದೇ ರೀತಿ ಹೇಳಿದ್ದರು. ಅವನು ಕಡೆಗೆ ಮಿದುಳಿನ ಗಂತಿಯಿಂದಾಗಿಯೆ ಸಾಯಲಿಲ್ಲವೆ?''

''ನಿಮ್ಮಣ್ಣನ ವಿಷಯ ನನಗೆ ತಿಳಿಯದು. ಆತ ತಜ್ಞರನ್ನು ಕಂಡಿದ್ದನೋ ಇಲ್ಲವೋ ಗೊತ್ತಿಲ್ಲ. ನಿನ್ನಂತೆ ಎಲ್ಲ ಪರೀಕ್ಷೆಗಳಿಗೆ ಒಳಪಟ್ಟಿರಲಾರರು.'' ನನ್ನ ಈ ಮಾತು ಶಶಿಕಾಂತನಿಗೆ ಒಪ್ಪಿಗೆಯಾದಂತೆ ತೋರಿತು.

''ಹೌದು. ನನ್ನಣ್ಣನನ್ನು ನೋಡಿದ್ದು ಒಬ್ಬ ಸಾಮಾನ್ಯ ವೈದ್ಯ. 'ಏನೂ ಕಾಯಿಲೆಯಿಲ್ಲ' ಅಂದಿದ್ದರು. ಆದರೆ ಅಣ್ಣ ಕಾಯಿಲೆ ಬಂದು ಆರು ತಿಂಗಳಿಗೇ ತೀರಿಹೋದ.''

''ಹೌದಾ....ನಿನ್ನಣ್ಣನಿಗಿಂತ ಮೊದಲೇ ನಿನಗೆ ಈ ತೊಂದರೆ ಪ್ರಾರಂಭವಾಯಿತಷ್ಟೆ. ಹದಿಮೂರು ವರ್ಷಗಳಾದರೂ ನಿನಗಿನ್ನೂ ಇದರಿಂದ ಪ್ರಾಣಾಪಾಯವಾಗಿಲ್ಲ. ನಿನ್ನ ಭಯವೇ ನಿಜವಾಗಿದ್ದಲ್ಲಿ ಹಾಗಾಗಬೇಕಿತ್ತಲ್ಲವೆ?''

ಆತ ಹೌದೆಂದು ತಲೆಯಾಡಿಸಿದನಾದರೂ ''ತಜ್ಞರಿಗೂ - ಪರೀಕ್ಷೆಗಳಿಗೂ ಗೋಚರವಾಗದಂಥ ಕಾಯಿಲೆ ನನ್ನೊಳಗೆ ಹುದುಗಿರುವ ಸಾಧ್ಯತೆ ಇಲ್ಲವೆ?'' ಕೇಳಿದ.

''ಇದು ಸಾಧ್ಯ. ಆದರೆ ತುಂಬ ವಿರಳವಾದ ಸಾಧ್ಯತೆ ಇದು. ನಿನ್ನ ಮಟ್ಟಿಗೆ ಇಂಥ ಸಾಧ್ಯತೆ ಇಲ್ಲವೇ ಇಲ್ಲ. ಹಾಗಿದ್ದರೆ ಇಷ್ಟೊತ್ತಿಗೆ ಕಾಯಿಲೆ ಉಲ್ಬಣಗೊಂಡಿರಬಹುದಿತ್ತು.'' ಆತನಿಗೆ ಯಾವ ದೈಹಿಕ ಕಾಯಿಲೆಯೂ ಇಲ್ಲ ಎಂದು ಮನಗಾಣಿಸುವುದು ಸುಲಭವಾಗಿರಲಿಲ್ಲ.

''ಹಾಗಾದರೆ ನನಗೆ ತಲೆನೋವು ಮತ್ತು ವಮನಗಳು ಪೀಡಿಸುವದೇಕೆ?'' ಶಶಿಕಾಂತನ ಪ್ರಶ್ನೆಗೆ 'ಅದು ಮಾನಸಿಕ ಕಾರಣಗಳಿಂದಾಗಿ' ಎಂದು ತಿಳಿಸಿದೆ.

ಮಾನಸಿಕ ಕಾರಣಗಳೇನಿರಬಹುದು? ತನ್ನ ಜೀವನದ ಬಗ್ಗೆ ಅವನಿಗೇನೆನಿಸುತ್ತದೆ? ನಾನು ಯೋಚಿಸಿದೆ. ಆತನಿಂದಲೇ ಉತ್ತರ ಪಡೆದೆ. ಶಶಿಕಾಂತ 'ಜೀವನವೇ ಬೇಸರವಾಗಿದೆ'ಯೆಂದ. 'ಸಾಯಬೇಕೆನಿಸುತ್ತದೆ' ಎಂದೂ ಹೇಳಿದ. ಆದರೆ 'ಮಡದಿ ಒಳ್ಳೆಯವಳು. ಮಕ್ಕಳು ಮುದ್ದಿನವು. ಅವರಿಗಾಗಿ ಬದುಕುತ್ತಿದ್ದೇನೆಂದೂ' ಸೇರಿಸಿದ.

ವೈಯಕ್ತಿಕ ಜೀವನ, ಕೆಲಸ ಸಂಸಾರ ಕುರಿತು ನಾರ್ಕೋ ಪರೀಕ್ಷೆಯಲ್ಲಿ ಹೇಳಿದ್ದನ್ನೇ ಪುನರುಚ್ಚರಿಸಿದ.

''ಎಲ್ಲ ನೌಕರಿಗಳಲ್ಲೂ ಏನಾದರೂ ತೊಂದರೆಗಳಿದ್ದೇ ಇರುತ್ತವೆ. ಅವುಗಳನ್ನು ಧೈರ್ಯವಾಗಿ ಎದುರಿಸಬೇಕು. ತುಟಿ ಪಿಟಕ್ಕೆನ್ನದೆ, ಒಳ್ಳೆಯವನೆನಿಸಿಕೊಳ್ಳುವ ಇಲ್ಲವೆ ಭದ್ರತೆಯ ಕಾರಣದಿಂದ ನೀನು ಹೆಚ್ಚು ಕೆಲಸ ಮಾಡುತ್ತಿರುವುದು ಸರಿಯಷ್ಟೆ. ಆದರೆ ಯಾವುದಕ್ಕೂ ಒಂದು ಮಿತಿ ಇರುತ್ತದೆ. ಮಿತಿ ಮೀರಿದರೆ ಹಾನಿಯಾಗುವುದೂ ದಿಟ ಅಲ್ಲವೆ? ಇಂಥ ಸಂದರ್ಭಗಳಲ್ಲೆಲ್ಲ ಜಾಣ್ಮೆಯಿಂದ ಪರಿಹಾರ ಕಂಡುಕೊಳ್ಳಬೇಕು. ನೀನೀಗಾಗಲೇ ಸಮಸ್ಯೆಯನ್ನು ಭೂತಾಕಾರವಾಗಿಸಿಕೊಂಡಿದ್ದೀ. ಈಗಲೂ ಅದನ್ನು ನಿವಾರಿಸಿಕೊಳ್ಳುವ ಸಮಯ ಮೀರಿಲ್ಲ.''

''ಏನು ಮಾಡಲಿ? ಈ ಕೆಲಸ ನನ್ನಿಂದ ಸಾಧ್ಯವಿಲ್ಲ ಎಂದು ಹೇಳುವುದು ಸರಿಯಾದೀತೇ?''

''ಊಹುಂ. ಹಾಗೆಂದು ಬಾಯಿಬಿಟ್ಟೇ ಹೇಳಬೇಕೆಂದಲ್ಲ. ಪರ್ಯಾಯವಾಗಿ ತೋರಿಸಿಕೊಡಬೇಕು. ಅಧಿಕಾರಿಗಳು ಕೊಟ್ಟ ಕೆಲಸಗಳಲ್ಲಿ ಸಾಧ್ಯವಾಗುವಂಥವನ್ನು ಮಾತ್ರ ಮಾಡಿ, ಅಸಾಧ್ಯ ಎನ್ನುವಂಥವುಗಳನ್ನು ಹಾಗೆಯೆ ಇಟ್ಟುಬಿಡು. ಕ್ರಮೇಣ ಅವರು ಇದಕ್ಕೆ ಹೊಂದಿಕೊಳ್ಳುತ್ತಾರೆ. ಪ್ರಾರಂಭದಲ್ಲಿ ಸ್ವಲ್ಪ ಸಿಡಿಮಿಡಿಗೊಂಡಾರು. ಆದರೆ ಯಾವ ಅಧಿಕಾರಿಯೂ ಒಳ್ಳೆಯ ನೌಕರನನ್ನು ಕಳೆದುಕೊಳ್ಳಲು ತಯಾರಿರುವುದಿಲ್ಲ.''

ಶಶಿಕಾಂತನಿಗೆ ನನ್ನ ಸಲಹೆ ಹಿಡಿಸಿತು. ಆತನದೊಂದು ಯಾಂತ್ರಿಕ ಜೀವನ. ಬದಲಾವಣೆಯ ಬೆಳಕಿನ ಅವಶ್ಯಕತೆಯಿತ್ತು ಅವನ ಜೀವನ ಕ್ರಮಕ್ಕೆ. ಜನರೊಂದಿಗೆ ಹೆಚ್ಚಾಗಿ ಬೆರೆಯುವಂತೆ ಹೇಳಿದೆ. ರಜಾದಿನಗಳಲ್ಲಿ ಮನೆ ಜನರೊಂದಿಗೆ ಸಿನಿಮಾ, ಪಿಕ್‌ನಿಕ್‌ಗಳಿಗೆ ಹೋಗುವುದು ಒಳ್ಳೆಯದೆಂದೆ.

ಈಗೊಂದು ವರ್ಷದಿಂದ ತಿಂಗಳಿಗೊಮ್ಮೆ ನನ್ನನ್ನು ಕಾಣುತ್ತಿದ್ದಾನೆ ಶಶಿಕಾಂತ. ಈಗ ಆತನಿಗೆ ತಲೆನೋವು, ವಮನಗಳ ತೊಂದರೆ ಇಲ್ಲವಂತೆ. ಹೊಸ ಜೀವನವನ್ನು ಬದುಕುತ್ತಿರುವೆನೆಂದು ಆತ ಹೇಳುತ್ತಾನೆ. ಶಶಿಕಾಂತನ ಮುಖದಲ್ಲೀಗ ಮಂದಹಾಸ ಮನೆಮಾಡಿದೆ. ''ಇನ್ನು ಚಿಕಿತ್ಸೆಯ ಅವಶ್ಯಕತೆಯಿಲ್ಲ'' ಎಂದೆ.

ಶಶಿಕಾಂತನ ತೊಂದರೆಗೆ ಹೈಪೊಕಾಂಡ್ರಿಯಾಸಿಸ್ (Hypocondriasis=ವ್ಯಾಧಿಭಯ) ಎಂದು ಹೆಸರು. ಸುಪ್ತ ಮನಸ್ಸು ನಮಗೆ ತಿಳಿಯದಂತೆಯೆ ದೈಹಿಕ ಬೇನೆಗಳನ್ನುಂಟು ಮಾಡಬಹುದು. ಆದ್ದರಿಂದ ಮೊದಲು ಇಂಥ ಕಾಯಿಲೆಗಳಾವೂ ಇಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವುದು ಅವಶ್ಯ. ನಂತರ ಮನೋವಿಶ್ಲೇಷಣೆ ನಡೆಸಿ ಚಿಕಿತ್ಸಾ ಕ್ರಮಗಳನ್ನು ರೂಪಿಸಿಕೊಳ್ಳಬೇಕು. ಮನಸ್ಸಿನ ಕನ್ನಡಿಗೆ ಹತ್ತಿಕೊಂಡ ವ್ಯಾಧಿಭಯದ ಜಿಡ್ಡನ್ನು ತೊಳೆದು ಅದನ್ನು ಥಳಥಳಿಸುವಂತೆ ಮಾಡುವುದೇ ಈ ಚಿಕಿತ್ಸೆ. ●

ಖ್ಯಾತಿ

ಹೆಸರಾಂತ ಉರ್ದು ಕವಿ ಇಕ್‌ಬಾಲ್ ತಮ್ಮ ಬಾಲ್ಯದಲ್ಲಿ ಪ್ರತಿ ದಿನವೂ ಶಾಲೆಗೆ ತಡವಾಗಿ ಬರುತ್ತಿದ್ದರು.

ಒಂದು ದಿನ ಸಿಟ್ಟಿಗೆದ್ದ ಮಾಸ್ತರು 'ನೀನು ಪ್ರತಿ ದಿನವೂ ತರಗತಿಗೆ ತಡವಾಗಿ ಬರುತ್ತೀಯಲ್ಲ!' ಅಂದರು.

'ಇಕ್‌ಬಾಲ್ ಬರುವುದು ಯಾವಾಗಲೂ ತಡವಾಗುತ್ತೆ!' ಅಂದರು ಹುಡುಗ ಇಕ್‌ಬಾಲ್.

'ಇಕ್‌ಬಾಲ್' ಎನ್ನುವ ಉರ್ದು ಪದದ ಅರ್ಥ 'ಖ್ಯಾತಿ' ಎಂಬುದು.

ಸಂಗ್ರಹ: ಬಾಲಯೋಗಿ

ವಿದ್ಯಾರ್ಥಿ ಚಿಂತಾಮಣಿ

ತ್ರಿವಿಕ್ರಮ

154
ಪ್ರವರದ ವಿವರ:
ದೈತ್ಯದಾನವ ರಾಕ್ಷಸರ ಅವತಾರ

"ನಿನ್ನ ಪ್ರವರ ಎಲ್ಲ ಬಿಚ್ಚಿಬಿಟ್ಟೇನು!" ಎಂಬೊಂದು ಮಾತು, ಮುಖ್ಯವಾಗಿ ಹಳೇ ಮೈಸೂರು ಪ್ರದೇಶದಲ್ಲಿ ಪ್ರಚಲಿತವಾಗಿದೆ. ಅದರ ತಾತ್ಪರ್ಯ, ನಿನ್ನ ಪೂರ್ವಚರಿತ್ರೆಯನ್ನೆಲ್ಲ ಬಹಿರಂಗವಾಗಿ ಬಿಡಿಸಿ ಮಾನ ಕಳೆದೇನು ಅಂತ. ಆದರೆ ಈ "ಪ್ರವರ" ಎಂದರೇನು? ಶಬ್ದಕ್ಕೆ ಅನೇಕಾರ್ಥಗಳಿವೆ. "ವರ" ಎಂದರೆ ಶ್ರೇಷ್ಠ. "ಪ್ರವರ" ಎಂದರೆ ತುಂಬಾ ಶ್ರೇಷ್ಠ. "ಪಂಡಿತ ಪ್ರವರ" ಮುಂತಾಗಿ. ಈ ಶಬ್ದಕ್ಕಿರುವ ಅನೇಕ ಅರ್ಥಗಳ ಗೊಡವೆ ಬಿಟ್ಟು ಪ್ರಸ್ತುತವನ್ನು ಚರ್ಚಿಸೋಣ. ಜನಿವಾರವುಳ್ಳ ಮೂರು ವರ್ಣ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ)ಗಳು ತಮ್ಮ ಕುಲಗಳನ್ನು "ಗೋತ್ರ"ಗಳಿಂದ ಗುರುತಿಸುವುದು ಸರ್ವವಿದಿತ. ಪ್ರತಿಯೊಂದು ಗೋತ್ರದ ಮೂಲದಲ್ಲಿ ಒಬ್ಬ ಋಷಿ ಇರುತ್ತಾನೆ. ಆಂಗಿರಸ, ವಿಶ್ವಾಮಿತ್ರ, ವಸಿಷ್ಠ ಇತ್ಯಾದಿ. ಈ ಋಷಿಗಳಷ್ಟೇ ಅಲ್ಲದೆ ಆಯಾ ಋಷಿ ಕುಲಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಕವಲುಗಳಿದ್ದು ಅವುಗಳನ್ನು "ಪ್ರವರ"ಗಳಿಂದ ಗುರುತಿಸುತ್ತಾರೆ. ಉದಾಹರಣೆಗೆ, ನನ್ನ ಕುಲ ಮೂಲತಃ ಆಂಗಿರಸ (ಋಷಿಯ) ಗೋತ್ರಕ್ಕೆ ಸೇರಿದ್ದು. ಅದರಲ್ಲಿರುವ ಅನೇಕ ಕವಲುಗಳನ್ನು ಪ್ರವರ ಋಷಿಗಳ ವಂಶಾವಳಿಯಿಂದ ಗುರುತಿಸಲಾಗುತ್ತದೆ. ನನ್ನ ವಂಶವನ್ನು "ಆಂಗಿರಸ ಬೃಹಸ್ಪತಿ ಭಾರದ್ವಾಜ" ಎಂಬ ಮೂವರು ಋಷಿಗಳ ಬಳಿಯಿಂದ ಗುರುತಿಸಲಾಗುತ್ತದೆ. ಹೀಗೆ ನಾನು ನನ್ನ ವಂಶವನ್ನು "ಆಂಗಿರಸ - ಬಾರ್ಹಸ್ಪತ್ಯ - ಭಾರದ್ವಾಜ ತ್ರಯಾರ್ಷೇಯ ಪ್ರವರಾನ್ವಿತ" ಎಂದು ಹೇಳಿಕೊಳ್ಳುತ್ತೇನೆ. ("ತ್ರಯಾರ್ಷೇಯ" ಎಂದರೆ ಮೂರು ಋಷಿಗಳಿಂದ ಬಂದದ್ದು.) ಹೀಗೆ ನನ್ನ ಪ್ರವರ ಬಿಚ್ಚುವುದಾಗಿ ದಬಾಯಿಸಿದರೆ ನನ್ನ ಸ್ವಂತ ಚರಿತ್ರೆಯನ್ನಷ್ಟೇ ಅಲ್ಲ, ನನ್ನ ಪೂರ್ವಜರ ಎಲ್ಲ ಅಕಲ್ಯಾಣ ಚರಿತ್ರೆಯನ್ನೂ ಬೆಳಕಿಗೆ ಹಿಡಿಯುವುದಾಗಿ ಅರ್ಥ. ಈ ಬೆದರಿಕೆ ನನ್ನ ಗೋತ್ರಋಷಿಗಳನ್ನು ಕುರಿಯದಿದ್ದರೂ ನನ್ನಪ್ಪ - ಅಜ್ಜ ಮೊದಲಾದವರನ್ನು ಒಳಗೊಳ್ಳಬಹುದು; ಅದಿಲ್ಲವಾದರೂ ನನ್ನ ಪೂರ್ವಚರಿತ್ರೆಯನ್ನಂತೂ ಹೊರಗೆ ತೆಗೆದು ಮಾನಕಳೆಯಬಹುದು. ಪ್ರವರ = ವಂಶಾವಳಿ

★ ★

ಕ್ರೂರಸ್ವಭಾವ, ಅಥವಾ ರೀತಿ ನೀತಿಗಳನ್ನು ಬಿಟ್ಟು ಅನಾಗರಿಕ ಅಥವಾ ಉದ್ಧಟತನದಿಂದ ನಡೆದುಕೊಳ್ಳುವವರನ್ನು "ಕಿರಾತ," "ರಾಕ್ಷಸ," "ದೈತ್ಯ" ಎಂದೆಲ್ಲ ವಿಶೇಷಿಸುತ್ತೇವೆ. ಈ ಹೆಸರು ಹೊತ್ತವರೆಲ್ಲ ಪುರಾತನ ಕಾಲದಲ್ಲಿ ಈ ದೇಶದಲ್ಲಿ ವಸತಿ ಮಾಡಿದ್ದ ಜನಾಂಗಗಳೆಂಬುದು ಸಾಮಾನ್ಯವಾಗಿ ಗೊತ್ತಿದ್ದ ವಿಷಯ. ಇವರಲ್ಲಿ "ಕಿರಾತ"ರು - ಬಹುಶಃ - ಹಿಮಾಲಯದ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದ ಜನಾಂಗ. ಯಾಕೆಂದರೆ ಶಿವನು ಕಿರಾತ ವೇಷದಲ್ಲಿ ಬಂದು ಅರ್ಜುನನೊಡನೆ ಸೆಣಸಾಡಿ, ಪರಾಕ್ರಮಕ್ಕೆ ಮೆಚ್ಚಿ ಅವನಿಗೆ ಪಾಶುಪತಾಸ್ತ್ರ ಕೊಟ್ಟನೆಂದು ಮಹಾಭಾರತ ಉಲ್ಲೇಖಿಸುತ್ತದೆ. ಬೇಟೆಯಾಡಿ ಬದುಕುತ್ತಲಿದ್ದ ಕಿರಾತರು ಈ ದೇಶದಲ್ಲಿ ಆರ್ಯರಿಗಿಂತ ಮುಂಚೆ ವಿಸ್ತಾರವಾಗಿ ಹಬ್ಬಿದ್ದು ನಮ್ಮ ಭಾಷೆಗಳಿಗೆ ಸಾವಿರಾರು ಶಬ್ದಗಳನ್ನು ಕೊಟ್ಟವರೆಂದು ಭಾಷಾಶಾಸ್ತ್ರಿ ಸುನೀತಿ ಕುಮಾರ ಚಟರ್ಜಿಯವರು ಹೇಳಿದ್ದಾರೆ. ಬಹುಶಃ ಆಧುನಿಕ ಜನಾಂಗ ಶಾಸ್ತ್ರಜ್ಞರು "ಆಸ್ಟ್ರಿಕ್" ಎಂದು ಕರೆಯುವ ಜನಾಂಗ ಇದಾಗಿರಬೇಕು. ಒತ್ತುತ್ತ ಬಂದ ಆರ್ಯ ಜನಾಂಗದ ಮುಂದೆ ನಿಲ್ಲಲಾರದೆ ಇವರು ಗುಡ್ಡಗಾಡು ಸೇರಿ ಅನಾಗರಿಕರೆನಿಸಿದರು; ಅವರೀಗ ನಮಗೆ ತುಚ್ಛೀಕಾರ ವ್ಯಕ್ತಪಡಿಸುವ ಶಬ್ದವಾಗಿ ಉಳಿದಿದ್ದಾರೆ. ಯುದ್ಧಗಳಲ್ಲಿ ಸೋತವರಿಗೆ ಏನಾಗುತ್ತದೆಂಬುದಕ್ಕೆ ಇದೊಂದು ಉದಾಹರಣೆ.

★ ★

ಇಂದು ನಾವು "ದೈತ್ಯ"ರು, "ದಾನವ"ರು, "ರಾಕ್ಷಸ"ರು ಎಲ್ಲ ಒಂದೇ ಎಂದು ಭಾವಿಸುತ್ತೇವೆ. ಆದರೆ ಕ್ರಿಸ್ತಶಕ ಐದನೇ ಶತಮಾನದ ಅಮರಕೋಶ ಅಸುರ, ದೈತ್ಯ, ದಾನವರನ್ನೆಲ್ಲ ಒಂದೇ ರಾಶಿಯಲ್ಲಿ ಸೇರಿಸಿದರೂ ರಾಕ್ಷಸರನ್ನು ಬೇರೆಯಾಗಿಟ್ಟಿದೆ. ವೇದಗಳಲ್ಲಿ "ರಕ್ಷಸ್ಸು" (ರಕ್ಷ:)ಗಳು ಬರುತ್ತಾರೆ. "ರಾಕ್ಷಸ"ರು ಐತರೇಯ ಬ್ರಾಹ್ಮಣದ ಕಾಲದಿಂದ ಕಾಣಿಸಿಕೊಳ್ಳುತ್ತಾರೆ. ರಕ್ಷಸ್ಸುಗಳು ಅಮರಕೋಶದಲ್ಲಿ ಯಕ್ಷ, ಗಂಧರ್ವ, ಕಿನ್ನರ ಮೊದಲಾದ ಹಿಮಾಲಯದ ಜನಾಂಗಗಳೊಡನೆ ಹೇಳಲ್ಪಟ್ಟಿರುವುದರಿಂದ ಅವರು ಅಸ್ಸರೇ ಆಗಿರಬೇಕಾದ ದೈತ್ಯ, ದಾನವರಿಗಿಂತ ಬೇರೆಯೇ ಇರಬೇಕು. ವೇದದಲ್ಲಿ ರಕ್ಷೋಘ್ನ ಮಂತ್ರವೊಂದಿದೆ. (ರಕ್ಷೋಘ್ನ ಎಂದರೆ ರಕ್ಷಸ್ಸುಗಳನ್ನು ಕೊಲ್ಲುವ) ಇವರು ಮಂಗೋಲಿಯನ್ ಮೂಲದವರಿರಬೇಕು. ಇವರ ಬಳಗಕ್ಕೆ ಸೇರಿದ ರಾಕ್ಷಸರು ಗಂಗಾನದಿಯಿಂದ ದಕ್ಷಿಣಕ್ಕೆ ವ್ಯಾಪಿಸಿ ಆರ್ಯರ ವಿಸ್ತರಣೆಗೆ ಅಡ್ಡಿಯಾಗಿದ್ದರು. ದೇವತೆಗಳನ್ನು ಸೋಲಿಸಿ ಇವರ ನಾಯಕನಾದ ರಾವಣ ಹಾವಳಿಯೆನ್ನೆಬ್ಬಿಸಿದ್ದನೆಂದು ರಾಮಾಯಣದ ಕಥೆ. ಆದರೆ ಇವರು ಖಂಡಿತ "ದಾನವ"ರಲ್ಲ. ಯಾಕೆಂದರೆ ರಾವಣನಿಂದ ಭಯಗ್ರಸ್ತರಾಗಿದ್ದವರಲ್ಲಿ ದಾನವರೂ ಸೇರಿದ್ದರೆಂದು ರಾಮಾಯಣದ ಯುದ್ಧಕಾಂಡದಲ್ಲಿ ಒಂದಕ್ಕಿಂತ ಹೆಚ್ಚು ಸಲ ಹೇಳಿದೆ. ಅವನ ಸೋಲನ್ನು ಬಯಸುತ್ತಿದ್ದವರಲ್ಲಿ ದಾನವರೂ ಸೇರಿದ್ದರು. ದೇವ, ಅಸುರ, ದೈತ್ಯ, ದಾನವರೆಲ್ಲ ಮೂಲದಲ್ಲಿ ಕಶ್ಯಪ ಋಷಿಯ ಬೇರೆ ಬೇರೆ ಹೆಂಡಂದಿರ ಮಕ್ಕಳು - ಪರಸ್ಪರ ಶತ್ರುಗಳು. ಇವರಲ್ಲಿ "ದೈತ್ಯ"ರನ್ನು ಕುವೆಂಪು ಅವರು ದೌರ್ಜನ್ಯದಿಂದ ಉದ್ಧರಿಸಿ ಬಿಟ್ಟಿದ್ದಾರೆ. ಮಹಾಗಾತ್ರದ ಮಹಾಶಕ್ತಿಯ ಜನ ಮತ್ತು ಅವರ ಮಹಾ - ತ್ವ ಎಂಬರ್ಥದಲ್ಲಿ "ದೈತ್ಯ"ವನ್ನು ಚಾಲ್ತಿಗೆ ತಂದಿದ್ದಾರೆ. ಹೀಗೆ "ದೈತ್ಯ ಶಕ್ತಿ", "ದೈತ್ಯ ಪ್ರತಿಭೆ" - ಸಾಮಾನ್ಯರಿಗೆ ಸಿಲುಕದ್ದು. ಇಂಗ್ಲೀಷಿನ gaint- ಗ್ರೀಕ್ ಪುರಾಣದ ಮಹಾಗಾತ್ರದ ಮಾನವ. ಆ ಪದಕ್ಕೆ ದೈತ್ಯವನ್ನು ಸಮೀಕರಿಸಿದ್ದಾರೆ.

ಅಂದ ಹಾಗೆ, ಮೊನ್ನೆ ಒಂದು ಗ್ರಂಥದಲ್ಲಿ Asura Sites - ಅಸುರ ವಸತಿಗಳು ಎಂಬ ಉಲ್ಲೇಖ ನೋಡಿದೆ. [Monastery and Guild by Himanshu P Ray] ಛೋಟಾ ನಾಗಪುರದ ಗುಡ್ಡ ಪ್ರದೇಶದಲ್ಲಿ "ಅಸುರ" ಅವಶೇಷಗಳು ಸಿಕ್ಕಿವೆ. ಇಟ್ಟಿಗೆಯ ಕಟ್ಟಡಗಳ ಭಗ್ನಾವಶೇಷಗಳಿಂದ ಕೂಡಿದ ಈ ಗತಕಾಲದ - ಸಾತವಾಹನರ ಕಾಲಕ್ಕೂ ಹಿಂದೆ - ಸ್ಥಾನಗಳ ಬಳಿ ಕಬ್ಬಿಣದ ಗಣಿ ಮತ್ತು ಕುಲುಮೆಗಳ ಕುರುಹುಗಳಿವೆಯಂತೆ. ಎರಡು ಸಾವಿರ ವರ್ಷಗಳಿಗಿಂತಲೂ ಪೂರ್ವದಲ್ಲಿ ಕಬ್ಬಿಣದ ಭಟ್ಟಿಗಳನ್ನು ಈ ದೇಶಕ್ಕೆ ತಂದವರನ್ನು "ಅಸುರ"ರೆಂದು ಕರೆಯುತ್ತಿದ್ದರೆ? ಮಹಾಭಾರತ ಕಾಲದಲ್ಲಿ (ಸುಮಾರು 3,400 ವರ್ಷಗಳ ಹಿಂದೆ) ಕಬ್ಬಿಣದ ಬಳಕೆ ಇದ್ದಿಲ್ಲವೆಂದು ಹಸ್ತಿನಾಪುರದ ಉತ್ಖನನಗಳು ತೋರಿಸಿವೆ. ಈ ಅಸುರರೂ ಇಂದಿನ ಇರಾಣದಲ್ಲಿದ್ದ ನಮ್ಮ ದೇವತೆಗಳ ಶತ್ರುಗಳಾದ ಅಸುರರು ಬೇರೆಯೇ ಏನು? (ನೋಡಿರಿ - ಪದಾರ್ಥ ಚಿಂತಾಮಣಿ - 2)

– ಪಾವೆಂ.



ಅಪೂರ್ವ ಸಂಶೋಧನೆಗಳ ಕೇಂದ್ರ:

ಹೈದರಾಬಾದಿನ ಸಿಸಿಎಂಬಿ

● ಮೋಹನ ಹೆಗಡೆ, ಬಂದಗದ್ದೆ

ನಮ್ಮ ದೇಶದಲ್ಲಿ ಕೋಶ ಹಾಗೂ ಅಣುಜೀವ ವಿಜ್ಞಾನದಲ್ಲಿ ಸಂಶೋಧನೆಯು ಅವಶ್ಯಕತೆಯಿತ್ತು. ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿಯ ಆಶ್ರಯದಲ್ಲಿ, ಕೇಂದ್ರ ಸರಕಾರದ ಸಹಾಯಧನದಿಂದ, ಮೇಲಿನ ಉದ್ದೇಶಪೂರ್ತಿಗಾಗಿ ಕೋಶ ಹಾಗೂ ಅಣುಜೀವಿ ವಿಜ್ಞಾನ ಕೇಂದ್ರ ಹೈದರಾಬಾದಿನಲ್ಲಿ 1977ರ ಎಪ್ರಿಲ್ ಒಂದರಂದು ಸ್ಥಾಪಿಸಲ್ಪಟ್ಟಿತು. (Cellular Regional Research Lab.) ಮುಂದೆ ಮಾತೃಸಂಸ್ಥೆಯಿಂದ ಬೇರ್ಪಟ್ಟು Centre for Cellular and Molecular Biology ಎಂಬ ಹೆಸರು ತಳೆಯಿತು. ಆಧುನಿಕ ಜೀವವೈಜ್ಞಾನಿಕ ಕ್ಷೇತ್ರದ ಮುಂಚೂಣಿಯಲ್ಲಿದ್ದುಕೊಂಡು ವಿವಿಧ ಸಾಧನ ಸಲಕರಣೆ ಪ್ರಯೋಗಗಳ ಮೂಲಕ ಗಮನಾರ್ಹ ಸಾಧನೆ ಮಾಡುತ್ತಲಿದೆ ಈ ಸಂಸ್ಥೆ.

ಸುಮಾರು 14 ಎಕರೆಗಳಲ್ಲಿ ಹರಡಿಕೊಂಡ ಸಿಸಿಎಂಬಿ ಕಟ್ಟಡ ಸಂಕೀರ್ಣ 26-11-1987 ರಂದು ಕಾರ್ಯಾರಂಭ ಮಾಡಿತು. ಇದರಲ್ಲಿ ಮುಖ್ಯ ಪ್ರಯೋಗಾಲಯ, ವಾತಾನುಕೂಲ ಸ್ಥಾವರ, ಎಂಟು ನಕುಂಡ, ಪ್ರಯೋಗಾವಶ್ಯಕ ಪ್ರಾಣಿಗೃಹಗಳು, ವಸ್ತು ಸಂಗ್ರಹಾಲಯ ಮುಂತಾದವು ಸೇರಿವೆ.

ಇದರ ಮುಖ್ಯ ಕಟ್ಟಡದ ಪ್ರತಿ ಮಹಡಿಯಲ್ಲಿಯೂ ನಿರ್ಮಾತ ದಾರಿ, ವೈಯಕ್ತಿಕ ಪ್ರಯೋಗಾಲಯಗಳು, 12 ಶೀತಕೋಣೆಗಳು ಸುಮಾರು 2000 ಕಿಲೋವ್ಯಾಟ್‌ಗಳ ತಡೆರಹಿತ ವಿದ್ಯುತ್ ಪೂರೈಕೆ, ಅತ್ಯಾಧುನಿಕ ಅಗ್ನಿ ಸೂಚಕ ಗಂಟೆಗಳು, ಕೇಂದ್ರೀಕೃತ ಕಂಪ್ಯೂಟರ್ ವ್ಯವಸ್ಥೆ ಆಧುನಿಕ ಸಂಪರ್ಕ ವ್ಯವಸ್ಥೆ, ಯಾಂತ್ರಿಕ ದೋಷಗಳನ್ನು ತಕ್ಷಣ ಸರಿಪಡಿಸುವ ವ್ಯವಸ್ಥೆ, ಅವಶ್ಯಕ ಬಿಡಿಭಾಗ ತಯಾರಿಕಾ ಘಟಕದ ಸುಸಜ್ಜಿತ ಕಾರ್ಯಾಗಾರ, ದ್ರವ ಸಾರಜನಕ ಸ್ಥಾವರ (Liquid Nitrogen Plant), ಗಾಳಿಯು ಪರದೆಯಿರುವ ಪ್ರಾಣಿಗಳ ಅತ್ಯಾಧುನಿಕ ಕೊಟ್ಟಿಗೆ, ಸ್ವಯಂಚಾಲಿತ ಅಗ್ನಿಶಾಮಕ ಕಾರ್ಯವಿಧಾನ, ಒಂದೇ ಎರಡೇ ? ಎಲ್ಲವೂ ಅತ್ಯಾಧುನಿಕ, ಸುಸಜ್ಜಿತ, ಸುವ್ಯವಸ್ಥಿತ. ಅಲ್ಲದೇ 30 ಕೊಠಡಿಗಳಿರುವ ಸುವ್ಯವಸ್ಥಿತ ಅತಿಥಿಗೃಹ ಪ್ರಖ್ಯಾತ ಸಂಶೋಧಕರನ್ನು ಆಹ್ವಾನಿಸುತ್ತಿದೆ.

ಸ್ಕ್ಯಾನಿಂಗ್ ವ್ಯವಸ್ಥೆಗಾಗಿ ಎಂಟು ತರಹದ ಸೌಲಭ್ಯವುಳ್ಳ ಎಲೆಕ್ಟ್ರಾನಿಕ್ ಸೂಕ್ಷ್ಮದರ್ಶಕ, ಲೇಸರ್, ಸಾಂದ್ರಮಾಪಕಗಳನ್ನು ಹೊಂದಿದ ಪ್ರಯೋಗಾಲಯ ಅದ್ಭುತ.

ಕೆಲವು ಅದ್ಭುತ ಸಾಧನೆಗಳು

ಲಿಂಗ ನಿರ್ಧಾರ: ಸಂತತಿಯಲ್ಲಿ ಲಿಂಗ ನಿರ್ಧಾರಕ ಸಂಗತಿ ಯಾವುದೆಂಬುದು ಒಂದು ಪ್ರಶ್ನೆ ರಹಸ್ಯ. ಅರಿಸ್ಟಾಟಲನ ಕಾಲದಿಂದಲೂ ಇದು

ಒಳಚಿತ್ರ: ನಿರ್ದೇಶಕ ಎಚ್.ಜಿ. ಶರತ್ ಚಂದ್ರ

ಅನಿಶ್ಚಿತವಾಗೇ ಇತ್ತು. ಮಾನವ ಹಾಗೂ ಇಲಿಗಳಲ್ಲಿ Y ವರ್ಣತಂತು ಹಾಗೂ ಲಿಂಗನಿರ್ಧಾರಕ ಕ್ಷೇತ್ರವ ಅನೇಕ DNA ಚೂರುಗಳನ್ನು ಪ್ರಥಮ ಬಾರಿಗೆ ಬೇರ್ಪಡಿಸುವುದರಲ್ಲಿ ಸಿಸಿಎಂಬಿ ಯಶಸ್ವಿಯಾಗಿದೆ. ವರ್ಣತಂತುಗಳೇ ಲಿಂಗನಿರ್ಧಾರಕಗಳೆಂಬುದು ಈಗ ಸ್ಪಷ್ಟ.

ಈ ಸಂಶೋಧನೆಗೆ ಅವಶ್ಯಕವಾದ ಭಾರತೀಯ ಪಟ್ಟೆ ಹಾವು, ಕೊಳಕ ಮಂಡಲ ಹಾವುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಮೀನುಗಳಲ್ಲಿ ಕೂಡ ಲಿಂಗ ಬದಲಾವಣೆಗೆ DNAಗಳೇ ಕಾರಣವೆಂಬ ಬಗ್ಗೆಯೂ ಪ್ರಯೋಗ ನಡೆಸುತ್ತಿದ್ದಾರೆ. ಇವುಗಳ ಫಲ ಸಂತತಿಹೀನ ದಂಪತಿಗಳಿಗೆ ವರದಾನವಾಗಲಿದೆ.

ಬೆರಳು ಮುದ್ರೆ: DNAಗಳು ಬೆರಳ ಮುದ್ರೆ(Finger Print)ಯಲ್ಲಿ ಕ್ಷಾರ ಸರಣಿಗಳನ್ನು ಗುರುತಿಸಲು ಉಪಯುಕ್ತ ತಂತ್ರ. RNA Pohgmerase DNA ಗಳೊಡನೆ ಸಂಯೋಜನೆ ಹೊಂದುವ ಭಾಗ ಗುರುತಿಸಲು ಬಳಸಲಾಗುತ್ತದೆ. ಎಂಡೋನ್ಯೂಕ್ಲಿಯಸ್ ಕಿಣ್ವದಿಂದ DNA ಭಾಗ ಕತ್ತರಿಸಿ ಎಲೆಕ್ಟ್ರೋಫ್ಲೋರೆನ್ಸ್ ಕಾರ್ಯದಿಂದ ಅಭ್ಯಸಿಸಲಾಗುತ್ತಿದೆ. ಇದು ಪಿತೃತ್ವ ಸ್ಥಾಪನೆ, ಕೊಲೆ, ಅತ್ಯಾಚಾರ ಅಪರಾಧಿಗಳ ಸುಳಿವಿಗೆ ಸಹಾಯಕವಾಗಿದೆ. ಡಾ. ಅಲೆಕ್ ಜಾಫ್ರೇ (ಯು.ಕೆ.) ಯವರು ಕಂಡು ಹಿಡಿದ ಈ ತಂತ್ರ 1988 ರಿಂದ ಬಳಕೆಗೆ ಬಂದಿದೆ. ಸಿಸಿಎಂಬಿ ವಿಜ್ಞಾನಿಗಳು ಇದನ್ನು ಊರ್ಜಿತಗೊಳಿಸಿ ವೈಯಕ್ತಿಕತೆಯನ್ನು ಗುರುತಿಸಲು, ಏಕಕೋಶ ಲಿಂಗ ಹಂಚಿಕೆಗೆ ಮಾನವ ಹಾಗೂ ಪ್ರಾಣಿಗಳ ಜೈವಿಕ ಪೀಳಿಗೆಯ ಅಧ್ಯಯನಕ್ಕಾಗಿ ಬಳಸುತ್ತಿದ್ದಾರೆ.

ಕಣ್ಣಿನ ಮಸೂರವು ತನ್ನ ಪಾರದರ್ಶಕತೆಯನ್ನು ಕಳೆದುಕೊಂಡಾಗ ದೃಷ್ಟಿ ಮಂದವಾಗುವುದೇ ಪೊರೆಗಟ್ಟುವಿಕೆ. ಇದನ್ನು ಅಲಕ್ಷಿಸಿದರೆ ಕುರುಡುತನ ಖಂಡಿತ. ಈ ಪೊರೆಗಟ್ಟುವಿಕೆಯ ಕಾರಣವನ್ನು ಸಿಸಿಎಂಬಿ ವಿಜ್ಞಾನಿಗಳು, ಪೊರೆ ರಚಿಸುವ ಪ್ರೋಟೀನುಗಳ ಫ್ಲೂರಿಸೆನ್ಸ್ ವಸ್ತುಗಳನ್ನು ನೇರವಾಗಿ ಬಳಸಿ ಪೊರೆಯವಧಿಯ ಬದಲಾವಣೆಯನ್ನು ಅಭ್ಯಸಿಸುವ ಪದ್ಧತಿಯನ್ನು ಹುಡುಕುತ್ತಿದ್ದಾರೆ. ಅತಿನೇರಳೆ ಹಾಗೂ ಇತರ ರಾಸಾಯನಿಕ ಪದ್ಧತಿಗೊಳಪಡಿಸು[illegible] ಸಂಶೋಧನೆಯೂ ನಡೆದಿದೆ.

ವೀರ್ಯ ರಸದಿಂದ ಸಸಾರಜನಕವನ್ನು ಬೇರ್ಪಡಿಸುವಿಕೆ: ವೀರ್ಯಾಣು ಹಾಗೂ ವೀರ್ಯರಸಗಳು ಸೇರಿ ವೀರ್ಯವಾಗುತ್ತದೆ. ವೀರ್ಯಾಣುವಿನ ಫಲವತ್ತತಾ ಸಾಮರ್ಥ್ಯ ಕುರಿತು ಈ ವರೆಗೆ ನಡೆದ ಶೋಧ ಅತ್ಯಲ್ಪ. ಸಸ್ತನಿಗಳಲ್ಲಿ ಫಲಸಾಮರ್ಥ್ಯ ನಿಯಂತ್ರಣ ಅಂಶವನ್ನು ದೃಷ್ಟಿಯಲ್ಲಿರಿಸಿಕೊಂಡು ವೀರ್ಯ ರಸದಲ್ಲಿಯ ಸಾರಜನಕವು ಹೊಸ ಸಸಾರಜನಕವನ್ನು ಬೇರ್ಪಡಿಸಲು ಕಾರಣವಾಗಿದೆ. ಇಲ್ಲಿ ನಡೆದ ಈ ಕಾರ್ಯ ಇಂದು ಪಶ್ಚಿಮ ಜರ್ಮನಿ, ಅಮೆರಿಕ, ಯು.ಕೆ.ಗಳಲ್ಲಿಯ ವಿಜ್ಞಾನಿಗಳ ಗಮನ ಸೆಳೆದಿದೆ. ಅವರೂ ಈ ದಿಶೆಯಲ್ಲೀಗ ಕಾರ್ಯಪ್ರವೃತ್ತರಾಗಿದ್ದಾರೆ.

ಧ್ರುವ ಪ್ರದೇಶದ ಸೂಕ್ಷ್ಮ ಜೀವಿಗಳು: ಇಲ್ಲಿಯ ಅತಿಶೀತ ವಾತಾವರಣದಲ್ಲಿಯೂ ಕೆಲ ಯೀಸ್ಟ್‌ಗಳು ಹಾಗೂ ಬ್ಯಾಕ್ಟೀರಿಯಾಗಳು ಕಂಡು ಬಂದಿವೆ. ಇಂಥ ಒಣವಾತಾವರಣಕ್ಕೆ ಹಾಗೂ ಕಡಿಮೆ ಪೋಷಕಾಂಶಗಳಿಗೆ ಈ ಜೀವಿಗಳು ಹೊಂದಿಕೊಂಡಿದ್ದರ ರಹಸ್ಯ ಹುಡುಕುವುದು ಇಲ್ಲಿಯ ಸಂಶೋಧಕರ ಗುರಿಯಾಗಿದೆ.

1984-85 ರಲ್ಲಿ ಹೊರಟ ನಾಲ್ಕನೇ ಧ್ರುವ ಪ್ರದೇಶ ಸಂಶೋಧನಾ ತಂಡದವರು ತಮ್ಮೊಂದಿಗೆ ತಂದ ಮಣ್ಣು ಹಾಗೂ ನೀರಿನ ಮಾದರಿಗಳನ್ನು ಮೇಲಿನ ಸಂಶೋಧನೆಗಾಗಿ ಸಿಸಿಎಂಬಿ ಸಂಗ್ರಹಿಸಿದೆ. ಬ್ಯಾಕ್ಟೀರಿಯಗಳ 45 ಮಾದರಿಗಳ, ಯೀಸ್ಟಗಳ 8 ಮಾದರಿಗಳ ಕಲ್ಚರ್‌ಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 25% ಭಾಗ ಮಾತ್ರ ಅತಿಒಣಶೀತ ಪರಿಸರಕ್ಕೆ ಹೊಂದುವವಾಗಿವೆ. 10 ಡಿ. ಸೆಂ. ತಾಪಮಾನದಲ್ಲಿ ಇವು ಜೀವಿಸಿದ್ದರೂ 20 ಡಿ. ಸೆಂ. ತಾಪಮಾನದಲ್ಲಿ ಸಾಯುತ್ತವೆ. ಧ್ರುವ ಪ್ರದೇಶದ ಹತ್ತು ಮಾದರಿಗಳು ಬೇರೆಲ್ಲಿಯೂ ಕಂಡುಬರುವುದಿಲ್ಲ.

ಸೂಕ್ಷ್ಮಾಭಿಸರಣ ನಿಯಂತ್ರಣ: ಸಜೀವ ವಸ್ತುಗಳು ಅಡ್ಡಾದಿಡ್ಡಿ ಪರಿಸರಗಳಿಗೆ ಹೊಂದಿಕೊಳ್ಳುವದು ಹೇಗೆ ? ಎಂಬ ಪ್ರಶ್ನೆ ಇಲ್ಲಿಯ ವಿಜ್ಞಾನಿಗಳ ಮುಂದಿದೆ. ಭಾರೀ ಸಾಂದ್ರೀಕೃತ ಲವಣ ದ್ರಾವಣ ಇಂಥ ಒಂದು ಪರಿಸರ. ಸಾಧಾರಣ ಲವಣ ದ್ರಾವಣದಲ್ಲಿ (ಶೇ. 0.9)ಕ್ಕಿಂತ ಹೆಚ್ಚು ಸಾಂದ್ರತೆಯಲ್ಲಿ ಕೆಂಪು ರಕ್ತ ಕಣಗಳು ಇರುವದಿಲ್ಲ. ಆದರೆ E ಕೊಲಿಯಂಥ ಬ್ಯಾಕ್ಟೀರಿಯಗಳು ಜೀವಿಸಲು

ಹೇಗೆ ಸಾಧ್ಯ? ಇದಕ್ಕೆ ಬ್ಯಾಕ್ಟೀರಿಯಾ ಹಾಗೂ ವರ್ಣತಂತುಗಳು ಕಾರಣ ಎಂಬುದನ್ನು ಇಲ್ಲಿಯ ಸಂಶೋಧಕರು ಕಂಡು ಹಿಡಿದಿದ್ದಾರೆ.

ಹೊಸಕೋಶ ವಿಭಜನೆಯ ಆದಿ-ಅಂತ್ಯ: ಕ್ಯಾನ್ಸರ್ ಆದಾಗ, ಪಿತ್ತಕೋಶದಿಂದ ಹೊಸ ಪ್ರೋಟೀನ್ ಬಿಡುಗಡೆಯಾಗುತ್ತಿರುತ್ತದೆ. ಇದು ಪಿತ್ತಕೋಶದ ಕೋಶ ವಿಭಜನಾ ನಿಯಂತ್ರಣ ಕಾರ್ಯದಲ್ಲಿಯ ಪ್ರಮುಖ ಅಂಶ (ವಯಸ್ಕರಲ್ಲಿ 1000 ದಲ್ಲಿಯ ಒಂದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬಿಡುಗಡೆಯಾಗುತ್ತವೆ). ಹೆಚ್ಚಿನ ಕೋಶಗಳು ಹಲವು ತಿಂಗಳು ಬದುಕಿರಬಲ್ಲವು. ನಿರ್ಜೀವ ಕೋಶದ ಬದಲು ಹುಟ್ಟಿದ ಹೊಸ ಕೋಶಗಳು ಈ ಕೊರತೆಯನ್ನು ತುಂಬಿದರೂ ಅವುಗಳ ಪ್ರಮಾಣ ತೀರ ಕಡಿಮೆ. ಪಿತ್ತಕೋಶದ ಚಿಕ್ಕ ಚೂರಿನ 3ನೇ 2 ಭಾಗ ಕತ್ತರಿಸೋಣ. ಅದರ ಹೊಸಕೋಶಗಳು ವಿಭಜನೆಯಾಗುತ್ತ ಮೂಲಭಾಗವನ್ನು ತುಂಬಿದರೂ ನಂತರ ಕಾರ್ಯಸ್ಥಗಿತವಾಗುತ್ತದೆ. ಇದಕ್ಕೇನು ಕಾರಣ? ಈ ಕಾರ್ಯ ಹಾಗೇ ನಿಯಂತ್ರಿತವಾಗದಿದ್ದರೆ ಕ್ಯಾನ್ಸರ್ ರೋಗಕ್ಕೆಳೆಯುತ್ತವೆ. ಈ ಪ್ರೋಟೀನು ಹೊಸಕೋಶ ವಿಭಜನೆಯ ಆರಂಭ ಹಾಗೂ ಸ್ಥಗಿತತೆಗೆ ಕಾರಣವೆಂದು ಕಂಡು ಹಿಡಿಯಲಾಗಿದೆ.

ಜೀವಕೋಶ ವಿಭಜನೆಗೆ ಅವಶ್ಯಕ ಕಾಲ ನಿರ್ಧಾರ: ಬ್ಯಾಕ್ಟೀರಿಯಾ ಕೋಶ ವಿಭಜನೆಯಾಗಲು 20 ನಿಮಿಷ ಅಗತ್ಯ. ಜೀವಕೋಶಕ್ಕೆ ಈ ಕಾರ್ಯಕ್ಕಾಗಿ ಕೆಲವು ಗಂಟೆಗಳಿಂದ ಒಂದು ದಿನದ ವರೆಗಿನ ಕಾಲಾವಕಾಶ ಬೇಕು.

ಪಿತ್ತಕೋಶದ ಕ್ಯಾನ್ಸರ್ ಗಡ್ಡೆಯ ಅಧ್ಯಯನದಲ್ಲಿ ಎರಡು ವಿಧದ ಕೋಶಗಳನ್ನು ಶೋಧಿಸಲಾಗಿದೆ. ಮೊದಲನೆಯದು ವೇಗವಾಗಿ ವಿಭಜನೆಗೊಂಡರೆ ಎರಡನೆಯದರ ಕಾರ್ಯ ನಿಧಾನ. ಈ ಪ್ರತಿಯೊಂದು ರೂಪವೂ ಜೈವಿಕವಾಗಿ ಒಂದು ಇನ್ನೊಂದಾಗಿ ಬದಲಾಗಬಹುದು. ಅತಿ ಕಡಿಮೆ ಸಂಖ್ಯೆಯ ವರ್ಣತಂತು ಒಂದೇ ಆಗಬಹುದು. ಇದು ಕೋಶ ವಿಭಜನಾಕಾಲದ ನಿರ್ಧರಿಸುವಿಕೆಯನ್ನು ಒಳಗೊಂಡಿದೆ. ಗುಣಾಣು ಅನುವಂಶೀಯತೆಯನ್ನು ನಿಯಂತ್ರಿಸುತ್ತದೆ. ಈ ಕ್ರಿಯೆಯ ಕುರಿತಾಗಿ ನಡೆದ ಪ್ರಯೋಗಗಳು ವಾಣಿಜ್ಯ ಉದ್ದೇಶಕ್ಕಾಗಿ ಗುಣಾಣುಗಳ ಶೀಘ್ರ ಬೆಳವಣಿಗೆಗೆ ಸಹಾಯವಾಗಬಹುದು.

ಹಾವಿನ ವಿಷದಿಂದ ಹೊಸ ಕಿಣ್ವಗಳು: ನಮ್ಮಲ್ಲಿ ಹಾವುಗಳ ಸಂಖ್ಯೆ ಹೆಚ್ಚಿದ್ದರೂ ಅವುಗಳಲ್ಲಿ ವಿಷಕಾರಿ ಹಾವುಗಳು ತೀರ ಕಡಿಮೆ ಎಂಬುದು ಅಚ್ಚರಿಗೊಳಿಸುವ ಸತ್ಯ ಸಂಗತಿ. ಈ ವಿಷ ಹಾಗೂ ಅದರಲ್ಲಿಯ ರಾಸಾಯನಿಕ ಅಂಶಗಳು ವಿಜ್ಞಾನಿಗಳ ಗಮನ ಸೆಳೆದಿವೆ. ವಿಷದ ಜೀವವೈಜ್ಞಾನಿಕ ಪ್ರಭಾವ, ಹಾಗೂ ಹಾವು ಕಡಿದಾಗ ನಡೆಯುವ ಕಾರ್ಯಗಳ ಕುರಿತು ಸಂಶೋಧನೆಯನ್ನು ಈ ವಿಜ್ಞಾನಿಗಳು ನಡೆಸಿದ್ದಾರೆ.

ನಾಗರಹಾವಿನ ವಿಷದಲ್ಲಿ ನರತಂತು ಹಾಗೂ ರಕ್ತಕೋಶದ ಮೇಲೆ ಪ್ರಭಾವ ಬೀರುವ ನಂಜಿನ ಅಂಶವಿದೆ. ಅದು ಹಾವಿಗೆ ತನ್ನ ಬೇಟೆಯನ್ನು ವಶಪಡಿಸಿಕೊಳ್ಳಲು ಸಹಾಯಕವಾಗಿದೆ.

ಅನೇಕ ಕಿಣ್ವಗಳಿಗೆ ಈ ವಿಷ ಮೂಲಸ್ರೋತವಾಗಿ ಕೆಲಸ ಮಾಡಬಹುದೆಂದು ವಿಜ್ಞಾನಿಗಳು ಯೋಚಿಸಿದ್ದಾರೆ. ಸಜೀವಿಗಳಲ್ಲಿರುವ ಪ್ರೋಟೀನುಗಳೇ ಜೀವಿಸುವ ರೀತಿಯಲ್ಲಿ ಒಂದು ವಸ್ತುವನ್ನು ಇನ್ನೊಂದನ್ನಾಗಿ ಪರಿವರ್ತಿಸುವ ಶಕ್ತಿಯು, ಜೀವವೈಜ್ಞಾನಿಕ ಪರಿವರ್ತಕಗಳಾಗಿಯೂ ಕೆಲಸ ಮಾಡುತ್ತವೆ.

ಸಿಸಿಎಂಬಿಯ ವಿಜ್ಞಾನಿಗಳು ನಾಗರ ವಿಷದಿಂದ ಎರಡು ಕಿಣ್ವಗಳನ್ನು ಬೇರ್ಪಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಇವು ಅನುವಂಶಿಕತೆಯನ್ನು ಒಳಗೊಂಡ ಮಹತ್ವದ ರಾಸಾಯನಿಕ ಗುಂಪಿನ ನ್ಯೂಕ್ಲಿಕ್ ಆಮ್ಲಗಳ ಸ್ಥಾನವನ್ನು ಒಂದೆ ಸರಿಸಿವೆ. ನ್ಯೂಕ್ಲಿಕ್ ಆಮ್ಲೀಯ ಅಣುವಿನಲ್ಲಿಯ ನಿರ್ಬಂಧತೆಯನ್ನು ನಿಶ್ಚಯಿಸಲು ಇವುಗಳನ್ನು ಬಳಸಲಾಗುತ್ತದೆ. ಅಣು ಜೀವ ವಿಜ್ಞಾನದಲ್ಲಿ ಹಾಗೂ ಜೈವಿಕ ವಿಜ್ಞಾನದ ಸಂಶೋಧನೆಯಲ್ಲಿ ಸಹಾಯಕ ಮಧ್ಯವರ್ತಿಯಾಗಿ ಈ ಕಿಣ್ವಗಳನ್ನು ಬಳಸಬಹುದಾಗಿದೆ. ಎಲ್ಲ ಸಜೀವ ವಸ್ತುಗಳಲ್ಲಿಯ RNA ರಚನೆಯನ್ನು ನಿಶ್ಚಯಿಸುವ ಹೊಸ ವಿಕಾಸದಲ್ಲಿಯೂ ಇದು ಸಹಾಯಕಾರಿಯಾಗಬಹುದು.

ಇಂಥ ಅನೇಕ ಅಪೂರ್ವ ಸಂಶೋಧನೆಗಳ ತವರು ಈ ಸಿಸಿಎಂಬಿ.

ಒಂದು ಐತಿಹಾಸಿಕ ವಿಶ್ಲೇಷಣೆ

ಜಾತಿ ಪದ್ಧತಿ:

ಕೆಲ ವಿಚಾರಗಳು

● ಪಾವೆಂ.

ಇದು 'ಕಸ್ತೂರಿ'ಯ 1978 ಜನವರಿ ಸಂಚಿಕೆಯಲ್ಲಿ ಪ್ರಕಟವಾದ ವಿಚಾರ ಪ್ರಚೋದಕ ಲೇಖನ. ಆಗ 'ಜಾತಿಪದ್ಧತಿ' ಕುರಿತ ಮೌಲಿಕ ಚರ್ಚೆಗೆ ಕಸ್ತೂರಿ ವೇದಿಕೆ ಒದಗಿಸಿತ್ತು. ಅದಾಗಿ ವರ್ಷಗಳೇ ಉರುಳಿವೆ. ಬದುಕಿನಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆ ಇಣುಕಿರುವುದು ಸಹಜವೇ. ಚರ್ಚೆಯ ಚಕಮಕಿಯಿಂದಲೇ ಸತ್ಯದ ಕಿಡಿಗಳು ಹೊರಡಲು ಸಾಧ್ಯ. ಆ ದಿಕ್ಕಿನ ಗಂಭೀರ ಚಿಂತನೆಗಳನ್ನು ಚಿಕ್ಕ ಚೊಕ್ಕ ಬರಹಗಳ ಮೂಲಕ ನೀವೂ ಏಕೆ ಓದುಗರೊಂದಿಗೆ ಹಂಚಿಕೊಳ್ಳಬಾರದು?

ಕಸ್ತೂರಿ ನಡೆದು ಬಂದ ದಾರಿ

ಭಾರತದ ಜಾತಿಪದ್ಧತಿ ಮಾನವ ಸಮಾಜ ರಚನೆಯ ಇತಿಹಾಸದಲ್ಲಿ ಒಂದು ಅದ್ಭುತವೂ ಹೌದು; ಈಗ ನೋಡುವಾಗ ಒಂದು ಅವಘಡವೂ ಹೌದು. ಅದು ಹೇಗೆ ಹುಟ್ಟಿ ಹೇಗೆ ಬೆಳೆದು ಗಟ್ಟಿಗೊಂಡಿತು ಎಂಬುದು ಸುಲಭವಾಗಿ ಅರ್ಥವಾಗುವುದಿಲ್ಲವಾದರೂ ಅದು ಏಕೆ ತಾಳಿ ಬಾಳಿತು ಎಂಬುದು ನನಗೆ ಅಷ್ಟು ದೊಡ್ಡ ಸಮಸ್ಯೆಯಾಗಿ ಕಾಣುವುದಿಲ್ಲ.

ಇಡೀ ಪದ್ಧತಿಯೇ ಒಂದು ಸಂಶಯಕಲ್ಲೋಲವಾಗಿದೆ. ''ಜಾತಿ'' ಮತ್ತು ''ವರ್ಣ'' ಇವು ಒಂದೇ ಹೌದೋ ಅಲ್ಲವೋ ಎಂಬುದು ಕೂಡ ಸಂಶಯಾಸ್ಪದ; ವರ್ಣ ಎಂದರೆ ಮೈ ಬಣ್ಣವೇ ಎಂಬುದೂ ಸಂಶಯಾಸ್ಪದ. ವೇದಗಳ ಸಂಪಾದನೆ ಮಾಡಿದ ವೇದವ್ಯಾಸನೂ ಅವನ ತಂದೆ ಪರಾಶರನೂ ಕಪ್ಪಾಗಿದ್ದರು; ಕೃಷ್ಣ-ರಾಮರೂ ಕಪ್ಪು ಬಣ್ಣದವರೇ. ಈ ಎರಡು ವರ್ಣಗಳು ಭಾರತದ ಜಾತಿಪದ್ಧತಿಯ ಬೆನ್ನೆಲುಬಾಗಿರುವಾಗ ವರ್ಣವನ್ನು ಮೈ ಬಣ್ಣಕ್ಕೆ ತಳಕು ಹಾಕುವುದು ವಸ್ತುಸ್ಥಿತಿಗೆ ವಿರುದ್ಧವಾಗಿ ಕಾಣಿಸುತ್ತದೆ. ಆದ್ದರಿಂದ ''ವರ್ಣ'' ಎಂಬುದು ''ವರಣ'' ಅಂದರೆ ಆರಿಸಿಕೊಂಡದ್ದು - ಆರಿಸಿಕೊಂಡ ಜೀವನೋಪಾಯ ಎಂಬ ಅರ್ಥ ಸೂಚಿಸುತ್ತಿರಬಹುದು. ಜಾತಿಯೆಂಬುದು ಜನ್ಮ ಸೂಚಕವಾದ್ದರಿಂದ ಅದರ ಅರ್ಥ ಸ್ಪಷ್ಟವೇ ಆಗಿದೆ.

ನಾಲ್ಕು ವರ್ಣಗಳ ಸುದ್ದಿ ಮೊದಲು ನಮಗೆ ಕೇಳಿಬರುವುದು ಋಗ್ವೇದದಲ್ಲಿ; ಅತ್ಯಂತ ಈಚೆಗಿನವೆಂದು ಭಾಷಾ ಮತ್ತು ವಿಚಾರಗಳ ಆಧಾರದಿಂದ ಭಾವಿಸಲ್ಪಟ್ಟ 10 ನೇ ಮಂಡಲದ ಪುರುಷ

ಸೂಕ್ತದಲ್ಲಿ. ಈ ಸೂಕ್ತ ವರ್ಣ ವಿಭಜನೆಗೆ ಧಾರ್ಮಿಕ ಮುದ್ರೆಯೊತ್ತಿದ ಪ್ರಥಮ ಭಾರತೀಯ ವಾಕ್ಯಪ್ರಮಾಣ. ಆದರೆ ವರ್ಣಗಳು ಆಗ ಈಗಿನ ಹಾಗೆ ಪರಸ್ಪರ ಹೊಕ್ಕು ಬಳಕೆಗೆ ನಿಷೇಧವುಳ್ಳ ಪ್ರತ್ಯೇಕ ''ಜಾತಿ''ಗಳಾಗಿರಲಿಲ್ಲ. ಪುರಾಣಗಳಲ್ಲಿ ಹೇಳುವ ಹಾಗೆ, ಒಂದು ವರ್ಣದಿಂದ ಇನ್ನೊಂದಕ್ಕೆ ಚಲನೆ ಸಾಕಷ್ಟಿತ್ತು. ತೀರ ಈಚೆಗೆ ರಚಿತವಾದ ಭಾಗವತ ಪುರಾಣದಲ್ಲಿ ಕೂಡ ''ನೀಚ'' ವರ್ಣದವರು ''ಉಚ್ಚ'' ವರ್ಣಕ್ಕೇರುವ ಸಾಧ್ಯತೆಯನ್ನು ಸೂಚಿಸಿದೆ. ಅದು ಹಾಕುವ ಕರಾರುಗಳು ದುಸ್ಸಾಧ್ಯವಾಗಿದ್ದವೆಂಬುದು ಬೇರೆ ಮಾತು. ಅನ್ನ ನೀರಂತೂ ಖಂಡಿತ ವರ್ಜ್ಯವಾಗಿರಲಿಲ್ಲ. ದ್ರೌಪದಿಯ ಅಡಿಗೆಯನ್ನು ದೂರ್ವಾಸನಿಂದಾರಂಭಿಸಿ ಅನೇಕ ಬ್ರಾಹ್ಮಣರು ಉಂಡ ಪ್ರಮಾಣಗಳಿವೆ.

ಹಾಗೆ ನೋಡಿದರೆ ಜನ್ಮಸಿದ್ಧ ವರ್ಣಪದ್ಧತಿ ಭಾರತದ ಹೊರಗೆ ಇತರ ಸಮಾಜಗಳಲ್ಲಿ ನಾವೆಣಿಸುವಷ್ಟು ಅಪರೂಪವಲ್ಲ. ಅವಿಭಕ್ತ ಸಮಾಜವನ್ನು ಸ್ಥಾಪಿಸಿದ ಜಗತ್ತಿನ ಎರಡು ಮಹಾ ಧರ್ಮಗಳಾದ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಮೂಲವಾದ ಯಹೂದ್ಯ ಧರ್ಮದಲ್ಲಿ ನಾಲ್ಕು ''ಜಾತಿ''ಗಳಿವೆಯೆಂದು ಓದಿ ನನಗೆ ಸೋಜಿಗವಾಯಿತು. ಇರಾಣದ ಅಗ್ನಿ ಪೂಜಕರಲ್ಲಿ ಕೂಡ ಜನ್ಮಸಿದ್ಧ ವರ್ಣಪದ್ಧತಿ ಪ್ರಾಕೃತ ರೂಪದಲ್ಲಿ ಇದ್ದ ಹಾಗೆ ಕಾಣುತ್ತದೆ. ಆದರೆ ಐತಿಹಾಸಿಕ ಪ್ರಕ್ರಿಯೆಯಲ್ಲಿ ಬೇರೆ ದೇಶಗಳಲ್ಲಿ ಅವು ತೊಳೆದುಕೊಂಡು ಹೋದವು. ಭಾರತದಲ್ಲಿ ಹಾಗಾಗದೆ ಈ ಪದ್ಧತಿ ಗಟ್ಟಿಗೊಂಡಿತು; ಮತ್ತು ನಾಲ್ಕು ವರ್ಣಗಳ ಬದಲು ಅಸಂಖ್ಯ ಪರಸ್ಪರ ವಿಭಕ್ತವಾದ ''ಜಾತಿ''ಗಳಾದವು.

ಕೆಲವೊಂದು ವಿಶಿಷ್ಟಾನುಭವಗಳೂ ಮನೋಭಾವಗಳೂ ಭಾರತದಲ್ಲಿ ಜಾತಿಯ ಬೇರೆ ಬೇರೆ ಅಚ್ಚುಗಳಾಗುವುದಕ್ಕೆ ಕಾರಣವಾದವೆಂದು ತೋರುತ್ತದೆ. ಇತಿಹಾಸದ ಇತರ ಪ್ರಧಾನ ಜನಕೂಟಗಳಾದ ಸಿಮೆಟಿಕ್, ಪರ್ಶಿಯನ್, ಗ್ರೀಕ್, ರೋಮನ್, ಇಜಿಪ್ಶಿಯನ್ ಮೊದಲಾದವುಗಳಲ್ಲಿ ಆಕ್ರಮಣ, ದಂಡಯಾತ್ರೆ, ಕಲಹ ಮೊದಲಾದವುಗಳು ಭಾರತದಲ್ಲಿಗಿಂತ ಹೆಚ್ಚು ಪ್ರಖರವೂ ನಾಶಕರವೂ ಆಗಿದ್ದರೂ ಪರಸ್ಪರ ಘರ್ಷಣೆಯಲ್ಲಿ ತೊಡಕಿಕೊಂಡ ಜನಾಂಗಗಳ ಸಂಸ್ಕೃತಿ, ರೂಪ ಮೊದಲಾದವುಗಳಲ್ಲಿ ಅಂಥಾ ಎದ್ದು ಕಾಣಿಸುವ ಭೇದ ಇದ್ದ ಹಾಗೆ ಕಾಣಲಿಲ್ಲ. ಭಾರತದ ಅನುಭವ ಬೇರೆಯೇ ಆಯಿತು. ಇಲ್ಲಿ ಉತ್ತರದಿಂದ ಬಂದು ವಿಸ್ತಾರ ಹೊಂದಿದ ''ಆರ್ಯ''ರಿಗೆ ಪ್ರಥಮತಃ ತಾಕಲಾಟ ಬಿದ್ದ ಸಿಂಧೂ ಸಂಸ್ಕೃತಿಯ ಜನರು ಮೇಲ್ಮಟ್ಟದ ನಾಗರಿಕರಾಗಿದ್ದರು. ಅವರೊಡನೆ ವಿಜೇತರು ಬೆರೆತುಹೋದಂತೆಯೂ ಕಾಣುತ್ತದೆ. ಅವರು ಮುಂದೆ ಪೂರ್ವಕ್ಕೂ ದಕ್ಷಿಣಕ್ಕೂ ಹಬ್ಬಿದಂತೆ ಮಾತ್ರ ಇನ್ನೂ ಅನಾಗರಿಕಾವಸ್ಥೆಯಲ್ಲಿದ್ದ, ರೂಪ, ಲಕ್ಷಣಗಳಲ್ಲಿಯೂ ತುಂಬಾ ಭಿನ್ನರಾದ ಜನರ ಸಂಪರ್ಕ ಅವರಿಗೆ ಬಂತು. ಅವರೊಡನೆ ಬೆರೆತು ಹೋಗುವುದು ಸಲಭವಾಗಲಿಲ್ಲ. ಅವರನ್ನು ಮೆಟ್ಟಿಹಾಕಿದ ನಂತರ, ಸಂಖ್ಯೆಯಲ್ಲಿ ಎಷ್ಟೋ ಪಾಲು ಹೆಚ್ಚಾಗಿದ್ದ ಅವರ ಬಗ್ಗೆ ಒಂದು ಭಯ ಉತ್ಪನ್ನವಾಗಿರಬೇಕು. ಆಗ ಈ ಆರ್ಯಸೈಂಧವ ಜನ ಆತ್ಮರಕ್ಷಣೆಗಾಗಿ ಸಾಮಾಜಿಕ ''ಕೋಟೆ''ಗಳನ್ನು ನಿರ್ಮಿಸಿಕೊಂಡಿರಬೇಕು.

ಇದು ಹೇಗಾಗುತ್ತವೆಂದು ಆಧುನಿಕ ಜಗತ್ತಿನಲ್ಲಿಯೇ ನಮಗೆ ಉದಾಹರಣೆಗಳು ಸಿಗುತ್ತವೆ. ದಕ್ಷಿಣ ಆಫ್ರಿಕದಲ್ಲಿ ಬಂದು ಧ್ವಜವೂರಿದ ಡಚ್ ಮೂಲದ ಬಿಳಿಯ ವಲಸೆಗಾರರು ತಮಗಿಂತ ಎಷ್ಟೋ ಪಟ್ಟು ಅಧಿಕ ಸಂಖ್ಯೆಯಲ್ಲಿದ್ದ ನಿಗ್ರೋಗಳಿಂದ ತಮ್ಮನ್ನೂ ''ತಮ್ಮ ಜೀವನ ಪದ್ಧತಿ''ಯನ್ನೂ ಕಾಪಾಡಿಕೊಳ್ಳುವುದಕ್ಕೆ ಉಪಯೋಗಿಸಿದ ತಂತ್ರಗಳನ್ನು ನೋಡುವ. ವಲಸೆಗಾರರು ಬಂದ ಹೊಸತರಲ್ಲಿ ಸ್ಥಳೀಯ ಹೆಂಗಸರೊಡನೆ ಕೂಡಿದ್ದರಿಂದ ಒಂದು ಮಿಶ್ರವರ್ಣ (ಕೇಪ್ ಕಲರ್ಡ್) ಸಿದ್ಧವಾಯಿತು. ಈ ಮಿಶ್ರ ವರ್ಣೀಯರಿಗೆ ಈ ಶತಮಾನದ ಆದಿಯ ವರೆಗೂ ಮತದಾನ ಮೊದಲಾದ ಕೆಲ ಹಕ್ಕುಗಳಿದ್ದವು. ಆದರೆ ಭರದಿಂದ-ಸಂಖ್ಯಾವೃದ್ಧಿ ಮಾಡಿಕೊಳ್ಳುತ್ತಿದ್ದ

ನಿಗ್ರೋಗಳ ಭಯ ಹೆಚ್ಚಿದಂತೆ ಶುದ್ಧ ಬಿಳಿಯರ ಹೊರತು ಇತರರಿಗಿದ್ದ ಎಲ್ಲ ರಾಜಕೀಯ ಸ್ವಾತಂತ್ರ್ಯಗಳನ್ನು ಕಸಿದುಕೊಂಡರು. ಸ್ಥಾವರ ಆಸ್ತಿ ಮಾಡುವ ಹಕ್ಕುಗಳನ್ನು ಮಿತಗೊಳಿಸಿದರು. ಕರಿಯರನ್ನೂ ಮಿಶ್ರವರ್ಣದವರನ್ನೂ ಭಾರತೀಯರನ್ನೂ ಬೇರೆ ಬೇರೆ ವಸತಿ ಸ್ಥಾನಗಳಿಗೆ ಬದ್ಧಗೊಳಿಸಿ ''ಕೇರಿ''ಗಳನ್ನು ನಿರ್ಮಿಸಿದರು. ಎಲ್ಲಕ್ಕಿಂತಲೂ ''ವರ್ಣಸಂಕರ''ವನ್ನು ಕಾನೂನು ಮೂಲಕ ಪ್ರತಿಬಂಧಿಸಿ ಬಿಳಿಯರ ''ವರ್ಣಪಾವಿತ್ರ್ಯ''ವನ್ನು ಕಾಪಾಡಿದರು. ಈ ವರ್ಣಸಂಕರ ನಿಷೇಧ ಕಾನೂನು ಬರೇ ಬಿಳಿಯರಿಗೆ ಅನ್ವಯಿಸದೆ ದೇಶದ ನಾಲ್ಕು ಪ್ರಮುಖ ''ವರ್ಣ''ಗಳ ಪರಸ್ಪರ ಮಿಶ್ರಣವನ್ನೂ ಪ್ರತಿಬಂಧಿಸುತ್ತದೆ ಎಂಬುದು ಭಾರತದ ಪದ್ಧತಿಯ ಪ್ರತಿಬಿಂಬದಂತಿದೆ. ಕರಿಯರಿಗೆ ಕೆಲವೊಂದು ವಿದ್ಯೆಗಳನ್ನು ಕಾನೂನು ಮೂಲಕ ನಿರಾಕರಿಸಿದ್ದೂ ಅದರದೇ ಪ್ರತಿಕೃತಿ. ಕೊನೆಯದಾಗಿ ಬೈಬಲ್ಲಿನಲ್ಲಿ ಬಂದ "Some shall be drawers of water and hewers of wood" - ಕೆಲವರು ನೀರು ಸೇದುವುದಕ್ಕೂ ಕಟ್ಟಿಗೆ ಒಡೆಯುವುದಕ್ಕೂ ಇದ್ದಾರೆ ಎಂಬ ವಾಕ್ಯವನ್ನುದ್ಧರಿಸಿ ಕರಿಯರನ್ನು ಸೇವಾಧರ್ಮಕ್ಕೆ ಮಾತ್ರ ತರಬೇತು ಮಾಡುವ ನೀತಿಗೆ ''ಸತ್ಯವೇದ''ದ ಆಧಾರವನ್ನೂ ಪಾದ್ರಿಗಳು ಒದಗಿಸಿದರು. ಭಾರತದಲ್ಲಿ 3000 ವರ್ಷಗಳ ಹಿಂದೆ ಬಹುಶಃ ಹೀಗೆಯೇ ಆಗಿರಬೇಕು.

ಮೊದಲು ಸೋತವರ ಬಗ್ಗೆ ಗೆದ್ದವರಿಗಿರುವ ತಿರಸ್ಕಾರ, ಆ ಮೇಲೆ ಭಯ, ಆ ಭಯದಿಂದ ಕೋಟೆಗಳ ನಿರ್ಮಾಣ, ಈ ನೀತಿಗೆ ಶಾಸ್ತ್ರಾಧಾರ ಮತ್ತು ಕೊನೆಗೆ ಇದೆಲ್ಲ ಯಶಸ್ವಿಯಾದ ನಂತರ ಈ ಆತ್ಮರಕ್ಷಣೆಯ ನೀತಿಯನ್ನು ಶೋಷಣೆಗೆ ವಿನಿಯೋಗಿಸುವದು - ಇದು ಸಾರ್ವತ್ರಿಕವಾದ ಸಹಜ ಸಾಮಾಜಿಕ ಪ್ರತಿಕ್ರಿಯೆ. ಇದನ್ನು ಮಧ್ಯಯುಗದಲ್ಲಿ ಯುರೋಪಿನಲ್ಲಿ ಯಹೂದ್ಯರ ಮೇಲೆ ಪ್ರಯೋಗಿಸಿದರು: ಆ ಮೇಲೆ ದಕ್ಷಿಣ ಆಫ್ರಿಕದಲ್ಲಿ, ಸಂಯುಕ್ತ ಸಂಸ್ಥಾನ ಅಮೆರಿಕದಲ್ಲಿ ಇಂದಿಗೂ ಜೀವಂತವಾಗಿ ಕಾಣುತ್ತಿದ್ದೇವೆ.

ಒಮ್ಮೆ ಪರಸ್ಪರ ಅಮಿಶ್ರಣೀಯ ಸಮಾಜ ವ್ಯವಸ್ಥೆ ಸಾಮಾನ್ಯವಾಗಿ ಸ್ವೀಕೃತವಾಯಿತೆಂದರೆ ಆ ಮೇಲೆ ಒಂದು ತರಹದ ಮಾನವಭೀತಿ ಸಾಮಾಜಿಕರ ಮನಸ್ಸಿನಲ್ಲಿ ಬೇರೂರಿಬಿಡುತ್ತದೆ. ಅದು ಇನ್ನೂ ಹೆಚ್ಚು ಒಳ ಭೇದಗಳ ಬೆಳವಣಿಗೆಗೆ ಕಾರಣವಾಗುತ್ತದೆ. ಇದು ಭಾರತದಲ್ಲಿ ಸಾವಕಾಶವಾಗಿ ಸಾಮಾಜಿಕ ಉಪವಿಂಗಡಣೆಗೆ ಪ್ರೇರಣೆ ಕೊಟ್ಟ ಸಂಗತಿಯೆಂದು ಊಹಿಸಬಹುದು. ನಡವಳಿಕೆ ಆಹಾರವಿಹಾರಗಳ ಭೇದ ಮುಂದೆ ಮಿಶ್ರಣವನ್ನು ಅಸಾಧ್ಯವಾಗಿ ಮಾಡುತ್ತದೆ. ಬ್ರಾಹ್ಮಣರೂ ಬೇರೆ ಕೆಲವರ್ಗಗಳೂ ಮದ್ಯ ಮಾಂಸಾಹಾರವನ್ನು ಮಾತ್ರವಲ್ಲ, ಕೆಲ ಸಸ್ಯಾಹಾರಗಳನ್ನೂ ಅಭೋಜ್ಯವೆಂದು ತ್ಯಜಿಸಿದ್ದು ಭೇದಗಳನ್ನು ಸ್ಥಿರಗೊಳಿಸಲು ನೆರವು ನೀಡಿತು. ಬೌದ್ಧ, ಅದಕ್ಕೂ ಮಿಗಿಲಾಗಿ ಜೈನ ಧರ್ಮದ ತತ್ತ್ವಗಳ ಜನಪ್ರಿಯತೆಯಿಂದಾಗಿ ಬಹುಶಃ ಬ್ರಾಹ್ಮಣರು ಮದ್ಯ ಮಾಂಸಗಳನ್ನು ಮೊದಲು ವರ್ಜಿಸಿದರಾದೀತು. ಇದರ ಮುಖ್ಯ ಪರಿಣಾಮವೆಂದರೆ ಮೊದಲು ಸ್ವಲ್ಪವಾದರೂ ಹೊಕ್ಕು ಬಳಕೆಯಿದ್ದ ತ್ರಿವರ್ಣಗಳನ್ನೂ ಪ್ರತ್ಯೇಕ ಪ್ರತ್ಯೇಕ ಸೀಲ್ ಮಾಡಿದ್ದು. ಲಿಂಗವಂತರು ಜೈನರಂತೆ ಮಾಂಸವರ್ಜ್ಯ ಮಾಡಿದ್ದರಿಂದ ಅವರ ಮತಾಂತರ ಕ್ರಿಯೆಗೆ ಇತಿಮಿತಿಗಳು ಬಂದಿರಬಹುದು. ತೀರ ನಿಖರವಾದ ಶುದ್ಧಾಚಾರಗಳು ಮಾನವ ಮಿಶ್ರಣಕ್ಕೆ ತಡೆಯೊಡ್ಡಬಹುದು.

ಮುಖ್ಯ ಅಂಶವೆಂದರೆ ಈ ವ್ಯವಸ್ಥೆಯನ್ನು ಯಾರೂ ಪೂರ್ವಯೋಜಿತವಾಗಿ, ಹೊಳಹು ಹಾಕಿ ನಿರ್ಮಿಸಲಿಲ್ಲ. ಪರಿಸ್ಥಿತಿಗಳಿಗೆ ಬಂದ ಪ್ರತಿಕ್ರಿಯೆಗಳು ಮೆಲ್ಲಗೆ ರೂಢಕ್ರಿಯೆಗಳಾಗಿ ಬಿಟ್ಟವು. ಅವುಗಳನ್ನು ಅಳಿಸಿ ಹಾಕಬಹುದಾಗಿದ್ದಂಥ ಬಿರುಗಾಳಿಗಳು ಭಾರತದಲ್ಲಿ ಬೀಸಿದ ಹಾಗೆ ಕಾಣಲಿಲ್ಲ.

ವರ್ಣಪದ್ಧತಿ ಉಚ್ಚನೀಚತೆಗೆ ಎಡೆಗೊಟ್ಟದ್ದು ಜನರು ಕೈಕೊಂಡ ಜೀವನೋಪಾಯಗಳ ಉಚ್ಚನೀಚ ಕಲ್ಪನೆಯಿಂದ ಎಂದು ''ಹೋಮೋ ಎರಾರ್ಕಸ್'' ಎಂಬ ಪುಸ್ತಕದಲ್ಲಿ ಲೂಯಿಮ್ಯು

ಮಾಂಟ್ ಹೇಳುವುದು ಸರಿಯಾಗಿ ಕಾಣುತ್ತದೆ. ಹೀಗೆ ''ವಿಶ್ವಕರ್ಮ''ರಲ್ಲೇ ಚಿನ್ನದ ಕೆಲಸ ಮಾಡುವವರು ಮರದ ಕೆಲಸದವರಿಗಿಂತ ಶ್ರೇಷ್ಠ - ಏಕೆಂದರೆ ಚಿನ್ನ ಮರಕ್ಕಿಂತ ಬೆಲೆಬಾಳುವಂಥದು: ಘರ್ಷಣೆಗಳೂ ಆಗದಿರಲಿಲ್ಲ. ಬ್ರಾಹ್ಮಣನ ಶ್ರೇಷ್ಠತ್ವ ಬಹುಕಾಲದ ವರೆಗೆ ಸ್ಥಾಪಿತವಾಗಲಿಲ್ಲವೆಂದು ಪುರಾಣಗಳಿಂದ ತಿಳಿಯುತ್ತದೆ. ಕ್ಷತ್ರಿಯರು ದಾತರಾದದ್ದರಿಂದ ಅವರು ಸ್ವೀಕರಿಸುವ ಬ್ರಾಹ್ಮಣರಿಗಿಂತ ಶ್ರೇಷ್ಠ ಎನ್ನುವವಾದ ಇತ್ತು. ಕೊನೆಯಲ್ಲಿ ಅದು ಬ್ರಾಹ್ಮಣರ ಶ್ರೇಷ್ಠತ್ವದ ಥಿಯರಿಟಿಕಲ್ ಒಪ್ಪಿಗೆಯಲ್ಲಿ ಪರ್ಯವಸಾನ ಹೊಂದಿತು. ಇದಕ್ಕಾಗಿ ಧಾರ್ಮಿಕ ಮತ್ತು ಆಡಳಿತಾತ್ಮಕ ಅಧಿಕಾರಿಗಳ ವಿಭಜನೆಯಾಯಿತು. ಬ್ರಾಹ್ಮಣರು ಮೊದಲನೆಯದರಲ್ಲಿಯೂ ಕ್ಷತ್ರಿಯರು ಎರಡನೆಯದರಲ್ಲಿಯೂ ಪ್ರತಿಷ್ಠಿತರಾದರು.

ಆಧುನಿಕ ರಾಜಕೀಯ ಚಿಂತನೆಯಲ್ಲಿ ಮಹಾ ಆದರ್ಶವೆಂದು ಬಗೆಯಲ್ಪಡುತ್ತಿರುವ ಈ ಅಧಿಕಾರ ವಿಭಜನೆ ಜಾತಿ - ವರ್ಣ ಪದ್ಧತಿಯನ್ನು ಬಲಗೊಳಿಸುವುದಕ್ಕೆ ಕಾರಣವಾಯಿತೆಂಬುದು ಇನ್ನೊಂದು ವಿರೋಧಾಭಾಸ. ಧಾರ್ಮಿಕ ಅಧಿಕಾರದಲ್ಲಿ ಕಾನೂನು ರಚನೆಯ (Legislative) ಅಧಿಕಾರವೂ ಸೇರಿತ್ತು - (ಕಾನೂನು ''ಧರ್ಮಶಾಸ್ತ್ರ''ವೆನಿಸಿತ್ತಲ್ಲವೆ?) ರಾಜನು ಕಾನೂನುಗಳನ್ನು ಬದಲಾಯಿಸಲು ಅಧಿಕಾರಿಯಲ್ಲ - ಅವುಗಳನ್ನು ಅನುಸರಿಸಿ ನ್ಯಾಯದಾನ ಮಾಡುವ ಅಧಿಕಾರ ಮಾತ್ರ ಅವನಿಗಿತ್ತು. ಮಹತ್ತರವಾದ ಸಾಮಾಜಿಕ ಬದಲಾವಣೆಗಳು ರಾಜಕೀಯ ಒತ್ತಡಗಳಿಂದ ಆಗುತ್ತವೆ. ರಾಜಕೀಯ ಒತ್ತಡಗಳಿಂದ ಪೀಡಿಸಲ್ಪಟ್ಟ ರಾಜನು ಹೊಸ ಜನವರ್ಗಗಳ ಬೆಂಬಲ ದೊರಕಿಸುವುದಕ್ಕಾಗಿ ಆ ಜನ ವರ್ಗಗಳಿಗೆ (ಹೆಚ್ಚಾಗಿ ''ಕೆಳ'' ವರ್ಗಗಳು) ಅನುಕೂಲವಾಗಿ ಅವರಿಗೆ ಪ್ರಿಯವಾಗಿ ಕಾನೂನುಗಳನ್ನು ಬದಲಿಸುತ್ತಾನೆಂಬುದು ರೋಮನ್ ಇತಿಹಾಸದಿಂದಲೂ ವ್ಯಕ್ತವಾಗುತ್ತದೆ. ಪ್ರಜಾಸತ್ತೆ, ಸಂವಿಧಾನಬದ್ಧ ಆಡಳಿತ, ಅಧಿಕಾರಗಳ ದ್ವಿವಿಧ ಇಲ್ಲವೆ ತ್ರಿವಿಧ ವಿಭಜನೆ ಇವು ಶೀಘ್ರ ಬದಲಾವಣೆಗಳಿಗೆ ಪೋಷಕವಲ್ಲ. ಭಾರತದ ಈ ಶತಮಾನದ ಚರಿತ್ರೆಯಲ್ಲಿ ಒಂದು ಉದಾಹರಣೆಯನ್ನು ಎತ್ತಿ ಹೇಳಬೇಕಾದರೆ, ಸಿ.ಪಿ.ರಾಮಸ್ವಾಮಿಯರ ದಿವಾನಗಿರಿಯಲ್ಲಿ ತಿರ್ವಾಂಕೂರು ಮಹಾರಾಜರು ಒಂದೇ ಹೊಡೆತಕ್ಕೆ ಹರಿಜನರಿಗೆ ದೇವಸ್ಥಾನ ಪ್ರವೇಶದ ಅಧಿಕಾರ ಕೊಟ್ಟುಬಿಟ್ಟರು. ಆದರೆ ಪ್ರಜಾಸತ್ತಾತ್ಮಕವಾಗಿ ನಡೆಯುತ್ತಿದ್ದ ಕಾಂಗ್ರೆಸ್ ಆಳಿಕೆಯ ಪ್ರಾಂತಗಳಿಗೆ ಇದನ್ನು ಮಾಡಲು ಕೆಲ ವರ್ಷಗಳೇ ಹಿಡಿದವು. ಕ್ರೈಸ್ತರ ಪ್ರಜಾಸತ್ತಾತ್ಮಕ ಒತ್ತಡವನ್ನು ಪ್ರತಿರೋಧಿಸುವದಕ್ಕೆ ಸರ್ವಾಧಿಕಾರ ಪ್ರವೃತ್ತಿಯ ಬ್ರಾಹ್ಮಣ ರಾಮಸ್ವಾಮಿ ಅಯ್ಯರರು ಹರಿಜನರಿಗೆ ದೇವಸ್ಥಾನ ಪ್ರವೇಶ ಕೊಟ್ಟು ಕ್ರೈಸ್ತರ ಕೈಲಿದ್ದ ಮತಾಂತರದ ಆಯುಧವನ್ನು ಕಸಿದುಕೊಂಡರು. ಅವರಿಗೆ ಕಾನೂನು ಮಾಡುವ ಅಧಿಕಾರವಿಲ್ಲದಿದ್ದರೆ, ಭಾರತದಲ್ಲಿ ಅಸ್ಪೃಶ್ಯತೆಯ ನೆಲೆವೀಡೆನಿಸಿದ್ದ ಕೇರಳದಲ್ಲಿ ಈ ಬದಲಾವಣೆ ಸಾಧ್ಯವೇ ಇರಲಿಲ್ಲ. (ಇದನ್ನು ಮಾಡಿದ ಮೇಲೆ ಬ್ರಾಹ್ಮಣರು ಕೆಲ ದಿನ ಗೊಣಗಿದರು. ಆ ಮೇಲೆ ದಾರಿಗೆ ಬಂದರು.) ಭಾರತದಲ್ಲಿ ಅಧಿಕಾರದ ವಿಭಜನೆಯ ಆದರ್ಶ ಬಹು ಬೇಗ ಸ್ವೀಕೃತವಾದದ್ದು ಬದಲಾವಣೆಗಳಿಗೆ ಆತಂಕವಾಯಿತು. ಒತ್ತಡಗಳಿಂದಲೂ ಕೆಲ ಒಳ್ಳೆ ಕೆಲಸಗಳು ಆಗುತ್ತವೆ. ಭಾರತದ ಸಮಾಜರಚನೆ ಇಂಥ ಒತ್ತಡಗಳ ನಿರ್ಮಾಣದ ವಿರುದ್ಧ ರಕ್ಷಣೆಗಳನ್ನು ರೂಪಿಸಿಕೊಳ್ಳದಿದ್ದರೂ ರಾಜನಿಗೆ ಕಾನೂನು ಮಾಡುವ ಅಧಿಕಾರವನ್ನು ನಿರಾಕರಿಸಿದ್ದರಿಂದ ಆ ಒತ್ತಡಗಳು ಸಾಮಾಜಿಕ ಬದಲಾವಣೆಗೆ ನೆರವಾಗಲಿಲ್ಲ.

ಈ ವ್ಯವಸ್ಥೆಗೆ ಪ್ರತಿಭಟನೆ ಬರಲೇ ಇಲ್ಲವೆಂದಲ್ಲ. ವಿರೋಧದ ಮೂರು ಉದಾಹರಣೆಗಳನ್ನೂ ಅವುಗಳು ಈ ಗೋಡೆಯನ್ನು ಒಡೆಯಲು ಅಸಮರ್ಥವಾದದ್ದಕ್ಕೆ ಕಾರಣಗಳನ್ನೂ ವಿಚಾರಿಸುತ್ತೇನೆ.

ಜಾತಿಪದ್ಧತಿಯ ನಾಶವನ್ನಲ್ಲದಿದ್ದರೂ

ಪೌರೋಹಿತ್ಯವನ್ನು ಬ್ರಾಹ್ಮಣರಿಂದ ಕಸಿದಕೊಳ್ಳುವ ಆದಿಮ ಯತ್ನ ಕ್ಷತ್ರಿಯ ವಿಶ್ವಾಮಿತ್ರನಿಂದಾಯಿತು. ಅವನು ಯಶಸ್ವಿಯೂ ಆದ. ಆದರೆ ಅವನನ್ನು ಬ್ರಹ್ಮರ್ಷಿಯೆಂದೊಪ್ಪಿಕೊಂಡು ರಾಜಿಯಾಗಿಬಿಟ್ಟಿತು. ಹೇಗಿದ್ದರೂ ಅದು ಬ್ರಾಹ್ಮಣ ಕ್ಷತ್ರಿಯರೊಳಗಿನ ತಿಕ್ಕಾಟ ಮಾತ್ರವಾಗಿತ್ತು; ಅಥವಾ ವಿಶ್ವಾಮಿತ್ರ - ವಸಿಷ್ಠರೊಳಗಿನ ಸ್ಪರ್ಧೆ ಮಾತ್ರವಾಗಿತ್ತು ಎನ್ನಲೂಬಹುದು. ಇತರ ಕ್ಷತ್ರಿಯರಿಗೆ ಬ್ರಾಹ್ಮಣ್ಯವನ್ನೂ ಪೌರೋಹಿತ್ಯವನ್ನೂ ಸಂಪಾದಿಸಿ ಯಜ್ಞ ಮಾಡಿಸಿ ಹೊಗೆ ನುಂಗುತ್ತ ಬದುಕುವ ಆತುರ ಇತ್ತೋ ಇಲ್ಲವೋ ತಿಳಿಯುವುದಿಲ್ಲ.

ಎರಡನೇ ಪ್ರತಿಭಟನೆ ಬೌದ್ಧ - ಜೈನ ಮತಗಳಿಂದ ಬಂತು. ಇವೆರಡೂ ಜಾತಿ ಪದ್ಧತಿಯನ್ನು ದೈವ ನಿರ್ಮಿತವೆಂದು ಒಪ್ಪಲಿಲ್ಲ. ಅದರ ಸಂಗಡವೇ ಅವು ಯಜ್ಞ ಸಂಸ್ಥೆಯನ್ನೇ ಪ್ರಶ್ನಿಸಿದವು. ಇವೆರಡು ಮತಗಳಿಗೂ ಅವುಗಳಿಗೆ ಇಂದು ಆರೋಪಿಸಲ್ಪಡುವಷ್ಟಲ್ಲದಿದ್ದರೂ ಸಾಕಷ್ಟು ಧಾರಾಳವಾದ ಬೆಂಬಲ ದೇಶಾದ್ಯಂತ ದೊರಕಿತು. ಅವು ಸಾರ್ವತ್ರಿಕವಾಗಿ ''ಧರ್ಮದಾನ'' ಮಾಡಿದವು. ಆದರೆ ಆಧುನಿಕ ಅರ್ಥದಲ್ಲಿ ಅವುಗಳನ್ನು ಸಮಾಜ ಸುಧಾರಣೆಯ ಚಳವಳಿಗಳೆಂದು ಹೇಳುವುದು ತಪ್ಪು. ಅವು ಕ್ಷತ್ರಿಯ ರಾಜಕುಮಾರರಿಂದ ಪ್ರಚಾರಕ್ಕೆ ಬಂದ ಧರ್ಮಗಳು. ಆದರೆ ಅವುಗಳಿಗೆ ಬೆಂಬಲ ಬಂದದ್ದು ಪ್ರಾರಂಭದಲ್ಲಿ ಮುಖ್ಯವಾಗಿ ವೈಶ್ಯರಿಂದ. ಬುದ್ಧನಿಗೆ ದತ್ತಿ ಕೊಟ್ಟವರಲ್ಲಿ ಅನೇಕರು ಶ್ರೀಮಂತರಾದ ವೈಶ್ಯರು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪಾರದ ಉದಯದಿಂದ ವೈಶ್ಯವರ್ಗ ಅಪಾರ ಸಂಪತ್ತನ್ನು ಸಂಗ್ರಹಿಸಿತು. ಆದರೆ ಅಂದಿನ ಸಮಾಜ ರಚನೆಯಲ್ಲಿ ಸ್ಥಾನಮಾನ ಬ್ರಾಹ್ಮಣ ಕ್ಷತ್ರಿಯರೊಳಗೇ ಹಂಚಿತ್ತು. ಗ್ರೀಕ್ ಸಂಸ್ಕೃತಿಯಲ್ಲಿ ಹೇಗೋ ಹಾಗೆ ಇಲ್ಲಿಯೂ ವೈಶ್ಯರನ್ನು ಗೌರವಾರ್ಹರೆಂದು ಪರಿಗಣಿಸಿರಲಿಲ್ಲ. ಅವರಿಗೆ ಮನ್ನಣೆ ಕೊಡಲು ಸಿದ್ಧರಾದ ಬುದ್ಧ ಮಹಾವೀರರಿಗೆ ಅವರು ''ನಡೆದುಕೊಳ್ಳಲು'' ಮುಂದೆ ಬಂದದ್ದು ಸಹಜ. ಶೂದ್ರಾತಿಶೂದ್ರರಿಗೆ ಈ ಮತಗಳು ಎಷ್ಟು ಮಟ್ಟಿಗೆ ಸಮಾನತ್ವ ನೀಡಿದವೋ ತಿಳಿಯದು. ಅವರು ''ಧರ್ಮದಾನ''ವನ್ನು ಪಡೆದಿರಬಹುದು.

ಈ ಎರಡೂ ಮತಗಳು ವರ್ಣಗಳ ದೈವಾಯತ್ತತೆಯ ಕಲ್ಪನೆಯನ್ನು ನಿರಾಕರಿಸಿದರೂ ವರ್ಣ



ಮೆಡಿಕಲ್ ಸ್ಟೋರ್ ತೆಗೀತಿಲ್ಲ....ಡಾಕ್ಟ್ರು ನನಗೆ ಬರೆದುಕೊಟ್ಟ ಔಷಧಿ ಅಷ್ಟೇ...!

ಗಳನ್ನು ನಿರಾಕರಿಸಲಿಲ್ಲವೆಂದು ಹೇಳಿದರೆ, ಎಲ್ಲಾ ಪಠ್ಯ ಪುಸ್ತಕಗಳಲ್ಲಿಯೂ ಬ್ರಾಹ್ಮಣರ ಹೊರತು ಎಲ್ಲ ಮತಾಚಾರ್ಯರು ಜಾತಿಯನ್ನು ಧಿಕ್ಕರಿಸಿದರೆಂದು ಓದಿದವರಿಗೆ ಆಶ್ಚರ್ಯವಾದೀತು. ಬುದ್ಧನ ಉಪದೇಶಗಳ ಸಂಗ್ರಹವಾದ ಸೂತ್ರಗಳಲ್ಲಿ ವರ್ಣಗಳ ಚರ್ಚೆ ಬರುತ್ತದೆ. ವರ್ಣಗಳನ್ನು ಬುದ್ಧ ದೇವನಿರ್ಮಿತವಲ್ಲವೆಂದರೂ ಪುರಾತನವಾದ ಒಂದು ಸಾಮಾಜಿಕ ಒಡಂಬಡಿಕೆಯೆಂದು ಹೇಳಿದಂತೆ ಸೂತ್ರಗಳು ಪ್ರತಿನಿಧಿಸಿವೆ. ಅವು ಕ್ಷತ್ರಿಯರನ್ನು ಪ್ರಥಮ ಸ್ಥಾನದಲ್ಲಿರಿಸಿ, ಬ್ರಾಹ್ಮಣರನ್ನು ಅವರಲ್ಲೇ ಹೊರಗೆ ಹೋಗಿ ಚಿಂತನ ಮಾರ್ಗವನ್ನು ಅವಲಂಬಿಸಿದವರೆಂದು ದ್ವಿತೀಯ ದರ್ಜೆಗೆ ಇಳಿಸಿ, ವೈಶ್ಯರನ್ನು ಮೈನರ್ ಪಾರ್ಟ್‌ನರುಗಳಾಗಿ ತಲೆಯಾಡಿಸಿ ಬರಮಾಡಿಕೊಂಡು ಶೂದ್ರರನ್ನು ಉಲ್ಲೇಖಿಸದೆಯೇ ಬಿಟ್ಟಿವೆ. ಬುದ್ಧನ ಕೆಲ ಕಾಲಾನಂತರದಲ್ಲಂತೂ ತಥಾಗತನು ಕೀಳು ಜಾತಿಗಳಲ್ಲಿ ಹುಟ್ಟವುದೇ ಇಲ್ಲವೆಂಬ ನಂಬಿಕೆಗೆ ಚಾಲನೆ ದೊರೆಯಿತು.

ಜೈನ ಧರ್ಮದಲ್ಲಿಯೂ ವರ್ಣವ್ಯವಸ್ಥೆಗೆ ಮನ್ನಣೆ ಇತ್ತು. ಆದಿ ಪುರಾಣದಲ್ಲಿ, ವೃಷಭನೇ ವರ್ಣವ್ಯವಸ್ಥೆಯನ್ನು ಮಾಡಿ ಅವುಗಳನ್ನು ಕಾಪಾಡುವ ಕರ್ತವ್ಯವನ್ನು ರಾಜರಿಗೆ ವಹಿಸಿದನೆಂದು ಹೇಳಿದೆ. ಜೈನ ಗ್ರಂಥಗಳಲ್ಲಿ ವೈಶ್ಯರ ಸಂಪತ್ತು ರಾಜರ ಸಂಪತ್ತನ್ನೂ ಮರೆಸುವಷ್ಟಿದ್ದದ್ದರ ವರ್ಣನೆಗಳು ಬರುತ್ತವೆ. ವೈಶ್ಯ ಕುಮಾರರು ಕ್ಷತ್ರಿಯ ಪುತ್ರಿಯರನ್ನು ವರಿಸಿದ್ದೂ ಕಾಣಸುತ್ತದೆ. ಆದರೆ ಈ ವ್ಯವಸ್ಥೆಯನ್ನೇ ಅಲ್ಲೋಲಕಲ್ಲೋಲಗೊಳಿಸುವ ಯತ್ನ ಎರಡೂ ಮತಗಳಲ್ಲಿ ಕಾಣಸುವುದಿಲ್ಲ. ಕೊನೆಗೆ, ಅವೆರಡೂ ಧರ್ಮಗಳು ಪ್ರಭಾವ ಕಳೆದುಕೊಂಡ ನಂತರ, ಹಿಂದೂ ಧರ್ಮಕ್ಕೆ ಮರಳಿದ ಅವುಗಳ ಅನುಯಾಯಿಗಳು ಶೂದ್ರವರ್ಗವನ್ನು ಹೆಚ್ಚಿಸುವಂತಾಯಿತೆಂದು ಸಂಶಯ ಬರುತ್ತದೆ.

ಇದರ ನಂತರ ನಾವು ಲಿಂಗವಂತ ಚಳವಳಿಯನ್ನು ವಿಚಾರಿಸಬಹುದು. ದಕ್ಷಿಣದಲ್ಲಿ ತಲೆಯೆತ್ತಿದ ಶೈವ - ವೈಷ್ಣವ ಎರಡೂ ಚಳವಳಿಗಳು ಜಾತಿ ವಿಷಯದಲ್ಲಿ ವಿಶಾಲ ದೃಷ್ಟಿಯನ್ನೇ ಹೊಂದಿದ್ದವು. ಆದರೆ ಶೈವ ಚಳವಳಿಗೆ ಹೊಸ ಆಯಾಮವನ್ನು ಕಲ್ಪಿಸಿದವರು ಬಸವಣ್ಣನವರು. ಅವರು ಜಾತಿಭೇದ ನಿವಾರಣೆಗೆ ಕೈಕೊಂಡ ಕಾರ್ಯಕ್ಕೆ ಕಳಸವಿಟ್ಟಂತೆ ಅಸ್ಪೃಶ್ಯ ಹರಳಯ್ಯನ ಮಗನಿಗೆ ಬ್ರಾಹ್ಮಣ ಮಧುವಯ್ಯನ ಮಗಳನ್ನು ಮದುವೆ ಮಾಡಿಸಿದ ಘಟನೆ ನಡೆಯಿತು. ಆದರೆ ಅದೇ ಮುಕ್ತಾಯವೂ ಆಯಿತು. ಹರಳಯ್ಯ ಮಧುವಯ್ಯನವರ ವಿಚಾರಣೆ ಮತ್ತು ವಧೆ, ಬಸವಣ್ಣನವರ ಕಲ್ಯಾಣ ತ್ಯಾಗ, ಅನಂತರದ ಹಿಂಸಾತ್ಮಕ ಕ್ರಾಂತಿ, ಕೊನೆಗೆ ಶಿವಶರಣರ ಚದರುವಿಕೆ ಈ ಕಥೆ ಜನಜನಿತವಾಗಿದೆ.


ಆದರೆ ಆ ಮೇಲೆ ಏನಾಯಿತು? ಜಾತಿ ಭೇದ ನಿವಾರಣೆಯ ಪ್ರಯತ್ನಗಳು ರಭಸದಿಂದ ಮುಂದುವರಿದಿವೆ. ಎಂಟು ನೂರು ವರುಷಗಳಾಚೆಗೆ ನೋಡುವಾಗ ಲಿಂಗವಂತ ಧರ್ಮದ ವ್ಯಾಪ್ತಿ ತೀರ ಕೆಳಗಿನವರನ್ನು ಸಾಮಾಜಿಕ ಏಕರಾಶಿಯ ಕಡೆಗೆ ಎಳೆದುಕೊಳ್ಳಲು ತಪ್ಪಿತೆಂದೇ ತೋರುತ್ತದೆ. ಬಸವಣ್ಣನವರ ಚರಿತ್ರೆಯಾದ ಬಸವ ಪುರಾಣದಲ್ಲಿ ಹರಳಯ್ಯ ಮಧುವಯ್ಯನವರ ವಧೆಯ ಉಲ್ಲೇಖವಿದ್ದರೂ ಅದರಲ್ಲಿ ಅಡಕವಾದ ಪ್ರತಿಲೋಮ ವಿವಾಹಕ್ಕೆ ಅಲ್ಲಿ ಮಹತ್ವ ಸಿಕ್ಕಿಲ್ಲ. ಆಗಲೇ ಈ ಘಟನೆಯ ತಿರುಳಲ್ಲಿದ್ದ ತತ್ತ್ವದಲ್ಲಿ ಸಮಾಜದ ಪ್ರತಿಷ್ಠಿತ ವರ್ಗಗಳಿಗೆ ಆಸಕ್ತಿ ಮಂದವಾಗಿತ್ತೆ? ರಾಘವಾಂಕನ ನಾಯಕ ಹರಿಶ್ಚಂದ್ರ, ಬ್ರಹ್ಮರ್ಷಿ ವಿಶ್ವಾಮಿತ್ರನ ಹೊಲತಿ ಮಗಳಂದಿರನ್ನು ಹೊಲತಿಯರೆಂಬುದಕ್ಕೇ ಮದುವೆಯಾಗಲು ನಿರಾಕರಿಸುತ್ತಾನಲ್ಲ, ಇಂಥಾ ನಾಯಕನನ್ನು ಆ ಮಹಾಕವಿ ಯಾಕೆ ಆರಿಸಿಕೊಂಡ? ಸ್ವತಃ ಬಸವಣ್ಣನವರು, ಜಾತಿ ಬೇಡವೆಂದವರು, ಜಂಗಮರ ಆರಾಧನೆಗೆ ಅಷ್ಟೇಕೆ ಮಹತ್ವ ಕೊಟ್ಟರು? ಅದರಿಂದ ಅದೊಂದು ಜಾತಿಯೇ ಹುಟ್ಟಿತಲ್ಲ? ನಾನು ನೋಡಿದ ಮಟ್ಟಿಗೆ ಈ ಚಳವಳಿ ಬ್ರಾಹ್ಮಣರು ಪ್ರತಿನಿಧಿಸುವ ಮೌಲ್ಯಗಳಿಗೆ ವಿರುದ್ಧವಾಗಿ ನಡೆದದ್ದು, ಆದರೆ ವಿಚಿತ್ರವೆನಿಸುವ ಹಾಗೆ, ಅದರಿಂದ ಹೆಚ್ಚು ನಷ್ಟ

ಹೊಂದಿದವರು ಬ್ರಾಹ್ಮಣರಲ್ಲ, ಜೈನರೆಂದು ಅನಿಸುತ್ತದೆ.

ಈ ಮೂರೂ ಚಳವಳಿಗಳಲ್ಲಿ ಎಲ್ಲಿ ಏನು ತಪ್ಪಿತು? ಬಹುಶಃ ಐತಿಹಾಸಿಕ ಶಕ್ತಿಗಳೂ ಇಲ್ಲಿನ ಜಾಯಮಾನಗಳೂ ಸೇರಿಯೇ ಜಾತಿಭೇದ ನಿವಾರಣೆಗೆ ಎಡೆಕೊಟ್ಟವೇನೊ.

ಐತಿಹಾಸಿಕ ಹೋಲಿಕೆಗಳನ್ನು ಮಾಡುವಾಗ ಮಧ್ಯ ಏಶಿಯಾ ಮತ್ತು ಯುರೋಪಿನಲ್ಲಿ ತಲೆಯೆತ್ತಿದ ಎರಡು ಮಹಾಧರ್ಮಗಳ ಸಾಧನೆಗೂ ನಮ್ಮ ಸುಧಾರಕ ಪಂಥಗಳ ಕಾರ್ಯಕ್ಕೂ ಇರುವ ಅಂತರಗಳು ಗೋಚರಿಸುತ್ತವೆ.

ಕ್ರೈಸ್ತಧರ್ಮ ಯುರೋಪಿನಲ್ಲಿ ಒಂದು ಜಾತಿ ವಿಮುಕ್ತ ಸಮಾಜವನ್ನು ಸ್ಥಾಪಿಸಿತು. ಅದು ಬಂದಿರದಿದ್ದರೆ ಇರಾಣದಿಂದ ಇಂಗ್ಲಂಡ್‌ವರೆಗೆ ಹಬ್ಬಿದ್ದ ರೋಮನ್ ಸಾಮ್ರಾಜ್ಯದ ಜನತೆ ಭಾರತದಲ್ಲಿನ ಹಾಗೆ ಬೇರೆ ಬೇರೆ ಜಾತಿಗಳಾಗಬಹುದಿತ್ತೇ - ಹೇಳುವುದು ಕಷ್ಟ. ಆಢ್ಯ ಸಾಮಾನ್ಯರ ಭೇದ ಅಲ್ಲಿ ಗಟ್ಟಿಗೊಂಡಾಗಿತ್ತು. ಆದರೆ ಯಹೂದ್ಯ ಧರ್ಮದಲ್ಲೇ ಒಂದು ಸುಧಾರಕ ಪಂಥವಾಗಿ ತಲೆಯೆತ್ತಿದ ಕ್ರೈಸ್ತ ಧರ್ಮ ಯಹೂದ್ಯರಲ್ಲಿ ಸಾಕಷ್ಟು ಅನುಯಾಯಿಗಳನ್ನು ಸಂಪಾದಿಸಲಾರದೆ ಯುರೋಪಿನ ಜೆಂಟೈಲ್ ಜನರಲ್ಲಿ ಅನುಯಾಯಿಗಳನ್ನು ಹುಡುಕುತ್ತ ಹೊರಟಿತು. ರೋಮನ್ ಸಾಮ್ರಾಜ್ಯದಲ್ಲಿ ಮೇಲ್ವರ್ಗದವರು ಅದನ್ನು ಮೊದಲು ಹಚ್ಚಿಕೊಳ್ಳಲಿಲ್ಲ. ಆದ್ದರಿಂದ ಅದು ಕೆಳ ವರ್ಗಗಳ ನಡುವೆ ಕೆಲಸಕ್ಕಿಳಿಯಿತು. ಸಮಾಜದಲ್ಲಿ ಏನೊಂದೂ ಸ್ಥಾನವಿಲ್ಲದೆ ನರಳುವ ಬಡವರು, ಜಾರರು, ಹಂತಕರು ಇವರಿಗೆ ದೀಕ್ಷೆ ಕೊಟ್ಟು, ಮನಸ್ಸು ತಿರುಗಿಸಿ, ಬಡವರನ್ನು ಈ ಧರ್ಮದಲ್ಲಿ ಹೊಸ ಸ್ವಾಭಿಮಾನವನ್ನು ಕಂಡುಕೊಳ್ಳವಂತೆಯೂ ದುರ್ಜನರನ್ನು ಪವಿತ್ರ ಜೀವನ ನಡೆಸುವವರಾಗಿಯೂ ಪರಿವರ್ತಿಸಿದ ಆ ಧರ್ಮದ ಕಡೆ ಆ ಮೇಲೆ ತಾನೇ ಮೇಲ್ವರ್ಗದವರ ಗಮನ ಹರಿದದ್ದು, ಕ್ರೈಸ್ತರಾದವರು ತಮ್ಮ ಧರ್ಮಕ್ಕಾಗಿ ಪ್ರಾಣ ಕೊಡಲು ನಿರ್ಭಯವಾಗಿ ಸಿದ್ಧರಾದದ್ದು ಅದರ ಪ್ರಭಾವವನ್ನು ಹೆಚ್ಚಿಸಿ ಹೆಚ್ಚು ಜನರ ಮತಾಂತರಕ್ಕೆ ಸಾಧನವಾಯಿತು. ಹೀಗೆ ಕೆಳಗಿನ ವರ್ಗದವರಿಂದ ಪ್ರಾರಂಭವಾಗಿ ಅವರಿಗೆ ಧರ್ಮಸಾಮ್ರಾಜ್ಯದಲ್ಲಿ ಮೊದಲ ಮಾನ್ಯ ಸ್ಥಾನ ಕೊಟ್ಟದ್ದರಿಂದ ಮತ್ತು ಅವರಲ್ಲೇ ಅನೇಕರು ಧರ್ಮಾಚಾರ್ಯರಾಗಿ ಸ್ಥಾನಾಪನ್ನರಾದದ್ದರಿಂದ ಮುಂದೆ ಮೇಲ್ವರ್ಗದವರು ಮತಾಂತರ ಹೊಂದಿದರೂ ಕೆಳಗಿನವರಿಂದ ಸಮಾನತೆಯ ಹಕ್ಕು ಕಸಿದುಕೊಳ್ಳಲಾಗಲಿಲ್ಲ. ಹೀಗೆ ಯುರೋ



ಓನಲ್ಲಿ ಆರ್ಥಿಕವಾಗಿ ಅಲ್ಲದಿದ್ದರೂ ಧಾರ್ಮಿಕವಾಗಿ ಸಮಾನತ್ವ ಕ್ರೈಸ್ತ ಧರ್ಮದಿಂದಾಗಿ ಸ್ಥಿರಗೊಂಡಿತು. ಆದರೂ ಮನಸ್ಸಿನ ಹುಟ್ಟುಗುಣವೇ ಎನಿಸುವ ಶ್ರೇಷ್ಠ ಕನಿಷ್ಠತಾದಂಭ ಅಲ್ಲಿಯೂ ಪೂರ್ತಿ ಸುಮ್ಮನಿರಲಿಲ್ಲ. ಮಧ್ಯಯುಗದ ಯುರೋಪಿನ ಪ್ರಭುಗಳು ಜನಸಾಮಾನ್ಯರಿಗೆ ಕಾವಲು ಕೆಲಸಕ್ಕಾಗಿ ಹೊರತು ಮೋಜಿಗಾಗಿ ನಾಯಿಗಳನ್ನು ಸಾಕುವದಕ್ಕೆ ನಿಷೇಧ ಹಾಕಿದ್ದರಂತೆ!

ಸಮಾನತೆಯನ್ನು ಮೂಲ ವಿಶ್ವಾಸವಾಗಿ ಮಾಡಿದ ಧರ್ಮ ಇಸ್ಲಾಂ. ಪ್ರವಾದಿ ಮಹಮ್ಮದರನ್ನು ಮಕ್ಕಾದಿಂದ ಓಡಿಸಿದ ಮೇಲೆ ಅವರು ಸಾಮಾನ್ಯ ಜನರದೇ ಸೈನ್ಯ ಕಟ್ಟಿಕೊಂಡು ಮಕ್ಕಾದ ಮೇಲೆ ದಂಡೆತ್ತಿ ಹೋಗಿ, ಗೆದ್ದು, ಸಮಾನತೆಯ ಧರ್ಮವನ್ನು ಹಬ್ಬಿಸಿದರು.

ಆದರೆ ನಮ್ಮ ಸುಧಾರಣಾ ಪಂಥಗಳು ತಮ್ಮ ಕೆಲಸವನ್ನು ಮೇಲ್ವರ್ಗದಿಂದಲೇ ಅಂದರೆ ಕ್ಷತ್ರಿಯ ವೈಶ್ಯ ವರ್ಗಗಳಿಂದಾರಂಭಿಸಿದರು. ಕೆಳಗಿನವರಿಗೆ ಧರ್ಮದಾನವಾಯಿತಷ್ಟೇ. ಕ್ರೈಸ್ತ ಧರ್ಮಪ್ರವರ್ತಕ ಬಡಗಿ, ತೀರ ಸಾಮಾನ್ಯ, ಕೆಳವರ್ಗದಲ್ಲಿ ಜನಿಸಿದವ. ಅವನ ಪ್ರಥಮ ಪಟ್ಟಶಿಷ್ಯರಲ್ಲಿ ಹೆಚ್ಚಿನವರು ಬೆಸ್ತರೇ ಮೊದಲಾದವರು. ಆ ಧರ್ಮದ ಕಾರ್ಯವೂ ಆ ತರಹದ ಜನರಿಂದಲೇ ಆರಂಭವಾಯಿತು. ಇಸ್ಲಾಂ ಪ್ರವರ್ತಕನಾದರೂ ಸಾಮಾನ್ಯ ವಣಿಜ. ಇವರಿಬ್ಬರೂ ಪ್ರವರ್ತಿಸಿದ ಧರ್ಮಗಳು ಸಾಮಾನ್ಯರಿಗೆ ಮನಂಬುಗುವಂಥ ಸತ್ಯ, ದಯೆ, ಕ್ಷಮೆ, ನಂಬಿಕೆ, ನಂಬಿಕೆಗಾಗಿ ಜೀವ ಕೊಡುವ ನಿಷ್ಠೆ ಈ ಮೂಲ್ಯಗಳನ್ನು ಪ್ರಚಾರಪಡಿಸಿದವು. ಅವುಗಳ ಸ್ವರ್ಗ ನರಕ ಕಲ್ಪನೆ ಸರಳವಾಗಿತ್ತು.

ತದ್ವಿರುದ್ಧವಾಗಿ ನಮ್ಮಲ್ಲಿ ಹೆಸರಾಂತ ''ಸುಧಾರಕ'' ಮತಪ್ರವರ್ತಕರು ಸ್ವತಃ ಮೇಲು ಜಾತಿಯವರಾಗಿದ್ದರು. ಅವರು ಸುಶಿಕ್ಷಿತರೂ ಗಂಭೀರವಾದ ತಾತ್ವಿಕ ಚಿಂತನೆ ಚರ್ಚೆಗಳಲ್ಲಿ ಪಳಗಿದವರೂ ಆಗಿದ್ದರು. ಅವರದು ತರ್ಕದ ಕುಲುಮೆಯಲ್ಲಿ ಪಳಗಿದ ವಿಚಾರ ಪದ್ಧತಿ. ಅದು ''ಇಲ್ಲಿ ಸಲ್ಲುವ'' ವಿಚಾರಗಳನ್ನು ಬೋಧಿಸಿದ್ದು ನಿಜ; ಆದರೆ ''ಅಲ್ಲಿ ಸಲ್ಲುವದು'' ಅವರಿಗೆ ಮುಖ್ಯವಾಗಿತ್ತು. ಸ್ವರ್ಗಾದಿ ಭೋಗಗಳು ನಶ್ವರವೆಂದೂ, ಸಂಸಾರ ನಿಸ್ಸಾರವೆಂದೂ ಇದರಿಂದ ಮೋಕ್ಷ ಪಡೆದು ಶಾಶ್ವತ ಸುಖದಲ್ಲಿ ರಮಮಾಣರಾಗುವುದು ಆದರ್ಶವೆಂದೂ ಎಣಿಸುವ ಮೂಲಭೂತ ತಳಹದಿ ನಮ್ಮ ಎಲ್ಲ ಧರ್ಮಗಳಿಗೂ ಸಮಾನವಾಗಿದೆ. ಇಹದ ಕಷ್ಟಗಳಿಗೆ, ಇಹದ ಪರಿಹಾರವೊದಗಿಸುವುದಕ್ಕೆ ಕ್ರೈಸ್ತ ಧರ್ಮದಂತೆ ನಮ್ಮವರು ಮಹತ್ವ ಕೊಡಲಿಲ್ಲ. ಇನ್ನೊಂದೆಂದರೆ, ಪಾಶ್ಚಾತ್ಯ ದೇಶಗಳಲ್ಲಿ ಸಾಕ್ರೆಟಿಸನ ಕಾಲದಿಂದಲೂ ಬೆಳೆದು ಬಂದ ಹುತಾತ್ಮತೆಯ ಪರಂಪರೆ ನಮ್ಮಲ್ಲಿ ಸ್ಥಾಪನೆ ಹೊಂದಲಿಲ್ಲ. ಹುತಾತ್ಮತೆಯ ಪ್ರಭಾವ ಜನರ ಮನಃ ಪರಿವರ್ತನೆಯಲ್ಲಿ - ಆ ಕಾಲದಲ್ಲಂತೂ - ಅಪಾರವಾಗಿತ್ತು.

ಆ ಧರ್ಮಗಳಲ್ಲಿ ಮತಾಂತರಕ್ಕೆ ಬಲಪ್ರಯೋಗವೂ ನಿಷಿದ್ಧ ಸಾಧನವಾಗಿರಲಿಲ್ಲ. ಒಂದು ವೇಳೆ ಬಸವಣ್ಣನವರು ಹರಳಯ್ಯ - ಮಧುವಯ್ಯ ಪ್ರಕರಣದ ನಂತರ ಸಂಗಮಕ್ಕೆ ಹೋಗಿ ಐಕ್ಯರಾಗುವ ಬದಲು, ಪ್ರವಾದಿ ಮಹಮ್ಮದರ ಹಾಗೆ ಸೈನ್ಯ ಕಟ್ಟಿ ಮರಳಿ ಬಂದು ಹಳೇ ಸಮಾಜ ರಚನೆಯ ಆಹ್ವಾನವನ್ನು ಸಶಸ್ತ್ರವಾಗಿ ಎದುರಿಸುತ್ತಿದ್ದರೆ ಇತಿಹಾಸವೇ ಬೇರೆ ಆಗುತ್ತಿರಲಿಲ್ಲವೇ ಎಂದು ಒಮ್ಮೊಮ್ಮೆ ಅನಿಸುತ್ತದೆ.

ಯಾವುದಾದರೊಂದು ಹೊಸ ಆಂದೋಲನಕ್ಕೆ ತನ್ನ ಆದರ್ಶಗಳತ್ತ ನುಗ್ಗುವುದಕ್ಕೆ ಒಂದು, ತಪ್ಪಿದರೆ ಎರಡು ತಲೆಮಾರುಗಳ ವ್ಯವಧಾನವಿರುತ್ತದೆ. ಆ ಅವಧಿಯಲ್ಲಿ ಅದಕ್ಕೆ ಓಜಸ್ಸೂ ತೇಜಸ್ಸೂ ಇರುತ್ತದೆ. ಅಷ್ಟರೊಳಗೇ ಅದರ ನೆಲೆ ಅಣಿಯಾಗಬೇಕು. ಆಗ ಸಾಧಿಸಿದ್ದೇ ಸಾಧನೆ. ಅದ ನಂತರ ವಿಸ್ತರಣೆ ಮಾತ್ರ; ಎಂಥಾ ನೀತಿವಾದಿ ಆಂದೋಲನದಲ್ಲೂ ಕಾಲಾಂತರದಲ್ಲಿ ಸಹಿತ ಸ್ವಾರ್ಥಗಳು ಬೆಳೆದುಬಿಡುತ್ತವೆ. ನಮ್ಮ ಸುಧಾರಣಾ ಚಳುವಳಿಗಳು ಬಹುಶಃ ಜನಸಾಗರವನ್ನು ವ್ಯಾಪಿಸುವ ಈ ತರದ ಬಿರುಗಾಳಿಯನ್ನು ನಿರ್ಮಿಸಲಿಲ್ಲ. ಆಗುವವಾದರೆ ತ್ವರಿತಗತಿ

ಯಲ್ಲೇ ಆಗಬೇಕಾದ ಬದಲಾಣೆಗಳು ಆಗದೆ ವಿಷಯಗಳು ಹೀಗೆ ಪುನಃ ಮೂಲಾವಸ್ಥೆಗೆ ಮರಳಿದವು.


ಆಶ್ಚರ್ಯವೆಂದರೆ ಈ ದೇಶದಲ್ಲಿ ವೈದಿಕ ಧರ್ಮದಲ್ಲಿ ವಿಶ್ವಾಸವಿಲ್ಲದವರು ಕೂಡ ಜಾತಿ ಪದ್ಧತಿಯ ಬಗ್ಗೆ ಸಹನೆ ತಾಳಿದ್ದು. ಮುಖ್ಯವಾಗಿ ರಾಜರು. ಅಶೋಕನನ್ನೇ ತೆಗೆದುಕೊಳ್ಳಿ. ಅವನು ಬೌದ್ಧ ಧರ್ಮಕ್ಕೆ ಒಲಿದ ನಂತರವೂ ಕಂಡ ಕಂಡ ಬಂಡೆಗಲ್ಲುಗಳ ಮೇಲೆ ''ಬ್ರಾಹ್ಮಣರಿಗೂ ಗೌರವ ಕೊಡಿ!'' ಎಂದು ಯಾಕೆ ಕೆತ್ತಿಸಬೇಕಾಗಿತ್ತು? ಯಜ್ಞಾದಿ ಕ್ರಿಯೆಗಳಲ್ಲಿ ಪಶುಮಾರಣವನ್ನು ತಡೆಗಟ್ಟಿದ ಆತನಿಗೆ ಬ್ರಾಹ್ಮಣರನ್ನು ಗೌರವಿಸುವ ಅಗತ್ಯವೇನಿತ್ತು? ಮುಂದೆ ಬಂದವರಲ್ಲಿಯೂ ಕೆಲ ವಿಚಿತ್ರಗಳನ್ನು ಕಾಣುತ್ತೇವೆ. ಗುಪ್ತಾದಿ ಅನೇಕ ರಾಜಕುಲಗಳು ಮೂಲತಃ ಕೆಳಗಿನ ಕುಲಗಳಲ್ಲಿ, ಕೆಲ ವೇಳೆ ವೈದಿಕ ಸಮಾಜದ ಕಟ್ಟುಪಾಡುಗಳ ಹೊರಗಿನ ಕುಲಗಳಲ್ಲಿ ಹುಟ್ಟಿದವರಿರಬೇಕೆಂದು ಕೇಳುತ್ತೇವೆ. ಆದರೆ ಅವರು ಬ್ರಾಹ್ಮಣರಿಂದ ಕ್ಷತ್ರಿಯತ್ವದ ಮುದ್ರೆ ಒತ್ತಿಸಿಕೊಂಡರು. ಉಪನಯನಾದಿಗಳನ್ನು ಮಾಡಿಸಿಕೊಂಡರು. ಸೂರ್ಯ-ಚಂದ್ರ ವಂಶಗಳಿಗೆ ತಮ್ಮ ಮೂಲವನ್ನು ಹೇಗೋ ಜೋಡಿಸಿಕೊಂಡರು. ಮರಾಠಾಶಿರೋಮಣಿ ಶಿವಾಜಿ ಯದು ತೀರ ಈಚೆಗಿನ ಉದಾಹರಣೆ. ಈ ಮಹಾಶಕ್ತಿಸಂಪನ್ನರಿಗೆ ವರ್ಣಮುದ್ರೆ ಒತ್ತಿಸಿಕೊಳ್ಳಲು ಇಷ್ಟು ಹಂಬಲವೇಕೆ?

ಇದಕ್ಕೆ ಪ್ರಾಮಾಣಿಕ ಉತ್ತರ, ರಾಜಕೀಯ ಅನುಕೂಲ ಸಿಂಧು ಎಂದೇ ಅನಿಸುತ್ತದೆ. ಆಳುವವರಿಗೆ ಈ ಹಲವು ಸ್ತರಗಳ ಸಾಮಾಜಿಕ ವ್ಯವಸ್ಥೆ ಅತ್ಯಂತ ಅನುಕೂಲವಾಗಿದೆ. ಸರ್ವಸಮ್ಮತವುಳ್ಳ ಅವಿಭಕ್ತ ಸಮಾಜವನ್ನು ಆಳುವುದು ಕಷ್ಟ. ಮಹತ್ವಾಕಾಂಕ್ಷೆ ಅನಿರೀಕ್ಷಿತ ಸ್ಥಳಗಳಲ್ಲಿ ಮೊಳೆತು ಬಹಳ ತೊಂದರೆ ಕೊಡಬಹುದು. ಆದರೆ ಸ್ತರ ಸ್ತರ ಕೋಣೆ ಕೋಣೆಯಾಗಿ ವಿಂಗಡಿಸಿದ ಸಮಾಜದಲ್ಲಿ ಮಹತ್ವಾಕಾಂಕ್ಷೆಗಳಿಗೆ ಸಹಜವಾಗಿಯೇ ಗರಿಷ್ಠ ಮಿತಿಗಳು ತಂತಾನೇ ಕಲ್ಪಿತವಾಗುತ್ತವೆ. ಅಂಕೆಯೊಳಗೆ ಉಳಿಯುತ್ತವೆ. ಇದು ಆಳುವವರಿಗೆ ಹೇಳಿ ಮಾಡಿಸಿದಂಥ ವ್ಯವಸ್ಥೆ. ಆದ್ದರಿಂದ ಬೌದ್ಧ, ಮುಸ್ಲಿಂ, ಕ್ರೈಸ್ತ ಯಾವ ರಾಜರೂ ಇದನ್ನು ಅಸ್ತವ್ಯಸ್ತಗೊಳಿಸಲು ಆತುರಪಡಲಿಲ್ಲ. ●

ವಿಚಿತ್ರ ಪ್ರಪಂಚ; ವಿಚಿತ್ರ ಜನ!

* *ಮಲೈಶಾ ದ್ವೀಪದ ಜನರು ಒಬ್ಬ ವ್ಯಕ್ತಿ ಸತ್ತಾಗ ಆತನನ್ನು ಆಳವಿಲ್ಲದ ಗುಂಡಿಯೊಂದರಲ್ಲಿ ಹೂಳುತ್ತಾರೆ. ಎಂಟು ದಿನಗಳ ನಂತರ ಆತನ ಹಿರಿಯ ಮಗ ತಂದೆಯ ತಲೆಯನ್ನು ಕತ್ತರಿಸಿ ವಿವಿಧ ಆಚಾರ ವಿಧಿಯ ನಡುವೆ ವಿಶೇಷವಾಗಿ ನಿರ್ಮಿಸಲ್ಪಟ್ಟ ಗುಡಿಸಲಿನಲ್ಲಿ ಇಡುತ್ತಾನೆ. ಮುಂದೆ ಅದು ಎಂದಿಗೂ ಅಲ್ಲೇ ಇರುತ್ತದೆ!*
* *ಅರವತ್ತು ವಯಸ್ಸು ದಾಟಿದ ನಂತರ ಅಜ್‌ಟೀಯನ್ನರು ಎಲ್ಲಾ ಕಾನೂನುಗಳಿಂದ ಮುಕ್ತರಾಗಿ ಯಾವುದೇ ಅಪರಾಧ ಎಸಗಿದರೂ ಶಿಕ್ಷೆಯಿಂದ ವಿನಾಯಿತಿ ಹೊಂದುತ್ತಾರೆ!*
* *ಪಾಪುಅ ನ್ಯೂಗಿನಿಯ ದೇಶದ ಜನ ಪ್ರಪಂಚದ ಅತಿದಡ್ಡ ಜನರ ಸಾಲಿಗೆ ಸೇರುತ್ತಾರೆ. ಆ ರಾಷ್ಟ್ರವು ಸ್ವಾತಂತ್ರ್ಯ ಹೊಂದುವ ಹಂತದಲ್ಲಿದ್ದಾಗ ಬಹಳಷ್ಟು ಜನರಿಗೆ ಸ್ವಾತಂತ್ರ್ಯದ ಅರ್ಥವೇ ಗೊತ್ತಿರಲಿಲ್ಲ - ಅಲ್ಲಿನ ಹಳ್ಳಿಗರಿಗೆ 'ಸ್ವಯಂ ಆಡಳಿತ ಸರಕಾರ'ವು ಬರುತ್ತಿದೆ ಎಂದಾಗ ಅವರು ಯಾರೋ ಸೈನಿಕರು ಅವರುಗಳನ್ನು ಮನೆಯಿಂದ ದೂಡಲು ಬರುತ್ತಿದ್ದಾರೆ ಎಂದು ಹೆದರಿ ಓಡಿದರಂತೆ!*

ಸಂಗ್ರಹ: ಸಿ.ಕೆ. ಚಂದ್ರಿಕಾ



ಬಿಸಿ ಆಮ್ಲೆಟ್

• ಪಾ.ಮೈ. ಸೂಗಿ

ಆವತ್ತು... ಯಾವತ್ತೂ ಅಂತೀರೀ... ಯಾವತ್ತು ಮೂರು ಕತ್ತೆ ನಮ್ಮ ಮನೆ ಮುಂದಿನ ಬಯಲಿನಲ್ಲಿ ಕೂಗಿಕೊಂಡು ಉತ್ತರಾಭಿಮುಖವಾಗಿ ನಾಗಾಲೋಟ ಓಡಿತೋ ಅವತ್ತೂ... ನಮ್ಮ ರಾಜಣ್ಣ ಒಂದು ಸಂಘ ಪ್ರಾರಂಭಿಸಿದ ಬೇಡ, ಬೇಡ ಅಂದ್ರೂ ಆ ಸಂಘಕ್ಕೆ ಆಧುನಿಕವಾಗಿ "ಅನುಪಯುಕ್ತ ಸಂಘ ಅನ್ ಲಿಮಿಟೆಡ್ ಆಟ್ ಮೆಂಬರ್ಸ್ ಲಯಬಿಲಿಟಿ" ಅಂತ ಹೆಸರಿಟ್ಟ. ತಾನೂ ಅನ್ ಎಂಪ್ಲಾಯ್ಡ್. ಬೇರೆ ಬೇರೆ ಕೆಲಸ ಸಿಗದ ನಿರುದ್ಯೋಗಿಗಳನ್ನೆಲ್ಲಾ ಜಮಾಯಿಸಿ ಈ ಅನುಪಯುಕ್ತ ಸಂಘಕ್ಕೆ ಮೆಂಬರ್ ಮಾಡಿಸ್ದ.

ಕಾಲ ಯಾರಿಗೆ ಕಾಯುತ್ತೆ ಹೇಳಿ. ಕಾಲಾನೂ ಕತ್ತೇ ಹಾಗೆ ಓಡ್ತಾ ಇತ್ತು. ಒಂದು ವರ್ಷ ಕಳೀತು. ರಾಜಣ್ಣ ತನ್ನ ಸಂಘಕ್ಕೆ ವಾರ್ಷಿಕೋತ್ಸವ

ಮಾಡೋಣಾಂತ ಭಾಷಣಕ್ಕೆ ನನ್ನನ್ನೇ ಕರೆದ. ನನಗೋ ಭಾಷಣ ಅಂದ್ರೆ ಅಲರ್ಜಿ. ಎಲ್ಲೂ ಅದಕ್ಕೆ ಒಪ್ಪಿಕೊಳ್ಳೊಲ್ಲ. "ಬೇರೆ ಯಾರನ್ನ ಕರೆದರೂ ಹಣ್ಣು, ಹಾರ, ಶಾಲು, ಆಟೋ ಛಾರ್ಜ್ ಇತ್ಯಾದಿ ನನ್ನ ಕೈಯಿಂದ ಖರ್ಚಾಗಿ ಹೋಗುತ್ತೆ, ನೀನೇ ಸೈಕಲ್ ಮೇಲೆ ಪುಕ್ಕಟೆ ಬಾ, ಭಾಷಣ ಮಾಡಿ ಹೋಗು" ಎಂದಿದ್ದ ಸ್ನೇಹಿತನ ಮಾತು ಮೀರಕ್ಕೆ ಆಗತ್ಯೇ. ಗತ್ಯಂತರವಿಲ್ಲದೆ ಭಾಷಣಕ್ಕೆ ಒಪ್ಪಿಕೊಂಡೆ.

ಆ ಸುದಿನ ಸಂಜೆ "ಅನುಪಯುಕ್ತ ಸಂಘಕ್ಕೆ" ಹೋದೆ. ಕೆಲಸವಿಲ್ಲದ ಜನ ಎಲ್ಲಾ ಘೇರಾಯಿಸಿದ್ದರು. ಭಾಷಣ ಯಾವ ವಿಷಯದ ಮೇಲೆ ಮಾಡೋದು ಅನ್ನೋದೇ ತಲೆಗೆ ಹೊಳೀಲಿಲ್ಲ. ಕಡೆಗೆ ಹೀಗೆ ಹೇಳಿದೆ.

"ಮಹಿಳೆಯರೇ, ಮಹನೀಯರೇ, ಮುದುಕರೇ, ಮುದುಕಿಯರೇ, ನೀವೆಲ್ಲ ಈ ಅನುಪಯುಕ್ತ, ಅಲಾಭದಾಯಕ ಸಂಘದ ವಾರ್ಷಿಕೋತ್ಸವಕ್ಕೆ ಬಂದಿದ್ದೀರಿ. ಬಹಳ ಸಂತೋಷ.

ನಿಮಗೆಲ್ಲ ಗೊತ್ತಿರೋ ಹಾಗೆ ನಿಮ್ಮ ಊರಿಗೆ ಬಸ್ ಹಾಕಿಲ್ಲ. ಕಾರಣ ಏನೆಂದರೆ ಬಸ್ ಓಡಿಸೋದು ಲಾಭದಾಯಕವಲ್ಲ.

ಬೆಲೆ ಎಲ್ಲಾ ಯಾಪಾಟೀ ಏರಿದೆ. ಹಾಗೇ ನಿಮ್ಮ ಊರಿಗೆ ವಿದ್ಯುತ್ ಹಾಯಿಸುಕ್ಕೆ ಆಗಿಲ್ಲ. ಯಾಕಪಾ ಅಂತಂತಂತಂದ್ರೆ ವಯರ್‌ಗಳ ಬೆಲೆ ಗಗನ ಏರಿದೆ. ಕಂಬದ ಮೇಲೆ ಕೂರಿಸ್ಲಿಕ್ಕೇ ಆಗ್ತಿಲ್ಲ!

ಮತ್ತೇನಪಾ ಅಂತ ನೀವು ಸುಮ್ನೆ ಕೂತ್ಕೊಂಡು ನನ್ನ ಕೇಳೋದಾದ್ರೆ... ನಿಮ್ಮ ಊರಿಗೆ ಯಾವ ಶಾಲೇನೂ ಖಂಡಿತಾ ಬೇಡ. ಯಾಕಪಾ ಅಂತ ಪುನಃ ನೀವೇನಾದ್ರೂ ಕೇಳಿದ್ರೆ... ನೀವು ಹಿಂದೆ ಪೇಪರ್ನಾಗೆ ಓದಿದೀರಿ... ಶಾಲಾ ಉಪಾಧ್ಯಾಯರಿಗೆ ಸಂಬಳ ಜಾಸ್ತಿ ಮಾಡಕ್ಕೆ ಆಗಲ್ಲ... ವಿದ್ಯಾ ಇಲಾಖೆ ಲಾಭದಾಯಕವಲ್ಲ... ಲಾಭದಾಯಕವಲ್ಲದ್ದು ಬೇಡ... ಅದರ ಸುದ್ದಿ ನಮಗಾದರೂ ಯಾಕೆ?

ಇನ್ನು, ನಿಮ್ಮ ಊರಿಗೆ ರಸ್ತೆ ಮಾಡೋ ವಿಚಾರ... ಬಸ್ಸೆ ಇಲ್ಲದ ಮೇಲೆ ರಸ್ತೆ ತಾನೇ ಯಾಕೆ ಬೇಕ್ರೀ... ಇದೂ ಉಪಯುಕ್ತ ಅಲ್ಲವೇ ಅಲ್ಲ.

ಇನ್ನು ನಿಮ್ಮ ಊರಲ್ಲಿ ಆಸ್ಪತ್ರೆ ಕಟ್ಟೋಣಾಂದ್ರೆ... ಔಷಧದ ಬೆಲೆಗಳು ಯದ್ವಾತದ್ವಾ ಏರ್ತಾ ಅವೆ... ಬೆಲೆ ಏರೀ, ಏರೀ, ಏರೀ ಆಸ್ಪತ್ರೆ ಕಟ್ಟಕ್ಕೆ ಹಣ ಇಲ್ಲ... ಅದೂ ಲಾಭದಾಯಕ ಆಗೋ ಹಾಗೆ ಕಾಣೋಲ್ಲ.

ಇದೆಲ್ಲ ಸರಿ... ನೀವು ನನ್ನ ಭಾಷಣ ಕೇಳ್ತಿದೀರಲ್ಲ... ನಿಮ್ಮ ವೇಳೆ ಹಾಳು, ನನ್ನ ವೇಳೆ ಹಾಳು... ಇದು ಲಾಭದಾಯಕ ಅಲ್ಲ... ಬಹಳ ಅನುಪಯುಕ್ತ ಅಲ್ಲವೇ... ನೀವಾದರೂ ಹೀಗೆ ಭಾಷಣ ಏರ್ಪಡಿಸಿದೀರಲ್ಲ... ಏನನ್ನೋಣ... ಭಾಷಣ ಮಾಡೋ ಉದ್ದಿಮೆ ಖಂಡಿತ ಲಾಭದಾಯಕವಲ್ಲ... ಒಟ್ಟಿನಲ್ಲಿ ನೀವು ನನ್ನ ಮುಂದೆ ಹೀಗೆ ನಿದ್ದೆ ಮಾಡ್ತಾ ಕೇಳ್ತಾ ಇರೋದು ಲಾಭದಾಯಕ ಅ...ಲ್ಲ..." ಎಂದಾಗ ಎಲ್ಲಾ ಸಭಿಕರೂ ಕೋಪದಿಂದ ಕೋಳಿಮೊಟ್ಟೆ, ಟೊಮ್ಯಾಟೋ ನನ್ನ ಮೇಲೆ ಎಸೆಯಲು ಶುರು ಮಾಡಿದರು.

"ಮಹನೀಯರೇ, ನೀವೆಲ್ಲ ಕೋಳಿಮೊಟ್ಟೆ, ಟೊಮ್ಯಾಟೋ ನನ್ನ ಕಡೆ ಎಸೀತಿದೀರಿ... ಸಂತೋಷ... ನಾನು ಬಂದಿದ್ದೂ ಇದಕ್ಕೇ... ನನಗೆ ನಾಲ್ಕು ಕೋಳಿಮೊಟ್ಟೆ, ಐದು ಟೊಮ್ಯಾಟೋ ಸಾಕು... ಜಾಸ್ತಿ ಎಸೀಬ್ಯಾಡಿ... ದಯಮಾಡಿ ಹತ್ತು ಹಸಿರುಮೆಣಸಿನಕಾಯಿ ಎಸೆದು, ಒಂದೆರಡು ಕಟ್ಟು ಕೊತ್ತಂಬರಿಸೊಪ್ಪು, ತುದೀಗೆ ಎರಡು ದಪ್ಪ ಈರುಳ್ಳಿ ಕಟ್ಟಿದ ಹಾರ ಹಾಕಿ, ಹೂವಿನಹಾರ ಬ್ಯಾಡ... ಹಾಗೇ ಸ್ವಲ್ಪ ಹಸೀ ಶುಂಠಿ ಇದ್ದರೆ ಎಸೀರಿ... ಹೀಗೆ ನೀವು ನನ್ನ ಮೇಲೆ ಎಸಿಯೋದು ಖಂಡಿತ ನಿಮಗೆ ಲಾಭದಾಯಕ ಅಲ್ಲ..." ಎಂದು ಸಿಕ್ಕಿದ್ದ ನಾಲ್ಕು ಮೊಟ್ಟೆ, ಟೊಮ್ಯಾಟೋ ಎತ್ತಿಕೊಂಡು ಮನೆ ಕಡೆ ಹೊರಟುಬಂದೆ.

"ಲೇ ಪ್ರೇಮ... ತಗೋ... ಬಿಸಿ ಬಿಸಿ ಆಮ್ಲೆಟ್ ಮಾಡು" ಎಂದೆ.

"ಏನ್ರೀ... ಬರೀ ಕೈಲೇ ತಗೋ ಅಂತಿದೀರಿ... ಇನ್ನೂ ನಿದ್ದೇಲಿ ಕನವರಿಸ್ತಾ ಇದೀರಿ... ಬಿಸಿ ಆಮ್ಲೆಟ್ ಎಂಥದ್ರೀ... ಇವತ್ತು ಏಕಾದಶಿ... ಉಪವಾಸ ಮಾಡ್ತೀನೀ ಅಂದಿದ್ರಿ" ಎಂದು ಪ್ರೇಮ ನನ್ನನ್ನು ಗಾಢನಿದ್ದೆಯಿಂದ ಎಚ್ಚರಿಸಿದಳು. ●

ಅರಬ್ ಕಥೆ

ಬಾಂಬು ತಯಾರಿಸಿದವರು ಮನೆ ಉಳಿಸುವ ಸಾಧನವನ್ನೂ ತಯಾರಿಸಬಾರದಿತ್ತೆ?

ಯುದ್ಧ ಮತ್ತು ಮನೆ

ಅನುವಾದ: ಕೆ. ಶಾಂತಾಮಣಿ

''ನಾನೊಂದು ಮನೆ ಮಾಡಬೇಕು'' ಇದು ನಿನ್ನೆ - ಮೊನ್ನೆಯ ಮಾತಲ್ಲ. ಬಹಳ ಹಳೆಯದು. ಮನೆ ಹೇಗಿರಬೇಕು? ಎಂಬ ಸ್ಪಷ್ಟ ಯೋಜನೆ ಇಲ್ಲದೆ ಹೋದರೂ ಮನೆ ಮಾಡದೆ ನನ್ನ ಜೀವನ ಜೀವನವೇ ಅಲ್ಲ ಎಂಬ ಮಾತಂತೂ ನನ್ನ ಮಟ್ಟಿಗೆ ಸತ್ಯವಾಗಿತ್ತು. ಮನೆ ಮಾಡುವ ಯೋಜನೆ ಹಳೆಯದಾಗಿದ್ದರೂ ನಾನು ಪ್ಲಾಟಿನ ಕಾಗದವನ್ನು ಅವಳ ಮುಂದಿಟ್ಟಾಗ ಅವಳು ಭಾವ ಪರವಶತೆಯಿಂದ ಕಣ್ಣೀರು ಹರಿಸಿದ್ದಳು.

ಅಂದು ನನ್ನ ಇಬ್ಬರು ಮಕ್ಕಳು ಹಾಲಂ ಮತ್ತು ಹಾಶಿಮ್ಮರ ಹುಟ್ಟು ಹಬ್ಬ. ಹಾಲಂ ಹಾಶಿಮನಿಗಿಂತ ನಾಲ್ಕು ವರ್ಷ ದೊಡ್ಡವಳಾದರೂ ಒಂದೇ ತಿಂಗಳಲ್ಲಿ ಹುಟ್ಟಿದ್ದರಿಂದ ಒಟ್ಟಿಗೇ ಆಚರಿಸುತ್ತಿದ್ದೆವು. ಆ ದಿನ ಮನೆಗೆ ಹೋದಾಗ ನನ್ನ ಹೆಂಡತಿ, ''ಇವತ್ತು ಮಕ್ಕಳ ಹುಟ್ಟು ಹಬ್ಬ. ಸಿಹಿ ಏನೂ ತರಲಿಲ್ಲವೆ?'' ಎಂದಳು.

''ತರಲಿಲ್ಲ.''

''ಮಕ್ಕಳು ನಿಮಗಾಗಿ ಕಾಯುತ್ತಿದ್ದಾರೆ. ಏನೂ ತರಲಿಲ್ಲವೆ?'' ಅವಳ ಮರು ಪ್ರಶ್ನೆ. ನಾನು ಮೆಲ್ಲಗೆ ಕವರನ್ನು ಅವಳ ಮುಂದಿಟ್ಟು ''ಪ್ರೆಸೆಂಟೇಶನ್ ಅದರಲ್ಲಿದೆ'' ಎನ್ನುತ್ತಾ ಮುಗುಳ್ನಕ್ಕೆ.

ಅವಳು ಆ ಕವರಿನಿಂದ ಕಾಗದ ಹೊರ ತೆಗೆದು ನೋಡಿದಳು. ನಾನು ಹೆಮ್ಮೆಯಿಂದ ಅವಳ ಕಡೆಗೆ ನೋಡುತ್ತಿದ್ದೆ. ಅವಳಿಗೆ ಒಂದೇ ಸಲಕ್ಕೆ ಅರ್ಥವಾಗದೆ ಪುನಃ ನನ್ನ ಕಡೆಗೆ ನೋಡಿ, 'ಅದೇನು?' ಎಂಬಂತೆ ನೋಡಿದಳು.

''ಮನೆ'' ಎಂದೆ.

ಅವಳ ಉಲ್ಲಾಸಭರಿತ ಪ್ರತಿಕ್ರಿಯೆಯನ್ನು ನೋಡಿ ನಾನು ಸಂತೋಷದಿಂದ ಮಕ್ಕಳನ್ನು ಎತ್ತಿ ಮುದ್ದಿಸಿದೆ. ಅವಳು ಆ ಕೂಡಲೇ ಅಕ್ಕಪಕ್ಕದವರಿ



ಗೆಲ್ಲ ತಮಗೆ ಸ್ವಂತ ಮನೆಯಾಗುವ ಸುದ್ದಿ ಮುಟ್ಟಿಸಿ ಬಂದಳು. ಸೆಂಟರಿಷ್ಟರಿಗೂ ಸುದ್ದಿ ಹೋಯಿತು.

ಮರುದಿನ ಎಲ್ಲರೂ ಟಾಂಗಾದಲ್ಲಿ ಪ್ಲಾಟ್ ನೋಡಲು ಹೋದೆವು. ನಾವು ಪ್ಲಾಟಿನ ಒಂದು ಮೂಲೆಯಲ್ಲಿ ನಿಂತೆವು. ಮಕ್ಕಳು ಧೂಳಿನಲ್ಲಿ ಆಟ ಆಡತೊಡಗಿದವು. ನಾನು ನನ್ನಲ್ಲಿಯೇ ಕಳೆದು ಹೋದೆ. ಅವಳು ಮಾತನಾಡುತ್ತಲೇ ಇದ್ದಳು. ನಾನು ಹಾಂ ಹೂಂ ಎಂದಿಷ್ಟೆ ಹೇಳುತ್ತಿದ್ದೆ. ನನ್ನ ಮನಸ್ಸೆಲ್ಲ ಆ ಕ್ಷಣದ ಸ್ಥಾನ - ಕಾಲಗಳಿಂದ ಬಹುದೂರ ಇಸ್ಮಾಲಿಯ ಪಟ್ಟಣಕ್ಕೆ ಹೋಗಿತ್ತು. ತನ್ನ ವಯಸ್ಸಿನ ಅಂದಾಜಿನಲ್ಲಿ ಆ ಘಟನೆಗಳು ನಡೆದು ಎಷ್ಟು ವರ್ಷಗಳಾಗಿದ್ದವೆಂದು ಅಂದಾಜು ಮಾಡಬಹುದಾಗಿತ್ತು.

ಆಗ ನನಗೆ ಸುಮಾರು ಎಂಟು ವರ್ಷಗಳಿರಬಹುದು. ನಮ್ಮ ಮನೆಯ ಸುತ್ತ ಮುತ್ತ ತೋಟವಿತ್ತು. ಆಳುಗಳಿಗೆಂದು ಮನೆಯಿರಲಿಲ್ಲ. ನಮಗೆ ಆಳುಗಳಿರಲಿಲ್ಲ. ಕಾರು ಇಲ್ಲದಿದ್ದುದರಿಂದ ಗ್ಯಾರೇಜೂ ಇರಲಿಲ್ಲ. ಆದರೆ ಮನೆಯ ಸುತ್ತ ಮುತ್ತ ಅಂಜೂರ, ಮಾವು ಇತ್ಯಾದಿ ಹಣ್ಣಿನ ಮರಗಳಿದ್ದವು. ಕೋಳಿ ಸಾಕಲು ಒಂದು ಗೂಡಿತ್ತು. ಅಪ್ಪ ಮನೆಗೆ ಬಂದ ಕೂಡಲೆ ಗುದ್ದಲಿ ತೆಗೆದುಕೊಂಡು ತೋಟದ ಕೆಲಸ ಮಾಡುತ್ತಿದ್ದರು. ಅಮ್ಮನಿಗೆ ಆ ಮನೆಯ ಒಡತಿ ತಾನು ಎಂಬ ಹೆಮ್ಮೆ.

ಆಗ ಕೆಲವು ಘಟನೆಗಳು ನಡೆದವು... ನನಗೆ ಸ್ವಲ್ಪ ಸ್ವಲ್ಪ ನೆನಪಿದೆ. ಆ ಮನೆಯಲ್ಲಿ ಊಟ, ತಿಂಡಿ ಶಬ್ದಗಳ ಬದಲು ಯುದ್ಧ 'ಮಿತ್ರ ರಾಷ್ಟ್ರ' ಶಬ್ದಗಳು ಕಿವಿಗೆ ಬೀಳತೊಡಗಿದವು.

ನಮ್ಮಪ್ಪ ಮತ್ತು ಇತರ ಮನೆಯವರು ಸೇರಿ ಮಾತಾಡುವಾಗ ಕೆಲವರು 'ಇಂಗ್ಲೀಷರಿಗೆ ಜಯವಾಗಲಿ' ಎಂದರೆ ಮತ್ತೆ ಕೆಲವರು 'ಜರ್ಮನ್ನರಿಗೆ ಜಯವಾಗಲಿ' ಎನ್ನುತ್ತಿದ್ದರು.

ನಿದ್ದೆಯ ಸಮಯವಾದಾಗ ನಾನು ಹಾಸಿಗೆಯ ಬಳಿ ಕಂಬಳಿಯ ಒಳಗೆ ನುಸುಳಿ ಬಿಡುತ್ತಿದ್ದೆ. ಅಪ್ಪನ ಮಾತು ಗುಂಯ್‌ಗುಟ್ಟಿದಾಗ ನಾನು ಜರ್ಮನ್ನರ ಪಕ್ಷ ಹಿಡಿಯುತ್ತಿದ್ದೆ. ನನ್ನ ಮನದಲ್ಲಿ ಜರ್ಮನ್ನರು ಇಂಗ್ಲೀಷರಿಗಿಂತ ಉದ್ದ



ವಾಗಿಯೂ, ತೇಜಸ್ವಿಗಳಾಗಿಯೂ ಮೂಡಿಬರುತ್ತಿದ್ದರು.

ಒಂದು ರಾತ್ರಿ ಸುಮಾರು ಒಂಬತ್ತು ಗಂಟೆಯ ವೇಳೆಗೆ ನಮಗೆ ಎಚ್ಚರಿಕೆಯ ಸಂದೇಶ ಕೊಡಲಾಯಿತು. ದೀಪಗಳು ಆರಿಹೋದವು. ಸ್ಮಶಾನ ಮೌನ ಎಲ್ಲೆಡೆ ಆವರಿಸಿತು.

''ಜರ್ಮನ್ನರ ವಿಮಾನ!'' ಜನರು ಕೂಗಿದರು.

''ಅವರು ನಮ್ಮ ಮೇಲೆ ಬಾಂಬು ಹಾಕುತ್ತಾರೆಯೇ?'' ಅಮ್ಮ ಭಯಭೀತಳಾಗಿ ಕೇಳಿದಳು.

''ಇಲ್ಲ, ಅವರು ಹಾಗೆ ಮಾಡುವುದಿಲ್ಲ. ಹಿಟ್ಲರ್ ಹಾಗೆ ಮಾಡುವುದಿಲ್ಲ, ಅವರು ಇಂಗ್ಲೀಷರ ಕ್ಯಾಂಪ್ ಹುಡುಕುತ್ತಿದ್ದಾರೆ,'' ಅಪ್ಪ ಹೇಳಿದ್ದರು.

ಇಂಗ್ಲೀಷರ ಕ್ಯಾಂಪು ನಮ್ಮ ಚಿಕ್ಕ ಪಟ್ಟಣದ ನಾಲ್ಕೂ ಕಡೆ ಆವರಿಸಿತ್ತು. ಬಾಂಬ್ ಸ್ಫೋಟ ಒಂದೇ ಸಮನೆ ಭಯಂಕರವಾಗಿ ಕೇಳಿ ಬರುತ್ತಿತ್ತು.

ಜನಗಳು ಗುಂಪು ಗುಂಪಾಗಿ ಮನೆಯೊಳಗಿಂದ ಓಡಿ ಬಂದರು. ಬೀಳುತ್ತ ಏಳುತ್ತ ಓಡತೊಡಗಿದರು. ನಾವೂ ಭಯದಿಂದ ಆ ಜನಸಮೂಹದ ಜೊತೆಗೆ ಪೂರ್ವ ದಿಕ್ಕಿನ ಮರಳುಗಾಡಿಗೆ ಓಡ ತೊಡಗಿದೆವು. ರಕ್ಷಣೆಗೆ ಇನ್ನಾವ ಮಾರ್ಗವೂ ಇರಲಿಲ್ಲ. ಒಬ್ಬರನ್ನೊಬ್ಬರು ತಳ್ಳುತ್ತಾ ಬೀಳಿಸುತ್ತಾ ಬರಿಗಾಲಿನಲ್ಲಿ ಮರಳುಗಾಡಿನ ಕಡೆಗೆ ಓಡತೊಡಗಿದೆವು. ಕತ್ತಲೆಯಲ್ಲಿ ''ಮಹಸನ್ ನೀನೆಲ್ಲಿದ್ದೀಯ!'' ''ಮಕ್ಕಳೆಲ್ಲಿ?'' ''ಬಾಗಿಲು ಹಾಕಿದ್ದೀಯಾ?'' 'ಮನೆ ಹಾಳಾಗಿ ಹೋಗಲಿ'' ''ಬೇಗ ಹೋಗು'' ''ಓಡು'' ''ಅಪ್ಪಾ, ನಿಲ್ಲಿ. ನಾನೂ ಬರುತ್ತೇನೆ'' ಇತ್ಯಾದಿ ಕೂಗು ಕೇಳಿಬರುತ್ತಿದ್ದವು.

''ಗುಂಡಿ ತೋಡಲು ಸಹಾಯ ಮಾಡು '' ಎಂದು ಅಪ್ಪ ಅಮ್ಮನಿಗೆ ಹೇಳುತ್ತಿದ್ದರು. ಅಮ್ಮ ಅಪ್ಪ ಸೇರಿಕೊಂಡು ಮರಳುಗಾಡಿನಲ್ಲಿ ಗುಂಡಿ ತೋಡಿದರು. ನಾವು ಅದರಲ್ಲಿ ಗುಡ್ಡೆಯಾಗಿ ಕುಳಿತುಕೊಂಡೆವು. ಬಾಂಬಿನ ಜೋರು ಶಬ್ದ ಕೇಳುತ್ತಿತ್ತು. ಆಕಾಶದಿಂದ ವಿಮಾನದ ಆರ್ಭಟ.

''ಅವರು ಇಂಗ್ಲೀಷರ ಜೊತೆ ಹೋರಾಡಿದರೆ ನಮ್ಮ ಮೇಲೇಕೆ ಬಾಂಬು ಹಾಕಬೇಕು?'' ಅಮ್ಮ ಕೇಳುತ್ತಿದ್ದಳು.

''ಅವರು ನಮ್ಮ ಸ್ನೇಹಿತರಲ್ಲವಾ?'' ನಾನು ಹೇಳಿದೆ.

''ಇಬ್ಬರೂ ಎಲ್ಲಾದರೂ ಸಾಯಲಿ'' ಅಪ್ಪ ಕೋಪದಿಂದ ಕಿರುಚಿದರು.

ಕೊನೆಗೂ ಯುದ್ಧ ಮುಗಿಯಿತು. ವಿಮಾನಗಳು ಮಾಯವಾದವು. ನಾವು ಗುಂಡಿಯಿಂದ ಹೊರಬಂದೆವು. ಮನೆಯ ಕಡೆ ಹೊರಟೆವು. ಆದರೆ ಅಲ್ಲಿ ನಮ್ಮ ಮನೆಯೇ ಕಾಣಲಿಲ್ಲ. ಹಸನ್ ಚಿಕ್ಕಪ್ಪನ ಮನೆಯೂ ಇರಲಿಲ್ಲ. ಕಂಡದ್ದು ಬರಿ ಇಟ್ಟಿಗೆ ರಾಶಿ! ಮಲ್ಲಿಗೆ ಹೂವಿನ ಸುವಾಸನೆಗೆ ಬದಲು ಹೊಗೆ. ಮದ್ದಿನ ವಾಸನೆ ಹರಡಿತ್ತು. ಈ ಭಗ್ನಾವಶೇಷಗಳನ್ನು ನೋಡಿ ಅಪ್ಪನ ಕಣ್ಣಲ್ಲಿ ನೀರು ಬಂತು. ಅಮ್ಮ ಮೂಕಿಯಾಗಿದ್ದಳು. ಇಡೀ ಜೀವಮಾನದ ಶ್ರಮವೆಲ್ಲ ಮಣ್ಣುಗೂಡಿತು. ಅಪ್ಪ ಕಣ್ಣೊರೆಸಿಕೊಂಡರು. ''ನಡಿ, ನಿನ್ನ ಚಿಕ್ಕಮ್ಮನ ಮನೆಗೆ ಹೋಗಿ ಯುದ್ಧ ಮುಗಿದ ಮೇಲೆ ಬರೋಣ'' ಅಪ್ಪ ಹೇಳಿದರು.

ಯುದ್ಧ ಮುಗಿಯಿತು.

ನನ್ನ ಹಗಲುಗನಸೂ ಮುರಿಯಿತು. ''ನಿಮಗೇನಾಗಿದೆ? ಮನೆ ಯಾವಾಗ ಕಟ್ಟುವಿರಿ?'' ಭುಜ ಅಲುಗಿಸಿ ಕೇಳಿದಳು ನನ್ನ ಹೆಂಡತಿ. ಆದರೆ ನಮ್ಮ ಮನೆಯ ಭಗ್ನಾವಶೇಷ ಇನ್ನೂ ನನ್ನ ಕಣ್ಮುಂದೆಯೆ ಇತ್ತು. ''ಬಾಂಬು ತಯಾರಿಸುವವರು ಮನೆ ಉಳಿಸುವ ಸಾಧನವನ್ನೂ ತಯಾರಿಸಬಾರದಿತ್ತೇ?'' ನನ್ನ ಮಾತು ಕೇಳಿ ಅವಳು ಆಶ್ಚರ್ಯದಿಂದ ನನ್ನ ಕಡೆ ನೋಡಿದಳು.

''ನಾವು ಮನೆ ಕಟ್ಟೋಣ, ಯುದ್ಧ ಆಗುವುದಿಲ್ಲ'' ನಾನು ತಟ್ಟನೆ ನಂಬಿಕೆಯ ಸ್ವರದಲ್ಲಿ ಹೇಳಿದೆ. ಏನೂ ತೋಚದೇ ನನ್ನ ಮುಖವನ್ನೇ ನೋಡುತ್ತಿದ್ದ ಅವಳನ್ನು ಮುಗುಳ್ನಕ್ಕು ಪ್ರೀತಿಯಿಂದ ತಬ್ಬಿದೆ.



ರಿಚರ್ಡ್ಸ್: ಕತ್ತಲ ನಾಡಿನ ದೈತ್ಯ ದಾಂಡಿಗ

"ನಾವು ಅವರನ್ನು ನೆಲಕ್ಕೆ ಹಾಕಿ ಹೊಸಕಿ ಬಿಡುತ್ತೇವೆ;" 1976ರ ಇಂಗ್ಲಂಡ್-ವೆಸ್ಟ್‌ಇಂಡೀಜ್ ಸರಣಿಯ ಆರಂಭಕ್ಕೆ ಮುನ್ನ ಇಂಗ್ಲಂಡ್ ನಾಯಕ ಟೋನಿ ಗ್ರೆಗ್ ಜಂಭ ಕೊಚ್ಚಿಕೊಂಡ.

"ವಿವ್ ರಿಚರ್ಡ್ಸ್ ಜೊತೆ ಮಾತನಾಡುವ ರೀತಿ ಇದಲ್ಲ" 23 ಹರೆಯದ, ಬಿಸಿರಕ್ತದ ಯುವಕ ರಿಚರ್ಡ್ಸ್ ಸಿಟ್ಟಿನಿಂದ ಬಸುಗುಟ್ಟಿದ. ಗ್ರೆಗ್‌ರ ಸೊಕ್ಕಿನ ಮಾತು ವೆಸ್ಟ್‌ಇಂಡಿಯನ್ನರನ್ನು ನಿಜಕ್ಕೂ ಕೆರಳಿಸಿತು. ನಾಟಿಂಗ್‌ಹ್ಯಾಮ್‌ನಲ್ಲಿ ಮೊದಲ ಟೆಸ್ಟ್‌ನಲ್ಲೇ ಗ್ರೆಗ್ ಸವಾಲಿಗೆ ಮಾರುತ್ತರ ಸಿಕ್ಕಿತು

- ಸಂಜೀವ ಪ್ಯಾಟಿ

ಇಂಗ್ಲಂಡ್ ಬೌಲರ್‌ಗಳನ್ನು ಮನಬಂದಂತೆ ಚಚ್ಚಿದ ರಿಚರ್ಡ್ಸ್ ಮೊದಲ ದಿನದಾಟ ಮುಗಿದಾಗ 143 ಓಟಗಳೊಂದಿಗೆ ಔಟಾಗದೇ ಉಳಿದಿದ್ದರು. ಎರಡನೇ ದಿನ ಮಧ್ಯಾಹ್ನ ಔಟಾಗುವ ಮುನ್ನ ಅವರ ಒಟ್ಟು ಗಳಿಕೆ 232. ಏಳೂವರೆ ಗಂಟೆಗಳಲ್ಲಿ ರಿಚರ್ಡ್ಸ್ 31 ಬೌಂಡರಿ, ನಾಲ್ಕು ಸಿಕ್ಸರ್ ಬಾರಿಸಿದ್ದರು. ಗ್ರೆಗ್ ಒಂದು ಕ್ಷಣ ತಮ್ಮನ್ನು ತಾವೇ ಹಳಿದುಕೊಂಡಿರಬೇಕು. ರಿಚರ್ಡ್ಸ್‌ರ ದ್ವಿಶತಕ ವೆಸ್ಟ್‌ಇಂಡೀಜನ್ನು ನೇರವಾಗಿ ಗೆಲುವಿನ ಹಾದಿಗೆ ಒಯ್ದು ನಿಲ್ಲಿಸಿತ್ತು.

ಎರಡನೇ ಟೆಸ್ಟ್‌ನಲ್ಲಿ ರಿಚರ್ಡ್ಸ್ ಜ್ವರದಿಂದ ಬಳಲುತ್ತಿದ್ದರಾದ್ದರಿಂದ ಆಡಲಿಲ್ಲ. ಮೂರನೇ ಟೆಸ್ಟ್‌ನಲ್ಲಿ ಕ್ರಮವಾಗಿ 66 ಹಾಗೂ 38 ಓಟ ಬಾರಿಸಿದ ಅವರು ಕೊನೆಗೆ ಓವಲ್‌ನಲ್ಲಿ 291 ಓಟ ಹಣಿಯುವ ಮೂಲಕ ಸರಣಿ ಮುಗಿಸಿದರು. ನಾಲ್ಕು ಟೆಸ್ಟ್‌ಗಳಲ್ಲಿ ಅವರು ಒಟ್ಟು ಗಳಿಸಿದ್ದು

829 ಓಟಗಳು ! ಓವಲ್‌ನಲ್ಲಿ ರಿಚರ್ಡ್ಸ್ ಕೂಡಿ ಹಾಕಿದ 291 ಓಟ ಕೊನೆಯವರೆಗೂ ಅವರ ಟೆಸ್ಟ್ ವೃತ್ತಿಯ ಅತ್ಯಧಿಕ ಸ್ಕೋರಾಗಿ ಉಳಿಯಿತು. ವೈಶಿಷ್ಟ್ಯವೆಂಬಂತೆ ರಿಚರ್ಡ್ಸ್ ಕಳೆದ ಆಗಸ್ಟ್‌ನಲ್ಲಿ ಇದೇ ಮೈದಾನದಲ್ಲಿ ಇಂಗ್ಲಂಡ್ ವಿರುದ್ಧವೇ ತಮ್ಮ ಕೊನೆಯ ಟೆಸ್ಟ್ ಆಡಿದರು. ತಮ್ಮ ಕೊನೆಯ ಇನ್ನಿಂಗ್ಸ್‌ನಲ್ಲಿ ಅವರು 60 ಉತ್ತಮ ಓಟಗಳನ್ನು ಗಳಿಸಿದರಾದರೂ ವೆಸ್ಟ್‌ಇಂಡೀಜಿನ ಸೋಲು ತಪ್ಪಿಸಲಾಗಲಿಲ್ಲ.

ಆಗಸ್ಟ್ 11, ಈ ಟೆಸ್ಟ್‌ನ ನಾಲ್ಕನೆಯ ದಿನ ಔಟಾಗಿ ಮರಳಿ ಹೊರಟಾಗ ರಿಚರ್ಡ್ಸ್ ಮನದಲ್ಲಿ ಒಂದು ಕ್ಷಣ, ಬಹುಶಃ ತಾವು ಔಟಾಗಿದ್ದು ವೆಸ್ಟ್‌ಇಂ ಡೀಜನ್ನು ಸೋಲಿಗೆ ಇನ್ನಷ್ಟು ಹತ್ತಿರ ತಳ್ಳಿತೇ ಎಂಬ ನಿರಾಶೆ ತುಂಬಿತ್ತು. ಆದರೆ ಒಂದೇ ಕ್ಷಣ. ಮರು ಕ್ಷಣ ಪರಿಸ್ಥಿತಿಯ ವೈಶಾಲ್ಯದ ಅರಿವಾಯಿತು; ತಾವು ಇನ್ನೆಂದೂ ಈ ರೀತಿ ಟೆಸ್ಟ್ ಪಂದ್ಯಗಳಲ್ಲಿ ಔಟಾಗಿ ಮರಳಿ ಪೆವಿಲಿಯನ್‌ಗೆ ಹೊರಡಲು ಸಾಧ್ಯವಿಲ್ಲ ! ತಲೆಯ ಮೇಲಿನ ಆ ಪ್ರಸಿದ್ಧ ಕಂದು ಬಣ್ಣದ ಕ್ಯಾಪ್ ತೆಗೆದು ಒಂದು ಕೈಯಲ್ಲಿ ಕ್ಯಾಪ್, ಇನ್ನೊಂದು ಕೈಯಲ್ಲಿ ಬ್ಯಾಟ್ ಎತ್ತಿ ಹಿಡಿದು 17000 ಪ್ರೇಕ್ಷಕರ ಅಭಿನಂದನ ಸ್ವೀಕರಿಸಿದರು. ಆ ಅಗಾಧ ಜನಸಮೂಹ ಎದ್ದು ನಿಂತು ಚಪ್ಪಾಳೆ ತಟ್ಟುತ್ತ ಕ್ರಿಕೆಟ್ ಇತಿಹಾಸದ ಮಹಾನ್ ಆಟಗಾ ರನೊಬ್ಬನನ್ನು ಬೀಳ್ಕೊಟ್ಟಿತು.

"ಥ್ಯಾಂಕ್ಸ್ ವಿವ್, ವಿ ವಿಲ್ ಮಿಸ್ ಯೂ"



ಅಂಕಿ-ಸಂಖ್ಯೆಗಳಲ್ಲಿ ರಿಚರ್ಡ್ಸ್

ಬ್ಯಾಟಿಂಗ್: 121 ಟೆಸ್ಟ್, 182 ಇನ್ನಿಂಗ್ಸ್, 12 ಬಾರಿ ಅಜೇಯ, ಒಟ್ಟು 8540 ಓಟಗಳು, ಅತಿ ಹೆಚ್ಚಿನ ಮೊತ್ತ 291, 24 ಶತಕ, 45 ಅರ್ಧಶತಕ, 10 ಬಾರಿ ಖಾತೆ ಆರಂಭಿಸದೆ ಔಟಾಗಿದ್ದಾರೆ. ಸರಾಸರಿ 50.23 ಒಟ್ಟು 122 ಕ್ಯಾಚುಗಳನ್ನೂ ಹಿಡಿದಿದ್ದಾರೆ.

ಬೌಲಿಂಗ್: 5170 ಎಸೆತಗಳು, 203 ಮೇಡನ್ ಓವರ್, 1964 ಓಟಗಳು, 32 ವಿಕೆಟ್‌ಗಳು, ಸರಾಸರಿ 61.37. ಅತ್ಯುತ್ತಮ ಸಾಧನೆ 17 ಕ್ಕೆ ಎರಡು.

ದೂರದಲ್ಲಿ ಬ್ಯಾನರೊಂದು ಹಾರಾಡುತ್ತಿತ್ತು. ಅದರ ಬಗ್ಗೆ ಯಾರಲ್ಲೂ ಭಿನ್ನಾಭಿಪ್ರಾಯವಿಲ್ಲ: ಕ್ರಿಕೆಟ್ ರಂಗ ವಿವ್ ರಿಚರ್ಡ್ಸ್‌ರ ಗೈರು ಹಾಜರಿ ಯಿಂದ ಬಡವಾಗುವುದು ಖಂಡಿತ.

18 ವರ್ಷಗಳಲ್ಲಿ 121 ಟೆಸ್ಟ್ ಆಡಿದ ರಿಚರ್ಡ್ಸ್ ಒಟ್ಟು ಗಳಿಸಿದ ಓಟಗಳು 8540. ಅದರಲ್ಲಿ 24 ಶತಕಗಳು. ಕೊನೆಯ ಟೆಸ್ಟ್‌ನಲ್ಲಿ ಅವರು ಶತಕ ಗಳಿಸಬೇಕೆಂಬ ಆಸೆ ಎಲ್ಲರದಾಗಿತ್ತು. ಆದರೆ ರಿಚರ್ಡ್ಸ್ ಸ್ವಲ್ಪ 'ಪ್ರಾಕ್ಟಿಕಲ್' ಮನುಷ್ಯ. "ಶತಕ ಗಳಿಸಬೇಕೆಂಬ ಆಸೆ ಸಹಜವಾಗಿಯೇ ಇತ್ತು. ಆದರೆ ಖ್ಯಾತ ಡಾನ್ ಬ್ರಾಡ್ಮನ್ ತಮ್ಮ ಕೊನೆಯ ಟೆಸ್ಟ್ ಇನ್ನಿಂಗ್ಸ್‌ನಲ್ಲಿ ಒಂದೂ ಓಟ ಗಳಿಸದೇ ಔಟಾದರು. ಆ ಪರಿಸ್ಥಿತಿ ನನ್ನದಾಗಬಾರದು ಎಂಬ ಗುರಿ ನನ್ನದಾಗಿತ್ತು" ಎಂದು ನಂತರ ರಿಚರ್ಡ್ಸ್ ನುಡಿ ದರು. 1948ರಲ್ಲಿ ಇದೇ ಮೈದಾನದಲ್ಲಿ ಬ್ರಾಡ್ಮನ್ ತಮ್ಮ ಕೊನೆಯ ಟೆಸ್ಟ್ ಇನ್ನಿಂಗ್ಸ್‌ನಲ್ಲಿ ಎರಡನೇ ಎಸೆತಕ್ಕೇ ಔಟಾಗಿದ್ದರು.

ರಿಚರ್ಡ್ಸ್ ಈಗ ಟೆಸ್ಟ್ ಕ್ರಿಕೆಟ್‌ನಲ್ಲಿ ಅತ್ಯಧಿಕ ಓಟ ಗಳಿಸಿದವರಲ್ಲಿ ಮೂರನೆಯ ಸ್ಥಾನದಲ್ಲಿ ದ್ದಾರೆ. ಅವರಿಗಿಂತ ಮುಂದಿರುವವರು ಸುನೀಲ ಗಾವಸ್ಕರ ಮತ್ತು ಅಲನ್ ಬಾರ್ಡರ್ ಮಾತ್ರ. ಆದರೆ ಕ್ರಿಕೆಟ್ ಆಟದ ಮೇಲೆ ರಿಚರ್ಡ್ಸ್ ಬೀರಿದ ಪ್ರಭಾವವನ್ನು ಕೇವಲ ಅಂಕಿ ಸಂಖ್ಯೆಗಳಿಂದ ಅಳೆಯುವದು ಹುಚ್ಚುತನವಾದೀತು. ಅವರ ಆಟದ ಶೈಲಿಯೇ ಇತರರಿಗಿಂತ ಭಿನ್ನ. ಅವರು ಬ್ಯಾಟು ಹಿಡಿದು ಮೈದಾನಕ್ಕಿಳಿದರೆ ಮುಗಿ

ಯಿತು. ತಿರುಗಿ ಪೆವಿಲಿಯನ್‌ಗೆ ಮರಳುವವರೆಗೆ ಕ್ರಿಕೆಟ್ ಮೈದಾನದಲ್ಲಿ ಅವರದೇ ರಾಜ್ಯ. ಬೌಲರ್‌ಗಳ ಮೇಲೆ ದಬ್ಬಾಳಿಕೆ! ಚೂಯಿಂಗ್ ಗಮ್ ಅಗಿಯುತ್ತ, ಒಮ್ಮೆ ಸುತ್ತಲೆಲ್ಲ ದರ್ಪದ ದೃಷ್ಟಿ ಬೀರಿ, ಬೌಲರ್‌ನತ್ತ "ನೀನೇನು ಮಾಡ ಬಲ್ಲೆ?" ಎನ್ನುವಂತೆ ದೀರ್ಘ ದೃಷ್ಟಿ ಹರಿಸಿ ಗಾರ್ಡ್ ತೆಗೆದುಕೊಂಡರೆ, ಅಲ್ಲಿಂದ ಆರಂಭ ಬಿರುಸಿನ ಹೊಡೆತಗಳ ಸುರಿಮಳೆ. ಇಂಗ್ಲೆಂಡ್ ವಿರುದ್ಧ 56 ಎಸೆತಗಳಲ್ಲಿ ಅವರು ಬಾರಿಸಿದ ಶತಕ, 1984ರಲ್ಲಿ ಇಂಗ್ಲೆಂಡ್ ವಿರುದ್ಧವೇ ಒಂದು ದಿನದ ಪಂದ್ಯದಲ್ಲಿ ಬಾರಿಸಿದ 189 (ಇದು ಇಂದಿಗೂ ವಿಶ್ವದಾಖಲೆ) 1976ರ ಸರಣಿಯಲ್ಲಿ ಬಾರಿಸಿದ 829 ಓಟ....ಇದಕ್ಕಿಂತ ಹೆಚ್ಚಿನ ಉದಾ ಹರಣೆ ಬೇಕಿಲ್ಲ. ಆದರೆ ಭಾರತೀಯರು ಬಹಳ ನೆನಪಿಡುವಂಥ ಅವರ ಇನ್ನಿಂಗ್ಸ್‌ಗಳಲ್ಲಿ 1983ರ ಸರಣಿಯ ಜಮೈಕಾ ಟೆಸ್ಟ್ ಇನ್ನಿಂಗ್ಸ್ ಸಹ ಒಂದು.

ಪಂದ್ಯದ ಕೊನೆಯ ದಿನ ಚಹಾ ವಿರಾಮಕ್ಕೆ ಭಾರತದ ಸ್ಕೋರು 167ಕ್ಕೆ ಆರು. ಟೆಸ್ಟ್ ಡ್ರಾ ಹಾದಿ ಹಿಡಿದಿತ್ತು. ಆದರೆ ಚಹಾ ವಿರಾಮದ ನಂತರ ಮೊದಲ ಓವರ್‌ನಲ್ಲೇ ಆ್ಯಂಡಿ ರಾಬರ್ಟ್ಸ್ ಮೂರು ಹುದ್ದರಿ ಕೆಡವಿದರು. ಭಾರತ 174ಕ್ಕೆ ಆಲೌಟಾಯಿತು. ವೆಸ್ಟ್‌ಇಂಡೀಜೆಗೆ ಗೆಲ್ಲಲು 172 ಓಟ ಬೇಕಾಗಿತ್ತು. ಆಗ ಸಹ ಭಾರತ ಸುರಕ್ಷಿತ ಸ್ಥಿತಿಯಲ್ಲಿದೆ ಎಂಬುದೇ ಎಲ್ಲರ ಭಾವನೆ. ಏಕೆಂದರೆ ಸಮಯ ಉಳಿದಿದ್ದು ಅರ್ಧಗಂಟೆ. ಮೇಲೆ 20 ಕಡ್ಡಾಯ ಓವರ್‌ಗಳು ಮಾತ್ರ. ರಿಚರ್ಡ್ಸ್ ಮೈದಾ ನಕ್ಕಿಳಿಯುವ ವೇಳೆಗೆ ವೆಸ್ಟ್‌ಇಂಡೀಜಿಗೆ ಕೇವಲ 15 ಓವರ್‌ಗಳಲ್ಲಿ 107 ಓಟ ಬೇಕಾಗಿತ್ತು. ತೀರಾ ಕಷ್ಟದ ಕೆಲಸ ಎನಿಸುತ್ತಿತ್ತು. ಅಷ್ಟೇ ಅಲ್ಲ ರಿಚರ್ಡ್ಸ್ ಹಣೆಗೆ ಗಾಯವಾಗಿದ್ದರಿಂದ ನಾಲ್ಕು ಹೊಲಿಗೆ ಹಾಕಲಾಗಿತ್ತು. ಅವರ ಎಡ ಹೆಗಲಿಗೆ, ಬಲ ಮುಂಗೈಗೆ ಗಾಯವಾಗಿತ್ತು. ಆದರೆ ರಿಚರ್ಡ್ಸ್ ಔಟಾಗಿ ಹೊರ ನಡೆಯುವ ವೇಳೆಗೆ ವಿಂಡೀಜ್ ಗೆಲುವಿನ ಬಾಗಿಲಿಗೆ ಬಂದು ನಿಂತಿತ್ತು. ಕೇವಲ 36 ಎಸೆತಗಳಲ್ಲಿ ರಿಚರ್ಡ್ಸ್ ನಾಲ್ಕು ಸಿಕ್ಸರ್, ಐದು ಬೌಂಡರಿಗಳುಳ್ಳ 61 ಓಟ ಹೊಡೆದರು. ವೆಂಕಟ ರಾಘವನ್‌ರ ಮೂರನೆಯ ಎಸೆತವನ್ನು ಮಿಡ್‌ವಿಕೆಟ್ ಮೇಲೆ ಸಿಕ್ಸರ್‌ಗೆತ್ತಿ ರಿಚರ್ಡ್ಸ್ ಖಾತೆ ಆರಂಭಿಸಿದರು. ಭಾರತದ ಬೌಲರ್‌ಗಳಿಗೆ ಎಲ್ಲಿ ಬೌಲ್ ಮಾಡಬೇಕೆಂಬುದೇ ತಿಳಿಯಲಿಲ್ಲ. ಲೆಗ್‌ಸ್ಟಂಪ್‌ನ ಆಚೆ ಬಿದ್ದ ಕಪಿಲ್‌ರ ಒಂದು ಶಾರ್ಟ್ ಪಿಚ್ ಎಸೆತವನ್ನಂತೂ ರಿಚರ್ಡ್ಸ್ ಹಿಂಗಾಲ ಮೇಲೆ ನಿಂತು ಎಕ್ಸ್‌ಟ್ರಾ ಕವರ್ ಬೌಂಡರಿಗಟ್ಟಿ ದರು! ಅಂದು ಭಾರತದ, ಅಷ್ಟೇ ಏಕೆ ಬಹುಶಃ ವಿಶ್ವದ ಯಾವ ಬೌಲರ್‌ನಿಗೂ ರಿಚರ್ಡ್ಸ್‌ರನ್ನು ತಡೆಯಲಾಗುತ್ತಿರಲಿಲ್ಲ. ಜಮೈಕಾದಲ್ಲಿ ಮೊದ ಲಿನ ತಮ್ಮ ಅನೇಕ ಟೆಸ್ಟ್‌ಗಳಲ್ಲಿ ಅಷ್ಟೇನೂ ಚೆನ್ನಾಗಿ ಆಡಿರದಿದ್ದ ರಿಚರ್ಡ್ಸ್ ಈ ಬಾರಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ತಕ್ಕ ಸಂದರ್ಭವನ್ನೇ ಆಯ್ದಿದ್ದರು. ಒಮ್ಮೆ ಅವರು ಹತೋಟಿ ಸಾಧಿಸಿದರೆ ಮುಗಿ ಯಿತು. ಬೌಲರ್‌ಗಳ ಅಸಹಾಯಕತೆ ಆ ದೇವ ರಿಗೇ ಪ್ರೀತಿ! ಇಲ್ಲಿ ಒಮ್ಮೆ ಕಪಿಲ್ ದೇವ್ ಹೇಳಿದ ಮಾತು ನೆನಪಾಗುತ್ತದೆ. 1983ರಲ್ಲಿ ದಿಲ್ಲಿ ಟೆಸ್ಟ್‌ನಲ್ಲಿ ರಿಚರ್ಡ್ಸ್ ಅರ್ಧಶತಕ ಗಳಿಸಿ ಔಟಾದ ನಂತರ ಕಪಿಲ್ ಹೇಳಿದ್ದರು. "ರಿಚರ್ಡ್ಸ್‌ರನ್ನು ಬೇಗನೆ ಔಟ್ ಮಾಡುತ್ತೇವೆ ಎಂದುಕೊಳ್ಳುವುದ ರಲ್ಲಿ ಅರ್ಥವಿಲ್ಲ. ಅವರಿಗೆ 70-80 ಓಟ ಗಳಿಸಲು ಬಿಡಬೇಕು. ಆತ ಮಿಂಚಿನ ವೇಗದಲ್ಲಿ ಅಷ್ಟು ಓಟ ಗಳಿಸುತ್ತಾರೆ. ನಂತರ ಅವರಿಗೇ ಈ ಓಟ ಗಳಿಕೆ ಸ್ವಲ್ಪ ಬೇಸರ ತರಿಸುತ್ತದೆ. ಆಗ ಆತ ಕೊಂಚ ಹಿಡಿತ ಸಡಿಲಿಸಿ ತಪ್ಪು ಹೊಡೆತ ಹೊಡೆ ಯಬಹುದು. ಅದೇ ಅವರನ್ನು ಔಟ್ ಮಾಡುವ ವಿಧಾನ!"

ಕಪಿಲ್‌ರ ಹೊಗಳಿಕೆ ಸ್ವಲ್ಪ ಹೆಚ್ಚೆನಿಸಬಹುದು. ಆದರೆ ಕಪಿಲ್‌ರಂಥ ಬೌಲರ್‌ನಿಂದ ಈ ರೀತಿಯ ಪ್ರತಿಕ್ರಿಯೆ ಹೊರಡಿಸಬೇಕೆಂದರೆ ರಿಚರ್ಡ್ಸ್‌ರ ಸಾಮರ್ಥ್ಯ ಎಷ್ಟು ಅಗಾಧ ಎಂಬುದರ ಅರಿವಾ ಗುತ್ತದೆ. ಗಾವಸ್ಕರ, ಬಾಯ್ಕಾಟ್, ಬಾರ್ಡರ್ ಜಗುಟಿನಿಂದ ನಿಂತು ಓಟ ಗಳಿಸುತ್ತಾರೆ. ಅವರನ್ನು ಔಟ್ ಮಾಡುವುದು ತೀರ ಕಷ್ಟದ ಕೆಲಸ ನಿಜ. ಆದರೆ ಅವರೆಂದೂ ರಿಚರ್ಡ್ಸ್‌ರಂತೆ ಬೌಲರ್‌ನಲ್ಲಿ ಸ್ವತಃ ಅವನ ಸಾಮರ್ಥ್ಯದ ಬಗ್ಗೆ ಕೀಳರಿಮೆ, ಅಸಹಾಯಕತೆ ಹುಟ್ಟಿಸಲಿಲ್ಲ. ಹಾಗೆಂದು ರಿಚರ್ಡ್ಸ್ ರಕ್ಷಣಾತ್ಮಕವಾಗಿ ಆಡುವುದಿಲ್ಲವೆಂದಲ್ಲ. ಅಗತ್ಯವಿದ್ದಾಗ ಆಡುತ್ತಾರೆ. ಆದರೆ 'ಚೆಂಡು ಇರು ವುದೇ ಚಚ್ಚುವುದಕ್ಕಾಗಿ' ಎಂಬುದು ಅವರ ಮೂಲಭೂತ ತತ್ವ. ಇದು ವೆಸ್ಟ್‌ಇಂಡೀಜ್ ಆಟ ಗಾರರ ಮೂಲ ತತ್ವವೂ ಹೌದು. ಬಹುಶಃ ಇದಕ್ಕೆ

ಅವರು ಆಡಿ ಬೆಳೆದ ಪರಿಸರ ಕಾರಣವಿರಬಹುದು.

ಕೆರಿಬಿಯನ್ ದ್ವೀಪ ಸಮೂಹಗಳನ್ನೊಳಗೊಂಡ ವೆಸ್ಟ್‌ಇಂಡೀಜ್ ತಂಡ ಇಂದು ಕ್ರಿಕೆಟ್ ಜಗತ್ತಿನ ಅತಿ ಬಲಾಢ್ಯ ತಂಡಗಳಲ್ಲೊಂದು ನಿಜ. ಹಾಗೆಂದು ಈ ಬಡ ಕೆರಿಬಿಯನ್ ದ್ವೀಪಗಳಲ್ಲಿ ಹುಡುಗರಿಗೆ ಕ್ರಿಕೆಟ್ ಆಡಲು ವಿಶೇಷ ಸೌಕರ್ಯಗಳೇನೂ ಇಲ್ಲ. ಪಂದ್ಯಗಳನ್ನಾಡಲು ಎಷ್ಟೋ ಬಾರಿ ಮೈದಾನಗಳೂ ಸಿಗುವುದಿಲ್ಲ. ಸ್ವಲ್ಪ ದೊಡ್ಡದಾದ ಖಾಲಿ ಜಾಗ ಸಿಕ್ಕರೂ ಅಲ್ಲಿ ಇಂಚುಗಟ್ಟಲೆ ಹುಲ್ಲು ಬೆಳೆದಿರುತ್ತದೆ. 'ಪಂದ್ಯ'ದ ಆರಂಭಕ್ಕೆ ಮುನ್ನ ಎರಡೂ ತಂಡಗಳ ಐದಾರು ಜನ ಆಟಗಾರರು ಆ ಹುಲ್ಲು ಕಿತ್ತಬೇಕು. ಉರಿಬಿಸಿಲಿನಲ್ಲಿ ಎರಡು-ಮೂರು ತಾಸು ದುಡಿದ ನಂತರ 'ಪಿಚ್' ಸ್ವಲ್ಪಮಟ್ಟಿಗೆ ಸಿದ್ಧವಾಗುತ್ತದೆ. ಆದರೂ ಅಲ್ಲಲ್ಲಿ ಎಷ್ಟೋ ಬಾರಿ 'ಗುಡ್‌ಲೆಂಗ್ತ್' ಎಸೆತ ಬೀಳಬಹುದಾದ ಜಾಗದಲ್ಲಿ ತಗ್ಗು-ದಿನ್ನೆ ಉಳಿದಿರುತ್ತವೆ. ಇಂಥ ಪರಿಸ್ಥಿತಿಯಲ್ಲಿ ತೀರಾ ರಕ್ಷಣಾತ್ಮಕವಾಗಿ ಆಡುವುದು ಹುಚ್ಚುತನ. ಏಕೆಂದರೆ ಆ ಕೆಟ್ಟ ಪಿಚ್‌ನ ಮೇಲೆ ಎಂಥ ಸಾಮಾನ್ಯ ಎಸೆತವೂ ಅಪಾಯಕರವಾಗಿ ಅಭೇದ್ಯವೆನಿಸಿದ ರಕ್ಷಣೆಯನ್ನು ಭೇದಿಸಬಹುದು. ಆದ್ದರಿಂದ ಹೇಗಾದರೂ ಚೆಂಡನ್ನು ಬಿರುಸಿನಿಂದ ಹೊಡೆದು ಬೌಂಡರಿಗಟ್ಟುವುದೇ ಇಲ್ಲಿ ಜಾಣತನದ ಕೆಲಸ. ಸ್ಪಿನರ್ ಬೌಲ್ ಮಾಡುತ್ತಿದ್ದರೆ, ಚೆಂಡು ನೆಲಕ್ಕೆ ಬಿದ್ದು ತಿರುಗುವ ಮೊದಲೇ ಅದನ್ನು ಹೊಡೆಯುವುದು ಹೆಚ್ಚು ಉಚಿತ. ಈ ಗುಣ ಇಂದಿಗೂ ಬಹುತೇಕ ವೆಸ್ಟ್‌ಇಂಡಿಯನ್ ಬ್ಯಾಟ್ಸಮನ್‌ರಲ್ಲಿ ಕಂಡುಬರುತ್ತದೆ. ಅವರ ಹುಕ್ ಶಾಟ್, ಅಡ್ಡ ಬ್ಯಾಟಿನ ಹೊಡೆತಗಳೂ ಈ ಪರಿಸರದ ಬಳುವಳಿಗಳೇ.

ವೆಸ್ಟ್‌ಇಂಡೀಜಿನಲ್ಲಿ ಬೀಚ್ ಕ್ರಿಕೆಟ್ ಸಹ ಬಹಳ ಜನಪ್ರಿಯವಾದುದು. ಈ ಆಟದಲ್ಲಿ ಬೀಚ್‌ನಲ್ಲಿ ಒಂಬತ್ತು ಸ್ಟಂಪ್‌ಗಳು ಸಾಲಾಗಿ ನಿಲ್ಲಬಹುದಾದಷ್ಟು ಜಾಗವನ್ನು ಗೆರೆ ಎಳೆದು ಗುರುತಿಸುತ್ತಾರೆ. ಚೆಂಡು ಆ ಜಾಗವನ್ನು ದಾಟಿ ಹೋಗದಂತೆ ಬ್ಯಾಟ್ಸಮನ್ ಕಾಯ್ದುಕೊಳ್ಳಬೇಕು. ಒಂದು ವೇಳೆ ಚೆಂಡು ಆ ಜಾಗ ದಾಟಿ ಹೋದರೆ ಬ್ಯಾಟ್ಸಮನ್ ಔಟ್ ಎಂದು ತೀರ್ಮಾನಿಸಲ್ಪಡುತ್ತಾನೆ. ಇಲ್ಲಿ ಬ್ಯಾಟ್ಸಮನ್‌ನ ಸುತ್ತ ಹತ್ತಾರು ಜನ ಫೀಲ್ಡರುಗಳಿರುವುದರಿಂದ ರಕ್ಷಣಾತ್ಮಕ ಆಟಕ್ಕೆ ಸ್ಥಾನವಿಲ್ಲ. ಚೆಂಡನ್ನು ನೇರವಾಗಿ ಡ್ರೈವ್ ಮಾಡಬೇಕು, ಇಲ್ಲದಿದ್ದರೆ ಫೀಲ್ಡರುಗಳ ತಲೆಯ ಮೇಲಿಂದ ಹುಕ್ ಮಾಡಬೇಕು.

ಲಾಯ್ಡ್ V/S ರಿಚರ್ಡ್ಸ್

ರಿಚರ್ಡ್ಸ್ ತಮ್ಮ ಕೊನೆಯ ಟೆಸ್ಟ್‌ನಲ್ಲಿ ಸೋಲು ಅನುಭವಿಸಿ ವಿದಾಯ ಹೇಳಿದರು. ಕಾಕತಾಳೀಯವೆಂಬಂತೆ ಅವರ 'ಗುರು' ಕ್ಲೈವ್ ಲಾಯ್ಡ್ ಸಹ ಆರು ವರ್ಷಗಳ ಹಿಂದೆ ಸಿಡ್ನಿಯಲ್ಲಿ ತಮ್ಮ ಕೊನೆಯ ಟೆಸ್ಟ್‌ನಲ್ಲಿ ಆಸ್ಟ್ರೇಲಿಯದ ವಿರುದ್ಧ ಇನ್ನಿಂಗ್ಸ್ ಸೋಲುಂಡಿದ್ದರು. ಇಬ್ಬರೂ ತಮ್ಮ ಕೊನೆಯ ಇನ್ನಿಂಗ್ಸ್‌ನಲ್ಲಿ ತಂಡದ ಸೋಲು ತಪ್ಪಿಸಲು ಉತ್ತಮ ಹೋರಾಟ ನಡೆಸಿದರು. ರಿಚರ್ಡ್ಸ್ ಓವಲ್‌ನಲ್ಲಿ 60 ಓಟ ಬಾರಿಸಿದರೆ, ಲಾಯ್ಡ್ ಬಿರುಸಿನ 72 ಓಟ ಗಳಿಸಿದ್ದರು.

ಸೋಲು ಅವರಿಗೆ ನಿರಾಶೆಯನ್ನುಂಟು ಮಾಡಿದರೂ, ರಿಚರ್ಡ್ಸ್ "ಕ್ರಿಕೆಟ್‌ನಲ್ಲಿ ಇದೆಲ್ಲ ಸಾಮಾನ್ಯ. ಕೆಲ ಪಂದ್ಯಗಳನ್ನು ಗೆಲ್ಲುತ್ತೇವೆ, ಕೆಲವನ್ನು ಸೋಲುತ್ತೇವೆ" ಎಂದು ತತ್ವಜ್ಞಾನದ ಮಾತನ್ನಾಡಿದರು. ಲಾಯ್ಡ್ ಸಹ ಆಗ ಇದೆ ಮಾತು ಹೇಳಿದ್ದರು.

ಲಾಯ್ಡ್ ತಮ್ಮ ಕೊನೆಯ ಒಂದು ದಿನದ ಪಂದ್ಯದಲ್ಲೂ ಸೋಲುಂಡಿದ್ದರು. 1985 ರ ಮಾರ್ಚ್‌ನಲ್ಲಿ ವಿಶ್ವ ಸರಣಿ ಕಪ್ ಚಾಂಪಿಯನ್‌ಶಿಪ್‌ನ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ವೆಸ್ಟ್ ಇಂಡೀಜಿನ ವಿರುದ್ಧ ಅನಿರೀಕ್ಷಿತ ಜಯಗಳಿಸಿ ಫೈನಲ್ ಪ್ರವೇಶಿಸಿತ್ತು. ಮೂರನೇ ಸ್ಥಾನಕ್ಕಾಗಿ ನ್ಯೂಝಿಲಂಡ್ ವಿರುದ್ಧ ನಡೆದ ಪಂದ್ಯದಲ್ಲಿ ಲಾಯ್ಡ್ ಆಡಲಿಲ್ಲ. 1991-92 ರಲ್ಲಿ ನಾಲ್ಕನೇ ವಿಶ್ವ ಕಪ್ ಆಸ್ಟ್ರೇಲಿಯ ಮತ್ತು ನ್ಯೂಜಿಲಂಡ್‌ಗಳಲ್ಲಿ ನಡೆಯಲಿದೆ. ಲಾಯ್ಡ್ ಕೊಡಲಾಗದ ಕಾಣಿಕೆಯನ್ನು ರಿಚರ್ಡ್ಸ್‌ಗೆ ಕೊಟ್ಟು ಕಳಿಸಲು ವೆಸ್ಟ್ ಇಂಡಿಯನ್ ಆಟಗಾರರು ಕಾತರರಾಗಿರಬೇಕು. ಅವರು ಯಶಸ್ವಿಯಾಗಲೆಂಬ ಆಸೆ ಎಲ್ಲರದು.

ಸುಂದರ ಬೀಚುಗಳಿಗೆ ಖ್ಯಾತವಾದ ಆ್ಯಂಟಿಗುವಾ ದ್ವೀಪದಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ರಿಚರ್ಡ್ಸ್ ಇಂಥ ಪರಿಸರದಲ್ಲೇ ಕ್ರಿಕೆಟ್ ಕಲಿತಿದ್ದು. ವೈಶಿಷ್ಟ್ಯವೆಂದರೆ ರಿಚರ್ಡ್ಸ್ ಮೊದಲು ಆಫ್ ಸ್ಪಿನ್ ಬೌಲರ್ ಆಗಲು ಯತ್ನಿಸಿದರು. ಆದರೆ ಬಿರುಗಾಳಿ ವೇಗದ ಬೌಲಿಂಗಿಗೆ ಖ್ಯಾತವಾದ ವೆಸ್ಟ್‌ಇಂಡೀಜನಲ್ಲಿ ಇದು ತಮಗೆ ದಾರಿ ತೋರುವುದಿಲ್ಲ ಎಂದು ಗೊತ್ತಾದಾಗ ಮತ್ತು ಆತ ಬೌಲ್ ಮಾಡುವ ಬದಲು ಚೆಂಡನ್ನು ಎಸೆಯುತ್ತಾನೆ ಎಂಬ ಟೀಕೆ ಬಂದಾಗ ಬ್ಯಾಟಿಂಗಿನತ್ತ ಗಮನಹರಿಸಿದರು.

ತಮ್ಮ 19ನೆಯ ಜನ್ಮದಿನದ ವೇಳೆಗೆ ರಿಚರ್ಡ್ಸ್ ಆಕರ್ಷಕ ಬ್ಯಾಟಿಂಗ್ ಮೂಲಕ ಆ್ಯಂಟಿಗುವಾದಲ್ಲಿ ಬಹಳ ಪ್ರಸಿದ್ಧರಾಗಿದ್ದರು. ಅದೇ ವೇಳೆಗೆ ಅವರು ದುರದೃಷ್ಟವಶಾತ್ ವಿವಾದವೊಂದರಲ್ಲಿ ಸಿಲುಕಿಕೊಂಡು ಎರಡು ವರ್ಷ ಲೀಗ್ ಕ್ರಿಕೆಟ್‌ನಿಂದ ಬಹಿಷ್ಕಾರ ಅನುಭವಿಸಬೇಕಾಯಿತು.

ಅದು 1968-69ರ ಋತುವಿನ ಮೊದಲ ಪಂದ್ಯ. ಆ್ಯಂಟಿಗುವಾ, ಸೇಂಟ್ ಕಿಟ್ಸ್ ವಿರುದ್ಧ ಮೊದಲು ಬ್ಯಾಟಿಂಗ್ ಆರಂಭಿಸಿತು. ಮೊದಲ ವಿಕೆಟ್ ಬಹಳ ಬೇಗನೆ ಬಿದ್ದರೂ ಯಾರೂ ತಲೆಕೆಡಿಸಿಕೊಳ್ಳಲಿಲ್ಲ. ಏಕೆಂದರೆ ಈಗ ಅವರ ನೆಚ್ಚಿನ 'ವಿವಿ' ಕಣಕ್ಕಿಳಿದಿದ್ದ. ಆದರೆ ಅವರು ಖಾತೆ ಆರಂಭಿಸುವ ಮುನ್ನವೇ ಶಾರ್ಟ್ ಲೆಗ್‌ನಲ್ಲಿ ಕ್ಯಾಚಿತ್ತು ಔಟಾದರು. ಪ್ರೇಕ್ಷಕರು ಒಂದು ಕ್ಷಣ ದಂಗು ಬಡಿದವರಂತಾದರು. ಇತ್ತ ರಿಚರ್ಡ್ಸ್ ಅಂಪೈರ್‌ರ ನಿರ್ಣಯ ಪ್ರತಿಭಟಿಸಿ ಚೆಂಡು ಬ್ಯಾಟಿಗೆ ತಗುಲಲೇ ಇಲ್ಲ ಎಂದು ವಾದಿಸಲಾರಂಭಿಸಿದರು. ಪ್ರೇಕ್ಷಕರಲ್ಲಿ ಮಿಂಚು ಸಂಚರಿಸಿದಂತಾಯಿತು. ತಮ್ಮ 'ನೆಚ್ಚಿನ ಹುಡುಗ'ನಿಗೆ ಅನ್ಯಾಯವೆ? ಎಂದಿಗೂ ಇಲ್ಲ. ಸರಿ, ನೂರಾರು ಜನ ಪ್ರೇಕ್ಷಕರು ಮೈದಾನದೊಳಗೆ ನುಗ್ಗಿ ಪಿಚ್ ಆಕ್ರಮಿಸಿಕೊಂಡು ಕುಳಿತರು. ಕ್ಷಣಾರ್ಧದಲ್ಲಿ ಅವರ ಮಧ್ಯ ದೊಡ್ಡ ಹಲಗೆಯೊಂದು ಎದ್ದು ನಿಂತಿತು. ಅದರ ಮೇಲಿದ್ದ ಬರಹ- "ನೋ ವಿವಿ, ನೋ ಮ್ಯಾಚ್ !" (ವಿವಿಗೆ ಆಡಲು ಅವಕಾಶವಿಲ್ಲದಿದ್ದರೆ, ಪಂದ್ಯ ಆಡುವುದೇ ಬೇಡ) ಸಂಘಟಕರಿಗೆ ಇದೊಂದು ದೊಡ್ಡ ತಲೆ ನೋವಾಯಿತು. ಸುಮಾರು ಎರಡು ತಾಸು ಚರ್ಚೆ ನಡೆಸಿ ಅವರು ರಿಚರ್ಡ್ಸ್‌ಗೆ ಮತ್ತೊಮ್ಮೆ ಆಡಲು ಅವಕಾಶ ನೀಡಬೇಕೆಂಬ ನಿರ್ಧಾರಕ್ಕೆ ಬಂದರು. ಎರಡನೆಯ ಬಾರಿ ಕಣಕ್ಕಿಳಿದ ರಿಚರ್ಡ್ಸ್ ಮತ್ತೆ ಖಾತೆ ಆರಂಭಿಸದೇ ಔಟಾದರು. ಎರಡನೆಯ ಇನ್ನಿಂಗ್ಸ್‌ನಲ್ಲೂ ಅವರು ಒಂದೂ ಓಟ ಗಳಿಸಲಿಲ್ಲ. ಕ್ರಿಕೆಟ್ ಇತಿಹಾಸದಲ್ಲಿ ಒಂದು ಪಂದ್ಯದಲ್ಲಿ ಮೂರು ಬಾರಿ ಶೂನ್ಯಕ್ಕೆ ಔಟಾದ ಆಟಗಾರ ನಾನೊಬ್ಬನೇ ಎಂದು ರಿಚರ್ಡ್ಸ್ ಆ ಘಟನೆಯ ಬಗ್ಗೆ ಹಾಸ್ಯಚಟಾಕಿ ಹಾರಿಸುತ್ತಾರೆ. ಆದರೆ ಆಗ ಅದು ಹಾಸ್ಯದ ಮಾತಾಗಿ ಉಳಿಯಲಿಲ್ಲ. ರಿಚರ್ಡ್ಸ್ ಮೊದಲು ಅಂಪೈರ್ ನಿರ್ಣಯ ಪ್ರತಿಭಟಿಸಿ ಗಲಭೆಗೆ ಪ್ರಚೋದನೆ ನೀಡಿದರೆಂದು ಹೇಳಿ ಅವರನ್ನು ಎರಡು ವರ್ಷ ಲೀಗ್ ಕ್ರಿಕೆಟ್‌ನಿಂದ ಬಹಿಷ್ಕರಿಸಲಾಯಿತು.

ಆದರೆ ಯಾವಾಗಲೂ ಆಶಾವಾದಿಯಾದ ರಿಚರ್ಡ್ಸ್ ಈ ಬಹಿಷ್ಕಾರ ಮುಗಿಸಿ ಮತ್ತೆ ಕ್ರಿಕೆಟ್‌ಗೆ ಮರಳಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲಾರಂಭಿಸಿದರು. 1974ರಲ್ಲಿ ಬೆಂಗಳೂರಿನಲ್ಲಿ ಭಾರತದ ವಿರುದ್ಧ ಅವರು ಟೆಸ್ಟ್ ರಂಗಕ್ಕೆ ಪದಾರ್ಪಣೆ ಮಾಡಿದ್ದು ಅಷ್ಟೇನೂ ಶುಭಕಾರಿಯಾಗಿರಲಿಲ್ಲ. ಚಂದ್ರಶೇಖರರ ಗೂಗ್ಲಿ ರಿಚರ್ಡ್ಸ್‌ರ ಬ್ಯಾಟಿಂಗ್‌ನ ಅಡಿಪಾಯವನ್ನೇ ಅಲುಗಿಸಿದಂತೆ ತೋರಿತು. ಎರಡೂ ಇನ್ನಿಂಗ್ಸ್‌ಗಳಲ್ಲೂ ಬಹಳ ಬೇಗನೆ ಔಟಾದರು. ಆದರೆ ನಂತರ ದಿಲ್ಲಿಯಲ್ಲಿ ಎರಡನೇ ಟೆಸ್ಟ್‌ನಲ್ಲಿ ಭರ್ಜರಿ 192 ಓಟ ಹಣೆಯುವ ಮೂಲಕ ವಿಶ್ವದ ಬೌಲರ್‌ಗಳಿಗೆ ಅಪಾಯದ ಮೊದಲ ಸೂಚನೆ ನೀಡಿದರು. ನಂತರ ಆಸ್ಟ್ರೇಲಿಯ ಹಾಗೂ ಇಂಗ್ಲಂಡಿನಲ್ಲಿ ಯಶಸ್ಸು ಅವರನ್ನು ಕೈಬೀಸಿ ಕರೆಯಿತು. ಇಂಗ್ಲಂಡ್ ಸರಣಿಯ ಕೊನೆಗಂತೂ ಕೇವಲ ಒಂಬತ್ತು ತಿಂಗಳುಗಳಲ್ಲಿ ಅವರು ಐದು ಶತಕ, ಎರಡು ದ್ವಿಶತಕಗಳುಳ್ಳ 1700 ಓಟ ಗಳಿಸಿದ್ದರು! ನಂತರ ಪ್ಯಾಕರ್ ಸರಣಿಗೆ ಸೇರಿಕೊಳ್ಳದಿದ್ದರೆ ಅವರ ಟೆಸ್ಟ್ ಅಂಕಿಸಂಖ್ಯೆ ಇನ್ನೆಷ್ಟು ಹೆಚ್ಚಾಗುತ್ತಿತ್ತೋ ಯಾರು ಬಲ್ಲರು?

ಎರಡನೇ ವಿಶ್ವಕಪ್‌ನ ವೇಳೆಗೆ ಪ್ಯಾಕರ್ ಸರಣಿ ಮುಗಿದಿತ್ತು. ವಿಂಡೀಜ್ ತಂಡಕ್ಕೆ ಮರಳಿದ ರಿಚರ್ಡ್ಸ್ ಫೈನಲ್‌ನಲ್ಲಿ ಇಂಗ್ಲಂಡ್ ವಿರುದ್ಧ ಸ್ಮರಣೀಯ 138 ಓಟ ಬಾರಿಸಿ ತಂಡದ ವಿಜಯಕ್ಕೆ ದಾರಿ ತೋರಿದರು. ಮೂರನೇ ವಿಶ್ವಕಪ್‌ನ

ಫೈನಲ್‌ನಲ್ಲಿ ಭಾರತದ ವಿರುದ್ಧವೂ ರಿಚರ್ಡ್ಸ್ ಭಾರಿ ದಾಳಿ ಆರಂಭಿಸಿದ್ದರು. ಅವರು ಅಂದು ಅತಿ ಆತ್ಮವಿಶ್ವಾಸದಿಂದ ಸೊಕ್ಕಿನ ಹೊಡೆತ ಆಡಿ ಔಟಾಗಿರದಿದ್ದರೆ ಬಹುಶಃ ವಿಂಡೀಜ್ ಹ್ಯಾಟ್ರಿಕ್ ಸಾಧಿಸುತ್ತಿತ್ತು.

ಆದರೆ ರಿಚರ್ಡ್ಸ್ ಆಗಿ ಹೋಗಿದ್ದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಮನುಷ್ಯನಲ್ಲ. ಮೊದಲೇ ಹೇಳಿದಂತೆ ಅವರು ಯಾವಾಗಲೂ 'ಪ್ರಾಕ್ಟಿಕಲ್' ಹಾಗೂ ಆಶಾವಾದಿ. ಈ ವಿಷಯದಲ್ಲಿ ಅವರ ಮತ್ತು ಅವರ ಒಳ್ಳೆಯ ಸ್ನೇಹಿತನಾದ ಇಯಾನ್ ಬಾಥಮ್ ಮಧ್ಯೆ ಬಹಳ ಸಾಮ್ಯವಿದೆ. ಬಾಥಮ್ ಸಹ ಬಹಳ ಆಶಾವಾದಿ.

80ರ ದಶಕದ ಕೊನೆಯಾರ್ಧದಲ್ಲಿ ರಿಚರ್ಡ್ಸ್‌ರ ಬ್ಯಾಟಿಂಗ್ ಶಕ್ತಿ ಸ್ವಲ್ಪ ಕ್ಷೀಣಿಸಿತ್ತು. ಜೊತೆಗೆ ತಂಡದ ನಾಯಕ ಹಾಗೂ ಹಿರಿಯ ಆಟಗಾರನೆಂಬ ಒತ್ತಡವೂ ಇತ್ತು. ಆದರೂ ಕೆಲ ಬಾರಿ ಒಳ್ಳೆಯ 'ಮೂಡ್'ನಲ್ಲಿದ್ದಾಗ ಪ್ರೇಕ್ಷಕರಿಗೆ ಹಳೆಯ ದಿನಗಳ ನೆನಪು ಮಾಡಿಕೊಟ್ಟಿದ್ದುಂಟು. (ಉದಾಹರಣೆಗೆ ಇಂಗ್ಲಂಡ್ ವಿರುದ್ಧ 56 ಎಸೆತಗಳಲ್ಲಿ ಬಾರಿಸಿದ ಶತಕ) ಐದಡಿ, ಹತ್ತು ಅಂಗುಲ ಎತ್ತರ, ಬಾಕ್ಸರ್‌ನಂಥ ಮೈಕಟ್ಟುಳ್ಳ ರಿಚರ್ಡ್ಸ್ ಒಬ್ಬ ಅತ್ಯುತ್ತಮ ಫೀಲ್ಡರ್ ಹಾಗೂ ಉಪಯುಕ್ತ ಆಫ್ ಸ್ಪಿನ್ ಬೌಲರ್ ಸಹ ಹೌದು. ಮೊದಲ ವಿಶ್ವಕಪ್‌ನಲ್ಲಿನ ಅವರ ಮಿಂಚಿನ ಗತಿಯ ಫೀಲ್ಡಿಂಗನ್ನು ಕ್ರಿಕೆಟ್ ಪ್ರೇಮಿಗಳು ಇನ್ನೂ ಸ್ಮರಿಸಿಕೊಳ್ಳುತ್ತಾರೆ.


ನಾಯಕತ್ವದ ವಿಷಯ ಬಂದಾಗ ರಿಚರ್ಡ್ಸ್‌ರನ್ನು ಯಾವಾಗಲೂ ಕ್ಲೈವ್ ಲಾಯ್ಡ್‌ರ ಜೊತೆ ತೂಗಿ ನೋಡಲಾಗುತ್ತದೆ. ಲಾಯ್ಡ್‌ರ ಯಶಸ್ಸನ್ನು ನೋಡಿದರೆ ರಿಚರ್ಡ್ಸ್ ಸಾಧಿಸಿದ್ದು ಬಹಳವಲ್ಲ ಎಂದು ಹೇಳಲಾಗುತ್ತದೆ. ಆದರೆ ಲಾಯ್ಡ್ ಮುಂಚೂಣಿಯಲ್ಲಿದ್ದಾಗ ತಂಡದಲ್ಲಿದ್ದ ಆಟಗಾರರ ಗುಣಮಟ್ಟ ರಿಚರ್ಡ್ಸ್ ನಾಯಕತ್ವದ ತಂಡದಲ್ಲಿರಲಿಲ್ಲವೆಂಬುದು ಕಟು ಸತ್ಯ. ಲಾಯ್ಡ್ ನಾಯಕರಾಗಿದ್ದಾಗ ರಿಚರ್ಡ್ಸ್, ಹೇಯ್ನ್ಸ್, ಗ್ರಿನಿಜ್, ಗೋಮ್ಸ್, ಆ್ಯಂಡಿ ರಾಬರ್ಟ್ಸ್, ಹೋಲ್ಡಿಂಗ್, ಗಾರ್ನರ್, ಕ್ರಾಫ್ಟ್, ಮಾರ್ಷಲ್ ಮುಂತಾದವರೆಲ್ಲ ತಮ್ಮ ಪರಮೋಚ್ಚ ಸಾಮರ್ಥ್ಯ ಪ್ರದರ್ಶಿಸುವ ಸ್ಥಿತಿಯಲ್ಲಿದ್ದರು. ರಿಚರ್ಡ್ಸ್ ಮುಂಚೂಣಿಗೆ ಬರುವ ವೇಳೆಗೆ ರಾಬರ್ಟ್ಸ್, ಹೋಲ್ಡಿಂಗ್, ಕ್ರಾಫ್ಟ್, ಗಾರ್ನರ್‌ರ ಯುಗ ಹೆಚ್ಚು ಕಡಿಮೆ ಮುಗಿದೇ ಹೋಗಿತ್ತು. ಮಾರ್ಷಲ್, ಗ್ರಿನಿಜ್, ಗೋಮ್ಸ್ ಹಾಗೂ ಸ್ವತಃ ರಿಚರ್ಡ್ಸ್‌ರ ಆಟ ಇಳಿಮುಖವಾಗುತ್ತ ನಡೆದಿತ್ತು. ಹೊಸಬರಾರೂ ತಮ್ಮ ಹಿಂದಿನವರ ಸ್ಥಾನ ತುಂಬುವಲ್ಲಿ ಹೆಚ್ಚಿನ ಯಶಸ್ಸು ಕಾಣಲಿಲ್ಲ. (ಈ ಪರಿಸ್ಥಿತಿ ಇಂದಿಗೂ ಇದೆ.) 1987ರ ವಿಶ್ವಕಪ್ ಸೋಲು, ನಂತರ ಇಂಗ್ಲಂಡ್, ಆಸ್ಟ್ರೇಲಿಯ ತಂಡಗಳ ಕೈಯಲ್ಲಿ ಟೆಸ್ಟ್ ಸೋಲು ಅನುಭವಿಸಿದ್ದಕ್ಕೆ ಇದೇ ಕಾರಣ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಆದರೂ ರಿಚರ್ಡ್ಸ್ ನಾಯಕತ್ವದಲ್ಲಿ ವೆಸ್ಟ್‌ಇಂಡೀಜ್ ಟೆಸ್ಟ್ ಸರಣಿ ಸೋಲು ಅನುಭವಿಸಲಿಲ್ಲ ಎಂಬುದು ಅವರಲ್ಲಿದ್ದ ನಾಯಕತ್ವದ ಸಾಮರ್ಥ್ಯಕ್ಕೆ ಸಾಕ್ಷಿ.

ಈಗ ರಿಚರ್ಡ್ಸ್ ಟೆಸ್ಟ್ ರಂಗದಿಂದ ನಿವೃತ್ತರಾಗಿದ್ದರೂ ಮುಂದಿನ ವರ್ಷಾರಂಭದಲ್ಲಿ ನ್ಯೂಝಿಲಂಡ್ ಹಾಗೂ ಆಸ್ಟ್ರೇಲಿಯಗಳಲ್ಲಿ ನಡೆಯಲಿರುವ ಐದನೆಯ ವಿಶ್ವಕಪ್‌ನಲ್ಲಿ ವೆಸ್ಟ್‌ಇಂಡೀಜಿನ ನಾಯಕತ್ವದ ಭಾರ ಹೊರಲಿದ್ದಾರೆ. ಅಲ್ಲಿ ವೆಸ್ಟ್‌ಇಂಡೀಜ್ ವಿಶ್ವಕಪ್ ಗೆದ್ದರೆ ರಿಚರ್ಡ್ಸ್‌ರನ್ನು ಅತ್ಯಂತ ಸೂಕ್ತ ರೀತಿಯಲ್ಲಿ ಬೀಳ್ಕೊಟ್ಟಂತಾಗುತ್ತದೆ.

ನಿವೃತ್ತಿಯ ನಂತರದ ಜೀವನದ ಬಗ್ಗೆ ರಿಚರ್ಡ್ಸ್ ಇನ್ನೂ ಯೋಚಿಸಿದಂತಿಲ್ಲ. ಆದರೆ ಆ್ಯಂಟಿಗುವಾದಲ್ಲಿ ಅವರು ಪ್ರಧಾನಿಯ ನಂತರ ಬಹುಶಃ ಅತ್ಯಂತ ಜನಪ್ರಿಯ ವ್ಯಕ್ತಿ. ಬಹಳ ಸಹೃದಯಿಯೂ ಹೌದು. ಆ್ಯಂಟಿಗುವಾದಲ್ಲಿ ಅವರ ಮನೆಬಾಗಿಲು ಯಾವಾಗಲೂ ಅತಿಥಿಗಳಿಗೆ ತೆರೆದಿಡಲ್ಪಟ್ಟಿರುತ್ತದೆ. ಬಹುಶಃ ಇನ್ನೊಂದು ದಶಕದ ಒಳಗಾಗಿ ರಿಚರ್ಡ್ಸ್ ಆ್ಯಂಟಿಗುವಾ ರಾಜಕಾರಣದಲ್ಲಿ ಒಬ್ಬ ಪ್ರಮುಖ ವ್ಯಕ್ತಿಯಾದರೆ ಆಶ್ಚರ್ಯವೇನಿಲ್ಲ. ಕೆಲ ವರ್ಷಗಳ ಹಿಂದೆ ದಕ್ಷಿಣ ಆಫ್ರಿಕ 10 ಲಕ್ಷ ಡಾಲರ್‌ಗಳ ಆಮಿಷವೊಡ್ಡಿದಾಗ ರಿಚರ್ಡ್ಸ್ ಅದನ್ನು ಒಂದೇ ಮಾತಿನಲ್ಲಿ ನಿರಾಕರಿಸಿದ್ದು ಅವರನ್ನು ಕೆರಿಬಿಯನ್‌ರ ಕಣ್ಣಲ್ಲಿ ಹೊಸ ಎತ್ತರಕ್ಕೇರಿಸಿದೆ. ಕೆಲ ವರ್ಷಗಳ ಹಿಂದೆ ಖ್ಯಾತ ಕ್ರಿಕೆಟ್ ಲೇಖಕ ರಾಬಿನ್ ಮಾರ್ಲರ್ ಹೇಳಿದಂತೆ ಮುಂದೊಂದು ದಿನ ಇಂಗ್ಲಂಡಿನ ರಾಣಿ "ಎದ್ದೇಳಿ ಸರ್. ವಿವಿಯನ್" ಎಂದು ಅಪ್ಪಣೆ ಕೊಡಿಸಿದರೆ ಯಾರಲ್ಲೂ ಅದರ ಬಗ್ಗೆ ಭಿನ್ನಾಭಿಪ್ರಾಯವಿರಲಿಕ್ಕಿಲ್ಲ.

ಪುಸ್ತಕ ವಿಭಾಗ

BY AIR MAIL
PAR AVION
हवाई डाक से



ಪ್ರೇಯಸಿಗೆ ಪತ್ರಗಳು

ಕೃಷ್ಣಾನಂದ ಕಾಮತ

ಸಂಗ್ರಹ: ಶ್ರೀ. ಹಾ., ಪುಣೆ

ಪ್ರೇಯಸಿಗೆ ಪತ್ರಗಳು

> ಡಾ. ಕೃಷ್ಣಾನಂದ ಕಾಮತರು
> ತಮ್ಮ ಪತ್ನಿ ಡಾ. ಜ್ಯೋತ್ಸ್ನಾ ಅವರಿಗೆ
> ಬರೆದ ಪತ್ರಗಳು.

ಈ ಪತ್ರಗಳನ್ನು ಬರೆದ ಡಾ. ಕೃಷ್ಣಾನಂದ ಕಾಮತರು ಖ್ಯಾತ ಲೇಖಕರು. ಕಲಾವಿಚಾರ, ಪ್ರಾಣಿ ಪ್ರಪಂಚ, ಮುಖ್ಯವಾಗಿ ವಿವಿಧ ಪ್ರದೇಶಗಳಲ್ಲಿಯ ಜನ ಜೀವನ ಅವರ ಲೇಖನ ವಿಷಯಗಳು. ಇಂಥವೇ ಅಸಾಂಪ್ರದಾಯಕ ಸಾಹಿತ್ಯ - ಈ ಪತ್ರಗಳು. ಅವಕ್ಕೆ ಗಟ್ಟಿಯಾದ ತಳಹದಿಯೆಂದರೆ, ಅವರ ಪ್ರವಾಸ ಪ್ರಿಯತೆ.

ಇಲ್ಲಿಯ ಪ್ರೇಯಸಿ-ಪತ್ನಿ ಇನ್ನಾರೂ ಅಲ್ಲ, ಬೆಂಗಳೂರು ಆಕಾಶವಾಣಿಯ ನಿರ್ದೇಶಕಿ ಡಾ.ಜ್ಯೋತ್ಸ್ನಾ ಕಾಮತರು. ಅವರೂ ಲೇಖನ ಕಾರ್ಯದಲ್ಲಿ ಖ್ಯಾತನಾಮರು.

ಅವರದು 'ಪತ್ರ ಸಂಸಾರ'. ಎಂದರೆ ಕೃಷ್ಣಾನಂದರ ವಾಸ, ರಾಜಸ್ಥಾನದ ಜೋಬನೇರ, ಬಂಗಾಲದ ಪ್ಲಾಸಿ ಮುಂತಾದ ಕಡೆಗಳಲ್ಲಿ; ಪತ್ನಿಯದು ಧಾರವಾಡ, ಜಯಪುರ, ಮೈಸೂರುಗಳಲ್ಲಿ. ಹೀಗಾಗಿ ಕೃಷ್ಣಾನಂದರು ನಿಯಮಿತವಾಗಿ ಪತ್ರ ಬರೆಯುತ್ತಿದ್ದರು. ಅವುಗಳಲ್ಲಿ ಬಂದ ವಿಷಯ ವೈವಿಧ್ಯ, ವ್ಯಂಗ್ಯ-ವಿನೋದಗಳಿಂದ ಕೂಡಿದ ಮಂಡನೆ ಅವಕ್ಕೆ ಸಾಹಿತ್ಯಿಕ ಮೌಲ್ಯವನ್ನು ತಂದುಕೊಟ್ಟಿವೆ.

ಆದರೆ ಈ ಪತ್ರಗಳಲ್ಲಿ ಪ್ರೇಮಸಲ್ಲಾಪಕ್ಕಿಂತ, ಅವರ ಜೀವನ ದೃಷ್ಟಿಕೋನ ನಮ್ಮನ್ನು ವಿಶೇಷವಾಗಿ ಸೆಳೆಯುತ್ತದೆ. ಮೇಲು ನೋಟಕ್ಕೆ ಅದು ಸಾಮಾನ್ಯವೆಂದು ಕಂಡರೂ, ಯಾವುದೇ ಧ್ಯೇಯವನ್ನು ಕೃತಿಯಲ್ಲಿ ತರಲು ಅದರ ಬಗ್ಗೆ ನಮ್ಮ ನಿಲುವು ನಿಚ್ಚಳವಾಗಿರಬೇಕು. ಅದರ ಅನುಷ್ಠಾನದಲ್ಲಿ ಪ್ರಾಮಾಣಿಕ ಹಾಗೂ ನಿರಂತರ ಪ್ರಯತ್ನ ಇರಬೇಕು. ಅಂತೂ ನಮ್ಮಲ್ಲಿ ವಿಚಾರಪ್ರಚೋದನೆ ಮಾಡಬಲ್ಲ, ಅಲ್ಲಲ್ಲಿ ವಿನೋದ-ವ್ಯಂಗ್ಯಗಳಿಂದ ಕಚಗುಳಿ

ಜೋಬನೇರ, 17-12-1965

ಪ್ರಿಯ ಬಿಸಿಲೇ,

ರಸಿಕರು ಪ್ರೇಯಸಿಗೆ ನಲ್ಲೆ, ಪ್ರಿಯತಮೆ, ಮನದನ್ನೆ, ಚಿನ್ನಾ, ಪ್ರಾಣಪ್ರಿಯೆ, ಹೃದಯೇಶ್ವರಿ ಎಂದೆಲ್ಲಾ ಸಂಭೋಧಿಸುತ್ತಿರಬಹುದು. ಬೆಳದಿಂಗಳು ಪ್ರೇಮದ ಸಂಕೇತವಾಗಿದ್ದಿರಬಹುದು. ಬಿಸಿಲೇ ಎಂದು ಕರೆಯುವುದರಲ್ಲಿ ಏನರ್ಥ? ಎಂದು ಹುಬ್ಬೇರಿಸಿದೆಯಾ? ಕಾರಣ ಇಷ್ಟೇ. ಜೋಬನೇರದಲ್ಲಿ ಮೈಕೊರೆಯುವ ಚಳಿ, ಇಬ್ಬನಿ, ಇಂಥ ಪರಿಸರದಲ್ಲಿ ನನ್ನ ಜೀವನದ ನಸೆಯಾಗಿ ಬರಲಿರುವ ನೀನು ನನ್ನ ಪಾಲಿಗೆ ಬಿಸಿಲೇ!

ನಮ್ಮ ವಿವಾಹದ ನಿಶ್ಚಿತಾರ್ಥದ ವೈಖರಿ ವಿಶಿಷ್ಟವಾದದ್ದೆನ್ನಬೇಕು. ಪಾಶ್ಚಿಮಾತ್ಯರು ಒಬ್ಬರನ್ನೊಬ್ಬರು ಚೆನ್ನಾಗಿ ಅರಿತು, ಸಹಜೀವನವನ್ನೂ ನಡೆಸಿ ಕೊನೆಗೊಮ್ಮೆ ಬೆರಳಿಗೆ ಉಂಗುರ ತೊಡಿಸಿ ಮದುವೆಗೆ ನಾಂದಿ ಹಾಕುತ್ತಾರೆ. ಹಳಬರು, ಒಳ್ಳೇ ದಿನ ನೋಡಿ, ಕನ್ಯೆಯ ಮನೆಗೆ ಆಗಮಿಸಿ, ಸಿಹಿ ತಿಂದು ವಧು-ವರರಿಗೆ ಆರತಿ ಬೆಳಗಿ, ಉಡುಗೊರೆ ಕೊಟ್ಟು ಪರಸ್ಪರ ಪರಿಚಯದ ಏರ್ಪಾಡು ಮಾಡುತ್ತಿದ್ದರು. ಆಧುನಿಕರೆನಿಸಿಕೊಂಡವರು ವಿವಾಹ ಪೂರ್ವದಲ್ಲೇ ಮೋಜಾಗಿರಲು ಯಾವ ಆಕ್ಷೇಪಣೆಯನ್ನೂ ಎತ್ತುವುದಿಲ್ಲ. ಅದೇ ನಾವಿಬ್ಬರೂ ಹಿಂದಿನ ಕಾಲದವರಿಗಿಂತ ಹಳಬರೆಂದು ತೋರುತ್ತದೆ! ಮದುಮಗ ರಾಜಸ್ತಾನದ ಪುಟ್ಟ ಹಳ್ಳಿಯಾದ ಜೋಬನೇರದಲ್ಲಿ; ಮದುಮಗಳು ಕನ್ನಡ ಗಂಡುಮೆಟ್ಟಿನ ಸ್ಥಳವಾದ ಧಾರವಾಡದಲ್ಲಿ. ಕನ್ಯಾಪಿತರು ರಾಯಚೂರಿನಲ್ಲಿ. ನಮ್ಮಿಬ್ಬರ ಉಪಸ್ಥಿತಿಯಿಲ್ಲದೇ ವಿವಾಹದ ನಿಶ್ಚಯ ತಾಂಬೂಲ ನಡೆದಿದ್ದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ! ಯಾರೊಬ್ಬರೂ ನಿನಗೆ ಹೂ ಮುಡಿಸಲಿಲ್ಲ, ಉಡುಗೊರೆ ಕೊಡಲಿಲ್ಲ. ನನಗಾರೂ ಉಂಗುರ ತೊಡಿಸಲಿಲ್ಲ. ಇಷ್ಟಾದರೂ ಇದು ನಮ್ಮಿಬ್ಬರ

ಈ ಪತ್ರಗಳನ್ನು ಕುರಿತು:

ಬರೆದ ಪ್ರತಿಪತ್ರದಲ್ಲಿಯೂ ಅಚ್ಚುಕಟ್ಟುತನ, ಶಿಸ್ತುಗಳು ಒಡೆದು ಕಾಣುತ್ತಿದ್ದವು. 'ತ್ವರಿತ ಅಂಚೆ', ಸಂಪೂರ್ಣ ವಿಳಾಸ, ಪಿನ್‌ಕೋಡ್ ತಪ್ಪದೆ ಬರೆಯುತ್ತಾರಲ್ಲದೆ ಮೊಟಕು ಮಾಡಲು ಯತ್ನಿಸುವುದೇ ಇಲ್ಲ. ಬರೆದ ಪತ್ರಗಳು ಅಂಚೆಯಲ್ಲಿ ಕಳೆದುಹೋದರೆ ಕೂಡಲೇ ತಿಳಿಸಬೇಕೆಂದು ಅನುಕ್ರಮ ನಂಬರುಗಳನ್ನು ಸೇರಿಸಿರುತ್ತಾರೆ. ಕಾಣೆಯಾದ ಪತ್ರಗಳನ್ನು ಇನ್ನೊಮ್ಮೆ ಶಬ್ದಶಃ ಬರೆಯುವಂಥ ಅಗಾಧ ಸ್ಮರಣಶಕ್ತಿ ಅವರದು. ಬಂದ ಪತ್ರಗಳನ್ನು ಅಷ್ಟಾವಕ್ರವಾಗಿ ಹರಿಯಬಾರದು, ಕವರನ್ನು ನೀಟಾಗಿ ಕತ್ತರಿಸಲು ಆಜ್ಞೆಯಿತ್ತರಲ್ಲದೇ ಕತ್ತರಿಯೊಂದನ್ನು ಇದಕ್ಕಾಗಿಯೇ ಖರೀದಿಸಿ ಕಾಣಿಕೆಯಾಗಿ ಇತ್ತರು... ಜೊತೆಯಲ್ಲಿದ್ದಾಗ ಮಿತಭಾಷಿಯಾಗಿದ್ದವರು ಪತ್ರಗಳಲ್ಲಿ ತುಂಬಾ ವಾಚಾಳಿ! ಸರಳ ರೇಖೆಯಲ್ಲಿ ಮೂಡಿಸಿದ ಒಂದೇ ಅಳತೆಯ ಚಿಕ್ಕ ಅಕ್ಷರಗಳನ್ನು ಒಂದಿಷ್ಟೂ ಕಾಟು ಹಾಕದೇ ಪುಟದುದ್ದಕ್ಕೂ ಬರೆಯುತ್ತಿದ್ದರು.

ಕಾಮತರು ಬರೆಯದ ವಿಷಯವಿರಲಿಲ್ಲ. ಅಸಾಮಾನ್ಯ ಜನಸಾಮಾನ್ಯರು ಭೇಟಿಮಾಡಿದ ವಿಶೇಷ ವ್ಯಕ್ತಿ, ಓದಿದ ಪುಸ್ತಕ, ಕೇಳಿದ ಸಂಗೀತ, ಪ್ರದೇಶ ಪರಿಚಯ, ಜನಜೀವನ, ಆದರ್ಶಗಳು - ಏನೆಲ್ಲ. ಒಟ್ಟನಲ್ಲಿ ಜೀವನ ಪಾಠಗಳು. ರೇಗಿದಾಗ ಬೈದು ಬರೆಯುವ ಭಾಷೆಯೂ ಪ್ರಭಾವಕಾರಿಯಾಗಿ, ವಾದ ತರ್ಕಬದ್ಧವಾಗಿರುತ್ತಿತ್ತು.

- ಜ್ಯೋತ್ಸ್ನಾ ಕಾಮತ

(ಪುಸ್ತಕಕ್ಕೆ ಅವರು ಬರೆದ ಮುನ್ನುಡಿಯಿಂದ)

ಪ್ರಕಾಶಕರು: ಮನೋಹರ ಗ್ರಂಥ ಮಾಲೆ, ಧಾರವಾಡ-1990

ವೈವಾಹಿಕ ಜೀವನಕ್ಕೆ ನಾಂದಿ ಎಂಬುದು ಮಾತ್ರ ಸತ್ಯ.

ಚಿಕ್ಕ ವಯಸ್ಸಿನಿಂದಲೂ ನಾನೊಬ್ಬ ಕನಸುಗಾರ. ಹತ್ತು ವರ್ಷ ತುಂಬುವ ಮೊದಲೇ ಭಾವೀ ಪತ್ನಿಯ ಬಗ್ಗೆ ಯೋಚಿಸಲಾರಂಭಿಸಿದ್ದೆ! ಇಷ್ಟರಲ್ಲಿ 'ಅವಳು' ನನಗಾಗಿ ಜನ್ಮ ತಳೆದಿರಲೇಬೇಕು. ಆಕೆ ಯಾರೆಂದು ಮೊದಲೇ ತಿಳಿದು ಒಮ್ಮೆ ಮುಖದರ್ಶನವಾಗುವಂತಿದ್ದರೆ ....? ಅವಳು ಸುಂದರಿಯಾಗಿದ್ದಿರಬೇಕು. ಅದರೊಂದಿಗೆ ಜಾಣೆಯೂ ಆಗಿದ್ದರೆ... ಅವಳಾರು ಎಂದು ಇದೀಗಲೇ ಪತ್ತೆಮಾಡಲು ಸಾಧ್ಯವಾಗುವಂತೆ ಇದ್ದರೆ.... ಇತ್ಯಾದಿ. ಹದಿಹರೆಯದಲ್ಲಿ ವಿಚಾರಲಹರಿ ಬೇರೆಯೇ ದಿಕ್ಕನ್ನು ಹಿಡಿಯುತ್ತಿತ್ತು. ಕೇಳುವ ಪ್ರಶ್ನೆಗಳು ನೂರು ಇದ್ದರೆ, ಹೇಳುವ ಸಂಗತಿಗಳು ಸಾವಿರ ಇರುತ್ತಿದ್ದವು. ಭಾವೀ ಪ್ರೇಯಸಿಯೊಂದಿಗೆ ಮಾತನಾಡಲು ಸಿಗದಿದ್ದರೆ ಹೋಗಲಿ, ಅವಳು ಸ್ಥಾನೀಯಳಾಗಿದ್ದರೆ ಚೀಟಿಗಳನ್ನು ಅದಲು ಬದಲು ಮಾಡುವ, ದೂರದವಳಾದರೆ ಪತ್ರಸಲ್ಲಾಪ ನಡೆಸುವ ಸ್ವಾತಂತ್ರ್ಯವಾದರೂ ಇದ್ದಿರಬೇಕಾಗಿತ್ತು! ಎಂದು ಚಡಪಡಿಸಿದ್ದೂ ಇದೆ. ಕಾಲೇಜು ವಿದ್ಯಾರ್ಥಿಯಾಗಿದ್ದಾಗ, ಶರತ್ ಕಾದಂಬರಿಗಳು ಇಷ್ಟವಾಗುವ ದಿನಗಳಲ್ಲಿ 'ಅವಳು' ಕಥಾ ನಾಯಕಿಯಂತೆ, ದಯಾಮಯಿ; ತ್ಯಾಗಿ, ಪ್ರೇಮಮಯಿಯಾಗಿರಬೇಕೆಂಬ ಆದರ್ಶ ಮನೆಮಾಡಿಕೊಂಡಿತ್ತು....ನನ್ನ ಪುರಾಣವೇ ಹೆಚ್ಚಾಯಿತು ಎಂದೆಯಾ? ಬೇರೇನಾದರೂ ಹೇಳಲಾ?

ನನ್ನ ಜೀವನ ನಿನ್ನೊಂದಿಗೆ ಹಾಸು ಹೊಕ್ಕಾಗಲಿದೆ, ಎಂದು ಖಂಬಾಗಿದ್ದರಿಂದ ಅಂತರ್‌ಮುಖಿಯಾಗಿಬಿಟ್ಟಿದ್ದೇನೆ. ಏನೇನೋ ವಿಚಾರಗಳು ಸದಾಕಾಲವೂ ಮಿದುಳನ್ನು ಆವರಿಸಿಕೊಂಡಿರುವುದರಿಂದ ಮೈಮೇಲೆ ಪರಿವೆಯೇ ಇರುವುದಿಲ್ಲ. ಇಂದು ಮುಂಜಾನೆ ಏಳುತ್ತಿದ್ದಂತೆ, ಈ ಕೋಮಲಾಂಗಿಗೆ ನಾನು ಯೋಗ್ಯನಾದವನೇ? ಎಂಬ ಪ್ರಶ್ನೆ ಛುಗ್! ಎಂದು ತಲೆಎತ್ತಿ ಕಾಡಲಾರಂಭಿಸಿತು. ರೂಪ-ರಂಗಿನ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳದವನು, ಕನ್ನಡಿಯೆದುರು ನಿಂತು ಪ್ರಪ್ರಥಮ ಬಾರಿ ಎವೆಯಿಕ್ಕದೇ ಕೆಲ ನಿಮಿಷ ನನ್ನನ್ನು ನಾನು ನೋಡಿಕೊಂಡೆ. ತಲೆಕೂದಲು ಕಿವಿಗಳನ್ನು ಆಕ್ರಮಿಸಿಕೊಂಡು ಬಿಟ್ಟಿವೆ! ಹೋಗಿ ಹಜಾಮತಿ ಮಾಡಿಸಿಕೊಂಡು ಬಂದೆ. ಮುಖ, ಕ್ಷೌರಕ್ಕೆ ಅರಚಿಕೊಂಡರೆ; ಹೊಟ್ಟೆ ಕಾಫಿಗೆ ಕೂಗಿಕೊಂಡಿತು. ಮಗ್ ತುಂಬ ಕಾಫಿ, ಲೋಟ ತುಂಬ ದಾಡಿಗೆ ಬಿಸಿ ನೀರು ತಂದು ಕಾರ್ಯೋನ್ಮುಖಿಯಾದೆ. ಇದೇ ಸಮಯಕ್ಕೆ ನನ್ನವಳು ಕಾಫಿ ಸವಿಯುತ್ತಿರಬಹುದೇ? ಉತ್ತರ ಕರ್ನಾಟಕದಲ್ಲಿ ಬೆಳೆದಿದ್ದರಿಂದ ಚಹಾದ ಮೇಲೆ ಪ್ರೀತಿ ಹೆಚ್ಚಾಗಿರಬಹುದು. ಎಂದೆಲ್ಲ ವಿಚಾರಿಸುತ್ತ ಕಾಫಿ ಸವಿದು, ಕ್ಷೌರ ಮುಗಿಸಿದ್ದೆ. ರೇಝರ್ ತೊಳೆಯುವದಕ್ಕಾಗಿ ಬಚ್ಚಲಿಗೆ ಹೋಗುತ್ತೇನೆ - ಕಣ್ಣೇ ನಂಬಲಾಗದು. ಬಿಸಿ ನೀರು ಕುಡಿದು, ಕಾಫಿಯಿಂದ ಕ್ಷೌರಮಾಡಿಕೊಂಡಿದ್ದೆ! ಬೆಪ್ಪುತನಕ್ಕೆ ನಗುತ್ತಿಯಲ್ಲವೆ? ನಗು, ಬೇಕಾದಷ್ಟು ನಗು.

ಸುಂದರ ಪ್ರೇಮ ಪತ್ರವೊಂದನ್ನು ಬರೆಯಬೇಕೆಂದು ನನ್ನದು ಬಹಳ ವರ್ಷಗಳ ಆಶೆ. ಆದರೆ ಹೇಗೆ ಬರೆಯಬೇಕು ಎಂದು ತಿಳಿಯದು. ನೀನೇನಾದರೂ ಅರಿತಿದ್ದರೆ ತಿಳಿಸುವಿಯ?

-2-

ಜೋಬನೇರ, 24.1.1966

ಇಂದು ನಿನ್ನ ಹುಟ್ಟು ಹಬ್ಬ: ಹುಟ್ಟುವದೇ ಒಂದು ಮಹಾಸಾಧನೆ ಎಂದು ತಿಳಿಯುವ ವರ್ಗಕ್ಕೆ ಸೇರಿದವನು ನಾನಲ್ಲ. ಕುರಿ-ಕೋಣಗಳೂ ಹುಟ್ಟುತ್ತವೆ. ತಿಂದುಂಡು ಜೀವಿಸುತ್ತವೆ. ಮಕ್ಕಳು-ಮರಿ ಪಡೆಯುತ್ತವೆ. ಯಮನ ಕರೆ ಬಂದಾಗ ಓಗೊಟ್ಟು ನಿರ್ಗಮಿಸುತ್ತವೆ. ಇವುಗಳಷ್ಟೇ ಮಾನವನು ಕತ್ತೆ-ಕುನ್ನಿಗಳಂಥ ಪ್ರಾಣಿ ವರ್ಗಕ್ಕೆ ಸೇರಿದವನೆಂದು ನನ್ನ ವಿಶ್ವಾಸ. ಬುದ್ಧಿಯ ಪ್ರಮಾಣವಷ್ಟೇ ವ್ಯತ್ಯಾಸವಲ್ಲವೇ? ಬುದ್ಧಿಯ ಕೊಡವನ್ನೇ ಹೊತ್ತು ಹುಟ್ಟಿ ಬಂದ ಮಾನವನು ತನ್ನ ಜೀವಮಾನದಲ್ಲಿ ಸಾಧಿಸುವದೇನನ್ನು? ಎಂಬುದಕ್ಕೆ ಅತಿ ಮಹತ್ವ

ನಿರ್ಗಮಿಸಿದ ನಂತರ ಭಾವೀಪೀಳಿಗೆಗೆ ಏನಾದರೂ ಉಳಿಸಿ, ಬಿಟ್ಟು ಹೋದರೆ, ಅವನ ಹುಟ್ಟಿನಲ್ಲಿ ಅಲ್ಪವಾದರೂ ಸಾರ್ಥಕತೆ ಕಾಣಬಹುದು. ಅಂತೆಯೇ ನಾನು ಈವರೆಗೆ ಹುಟ್ಟು ಹಬ್ಬ, ವಿವಾಹ ವಾರ್ಷಿಕ, ಷಷ್ಠ್ಯಬ್ದಿಗಳನ್ನು ಆಚರಿಸಿಲ್ಲ! ಮುಂದೆಯೂ ಅವಕ್ಕೆ ಮಹತ್ವ ಕೊಡಬಾರದೆಂಬ ದೃಢ ವಿಶ್ವಾಸ ನನ್ನದು. ಆಗಮಿಸಿದವರ ಆದರಾತಿಥ್ಯಕ್ಕೆ ಹಣದ ಹೊಳೆ ಹರಿಸಿ, ಅವರಿಂದ ಅಭಿನಂದಿಸಿಕೊಳ್ಳುವದರಲ್ಲಿ ಯಾವ ಪುರುಷಾರ್ಥವೂ ಕಾಣದು. ಅದರ ಬದಲಿಗೆ ಈ ಅವಕಾಶ ಬಳಸಿ ಗಟ್ಟಿ ಕೆಲಸ ಮಾಡಿ ಮುಗಿಸಿದರೆ, ಅದೇ ಒಂದು ಸಾಧನೆಯಾದೀತು. ಆ ಉದ್ದೇಶದಿಂದಲೇ ನಿನಗೆ ಈ ಹುಟ್ಟುಹಬ್ಬದ ಪತ್ರ.

ನೀನು ಇತಿಹಾಸದ ವಿದ್ಯಾರ್ಥಿನಿಯಲ್ಲವೇ? ಅಂತೆಯೇ ಇಂದಿನ ಶುಭಾಶಯದ ಪತ್ರದ ಹಾಳೆ, ಕವರು ಅಂಚೆ-ತಿಕೀಟುಗಳನ್ನೆಲ್ಲ ಚಾರಿತ್ರಿಕ ಹಿನ್ನೆಲೆಯುಳ್ಳವನ್ನೇ ಬಳಸಿದ್ದೇನೆ. ಅಂಚೆ ತಿಕೀಟನ್ನು ನೋಡಿದೆಯಾ? ವಿರಹವೇದನೆ ಸಹಿಸಲಾರದ ಯಕ್ಷನು ಮೋಡಗಳಿಗೆ ತನ್ನ ಯಾತನೆಯನ್ನು ಅರುಹಿ, ಪ್ರೇಯಸಿಗೆ ತನ್ನ ಸಂದೇಶವನ್ನು ತಲುಪಿಸುವಂತೆ ಅಂಗಲಾಚುತ್ತಿದ್ದಾನೆ. ಕಾಳಿದಾಸನ ಸುಪ್ರಸಿದ್ಧ ಕಾವ್ಯ ಮೇಘದೂತದ ಮೇಲೆ ಆಧಾರಿತ. ಶಾಲಾ-ವಿದ್ಯಾರ್ಥಿಯಾಗಿದ್ದಾಗಲೇ ಯಕ್ಷನ ಬವಣೆಗಾಗಿ ಪರಿತಪಿಸಿದ್ದೆ. ಎಂಟು ವರ್ಷಗಳ ಹಿಂದೆ ಈ ಅಂಚೆ -ಚೀಟಿ ಪ್ರಕಟವಾದಾಗ ಕೊಂಡು, ಹೋದಲ್ಲೆಲ್ಲ ಒಯ್ದಿದ್ದೆ. ಈ ವಿರಹಿಯ ವೇದನೆಯ ಕಲ್ಪನೆ ನಿನಗೇನಾದರೂ ಬರಲು ಸಾಧ್ಯವೇ? ಎಂದು ಅರಿಯಲು ಅದನ್ನು ನಿನಗೆ ಕಳಿಸುತ್ತಿದ್ದೇನೆ. ಪತ್ರದ ಕವರು ನೋಡು. ಜರ್ಮನ್ ವಿಮಾನ ಕಂಪನಿ, 'ಲುಫ್ತಾಂಝಾ'ದವರು ದಯಪಾಲಿಸಿದ್ದು. ಅದರ ಮೇಲೆ ಕಂಗೊಳಿಸುವ ಬೋಯಿಂಗ್ ವಿಮಾನ, ನಮ್ಮ ಪೂರ್ವಜರ ಪುಷ್ಪಕ ವಿಮಾನವನ್ನು ಪ್ರತಿನಿಧಿಸುತ್ತದೆ. ಪತ್ರ ಮೂಲಕ ಕೇವಲ ಸಂದೇಶವನ್ನು ಕಳಿಸುವದಕ್ಕಿಂತ ಈ ವಿಮಾನವನ್ನೇರಿ ನೀನೇ ಇಲ್ಲಿ ಬರುವುದು ಉತ್ತಮವಲ್ಲವೇ? ಪತ್ರದ ಸುಂದರ, ಬಾಡದ ಹೂವುಗಳನ್ನು ಹೊತ್ತ ಹಾಳೆ ನೋಡಿದೆಯಾ? ತಿಳಿ ಗುಲಾಬಿಯ ಈ ಅಂದವಾದ ಲೆಟರ್‌ಹೆಡ್‌ನ್ನು ಸಾಯರಕ್ಯೂಸಿನ ಪುಸ್ತಕದ ಒಂದು ಅಂಗಡಿಯಲ್ಲಿ ಕಂಡಾಕ್ಷಣ ಮೆಚ್ಚಿಕೊಂಡು ಕೊಂಡುಬಿಟ್ಟಿದ್ದೆ. ಇನ್ನು ಕವರು? ಗಗನ ವಿಹಾರಿಯಾದಾಗ ಆತ್ಮೀಯರಿಗೆ ಬರೆದ ಪತ್ರಗಳನ್ನು ಕಳಿಸಲೆಂದೇ 'ಏಯರ್ ಫ್ರಾನ್ಸ್'ದವರು ದಯಪಾಲಿಸಿದ್ದು. ಇಷ್ಟೆಲ್ಲ ಸಾಧನ-ಸಾಮಗ್ರಿ ಜೋಡಿಸಿ ಅಭಿನಂದನೆಗಳನ್ನು ಕಳಿಸುವದು ಸಾಮಾನ್ಯ ಮಾತೇ? ಕಾಳಿದಾಸನ ಯಕ್ಷನಿಗಿಂತ ಈ ವಿಷಯದಲ್ಲಿ ನಾನು ಭಾಗ್ಯಶಾಲಿ ಎನ್ನಲೇಬೇಕು!

ಜೀವನವನ್ನು ರೂಪಿಸಿಕೊಳ್ಳುವದು ನಮ್ಮ ಕೈಯಲ್ಲೇ ಇದೆ. ಒಂದು ಸಂಸಾರ ಆದರ್ಶಪ್ರಾಯವಾಗಬೇಕಾದರೆ ಏನೇನು ಸಾಧಿಸಬೇಕೆಂದು ಗುರುತಿಸಿ, ಅದಕ್ಕಾಗಿ ಬೆನ್ನುಮುರಿ ದುಡಿಯಬೇಕು. ದೊಡ್ಡ ಅಧಿಕಾರಿಯಾಗಿ ಕೈಗೆ-ಕಾಲಿಗೆ ಆಳುಗಳನ್ನಿಟ್ಟು ಆಗರ್ಭ ಶ್ರೀಮಂತನಾಗಿ ಮೆರೆಯಬೇಕೆಂದು ಎಂದಿಗೂ ಕನಸು ಕಂಡವನಲ್ಲ. ಬದಲಿಗೆ ಎಷ್ಟೇ ಸಣ್ಣ ಕೆಲಸವಿದ್ದರೂ ನಿಷ್ಠೆಯಿಂದ ಮೈ ಮುರಿ ದುಡಿದು, ಮನಸ್ಸಿಗೆ ತೃಪ್ತಿಯಾಗುವಂತೆ ಮಾಡಿ ಮುಗಿಸಬೇಕೆಂಬ ಹವ್ಯಾಸ. ವಿಶ್ವದಲ್ಲಿಯೇ ಅತಿ ಮುಂದರಿದ ರಾಷ್ಟ್ರವೆನಿಸಿಕೊಂಡ ಅಮೇರಿಕೆಯ ಪ್ರಸಿದ್ಧ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಅತ್ಯುನ್ನತ ವ್ಯಾಸಂಗ ಮಾಡಿ ಮುಗಿಸಲು ಕರೆದೊಯ್ದ ದೈವವೇ ರಾಜಸ್ಥಾನದ ಈ ಕುಗ್ರಾಮಕ್ಕೆ ತಂದು ಬಿಟ್ಟಿದೆ. ಇಲ್ಲಿಯ ಜನರ ಬಗ್ಗೆ ಅವರ ಜೀವನದ ರೀತಿ-ನೀತಿಗಳ ಬಗ್ಗೆ ಒಮ್ಮೆಯೂ ಜಿಗುಪ್ಸೆಯಾಗಲಿಲ್ಲ. ಅನಾಕರ್ಷಕವೆನಿಸಲಿಲ್ಲ. ಬದಲಾಗಿ ನಾನೂ ಅವರಲ್ಲಿ ಒಬ್ಬನಾಗಿದ್ದರೆ ಜೀವನವನ್ನು ಸರಿಯಾಗಿ ಅರ್ಥೈಸಿಕೊಳ್ಳುತ್ತಿದ್ದೆನೇ? ಎಂದು ಆಶ್ಚರ್ಯಪಡುತ್ತೇನೆ.

ಜೀವನದಲ್ಲಿ ಏನನ್ನು ಸಾಧಿಸಬೇಕೆಂದಿ

ಷ್ಟೇನೆ? ಎಂದು ಈಗಾಗಲೇ ವಿಚಾರ ವಿಮರ್ಶೆ ಮಾಡಿ ಒಂದು ನಿರ್ಣಯಕ್ಕೆ ಬರುವದು ಉತ್ತಮವೆನಿಸುತ್ತದೆ. ದುಡ್ಡೇ ದೊಡ್ಡಪ್ಪ ಎಂದು ನಂಬಿದ್ದರೆ ವಂಶಪರಂಪರಾಗತವಾಗಿ ಬಂದ ಬಟ್ಟೆ ವ್ಯಾಪಾರ ಮುಂದರಸಿಕೊಂಡು ಹೋಗಿ ಧನಿಕನಾಗಬಹುದಿತ್ತು. ಆದರೆ ಇನ್ನಿತರರಿಗಿಂತ ಭಿನ್ನವಾಗಿ ಬೆಳೆಯಬೇಕೆಂದು ಕನಸು ಕಟ್ಟಿ ಏನೆಲ್ಲಾ ಸಾಹಸಗಳನ್ನು ಮಾಡಿದೆ. ಆದ್ದರಿಂದ ಹಣ ಸಂಪಾದನೆಗಾಗಿ ಯಾಂತ್ರಿಕವಾಗಿ ಜೀವಿಸುವುದು ನನ್ನ ಆದರ್ಶಗಳಿಗೆ ತಿಲಾಂಜಲಿ ಕೊಟ್ಟಂತೆ. ವ್ಯಾಪಾರಿಗಳಾದ ನಮ್ಮ ಕುಟುಂಬದಲ್ಲಿ ನನಗೆ ಮಾತ್ರ ಹೆಚ್ಚಿನ ವ್ಯಾಸಂಗ ಮಾಡಲು ಏಕೆ ಅವಕಾಶ ಕಲ್ಪಿಸಿಕೊಟ್ಟರು ಎಂದು ನಿನಗೆ ಕುತೂಹಲ-ಆತಂಕಗಳಾಗಿರಬೇಕಲ್ಲವೇ? ಯಾರ ಮುಂದೆಯೂ ಬಾಯಿ ಬಿಡುವುದಿಲ್ಲವೆಂದು ಆಶ್ವಾಸನೆ ಕೊಟ್ಟರೆ ಮಾತ್ರ ಹೇಳುತ್ತೇನೆ. ನನ್ನಂಥವನನ್ನು ವ್ಯಾಪಾರಕ್ಕೆ ಹಾಕಿದರೆ, ಕೈಯಲ್ಲಿದ್ದ ಹದಿನೈದು ರೂಪಾಯಿಗಳನ್ನು ಇಪ್ಪತ್ತೈದು ರೂಪಾಯಿಗಳನ್ನಾಗಿ ಮಾಡುವ ಕಲೆ ಕೈಗೂಡದೇ ಇದ್ದದ್ದೇ ಇದಕ್ಕೆ ಮುಖ್ಯ ಕಾರಣವೆಂದರೆ ನಂಬುವಿಯಾ? ಕಲಿಯಲು ಬಾರದವರು, ವಿದ್ಯೆ ಹತ್ತದವರು ಮಾತ್ರ, ವ್ಯಾಪಾರ ಮಾಡುತ್ತಾರೆ ಎಂಬುದು ನಿನ್ನ ನಂಬಿಕೆಯಾಗಿರಬೇಕಲ್ಲವೇ? ಕೇವಲ ಮಾತಿನ ಚಮತ್ಕಾರದಿಂದಲೇ ಸರಕನ್ನು ಮಾರಿ, ಗಿರಾಕಿಯ ಜೇಬಿನಲ್ಲಿದ್ದ ಹಣವನ್ನು ತನ್ನ ಗಲ್ಲಾಪೆಟ್ಟಿಗೆಗೆ ಸೇರಿಸಲು ತುಂಬಾ ಚಾಣಾಕ್ಷತೆ ಬೇಕು. ಅಂತೆಯೇ ನಾನು ಹಣವಂತನಾಗುವ ಬದಲು ವಿದ್ಯಾವಂತನಾಗಿದ್ದೇನೆ!

ಜೀವನದಲ್ಲಿ ನನಗೆ ಅತೀವ ಶ್ರದ್ಧೆ, ಆಸಕ್ತಿ. ಅದರ ಆಳವನ್ನು ಅರಿಯಲು ಸದಾಕಾಲ ಹವಣಿಸುತ್ತಿರುತ್ತೇನೆ. ಪ್ರವಾಸವೆಂದರೆ ಅಚ್ಚು-ಮೆಚ್ಚು. ಶಾಲಾ ವಿದ್ಯಾರ್ಥಿಯಾಗಿದ್ದಾಗ ಕಾಲುನಡಿಗೆಯಲ್ಲಿ ಪ್ರಾರಂಭವಾದ ಈ ಗೀಳು ಹೆಮ್ಮರವಾಗಿ ಬೆಳೆದಿದೆ. ಅಂತೆಯೇ ಭಾರತ, ಅಮೇರಿಕ-ಯುರೋಪಗಳಲ್ಲಿ ಸಾಧ್ಯವಿದ್ದಷ್ಟು ಅಲೆದೆ. ದೂರದ ಈ ರಾಜ್ಯದಲ್ಲಿ ನೌಕರಿ ಒಪ್ಪಿಕೊಳ್ಳಲು ಅದೇ ಕಾರಣ. ನೋಡಿ, ಅನುಭವಿಸಿದ್ದನ್ನು ಚಿತ್ರಗಳಲ್ಲಿ ಕಾದಿರಿಸುವ ಹಂಬಲದಿಂದಾಗಿ ಛಾಯಾಗ್ರಹಣ ಕಲಿಯಬೇಕಾಯಿತು. ಇದಕ್ಕಾಗಿ ಯಾವ ಗುರುವನ್ನೂ ಅವಲಂಬಿಸದೇ ಸ್ವಸಾಧನೆಯಿಂದ ಪಡೆದ ಪರಿಣತಿಯಿಂದಾಗಿ ಸಂತುಷ್ಟನಿದ್ದೇನೆ. ನನ್ನ ಅನಿಸಿಕೆ, ವಿಚಾರ, ಅನುಭವಗಳನ್ನು ಇನ್ನಿತರರೊಂದಿಗೆ ಹಂಚಿಕೊಳ್ಳಲು ಸವಿಸ್ತಾರವಾದ ಪತ್ರಗಳನ್ನು ಆಗಾಗ ಬರೆಯುತ್ತಿರುತ್ತೇನೆ. ಅವುಗಳ ಪ್ರತಿಗಳೆಲ್ಲ ನನ್ನಲ್ಲಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಎಂದು ಆಗಾಗ ಅನಿಸುತ್ತಿರುತ್ತದೆ. ನನಗೆ ಬಂದ ಪತ್ರಗಳನ್ನೆಲ್ಲ ವ್ಯವಸ್ಥಿತವಾಗಿ ಇಟ್ಟಿರುತ್ತೇನೆ. ಈ ಸಂಗ್ರಹಕ್ಕೆ ನಿನ್ನವನ್ನು ಎಷ್ಟು ಸೇರಿಸುತ್ತಿಯೋ ನೋಡು. ಹಿಂದೊಮ್ಮೆ ಕಲಾಕಾರನಾಗಬೇಕೆಂದು ಕನಸು ಕಟ್ಟಿದ್ದೆ. ಆದರೆ ಅನೇಕ ಕಾರಣಗಳಿಗಾಗಿ ಅದು ಕೈಗೂಡಲಿಲ್ಲ. ನಿನ್ನನ್ನು ಚಿತ್ರಿಸಬೇಕೆಂದು ಹಂಬಲವಾಗಿದೆ. ಸಾಧ್ಯವಾದರೆ ಕಿರಿಯ ಭಾವಚಿತ್ರ ಕಳಿಸುವ ಕೃಪೆ ಮಾಡುವಿಯಾ?

ನೀನು ವರಿಸಹೊರಟ ವ್ಯಕ್ತಿಗೆ ಎಂತೆಂತಹ ಹುಚ್ಚುಗಳು ಇವೆ, ಎಂಬ ಕಲ್ಪನೆ ಈಗ ನಿಚ್ಚಳವಾಗಿ ಬಂದಿರಬೇಕಲ್ಲವೆ? ಆದರೆ ನಿನ್ನ ಪಾಲಿಗೆ ಬಂದವು, ನಾನು ಮತ್ತು ನನ್ನ ಹೆಚ್ಚಿನ ಲಾಭದಾಯಕವಲ್ಲದ ಡಿಗ್ರಿಗಳು ಮಾತ್ರ! ಆದ್ದರಿಂದ ವೈವಾಹಿಕ ಜೀವನದಲ್ಲಿ ಗಗನ ತಾರೆಗಳನ್ನು ನಿರೀಕ್ಷಿಸುವಂತೆ ಇಲ್ಲ. ಬೇರೇನೂ ಆಶ್ವಾಸನೆ ಕೊಡಲಾಗದಿದ್ದರೂ ನನ್ನದೆಂಬ ಚರಾಚರ ಆಸ್ತಿಯೆಲ್ಲ ನಿನಗೆ. ನಾವಿಬ್ಬರೂ ಆದರ್ಶ ದಂಪತಿಗಳಾಗಬೇಕೆಂಬ ಕನಸು. ಆದರೆ ನಿನ್ನ ನೀರಿಕ್ಷೆ-ಆಕಾಂಕ್ಷೆಗಳೇನು ಎಂದು ತಿಳಿಯದ್ದರಿಂದ ಇದು ಸಾಧ್ಯವೇ ಎಂಬ ಅನುಮಾನ ಇದ್ದೇ ಇದೆ. ನನ್ನ ಜೀವನ ಯೋಜನೆಯಲ್ಲಿ ದೈಹಿಕ ಸುಖಗಳು, ಐಷಾರಾಮಗಳಿಗೆ ಯಾವ ಗಣ್ಯ ಸ್ಥಾನವೂ ಇಲ್ಲ. ನನ್ನ ಪರಿಚಯದ ಹೆಚ್ಚಿನ ದಾಂಪತ್ಯಗಳಲ್ಲಿ ಶರೀರಗಳೆರಡು ಜೊತೆಯಾಗಿ ಬಾಳಿ ಬದುಕಿದರೂ ಅವರ ಹೃದಯಗಳು ಕಾಶಿ-ರಾಮೇಶ್ವರ



ಹೋದ ವರ್ಷದ ಕೆಟ್ಟ ಘಟನೆಗಳನ್ನು ಮರೆತು ಬಿಡೋಣ .... ನಾನು ನಿನಗೆ ಕೊಡಬೇಕಿದ್ದ 500 ರೂ. ಸಾಲಾನೂ ಸೇರಿ!

ಗಳಲ್ಲಿರುತ್ತವೆ. ಅದೇ ನಾವಿಬ್ಬರೂ ಉತ್ತರ - ದಕ್ಷಿಣ ಧ್ರುವಗಳಲ್ಲಿದ್ದರೂ ಹೃದಯಗಳು ಒಂದಾಗಿರಬೇಕು ಎಂಬ ಆಸೆ. ಇದಕ್ಕಾಗಿ ಒಬ್ಬರು ಇನ್ನೊಬ್ಬರನ್ನು ಅರಿತು ಹೊಂದಿಕೊಳ್ಳಲು ಸಕಲ ಯತ್ನ ಮಾಡಿ ಆದರ್ಶ ಸಾಧನೆಗಾಗಿ ತ್ಯಾಗ ಮಾಡಲು ಸಿದ್ಧರಾದಾಗ ಮಾತ್ರ ಇದನ್ನು ಸಾಧಿಸಬಹುದು. ನಾವಿಬ್ಬರೂ ರಚನಾತ್ಮಕ ಕಾರ್ಯಗಳಲ್ಲಿ ಬಿಡುವಿನ ವೇಳೆಯನ್ನು ತೊಡಗಿಸಬೇಕು. ಆದಾಯದ ಅಲ್ಪ ಭಾಗವನ್ನು ಅಸಹಾಯಕರ ನೆರವಿಗೆ ಬಳಸಬೇಕು ಎಂಬುದು ನನ್ನ - ಆಶಯ ಮನಸಾ ಯತ್ನಿಸಿದರೆ ಅಸಾಧ್ಯವಾದ ಆದರ್ಶಗಳೇನಲ್ಲ. ಈ ದಿಸೆಯಲ್ಲಿ ಪ್ರಯತ್ನಿಸಲು ಒಪ್ಪಿಕೊಳ್ಳೋಣ. ಆಗದೇ? ಒಳ್ಳೆಯ ಹುಡುಗಿ.

-3-

ಜೋಬನೇರ, 30-1-1966

ನನ್ನ ಜಾತಕದ ಬಲಾಬಲಗಳನ್ನು ಹೇಳಲೇ? ಇನ್ನೂ ಶಾಲಾ ವಿದ್ಯಾರ್ಥಿಯಾಗಿದ್ದಾಗ, ಸೋದರಮಾವನ ಮದುವೆಗೆ ಹೋಗಿದ್ದೆ. ಕಾಕಿಗೆ ಮನೆಗೆಲಸಕ್ಕೆ ನೆರವಾಗಲು ಸೊಸೆಯೊಬ್ಬಳನ್ನು ತರುವಂತೆ ಅಜ್ಜನವರು ಆಗ್ರಹಪಡಿಸಿದ್ದರು. ಅವರು ಸೂಚಿಸಿದ ಕನ್ಯೆ ಅತ್ಯಾಕರ್ಷಕಳಿದ್ದುದರಿಂದ 'ಒಲ್ಲೆ' ಎನ್ನಲು ಕಷ್ಟವಾಯಿತೆಂದು ಒಪ್ಪಿಕೊಳ್ಳುತ್ತೇನೆ! ಈಗ ಅವಳು ಐದು ಮಕ್ಕಳ ತಾಯಿಯಾಗಿದ್ದಾಳೆ. ಸ್ನಾತಕೋತ್ತರ ಶಿಕ್ಷಣ ಮುಗಿಸಿದ ನಂತರ ಇನ್ನೊಮ್ಮೆ ಕಂಕಣಬಲ ಕೂಡಿ ಬಂದಂತಿತ್ತು. ವಿವಾಹಕ್ಕೆ ಬೆಳೆದು ನಿಂತ ಮಗಳನ್ನು ಕೊಟ್ಟು ಅಳಿಯನನ್ನು ಬರಮಾಡಿಕೊಳ್ಳುವ ಹವಣಿಕೆಯಲ್ಲಿ ಹಿರಿಯ ಸೋದರಮಾವ ಇದ್ದಾರೆ ಎಂಬ ಸುಳಿವು ಸಿಕ್ಕಿತು. ರಕ್ತ ಸಂಬಂಧಿಗಳಲ್ಲಿ ವಿವಾಹ ಮಾಡಿಕೊಂಡರೆ, ಮಾನಸಿಕ ರೋಗ, ಹಿಮೋಫೆಲಿಯಾಗಳಂಥ ರೋಗಗಳನ್ನು ಮಕ್ಕಳು ಹೊಂದುವ ಸಾಧ್ಯತೆ ಹೆಚ್ಚು ಎಂದು ವಿಜ್ಞಾನ ಜಗತ್ತಿನ ಒಂದು ಅಭಿಪ್ರಾಯ ಇರುವದರಿಂದ ಈ ಸಂಬಂಧದಲ್ಲಿ ಆಸಕ್ತಿ ಇಲ್ಲವೆಂದು ಕಾಕಾ-ಕಾಕಿಗೆ ಮೊದಲೇ ಸೂಚನೆ ಕೊಟ್ಟಿದ್ದೆ. ಆದರೂ ಆಪ್ತರು ಬಂದು ಅವರನ್ನು ಒತ್ತಾಯಿಸಿದಾಗ, ನುಣುಚಿಕೊಳ್ಳಲು ದಾರಿ ಕಾಣದೇ ವರನು ಒಪ್ಪಿದರೆ ತಮ್ಮ ಅಭ್ಯಂತರವೇನೂ ಇಲ್ಲವೆಂದು ಹೇಳಿಬಿಟ್ಟರು. ಆಗ ನನ್ನ ನಿರ್ಧಾರಕ್ಕೆ ಅಂಟಿಕೊಳ್ಳದಿದ್ದರೆ ಇದಾಗಲೇ ಎರಡು ಮಕ್ಕಳ ತಂದೆಯಾಗುವ ಸಾಧ್ಯತೆ ಇತ್ತು. ಹಕ್ಕಿನ ಕನ್ಯೆಯನ್ನು ಬೇಡವೆಂದು ಹೇಳಿದ್ದರಿಂದ ಬೇರೆಯವಳೊಡನೆ 'ಪ್ರೇಮ' ಇರಲೇಬೇಕೆಂಬ ಊಹಾಪೋಹಗಳು ಅಡ್ಡಿ-ಆತಂಕಗಳಿಲ್ಲದೇ ಹರಡಿಕೊಂಡವು. ನಮ್ಮವರಿಗೆ ಗಂಡು-ಹೆಣ್ಣುಗಳಲ್ಲಿ ಇರಬಹುದಾದಂತಹ ಸಂಬಂಧ ಒಂದೇ ಒಂದು, ಪತಿ-ಪತ್ನಿಯರದು!

ಮಕ್ಕಳಿಗೆ ವಿದ್ಯಾಬುದ್ಧಿ ಕೊಡುವಂತೆ ಅವರಿಗೆ ಜೀವನದ ಸಂಗಾತಿಯನ್ನೂ ಗೊತ್ತುಪಡಿಸುವದು ಪಾಲಕರದೇ ಸಕ್ರಿಯ ಕೆಲಸವೆಂದು ಮೊದಲಿನಿಂದಲೂ ನಾನು ತಳೆದ ಧೋರಣೆ. ಜೀವನದ ಅತ್ಯಧಿಕ ಭಾಗವನ್ನು ವಿದ್ಯಾರ್ಜನೆಯಲ್ಲಿ ತೊಡಗಿಸಿದ್ದರಿಂದಲೋ ಏನೋ, ಈಗ ಬಾಳ ಸಂಗಾತಿಯನ್ನು ಆರಿಸುವುದು ಸಮಸ್ಯೆ ಎನಿಸಲಾರಂಭಿಸಿತು. 'ಉತ್ತಮ ವರ'ನೊಬ್ಬ ಅಮೇರಿಕೆಯ

ವ್ಯಾಸಂಗ ಮುಗಿಸಿ ಸ್ವದೇಶಕ್ಕೆ ಹಿಂದಿರುಗಿದ ವಾರ್ತೆ, ಕಾಡುಕಿಚ್ಚಿನಂತೆ ಹಬ್ಬಿರಬೇಕು. ಕನ್ಯಾಭಾರ ಇಳಿಸಿಕೊಳ್ಳಬೇಕೆನ್ನುವವರೆಲ್ಲ ಜಾತಕದೊಂದಿಗೆ ಕಾಕಾರ ಸಂಪರ್ಕ ಬೆಳೆಸಲಾರಂಭಿಸಿದರು. ಮನೆಯಲ್ಲಿ ಹಿತವಾದ ಸ್ವತಂತ್ರ ವಾತಾವರಣ ಇದ್ದುದರಿಂದ ಯಾವ ಮುಚ್ಚುಮರೆ ಇಲ್ಲದೇ ಎಲ್ಲರೂ ತಂತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿತ್ತು. ಅಂತೆಯೇ ರಾತ್ರಿ ಯೂಟದ ನಂತರ ಎಲ್ಲರೂ ಪಡಸಾಲೆಯಲ್ಲಿ ಸೇರಿ, ಬಂದ ಕನ್ಯೆಯರ ಕುರಿತಾದ ವಿಚಾರ-ವಿನಿಮಯ ಗೋಷ್ಠಿಯನ್ನು ನಡೆಸುತ್ತಿದ್ದೆವು. ವಿನೋದ, ರಸನಿಮಿಷಗಳಿಗೆ ಏನೇನೂ ಕೊರತೆ ಇದ್ದಿರಲಿಲ್ಲ. ಮಂಗಳೂರಿನ ಕನ್ಯೆಯ ಪಿತನು ಮುಂಬೈ ಮಹಾನಗರದಲ್ಲಿ ಹೊಟೇಲ ಇಟ್ಟು ಧನ ಸಂಪಾದಿಸಿದ್ದರಿಂದ ಒಂದು ಲಕ್ಷ ವರದಕ್ಷಿಣೆ ಕೊಡುವುದಾಗಿ ಸಾರಿದ್ದ. ''ಇವಳನ್ನು ವರಿಸಿದರೆ ನೀನೇ ಒಂದು ಕಾಫಿ ಅಂಗಡಿ ಇಡಬಹುದು ಇಲ್ಲವೇ ಮಾವನ ಹೊಟೇಲಿನ ಮ್ಯಾನೇಜರ್ ಆಗಬಹುದು'' ಎಂದರು ಕಾಕಾ. ''ಟನ್ ಭಾರದವಳ ಕೈ ಹಿಡಿದರೆ ಕಳ್ಳಕಾಕರ ಭಯವಿಲ್ಲ. ಫೌಜದಾರಳನ್ನಾಗಿಮಾಡಿ ನಿಶ್ಚಿಂತೆಯಿಂದಿರಬಹುದು'' ಎಂದಳು ತಂಗಿ. 'ಆಕಾಶವಾಣಿಯವಳನ್ನು ಒಪ್ಪಿಕೊಂಡರೆ ರೇಡಿಯೋ ಕೊಳ್ಳುವ ಅವಶ್ಯಕತೆಯೇ ಇಲ್ಲ' ಎಂಬ ವ್ಯಾವಹಾರಿಕ ಸೂಚನೆ ಬಂದಿತು. ವರನಿಗಿಂತ ಹದಿನೈದು ವರ್ಷ ಚಿಕ್ಕವಳಿಂದ ಹಿಡಿದು ಅವನಿಗಿಂತ ಮೂರು ವರ್ಷ ಹಿರಿಯಳಾದ ಕನ್ಯೆಯರ ಜಾತಕಗಳು ಬಂದಿದ್ದವೆಂದರೆ ನಂಬುವಿಯಾ? ಅದರಂತೆ ಮಾಧ್ಯಮಿಕ ಶಾಲೆಯಲ್ಲಿ ಅನುತ್ತೀರ್ಣರಾದವರಿಂದ ಹಿಡಿದು ಡಾಕ್ಟರೇಟ ಮುಗಿಸಿದವರೂ ಇದ್ದರು! ಅಂತೆಯೇ ಆಯ್ಕೆ ಗೊಂದಲಮಯವಾಗಿತ್ತು. ಸಂಸಾರ ಹೂಡಬೇಕಾದವನೇ ಆಯ್ಕೆ ಮಾಡಲಿ ಎಂದು ಹಿರಿಯರ ಅಂಬೋಣವಾದರೆ ಅದು ಅವರಿಗೇ ಸೇರಿದ್ದು ಎಂಬುದು ನನ್ನ ಹಟ. ವಾದ-ವಿವಾದದ ನಂತರ ಕೊನೆಯ ಆಯ್ಕೆಯಲ್ಲಿ ಇಬ್ಬರು ಕನ್ಯೆಯರ ಸೇರ್ಪಡೆಯಾಗಿ ಅವರಲ್ಲಿ ಒಬ್ಬಳನ್ನು ಒಪ್ಪಿಕೊಳ್ಳುವುದೆಂದು ಸರ್ವಾನುಮತದಿಂದ ಠರಾವಾಯಿತು. ಒಬ್ಬಳು ಪುಣೆ ಕಾಲೇಜೊಂದರ ಪ್ರಿನ್ಸಿಪಾಲರ ಮಗಳು. ಮುಂಬೈಯ ಟಾಟಾ ಇನ್‌ಸ್ಟಿಟ್ಯೂಟಿನಲ್ಲಿ ಸಂಶೋಧನಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಳು. ಎರಡನೆಯವಳು ರಾಯಚೂರಿನ ಪೋಸ್ಟ ಮಾಸ್ತರ ಬುರ್ಡೆಯವರ ಮಗಳು. ಧಾರವಾಡ ಆಕಾಶವಾಣಿಯಲ್ಲಿ ಕೆಲಸಕ್ಕಿದ್ದಾಳೆ. ಮೊದಲನೇ ಕನ್ಯಾಪಿತೃ ನೇರವಾಗಿ ಸಂಪರ್ಕಿಸದೇ ಬೇರೆ ಯಾರೋ ಜಾತಕ ಮತ್ತು ಫೋಟೋಗಳನ್ನು ಪೂರೈಸಿದ್ದರಿಂದ ಅವರಿಗೆ ನಿಜಕ್ಕೂ ಈ ಸಂಬಂಧದಲ್ಲಿ ಆಸಕ್ತಿ ಇದೆಯೇ ಎಂದು ತಿಳಿಯಲಾರದೇ ಕೈಬಿಡಬೇಕಾಯಿತು. ಎರಡನೆಯ ಕನ್ಯೆ ಗೋಕರ್ಣ ಪರತಕಾಳ ಮಠಕ್ಕೆ ಸೇರಿದವಳಾಗಿರದೇ ಚಿತ್ರಾಪುರ ಮಠಕ್ಕೆ ಸೇರಿದವಳಾಗಿದ್ದಳು.

ಧಾರವಾಡಕ್ಕೆ ಬಂದೆ. ಬುರ್ಡೆ ಮಾಸ್ತರರನ್ನು ಕಾಣಲು ಬಂದರೂ ಅವರು ದೂರದ ರಾಯಚೂರಿಗೆ ಅದಾಗಲೇ ಹೊರಟುಬಿಟ್ಟಿದ್ದರಿಂದ ಮಗಳನ್ನೇ ಮಾತನಾಡಿಸಿದ್ದೆ. ಇಬ್ಬರ ಜೀವನದ ಆದರ್ಶ, ಅಭಿರುಚಿ, ಹವ್ಯಾಸಗಳು ತೀರಹತ್ತಿರದವು ಎಂದು ಕಂಡುಬಂದದ್ದರಿಂದ ಈ ಕನ್ಯೆ ಒಪ್ಪಿಗೆಯಾಗಿದೆ ಎಂದು ಕಾಕಾರಿಗೆ ಬರೆದು ತಿಳಿಸಿದ್ದೆ. ಧಾರವಾಡಕ್ಕೆ ಒಂಟಿ ಸಲಗನಾಗಿ ಬಂದರೂ ರಾಜಸ್ಥಾನಕ್ಕೆ ಪ್ರಯಾಣ ಬೆಳೆಸುವಾಗ ಪಾರಿವಾಳದ ಜೋಡಿಯ ಕಲ್ಪನೆ ಗರಿಗೆದರಿಸಿಕೊಂಡು ಹೊರಟಿದ್ದೆ. ಈಗಾದರೋ ನನ್ನ ಸ್ಥಿತಿ ತ್ರಿಶಂಕುವಿನದಾಗಿದೆ! ಅವಿವಾಹಿತನೂ ಅಲ್ಲ, ವಿವಾಹಿತನೂ ಅಲ್ಲ. ಮುಂಬರುವ ಜೀವನದ ಹಗಲುಗನಸು ಕಾಣುವದಲ್ಲದೇ ಬೇರೇನೂ ಮಾಡಲಾಗುತ್ತಿಲ್ಲ.... ಜ್ಯೋತ್ಸ್ನಾ, ಇಂದಿನ ದಿನಗಳಲ್ಲಿ ನನಗೆ ಜೋಡಿ ಜಡೆ, ಜಂಬ, ಜ್ಯೋತಿ, ಜೋಗುಳ, ಜೋಕುಮಾರಗಳಂತಹ ಶಬ್ದಗಳು ವಿಶೇಷವಾಗಿ ಸೇರುತ್ತವೆ. ನಿನಗೆ ಕಾಗೆ, ಕಾವಿ, ಕಪಿ, ಕತ್ತೆ, ಕೀಟ, ಕೀಲಿ ಮುಂತಾದ ಶಬ್ದಗಳು ಆಕರ್ಷಿಸುತ್ತಿರಬಹುದೆ?

-4-

ಜೋಬನೇರ, 15-2-1966

ಕೊನೆಗೊಮ್ಮೆ ನಿನ್ನ ಕಿರು ಭಾವಚಿತ್ರ ಕಳಿಸಿದ್ದರಿಂದ ನೆಮ್ಮದಿಯೆನಿಸಿತು. ಮುಖಾಮುಖಿ ಭೇಟಿಯಾದಾಗ, ನಿನ್ನನ್ನು ಸರಿಯಾಗಿ ನೋಡಲಾಗಿರಲಿಲ್ಲ. ಈಗ ಚಿತ್ತವನ್ನು ದೃಷ್ಟಿ ಬೀಳುವಷ್ಟು ಹೊತ್ತು ಎವೆಯಿಕ್ಕದೇ ನೋಡಿದರೂ ನೆಮ್ಮದಿಯಾಗದ್ದರಿಂದ ಭೂತಗನ್ನಡಿಯಿಂದ ಇನ್ನಷ್ಟು ಹೊತ್ತು ನೋಡಿದೆ. ನಡುರಾತ್ರಿಯ ತನಕ ಏನೇನೋ ಹಗಲುಗನಸುಗಳನ್ನು ಕಾಣುತ್ತಾ ಧಿಗ್ಗನೆ ಎದ್ದು ಇನ್ನೊಮ್ಮೆ ನಿನ್ನ ಫೋಟೊ ನೋಡಿ ಮಲಗಿದ ಮೇಲೆಯೇ ಸುಖ ನಿದ್ರೆ ಬಂದಿತು. ಅದನ್ನು ಇಲ್ಲಿಯ ಯಾರಿಗೂ ತೋರಿಸಬಾರದು ಎಂದುಕೊಂಡರೂ, ಬಿ.ಪಿ.ಅವರು (ಕೀಟ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀವಾಸ್ತವರಲ್ಲಿ ಕೆಲದಿನಗಳಿಗಾಗಿ ವಾಸ್ತವ್ಯ ಹೂಡಿದಾಗ) ಒಂದೇ ಸವನೆ ಕೇಳುತ್ತಲೇ ಇದ್ದುದರಿಂದ ತೋರಿಸಲೇಬೇಕಾಯಿತು. ಅವರು ಪತ್ನಿಗೆ ತೋರಿಸಲು, ಆ ಲಕ್ಷ್ಮೀದೇವಿ ಕುಣಿಯುತ್ತ ಹೋಗಿ ಎಲ್ಲರಿಗೂ ತೋರಿಸಿಕೊಂಡು ಬಂದರು. ಅದರ ಹಿಂದೆ ಕನ್ನಡದಲ್ಲಿ ಬರೆದದ್ದರ ಅರ್ಥ ಏನೆಂದು ವಿಚಾರಿಸಿದರು. ಎಷ್ಟು ಕಲಿತಿದ್ದಾಳೆ, ಏನು ಮಾಡುತ್ತಾಳೆ? ಅಡಿಗೆ ಬರುತ್ತದೆಯೇ? ಹೊಲಿಗೆ, ಸಂಗೀತದಲ್ಲಿ ಆಸಕ್ತಿ ಇದೆಯೇ? ಎಂದು ಸಹಸ್ರ ಪ್ರಶ್ನೆಗಳ ಸುರಿಮಳೆಯಾಯಿತು. ಕನ್ಯೆ ಸುಂದರಿಯಿದ್ದಾಳೆ, ಆಕರ್ಷಕವಾಗಿದ್ದಾಳೆ, ಆದರ್ಶ ಮಹಾರಾಷ್ಟ್ರಿಯನ್ ಗೃಹಿಣಿಯ ಲಕ್ಷಣಗಳಿವೆ! ಎಂದು ಏನೇನೋ ಹೇಳಿದರು. ಬಿ.ಪಿ.ಯವರಂತೂ ''ಕೇಶರಾಶಿ ವಿಪುಲವಾಗಿದೆ. ಈ ರಾಶಿಯಲ್ಲೆ ಸಿಕ್ಕಿಹಾಕಿಕೊಂಡು, ಬಿದ್ದೀರಾ? ಜೋಡಿ ಜಡೆ ಎಳೆಯಲು ಚೆನ್ನಾಗಿರುತ್ತವೆ,'' ಎಂದು ಕಣ್ಣು ಮಿಟುಕಿಸಿ ನಕ್ಕರು. ಅವರ ಪಾಲಿಗೆ ಬಂದವಳು ಜೋಟುದ್ದ ಜಡೆಯುವಳು, ಎಂದು ಇಲ್ಲಿ ಸ್ಮರಿಸಿಕೊಳ್ಳಬಹುದು. ಅವರ ಅತ್ತೆ (ಸಾನಿಜಿ) ಎರಡು ವರ್ಷದ ಮೊಮ್ಮಗಳಿಗೆ, 'ಆಂಟಿಜಿ'ಗೆ ನಮಸ್ಕಾರ ಮಾಡು ಎಂದು ಹೇಳಿದಾಗ, ಅವಳು ನಿನ್ನ ಭಾವಚಿತ್ರಕ್ಕೆ ಭಯಭಕ್ತಿಯಿಂದ ನಮಸ್ಕಾರ ಮಾಡಿದ್ದು ನೋಡಿ ಮೋಜೆನಿಸಿತು.

ಫೆಬ್ರುವರಿ 23ನೇ ತಾರೀಖಿಗೆ ನಡೆಯಲಿರುವ ನಿನ್ನ ಮದುವೆಯ ಆಮಂತ್ರಣವನ್ನು ಕಳಿಸಿದ್ದೇನೆ. ಅದನ್ನು ನೋಡಿ ತುಂಬಾ ತಮಾಷೆಯೆನಿಸಿರಬೇಕಲ್ಲವೆ? ಮದುವೆಯ ಮಂಟಪದಲ್ಲಿ ಇದನ್ನು ನೆನೆಸಿಕೊಂಡು ಕಿಸಕ್ಕನೆ ನಗಬೇಡ ಮತ್ತೆ! ಪೋಕ್ತಳಾಗಿ ನಡೆದುಕೊಳ್ಳಬೇಕು, ತಿಳಿಯಿತೆ? ಇನ್ನು ನಮ್ಮ ಭೆಟ್ಟಿ ಮದುವೆಯ ಮಂಟಪದಲ್ಲೇ!

ಒಂದು ಟಿಪ್ಪಣಿ:

ವಿವಾಹದ ನಂತರ ಆರು ತಿಂಗಳ ಜೀವನದ ವಿವರಗಳು ಪತ್ರಗಳಲ್ಲೇನೂ ಸಿಗುವುದಿಲ್ಲ. ಎಲ್ಲವನ್ನೂ ಊಹೆಗೆ ಬಿಡಲಾಗಿದೆ. ಈ ಅವಧಿಯಲ್ಲಿ ಒಂದು ತಿಂಗಳನ್ನು ಕಾಶ್ಮೀರದಲ್ಲಿ ಕಳೆದಷ್ಟನ್ನು ಮಾತ್ರ ಮುಚ್ಚಿಡಲಾಗದು.


-5-

ಜೋಬನೇರ, 23-2-1967

ನವಗರ್ಭಿಣಿಯರು ತಮ್ಮವರಿಂದ ಅದೆಷ್ಟು ಸೇವೆ, ಉಪಚಾರ, ಪುರಸ್ಕಾರಗಳನ್ನು ಪಡೆದುಕೊಳ್ಳುತ್ತಾರೆಂದು ನೋಡಿ, ಕೇಳಿ ಅರಿತಿರುವೆ. ಬೆಳಗಿನ ಜಾವದಿಂದ ವಾಕರಿಕೆ, ಸುಸ್ತು ಎಂದು ವಿಶ್ರಾಂತಿ ಪಡೆದರೆ, ಇನ್ನಿತರ ದಿನಗಳಲ್ಲಿ ಸುಲಭವಾಗಿ ಸಿಗದ ತಿಂಡಿ-ತಿನಿಸುಗಳನ್ನು ಅಪರೂಪದ ಹಣ್ಣುಹಂಪಲಗಳನ್ನು ತಿಂದು ತೇಗುತ್ತಿರುತ್ತಾರೆ. ಆಪ್ತೇಷ್ಟರು ತಮ್ಮ ಸೇವೆ ಮಾಡಿದಷ್ಟು ಕಡಿಮೆ ಎಂಬ ಠೀವಿ ಬೇರೆ. ಇಡೀ ದಿನ ವಿರಾಮ ಮಾಡುತ್ತಿದ್ದರೂ ರಾತ್ರೆ ನಿದ್ರೆ ಬಾರದು, ಎಂಬ ದೂರು. ತನ್ನ ಈ ಅವಸ್ಥೆಗೆ ಪತಿಯೇ ಕಾರಣನೆಂಬ ಅಸಡ್ಡೆ. ಆರು ತಿಂಗಳು ಮುಗಿಯುವದರೊಳಗೆ ಅತ್ತೆಮನೆಯವರು ಹಬ್ಬದೂಟ ಆರತಕ್ಷತೆ ಏರ್ಪಡಿಸಬೇಕು. ಯಥಾನುಶಕ್ತಿ ಸೀರೆ ಆಭರಣಗಳ ಉಡುಗೊರೆ ಬರಬೇಕು. ನವರಾತ್ರೆಯ ದುರ್ಗೆಯಂತೆ ವಿವಿಧ ಅಲಂಕಾರ ಮಾಡಿಕೊಂಡು

ಛಾಯಾಚಿತ್ರಗಳನ್ನು ತೆಗೆಯಿಸಿಕೊಳ್ಳಬೇಕು. ಮುಂಬೈನಗರದಲ್ಲಿ ಗರ್ಭಿಣಿಯರ ಭಾವಚಿತ್ರ ತೆಗೆಯುವದರಲ್ಲೆ ಪರಿಣತಿ ಪಡೆದ ಸ್ಟುಡಿಯೋಗಳಿವೆ. ಅವು ಪ್ರಚಾರಕ್ಕಾಗಿ ಹೊರಗೆ ತೂಗುಹಾಕಿದ ಛಾಯಾಚಿತ್ರಗಳನ್ನು ವೀಕ್ಷಿಸುವದೇ ವಿನೋದಾವಳಿಯೆನಿಸುವದು. ಶ್ರೀಕೃಷ್ಣ ಪರಮಾತ್ಮನಂತೆ ವೇಷ ಹಾಕಿಕೊಂಡು ಕೊಳಲು ನುಡಿಸುವುದು, ರಾಧೆಯಾಗಿ ಚಂದ್ರಬಿಂಬದ ಮೇಲೆ ಸವಾರಿ ಮಾಡುವದು, ಕಾಮದೇವನಾಗಿ ರತಿಯ ವಶೀಕರಣಕ್ಕಾಗಿ ಪುಷ್ಪಬಾಣವನ್ನು ಪ್ರಯೋಗಿಸುವಂತೆ ನಿಲ್ಲುವದು, ಬಗೆಬಗೆಯ ಕೇಶಾಲಂಕಾರ, ಹೂವಿನ ಅಲಂಕಾರ, ಭಾರೀ ಭಾರೀ ಸೀರೆಯುಟ್ಟು, ವಿವಿಧ ಆಭರಣಗಳನ್ನು ತೊಟ್ಟ ಗರ್ಭಿಣಿಯರ ಛಾಯಾಚಿತ್ರಗಳು ಅಲ್ಲಿರುತ್ತವೆ. ದರ ಕದ ಹಿಂದೆಯೇ ನನ್ನವಳಿಗೆ ಎಂಥ ಅಲಂಕಾರ ಶೋಭಿಸಬಹುದು ಎಂಬ ವಿಚಾರದಿಂದಲೇ ನಾಚಿಗೆಯಾಗಿತ್ತು!

ತವರುಮನೆಗೆ ಹೋದ ನಂತರ ಗರ್ಭಸ್ಪೃಭವದ ಹೊಸ ಅಧ್ಯಾಯವೇ ಪ್ರಾರಂಭವಾಗುವದು. ಪತಿಯ ಅಲಕ್ಷ್ಯ, ನಾದಿನಿಯರ ಅಸಡ್ಡೆ, ಅತ್ತೆಯ ಅಸಹನೆ, ಕುತಂತ್ರಗಳನ್ನು ತಮ್ಮವರಿಗೆ ಹೇಳಿದಷ್ಟೂ ಕಡಿಮೆಯೇ! ಈ ಹಿನ್ನೆಲೆಯಲ್ಲಿ ತಾಯಿ-ತಂಗಿಯರು, ಅಣ್ಣ-ತಮ್ಮಂದಿರು ತನು, ಮನ, ಧನಗಳಿಂದ ಬಸಿರಿಯರ ಸೇವೆಗೆ ಕಂಕಣಬದ್ಧರಾಗಿರುತ್ತಾರೆ. ತಿರುಗಿ ಭರ್ಜರಿ ಔತಣದ ಊಟವಾಗಬೇಕು. ಉಡುಗೊರೆ ಕೊಡಬೇಕು. ಛಾಯಾಚಿತ್ರ ತೆಗೆಸಬೇಕು. ಈ ಸಮಾರಂಭದ ಮುಂದೆ ಗಂಡನ ಮನೆಯವರದು ಏನೇನೂ ಅಲ್ಲ, ಎಂದೆನಿಸುವ ಪ್ರಯತ್ನ ಎದ್ದುಕಾಣುತ್ತದೆ. ನಂತರ ಬಾಲ್ಯಸಂಗಾತಿ, ಸಹಪಾಠಿ, ಗೆಳತಿ, ಆಪ್ತರಲ್ಲಿ ಊಟಕ್ಕೆ ಕರೆದು ಉಪಚರಿಸಬೇಕು. ಇವೆಲ್ಲ ಮುಗಿಸುವ ಮೊದಲೇ ಪ್ರಸೂತಿಯಾದವರು 'ಅದೆಷ್ಟು ಒಳ್ಳೊಳ್ಳೆ ಅವಕಾಶಗಳು ಜಾರಿಕೊಂಡವಲ್ಲ!' ಎಂದು ಮರುಗದೇ ಇರುವದಿಲ್ಲ. ನನ್ನವಳಿಗೆ ಇವುಗಳಲ್ಲಿ ಒಂದಂಶವೂ ದೊರಕಲೇ ಇಲ್ಲವೆಂದು ನೆನೆದಾಗೊಮ್ಮೆ ಕಸಿವಿಸಿಯಾಗುತ್ತದೆ.



ವಿವಾಹದ ಹೊಸದರಲ್ಲಿ 'ನೀವೇ ನನ್ನ ಸರ್ವಸ್ವ' ಎಂದು ನೀನು ಉದ್ಗರಿಸಿದ್ದು ನೆನಪಿದೆಯೇ? ಎಲ್ಲರೂ ಹೀಗೇ ಹೇಳುತ್ತಿರಬಹುದು - ನವವಿವಾಹಿತರು. ಕೆಲವರು ಪತಿಯೇ ದೇವರು ಅನ್ನುವವರು ಇಲ್ಲದಿಲ್ಲ. ಬೇರಾರೂ ಇಂಥ ಮಾತುಗಳನ್ನು ಹೆಚ್ಚಾಗಿ ಪರಿಗಣಿಸದಿದ್ದರೂ ನಾನು ಮಾತ್ರ ಈ ಮಾತನ್ನು ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಬೇಕೆಂದಿದ್ದೇನೆ.

ಈ ವಾರಾಂತ್ಯದಲ್ಲಿ ನಾನು ಜಯಪುರಕ್ಕೆ ಬಂದಾಗ ನಿನ್ನ ಬಯಕೆಯೂಟದ ಕಾರ್ಯಕ್ರಮ ಇಟ್ಟುಕೊಂಡಿದ್ದೇನೆ. ನಂಬುತ್ತೀಯಾ? ನನಗೆ ಮೆಚ್ಚಿಗೆಯಾದ ನವಿಲುಹಸರು ಬಣ್ಣದ ಜಿನ್ನಿಶಾಟ್ ರೇಶಿಮೆ ಸೀರೆಯನ್ನು ಖರೀದಿಸಿದ್ದೇನೆ. ಪೋಲಕ ಹೊಲಿಸಿದ್ದೇನೆ. ಹಲವು ಬಗೆಯ ತರಕಾರಿ, ಹಣ್ಣು-ಹಂಪಲು ಹೂಗಳನ್ನು ಕೊಂಡು ತಂದು ನಾನೇ ಹಬ್ಬದಡಿಗೆ ಮಾಡುವೆ. ಬಾಸುಂದಿ, ಕೆನೆಹಾಕಿ ಫ್ರುಟ್‌ಸೆಲೆಡ್ ತಯಾರಿಸುವೆ. ಪಲ್ಯ, ತಾಳ್ಯ, ಹಪ್ಪಳ, ಸಂಡಿಗೆ, ವಡೆ, ಉಪ್ಪಿನಕಾಯಿ, ಪೂರಿ, ಭಜಿಗಳ ವಿಶೇಷ ಊಟ. ಬೇರಾರನ್ನೂ ಆಮಂತ್ರಿಸದೇ ನೀನೊಬ್ಬಳೇ ವಿಶೇಷ ಅತಿಥಿ. ಚೆನ್ನಾಗಿ ಊಟ ಮಾಡಿ ವಿಶ್ರಾಂತಿಯ ನಂತರದ ಮುಖ್ಯ ಕಾರ್ಯಕ್ರಮ ಹೀಗಿದೆ: ಮಾರುದ್ದ ಜಡೆಯನ್ನು ಹೂವುಗಳಿಂದ ಅಲಂಕರಿಸುವೆ. ಹೊಸ ಸೀರೆಯನ್ನು ಹೇಗೆ ಉಡಬೇಕು ಎಂದು ನಿರ್ದೇಶಿಸುವೆ. ಆರತಿ ಬೆಳಗುವೆ. ನಂತರ ಛಾಯಾಗ್ರಹಣದ ಕಾರ್ಯಕ್ರಮ. ನಿಂತು, ಕುಳಿತು, ಎದುರಿನಿಂದ, ಹಿಂಬದಿಯಿಂದ, ವಿವಿಧ ಸೀರೆ ಮತ್ತು ಕೇಶಾಲಂಕಾರದ ಛಾಯಾಗ್ರಹಣ ಮಾಡುವೆ. ಇಷ್ಟೇ ಅಲ್ಲದೇ ನೀನು ಒಪ್ಪಿದರೆ ಜೋಡಿಯಾಗಿಯೂ ಭಾವಚಿತ್ರ ತೆಗೆಯುವೆ. ಇದು ಹೇಗೆ ಸಾಧ್ಯವೆಂದು ನಿನ್ನ ಸಮಸ್ಯೆ ಇದ್ದಿರಬೇಕಲ್ಲವೇ? ನನ್ನ ಜರ್ಮನ್ ಎಕ್ಸಾಕ್ಟಾ ಕ್ಯಾಮರಾದಲ್ಲಿ ಸರ್ವ ರೀತಿಯ ಏರ್ಪಾಡುಗಳೂ ಇವೆ. ಎಲ್ಲವನ್ನೂ ಸಿದ್ಧಮಾಡಿ, ನಾವೂ ಸಿದ್ಧರಾಗಿನಿಂತ ನಂತರ ಕ್ಯಾಮರಾ ಗುರಿಯಿಟ್ಟರೆ ತನ್ನಷ್ಟಕ್ಕೆ ಕ್ಲಿಕ್ ಮಾಡಬಲ್ಲುದು. ಈ ಎಲ್ಲ ಚಟುವಟಿಕೆಯಿಂದಾಗಿ ಅತ್ತೆ, ತಾಯಿ, ಪತಿ, ಅಡಿಗೆಯವ, ಸಖಿ, ಛಾಯಾಚಿತ್ರಗಾರ ಮೊದಲಾದವರನ್ನು ಒಬ್ಬನಲ್ಲಿಯೇ ಗುರುತಿಸುವಂತಾಗುವದಿಲ್ಲವೇ?

ಉದರದಲ್ಲಿ ಬೆಳೆಯುತ್ತಿರುವ ಮಗುವಿನ ಚಟುವಟಿಕೆಗಳನ್ನು ಅರಿತು ತುಂಬಾ ಮೋಜೆನಿಸಿತು. ಯಾವುದಾದರೂ ಕೆಲಸದಲ್ಲಿ ಮೈಮರೆತಾಗ ತುಳಿತದಿಂದ ತನ್ನ ಇರವಿನ ಬಗ್ಗೆ ಎಚ್ಚರಿಸುತ್ತಾನೆಯೇ? ಕಲಿಯುಗದ ಮಕ್ಕಳು, ಹುಟ್ಟುವ ಮೊದಲೇ ಗುಂಡಾಗಿರಿಯ ಸ್ವಯಂ ತರಬೇತಿಯನ್ನು ಹೊಟ್ಟೆಯಲ್ಲಿ ಮಾಡುತ್ತಿರುವಂತೆ ಕಾಣುತ್ತದೆ. ನೆರೆಹೊರೆಯ ಮಕ್ಕಳು ಪಟಾಕ್ಷಿ ಸಿಡಿಸಿದಾಗೊಮ್ಮೆ ಬೆಚ್ಚಿ ಬೀಳುತ್ತಾನೆಯೇ? ಬರುವ ವರ್ಷಗಳಲ್ಲಿ ನೀನೂ ಪಟಾಕಿಗಳನ್ನು ಬೇಕಷ್ಟು ಹಾರಿಸುವಿಯಂತೆ ಎಂದು ತಿಳಿ ಹೇಳಿದಾಗ ಸಮ್ಮತಿಸುವಂತೆ ಸುಮ್ಮನಿರುತ್ತಾನೆಯೇ? ಬಹಳಷ್ಟು ಆಶ್ವಾಸನೆಗಳನ್ನು ಕೊಡಲು ಹೋಗಬೇಡ. ಅವುಗಳನ್ನು ಈಗಲೇ ನಮೂದಿಸಿಕೊಂಡು, ಮುಂದೆ ತನ್ನ ಬೇಡಿಕೆಗಳನ್ನು ಮುಂದೆ ಇಟ್ಟರೆ ಕಷ್ಟಕ್ಕಿಟ್ಟುಕೊಂಡೀತು! ನಾವೆಲ್ಲ ಪಾಲಕರ ಆಜ್ಞಾಧಾರಕರಾಗಿ ನಡೆದುಕೊಂಡರೂ ಮಿತ ಸಂತಾನದ ಈ ಪೀಳಿಗೆಯವರು ತಂದೆ-ತಾಯಿಗಳನ್ನೆ ತರಾಟೆಗೆ ತೆಗೆದುಕೊಂಡರೆ ಆಶ್ಚರ್ಯವಿಲ್ಲ.

-6-

ಜೋಬನೇರ, 25-5-1967

ನಿನ್ನ ಚೊಚ್ಚಿಲು ಕೃತಿಯಾದ ಪುತ್ರ, ವಿಕಾಸನನ್ನು ಪಡೆದು, ಕನಸಿನ ಲೋಕದಲ್ಲಿ ವಿಹರಿಸುತ್ತಿರಬಹುದಲ್ಲವೆ? ನನ್ನ ಚೊಚ್ಚಲು ಕೃತಿ ('ನಾನೂ ಅಮೇರಿಕೆಗೆ ಹೋಗಿದ್ದೆ') ಪ್ರಕಟಣೆಗೆ ಸ್ವೀಕೃತವಾಗಿದೆ - ಎಂದು ಸಾರಲು ಈ ಪತ್ರ ಬರೆಯುತ್ತಿದ್ದೇನೆ. ಧಾರವಾಡದ ಮನೋಹರ ಗ್ರಂಥಮಾಲೆಯ ಜಿ.ಬಿ.ಜೋಶಿಯವರಿಂದ ಹಾಗೆಂದು ಪತ್ರ ಬಂದಿದೆ.

ನಿನ್ನ ಸೂಚನೆ ಮನ್ನಿಸಿ ಜಿ.ಬಿ.ಜೋಶಿಯವರೊಡನೆ ಸಂಪರ್ಕ ಬೆಳೆಸಿದ್ದೇ ಉತ್ತಮವಾ

ಯಿತು. ಬರವಣಿಗೆ ಪ್ರಾರಂಭಿಸಿದಾಗ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿದ್ದವು. ವಿಸ್ತೃತವಾಗಿ ವಿವರಿಸಿ ಬರೆಯಬೇಕೆಂದು ನಿನ್ನ ವಾದ. ಹತ್ತು ವಾಕ್ಯಗಳಲ್ಲಿ ಹೇಳಬೇಕಾದ್ದನ್ನು ಒಂದರಲ್ಲಿಯೇ ಹೇಳುವಂತಾದರೆ, ಅದು ಒಳ್ಳೆಯ ಬರವಣಿಗೆ ಎಂಬುದು ನನ್ನ ವಾದ. ಕೊನೆಗೆ ನಾವಿಬ್ಬರೂ ಸೋಲದಿದ್ದರೂ ಹಸ್ತಪ್ರತಿ ಗೆದ್ದಿತು. ನಿನ್ನ ಸಹಕಾರ ಇದ್ದರೆ ಇನ್ನೂ ಕೆಲವು ಪುಸ್ತಕಗಳನ್ನು ರಚಿಸಬಲ್ಲೆ ಎಂಬ ಹುಮ್ಮಸ ಬಂದಿದೆ. ನಿನ್ನ ಮಗ, ಗಿಂಡಿ ಸ್ವಲ್ಪ ದೊಡ್ಡವನಾಗಲಿ, ಅನಂತರ ನೋಡೋಣವಂತೆ.

-7-

ಕಲಕತ್ತಾ, 25-3-1969

ನನ್ನನ್ನು ಹೊತ್ತ ರೇಲುಗಾಡಿ ಏದುತ್ತ, ತೇಗುತ್ತ ಉಸಿರೆಳೆಯುತ್ತ ಹೌರಾ ನಿಲ್ದಾಣ ಬಂದು ಸೇರಿಕೊಂಡಿತು. ಕಣ್ಣು ಹಾಯಿಸಿದಲ್ಲೆಲ್ಲ ಜನಸಮುದ್ರ. ಪ್ರಯಾಣಿಕರನ್ನೆಲ್ಲ ಹೊತ್ತುಕೊಂಡು ಹೋಗಲು ಸಾಕಾಗುವಷ್ಟು ಹಮಾಲರಿದ್ದರೂ ಹೆಚ್ಚಿನ ಸಾಮಾನುಗಳಿಲ್ಲದ ನನ್ನಂಥವರಿಂದ ಅವರಿಗೆ ಯಾವ ಲಾಭವೂ ಆಗುವಂತಿರಲಿಲ್ಲ. ತಿಕೀಟು ಕೊಟ್ಟು ಹೊರ ಬಂದರೆ ಅಲ್ಲಿ ಇನ್ನೂ ಹೆಚ್ಚಿನ ಜನಸಂದಣಿ. ಹೆಚ್ಚಿನವರು ಪ್ರವಾಸಿ, ವ್ಯಾಪಾರಿ, ಇಲ್ಲವೇ ಅತಿಥಿಗಳನ್ನು ಎದುರುಗೊಳ್ಳಲು ಬಂದವರಾಗಿರದೇ ಕಾಲಾಪಹರಣ ಮಾಡಲು ಬಂದ ಸೋಮಾರಿಗಳು. ನಿಲ್ದಾಣದ ಹೆಚ್ಚಿನ ಭಾಗವನ್ನು ಪೂರ್ವ ಪಾಕಿಸ್ತಾನದ ನಿರಾಶ್ರಿತರು ತಮ್ಮದನ್ನಾಗಿ ಮಾಡಿಕೊಂಡು ಸಂಸಾರ ಹೂಡಿ ಬಿಟ್ಟಿದ್ದಾರೆ. ಹಸಿವು, ರೋಗ, ಸಾವುಗಳು ಸಂಭವಿಸುವಂತೆ ಸಂತಾನೋತ್ಪತ್ತಿ ಸದಾಕಾಲವೂ ನಡೆದೇ ಇರುತ್ತದೆ. ಇಂಥ ಜನಸ್ತೋಮಕ್ಕೆ ಸ್ವಚ್ಛತೆಯ ಕಲ್ಪನೆ ಹೇಗೆ ಬರಬೇಕು? ನೋಡಿದೆಡೆ ಹೊಲಸು. ಘ್ರಾಣೇಂದ್ರಿಯ ತಡೆದುಕೊಳ್ಳಲಾರದಷ್ಟು ದುರ್ವಾಸನೆ. ಇನ್ನಿತರ ರೇಲು ನಿಲ್ದಾಣಗಳಿಗಿಂತ ತೀರಾ ಗಲೀಜು ಅನಿಸಿದ್ದರಿಂದ ಹೀಗೇಕೆ? ಎಂದು ರೇಲ್ವೆ ಅಧಿಕಾರಿಯನ್ನು ಕೇಳಿದಾಗ 'ವಿಪರೀತ ಜನ' ಎಂದ. ಕೆಲವರಾದರೂ ಸ್ವಚ್ಛತೆಯತ್ತ ಲಕ್ಷ್ಯಹರಿಸಬಹುದಲ್ಲ? ಎಂದಾಗ 'ಪಾಪ, ಬಡವರು' ಎಂದು ಇಂಥ ವಿಚಾರ ವಿನಿಮಯದಲ್ಲಿ ತನಗೆ ಆಸಕ್ತಿ ಇಲ್ಲವೆಂದು ತೋರಿಸಿಕೊಂಡ.

ಹೌರಾ ನಿಲ್ದಾಣದಲ್ಲಿಯ ಹೆಚ್ಚಿನ ಶ್ರಮಜೀವಿಗಳು ಬಿಹಾರಿಗಳು. ರಿಕ್ಷಾ ಎಳೆಯುವವರೂ ಅವರೇ. ಮೂರು ರೂಪಾಯಿಗಳಿಗೆ ಸಿಯಾಲ್ದಾ ಮುಟ್ಟಿಸುತ್ತೇನೆಂದ ಒಬ್ಬಾತ. ನೊಗವನ್ನೆತ್ತಿಕೊಂಡಾಗ, ಗೇಣು ಹೊಟ್ಟೆಗಾಗಿ ಮಾನವನು ಪಶುವಾಗಿ ದುಡಿಯಬೇಕಾಗಿ ಬಂದ ಪ್ರಮೇಯ ನೋಡಿ ಕರುಳು ಕಿವಿಚಿದಂತಾಯಿತು. ಆ ಬಡಕಲು ದೇಹಿಯನ್ನೇ ರಿಕ್ಷಾದಲ್ಲಿ ಕೂಡ್ರಿಸಿ ನಾನೇ ಅದನ್ನು ಎಳೆದರೆ ಶಿವನು ಮೆಚ್ಚದಿರಲಾರ, ಅನಿಸಿತು. ಲಭ್ಯವಿದ್ದಾಗಷ್ಟೇ ಉಂಡು ಸಿಗದಿದ್ದಾಗ ಕಡ್ಡಾಯದ ಉಪವಾಸ ಮಾಡಿದ ಆ ಬಡ ಬಿಹಾರಿ, ವಾಯುವೇಗದಿಂದ ಓಡುವಾಗ ಹವೆಯಲ್ಲಿ ಹಾರುತ್ತಿರಬಹುದೇ? ಎಂಬ ಭಾಸವಾಗುತ್ತಿತ್ತು. ಅವನ ಸಂಸಾರ ಚಕ್ರದಂತೆಯೇ ರಿಕ್ಷಾ ಗಾಲಿಗಳು ಯಾವ ಏರಿಳಿತಗಳಿಲ್ಲದೇ ಏಕಪ್ರಕಾರವಾಗಿ ತಿರುಗುತ್ತಿದ್ದವು. ಸಮಾಜವಾದ, ಸಮಾನತೆ, ಪ್ರಜಾಪ್ರಭುತ್ವವೆಂದು ಘಂಟಾಘೋಷವಾಗಿ ಸಾರಿದರೂ ಇದೊಂದು ಶೋಷಣೆ, ಗುಲಾಮಗಿರಿ ಎಂದು ವಿಚಾರ ಮಂಥನದಲ್ಲಿ ಮೈಮರೆತಾಗ, ಅವನು ಮಾತ್ರ ಈ ಯಾವ ಜಂಜಾಟಕ್ಕೂ ಕಿವಿಗೊಡದೇ ಆಮೆ ವೇಗದಿಂದ ಓಡುವ ಟ್ರಾಮ್, ಹೊಗೆ ಕಾರುವ ಬಸ್, ನಡು ರಸ್ತೆಯಲ್ಲಿ ಓಡುವ ಕಾರುಗಳ ನಡುವೆ ಹಾವಿನಂತೆ ಅಂಕು-ಡೊಂಕಾಗಿ ದಾರಿ ಮಾಡಿಕೊಂಡು ಓಡುತ್ತಿದ್ದ. ಅಪಘಾತ ಸಂಭವಿಸುವ ಸಾಧ್ಯತೆ ಇದೆ ಎಂದೆನಿಸಿದಾಗೊಮ್ಮೆ ಕೈಯಲ್ಲಿರುವ ಗೆಜ್ಜೆಯ ನಾದ ಹೊರಡಿಸಿ ಎಚ್ಚರಿಸುತ್ತಿದ್ದ. ಬಂಗಾಲಿಗಳು ಬಿಹಾರಿಗಳಿಗೆ ಪಾಪ, ಬಡವರು ಎನ್ನುವ ಬದಲಾಗಿ ಅವರೆಲ್ಲ ಜಗಳಗಗಳು, ತಮ್ಮ ರಾಜ್ಯದ ಹಣ ಹೀರಿಕೊಳ್ಳುತ್ತಾರೆ, ಎಂದರೆ ಅದೆಂತಹ ವಿರೋಧಾಭಾಸವಲ್ಲವೇ?

ಬೃಹತ್ ಹೌರಾ ಸೇತುವೆ ಮೇಲೆ ರಿಕ್ಷಾ ಓಡು



ನನ್ನ ಹೆಂಡ್ತಿ "ಗೃಹಿಣಿ ಹಾಗೂ ಮನೆ" ಎಂಬ ಬಗ್ಗೆ ಭಾಷಣ ಮಾಡಲು ಊರೂರು ತಿರುಗುತ್ತಾಳೆ..... ಆದ್ದರಿಂದ.....!

ತ್ತಿದ್ದಾಗ, ಆನೆಯ ಬೆನ್ನ ಮೇಲೆ, ಇರುವೆ ಹರಿದಾಡಿದಂತೆ ಅನಿಸಿತು. ಟ್ರಾಮ್, ಟ್ಯಾಕ್ಸಿ, ಟ್ರಕ್, ಬಸ್, ಕೈಗಾಡಿಗಳ ಜೊತೆಯಲ್ಲಿ ಕಾಲುನಡಿಗೆಯ ಪ್ರವಾಹವೇ ಬ್ರಿಜ್ ಮೇಲೆ ಹೊರಟರೆ, ಕೆಳಗಡೆ ಪತಿತ ಪಾವನೀ ಗಂಗಾಮಾತೆ ಹರಿಯುತ್ತಿದ್ದಾಳೆ. ಇಂದು ಮಾನವನ ಪಾಪಕರ್ಮಗಳು ಅತ್ಯಧಿಕವಾಗಿದ್ದರಿಂದ ಅವನ್ನು ತೊಳೆದು ನಿರ್ಮಲಗೊಳಿಸುವದು ಬಡಪಾಯಿ ಭಾಗೀರಥಿಯಿಂದ ಸಾಧ್ಯವೇ? ಎಂದು ಹೇಳಲಾಗದು. ಆದರೆ ಅವನ ದನಕರು, ಅವನ ಶಾರೀರಿಕ ಕೊಳೆ, ಬಚ್ಚಲು, ಕಕ್ಕಸುಗಳನ್ನು ಮಾತ್ರ ಶುಭ್ರ ಮಾಡುತ್ತಾಳೆ. ಇದರಿಂದಾಗಿ ನದಿ ಪೂರ್ತಿ ಕಲುಷಿತವಾಗಿದೆ. ಅದರಲ್ಲಿ ಎಷ್ಟು ಸಹಸ್ರ ರೋಗಾಣುಗಳು ಇವೆಯೋ ಏನೋ! ಭಕ್ತರು ಮಾತ್ರ ಅದೇ ತೀರ್ಥವೆಂದು ಸೇವಿಸುವಾಗ, ಅಯ್ಯೋ ಅಜ್ಞಾನಿಗಳು! ಎಂದು ಅನಿಸದಿರದು. ಸೇತುವೆಯ ಮೇಲೆ ಬಂಗಾಲಿ ವ್ಯಾಪಾರಿಗಳು ಕೆಲಸಕ್ಕೆ ಬಾರದ ಸಾಮಾನುಗಳನ್ನು ಅವು ಅತ್ಯಮೂಲ್ಯವೆಂದೂ ಈ ಬೆಲೆಗೆ ಬೇರೆಲ್ಲಿಯೂ ಸಿಗಲಾರವೆಂದೂ ಗಿರಾಕಿಗಳಿಗೆ ಮನವರಿಕೆ ಮಾಡುವದರಲ್ಲಿಯೇ ಮೈಮರೆತಿದ್ದರು. ಅವರಲ್ಲಿಯ ತೀವ್ರ ಸ್ಪರ್ಧೆಯಿಂದಾಗಿ ಒಬ್ಬ ಗಿರಾಕಿಗೆ ನಾಲ್ಕು ಅಂಗಡಿಕಾರರು ಏಕಕಾಲಕ್ಕೆ ಪ್ರವಚನ ಕೇಳಿಸುವದು ತೀರ ಸಾಮಾನ್ಯ. ಈ ತಂಡದಿಂದ ಬದುಕಿಕೊಳ್ಳಲು ಪಲಾಯನ ಮಾಡಿದರೆ, ಇನ್ನೊಂದು, ಮಗುದೊಂದು ತಂಡ, ತಲೆ ತಿಂದು ಜೇಬು ಖಾಲಿ ಮಾಡದೆ ಇರುವದೇ ಇಲ್ಲ.

ಕಲಕತ್ತಾ ಹೆಚ್ಚು ನೋಡುವಂತಾಗದಿದ್ದರೂ ಕಂಡಷ್ಟಕ್ಕೆ ವಾಕರಿಕೆ ಬರಿಸುವಂತೆ ಇತ್ತು. ಲಾರ್ಡ್ ಬೆಂಟಿಂಕನ ಕಾಲದಲ್ಲಿ ಕಟ್ಟಿದ ಕಟ್ಟಡಗಳು ಸಾಯಲಾರದೇ ಉಸಿರು ಬಿಗಿ ಹಿಡಿದು ನಿಂತಿವೆ. ಸಂತಾನ ಏಕಪ್ರಕಾರವಾಗಿ ಬೆಳೆಯುತ್ತಿದ್ದರೂ ಆ ಕಿರಿದಾದ ಕಟ್ಟಡಗಳಲ್ಲಿಯೇ ಕಿಕ್ಕಿರಿದು ತುಂಬಿ ಜೀವಿಸುತ್ತಿದ್ದಾರೆ. ಬಡವರಂತೂ ಹಾಳು ಬಿದ್ದ ಕಟ್ಟಡ, ಪಾರ್ಕು, ಫುಟ್‌ಪಾತ್‌ಗಳನ್ನೆಲ್ಲ ತಮ್ಮವನ್ನಾಗಿ ಮಾಡಿಕೊಂಡಿದ್ದಾರೆ. ಗಟಾರಗಳಲ್ಲಿ ಹರಿಯಬೇಕಾಗಿದ್ದ ಕೊಳಚೆ ನೀರನ್ನು ರಸ್ತೆಗಳಲ್ಲಿಯೇ ಬಿಟ್ಟಿದ್ದರಿಂದ ಧೋತರ, ಸೀರೆಗಳನ್ನು ಮೇಲೆತ್ತರಿಸಿಕೊಂಡು ಓಡಾಡುವದು ವಾಡಿಕೆ. ಓಡಲಾರದೇ ಕುಂಟುತ್ತ ಬರುವ ನಗರ ಸಾರಿಗೆ ಬಸ್ಸುಗಳು ದಾರಿಹೋಕರ ಮೇಲೆ ನಾರುವ ನೀರನ್ನು ಸಿಂಪಡಿಸಿದಾಗೊಮ್ಮೆ ಬೈಗಳ ಸುರಿಮಳೆ ಕೇಳಿಸಿಕೊಳ್ಳುವಂತಾಗುತ್ತದೆ. ಮುಂಬಯಿಯಲ್ಲಿ ಇನ್ನಿತರ ಸಾರಿಗೆಗೆ ಅಡಚಣೆಯುಂಟಾಗುತ್ತದೆಂದು, ಟ್ರಾಮ್ ರಸ್ತೆಗಳನ್ನು ರದ್ದು ಮಾಡಿ ದಶಕಗಳೇ ಕಳೆದರೂ, ಬಂಗಾಲಿಗಳು ಅವನ್ನು ಉಳಿಸಿಕೊಳ್ಳುವದರಲ್ಲಿ ಯಶಸ್ವಿಯಾಗಿದ್ದಾರೆ. ರಸ್ತೆಯ ಇಕ್ಕೆಲದರಲ್ಲಿಯೂ ಎಳೆ ನೀರಿನ ಚಿಪ್ಪುಗಳು, ರಸಗುಲ್ಲಾ ತಿಂದು ಒಗೆದ ಮಣ್ಣಿನ ಕುಡಿಕೆಗಳು ರಾಶಿ ಬಿದ್ದಿವೆ. ರಸ್ತೆಗಳೆಲ್ಲ ದುರಸ್ತಿ ಕಾಣದೇ ವರ್ಷಗಳೇ ಕಳೆದಿರಬೇಕು. ಅಂತೆಯೇ ಅಲ್ಲಲ್ಲಿ ಹೊಂಡ-ಕುಳಿಗಳು ಬಿದ್ದು ವಾಹನಗಳ ಓಡಾಟಕ್ಕೆ ತೀವ್ರ ಅಡಚಣೆಯಾಗುತ್ತದೆ. ಇರುವೆ ಸಾಲುಗಳಂತೆ ಹೊರಟ ವಾಹನಗಳು ಗಕ್ಕನೆ ನಿಂತವೆಂದರೆ, ತಿರುಗಿ ಹೊರಡಲು ಒಂದು ಗಂಟೆಯೇ ಬೇಕಾಗುವದು.

ಝಾಸಿ, 11-8-1969

ಬೆಂಗಳೂರಿಗೆ ಹೋದಾಗ ಜೊತೆಯಲ್ಲಿ ವಿಕಾಸ, ಕಾಕಿಯವರನ್ನು ಕರೆತಂದು ಜಾಣತನ ಮಾಡಿದೆ. ನಿನ್ನ ಮಗನ ಜ್ಞಾಪಕ ಶಕ್ತಿ ಅಗಾಧವಾದದ್ದು. ಎಷ್ಟೋ ಕಾಲದ ನಂತರ ನನ್ನನ್ನು ನೋಡಿದರೂ, ಒಂದಿಷ್ಟೂ ಅನುಮಾನ ಪಡದೇ ಬಾಪ್ಪಾ! ಬಾಪ್ಪಾ! ಎಂದು ಓಡಿಬಂದು ಬಿಗಿದಪ್ಪಿದ. ಅದೇ ಪರಿಚಯವಿಲ್ಲದವರು ಕರೆದರೆ, ಮಾತನಾಡಲು ಯತ್ನಿಸಿದರೆ, ಕಾಕಿಯವರ ಹಿಂದೆ ಮಿಸುಕಾಡದೇ ಅಡಗಿಕೊಂಡು ಬಿಡುತ್ತಾನೆ ಕಳ್ಳ. ಮಾತಿನಲ್ಲಿ ನಿನ್ನ ಹೆಸರು ಬಂದರೆ ಸಾಕು, ಅಮ್ಮ, ಅಮ್ಮ ಎಂದು ನೆನಪಿಸಿಕೊಳ್ಳುತ್ತಾನೆ. ಅಲ್ಲದೆ ಅಮ್ಮಾ-ಜಯಪುರ, ಬಾಪ್ಪಾ-ಕಲಕತ್ತಾ ಎಂದು ತನ್ನ ತೊದಲು ಮಾತಿನಿಂದ ಎಲ್ಲರಿಗೂ ಹೇಳಲು ಕಲಿತಿದ್ದಾನೆ. ಬರುವವರಿಗೆಲ್ಲ ನಿನ್ನ ಸೀರೆ ತೋರಿಸಿ ಅಮ್ಮಾ ಎನ್ನುತ್ತಾನೆ. ಕಾಶ್ಮೀರಿ ಕಂಬಳಿಯ ಮೇಲೆ ನಿನ್ನ ಸೀರೆ ಹಾಸಿದಾಗಲೇ ಅವನಿಗೆ ಸುಖ ನಿದ್ರೆ ಬರುವದು. ಸದಾಕಾಲ ನಿನ್ನ ಬಗ್ಗೆ ಏನಾದರೂ ಹೇಳುತ್ತಿದ್ದರೆ ಅವನಿಗೆ ಖುಷಿಯೋ ಖುಷಿ. ನಿನ್ನಮ್ಮನ ಹೆಸರು ಹೇಳಿದ ಹೊರತು ತಿಂಡಿಕೊಡುವದಿಲ್ಲವೆಂದು ಕೀಟಲೆ ಮಾಡಿದಾಗ 'ಜೊ-ಶ-ನಾ' ಎಂದು ಹೇಳುತ್ತಾನೆ. ತುಂಬ ಮುದ್ದಾಗಿ ಕಾಣುತ್ತಾನೆ. ಮನೆಯಲ್ಲಿ ಇದ್ದಾಗೆಲ್ಲ ನನ್ನನ್ನು ಅಂಟಿಕೊಂಡೇ ಇರುತ್ತಾನೆ.

ಬೃಹತ್ ಟೇಬಲ್ಲಿನ ಮೇಲೆ ನಿನ್ನ ಪುಟ್ಟ ಕಂದನನ್ನು ಕೂಡ್ರಿಸಿಕೊಂಡು ಈ ಪತ್ರ ಬರೆಯುತ್ತಿದ್ದೇನೆ. ತೊಂದರೆ ಮಾಡಿಯಾನು, ಎಂದು ಕಾಕಿಯವರು ಕರೆದರೆ, ಬರುವದಿಲ್ಲವೆಂದು ತನ್ನ ದೃಢ ನಿರ್ಧಾರವನ್ನು ಸಾರಿಯೇ ಬಿಟ್ಟ. ಅಮ್ಮನಿಗೆ ಪತ್ರ ಬರೆಯುತ್ತೇನೆಂದಾಗ ಅದನ್ನು ಮುಟ್ಟಿ, ಮುಟ್ಟಿ ಅಮ್ಮಾ? ಎಂದು ಕೇಳಿದ. ಏನು ಬರೆಯಲಿ ಎಂದು ಕೇಳಿದಾಗ, ಬಿ...ಕಾ...ಚ ಎಂದು ಗಟ್ಟಿಸಿ ಹೇಳಿದ. ಅಮ್ಮನ ಬಗ್ಗೆ ನೂರಾರು ಪ್ರಶ್ನೆ ಕೇಳಿ ಕೊನೆಗೆ ತಾನೂ ಒಂದು ಪತ್ರ ಬರೆಸುತ್ತೇನೆಂದು ಹಾಳೆಯ ಮೇಲೆ ಗೀಜುತ್ತ ಕುಳಿತಿದ್ದಾನೆ. ನಿನ್ನ ಭಾವಚಿತ್ರ ತೋರಿಸಿದಾಗ, ಕಣ್ಣುಗಳನ್ನು ಅರಳಿಸಿ, ನಗುಮುಖದಿಂದ ದೊಡ್ಡ ಧ್ವನಿತೆಗೆದು, ಕರೆಯುವಂತೆ ಅಮ್ಮಾ, ಅಮ್ಮಾ ಎಂದು ಕುಣಿಯುತ್ತಾನೆ. ಅವಳು ನಿನಗೆ ಏನೆಂದು ಕರೆಯುತ್ತಾಳೆ ಎಂದರೆ, ''ಗುಂಡೂ'' ಎಂದು ರಾಗವಾಗಿ ಹೇಳುತ್ತಾನೆ. 'ಅದೇ ನಿನ್ನ ಹೆಸರೇ?' ಎಂದು ಪ್ರಶ್ನಿಸಿದಾಗ, ಅಲ್ಲವೆಂಬಂತೆ ತಲೆಯಲ್ಲಾಡಿಸುತ್ತ ಬಿ..ಕಾ...ಚ(ವಿಕಾಸ) ಅನ್ನುತ್ತಾನೆ. ಅಮ್ಮ ನಿನಗೇನು ಮಾಡುತ್ತಾಳೆ ಎಂದರೆ ಎಡ ಬಲ ಕೆನ್ನೆಗಳನ್ನು ತೋರಿಸುತ್ತ 'ಪುಚು ಪುಚು' ಮುದ್ದಿನ ಮಳೆ ಬೀಳಿಸುತ್ತಾಳಂತೆ. ಜಯಪುರಕ್ಕೆ ಹೋಗುತ್ತೀಯಾ? ಎಂದರೆ ಅಮ್ಮಳೇ ಇಲ್ಲಿಗೆ ಬರಲಿ, ಎನ್ನುತ್ತಾನೆ. ಮನೆಯಲ್ಲಿ ಇದ್ದಷ್ಟು ಸಮಯವೂ 'ಟಾಮಿ'ಯಂತೆ ನನ್ನ ಹಿಂದೆಯೇ ಸುತ್ತುತ್ತಿರುತ್ತಾನೆ. ಬಚ್ಚಲು, ಕಕ್ಕಸುಗಳಿಗೆ ಹೋದಾಗ, ಹೊರಬರುವದನ್ನೇ ನೋಡುತ್ತ ಕಾದಿರುತ್ತಾನೆ.

ವಿಕಾಸನಿಗೆ ನಯ, ನಾಜೂಕು, ಮುಂಜಾಗ್ರತೆ ವಿಪರೀತ. ಗೂಟಕ್ಕೆ ತೂಗು ಹಾಕಿದ ಶರ್ಟು ಕೆಳಗೆ ಬಿದ್ದರೆ, ಅದನ್ನು ಹಾಸಿಗೆಯ ಮೇಲೆ ಇಟ್ಟು ಬಂದು ವರದಿ ಮಾಡುವ. ಕಸ-ಕಡ್ಡಿಯನ್ನು ಬುಟ್ಟಿಗೇ ಸೇರಿಸಿ, ಅದನ್ನು ಒಯ್ದು ಕಾಗದ ಝಾಡಿಸಿ ಟೇಬಲ್ಲಿನ ಮೇಲಿಟ್ಟು ಗಾಳಿಗೆ ಹಾರಿ ಹೋಗದಂತೆ ಭಾರವಾದ ವಸ್ತುವನ್ನು ಇಡುವ. ಅಡುಗೆಗೆ ಬೇಕಾಗುವ ಈರುಳ್ಳಿ, ಬಟಾಟೆಗಳನ್ನು ಬುಟ್ಟಿಯಿಂದ ಅವನೇ ತಂದು ಕೊಡಬೇಕು. ಥರ್ಮಾಸು, ಥರ್ಮಾಮೀಟರಗಳನ್ನು ಕೂಡ ಅತ್ಯಂತ ಜಾಗರೂಕತೆಯಿಂದ ತಂದುಕೊಡುವನು. ಅವನು ಬೀಳುವದು, ಅಳುವದು, ಹಟ ಮಾಡುವದು ಇಲ್ಲವೇ ಇಲ್ಲವೆಂದರೂ 'ಅತಿಶಯೋಕ್ತಿಯಾಗಲಾರದು. ಅವನ ನಗುಮುಖ ಕಂಡಾಗೊಮ್ಮೆ ಅಭಿಮಾನ ಉಕ್ಕಿಬಾರದಿರದು. ವಧುಪರೀಕ್ಷೆ ಮಾಡಿದ್ದು ಒಬ್ಬಳನ್ನೆ, ಪಡೆದದ್ದು ಒಬ್ಬಮಗನನ್ನೆ, ಪ್ರಕಟಿಸಿದ್ದೂ ಒಂದೇ ಪುಸ್ತಕವಾದರೆ ಏನಂತೆ? ಇವೆಲ್ಲ ಅದ್ವಿತೀಯವಾದ

ವೆಂದು ಕಂಡು, ಕೇಳಿದವರಿಂದ ಬೆನ್ನು ಚಪ್ಪರಿಸಿ ಕೊಳ್ಳುವಂತಾಗಿದೆ. ಮೂರುವರೆ ವರ್ಷಗಳ ವೈವಾಹಿಕ ಜೀವನದಲ್ಲಿ ಇವೇನು ಕಡಿಮೆ ಸಾಧನೆಯೇ? ಅಮೇರಿಕೆಯ ಪ್ರವಾಸಕಥನದ ಪ್ರಪ್ರಥಮ ಕೃತಿಗೆ, ಅದರ ವಸ್ತು ನಿಷ್ಠೆ, ತಿಳಿಹಾಸ್ಯ, ರಂಜಕ ನಿರೂಪಣೆ ಮತ್ತು ಸರಳ ಭಾಷೆಗಳಿಗಾಗಿ ದೇಶದ ಮೂಲೆ-ಮೂಲೆಯಲ್ಲಿರುವ ಕನ್ನಡಿಗರಿಂದ ಪ್ರಶಂಸಾಪತ್ರಗಳು ಬರಲಾರಂಭಿಸಿವೆ.

ವಿಕಾಸನಿಗೆ ಮನೆಯಲ್ಲಿ ಲಭ್ಯವಿರುವ ಸಾಮಾನುಗಳೇ ಆಟಿಕೆಗಳು. ವಿವಿಧ ಆಳತೆಯ ಡಬ್ಬಿಗಳು ಸಿಕ್ಕರೆ, ಒಂದರಲ್ಲಿ, ಇನ್ನೊಂದನ್ನು ಸೇರಿಸಿ ಮುಚ್ಚಳ ಹಾಕಿ, ತೆಗೆಯುತ್ತ ತಾಸಿಗೂ ಮಿಕ್ಕಿ ಅವನು ಆಡಬಲ್ಲ. ಉಳ್ಳಾಗಡ್ಡೆ-ಬಟಾಟೆಗಳನ್ನು ತಲೆಯ ಮೇಲಿಟ್ಟುಕೊಂಡು, 'ಕಾಂದೆ-ಬಟಾಟೆ' ಎಂದು ಮನೆಯವರಿಗೆ ಮಾರಬಲ್ಲ. ಕೈಯಲ್ಲಿ ಕೆಟ್ಲೆ ಹಿಡಿದು ''ಚಾಯ್ ಚಾಯ್'' ಎಂದು ಪ್ರವಾಸದಲ್ಲಿ ರೇಲ್ವೆನಿಲ್ದಾಣದಲ್ಲಿ ಕಂಡದ್ದನ್ನು, ಕೇಳಿದ್ದನ್ನು ಅನುಕರಿಸಬಲ್ಲ. ಕೈಗೆ ಎಟುಕುವ ಎಲ್ಲ ಬೂಟು ಚಪ್ಪಲುಗಳನ್ನು ಸಾಲಾಗಿಟ್ಟು, 'ಬಾಟಾ' ಅಂಗಡಿಯನ್ನು ಮಾಡುವ. ಕಾಲು ಚೀಲಗಳನ್ನು ಒಣಹಾಕಿ ಧೋಬಿ ಅಂಗಡಿಯನ್ನು ನಡೆಸುವ. ಓತಿಕಾಟ, ಚಿಟ್ಟೆಗಳನ್ನು ಹಿಡಿಯಲು ಹೋಗುವದು, ಕಪ್ಪೆಗಳನ್ನು ಓಡಿಸುವದು ಅವನ ಪ್ರೀತಿಯ ಕೆಲಸ. ಯಾರೂ ನೋಡುವದಿಲ್ಲವೆಂದು ಖಾತ್ರಿಮಾಡಿಕೊಂಡು ಕೆಸರು, ಸಗಣಿಗಳಲ್ಲಿ ಕೋಲು ಹಾಕಿ ಆಡುವದೂ ಉಂಟು! ಸ್ವಲ್ಪ ಧ್ವನಿ ಏರಿಸಿ, ಕರೆದರೆ ಸಾಕು, ಅಷ್ಟಂತನಂತೆ, ಧಾವಿಸಿ ಬರುತ್ತಾನೆ. ''ಕೆಟ್ಟ ಕೆಲಸ ಮಾಡುತ್ತಾನೆಂದು ಅಮ್ಮನಿಗೆ ಬರೆಯಲೇ?'' ಎಂದಾಗ ಬೇಡ, ಸಭ್ಯನಾಗಿ ನಡೆದುಕೊಳ್ಳುತ್ತಾನೆಂದು ಬರೆಯಲು ಸೂಚಿಸುತ್ತಾನೆ. ಅವನಿಗೆ ಈಗ ಕೊಂಕಣಿ, ಸುಲಭವಾಗಿ ಮಾತನಾಡಲು ಬರುತ್ತದೆ. 'ರ' ಅನ್ನುವ ಬದಲಾಗಿ ಮಾತ್ರ 'ಲ' ಅನ್ನುತ್ತಾನೆ.

ಅಜ್ಜ, ಮೊಮ್ಮಗ ಇಬ್ಬರಿಗೂ ರಸಗುಲ್ಲಾಗಳೆಂದರೆ ಪ್ರಾಣ. ಅವನ್ನು ಆಗಾಗ ತಂದು ಎಲ್ಲಿಯಾದರೂ ಅಡಗಿಸಿ ಇಡುತ್ತೇನೆ. ಅವನಿಗೆ ತಿನ್ನುವ ಆಸೆಯಾದಾಗ , ನಾನು ಮಂತ್ರವಾದಿಯಾಗಿ ಛೂಮಂತರ್ ಹಾಡುಗಳನ್ನು ಹೇಳಬೇಕು. ಅಡಿಗೆಮನೆಯ ಕಪಾಟಿನಲ್ಲಿ ಬಂದಿದೆಯೇ ಎಂದು ನೋಡಲು ಓಡಿಸಬೇಕು. ಅನಂತರ ಮಲಗುವ ಕೋಣೆ, ಕತ್ತಲೆ ಕೋಣೆಗಳಲ್ಲಿ ಸಿಗದೇ ಪೆಚ್ಚು ಮುಖಹಾಕಿಕೊಂಡು ಹಿಂತಿರುಗಿದಾಗ ನಾನು ಕುಳಿತಲ್ಲೇ ಚಿಕ್ಕ ಮಡಕೆ ತುಂಬ ರಸಗುಲ್ಲಗಳು ನಳನಳಿಸುತ್ತವೆ! ನೋಡಿ ಅವನ ಬಾಯಿ ನೀರೂರಲಾರಂಭಿಸುತ್ತದೆ. ಹೊಸದಾಗಿ ಕಟ್ಟಿಕೊಟ್ಟ ಜೋಕಾಲಿಯ ಮೇಲೆ ಕುಳಿತು ತೂಗಿಕೊಳ್ಳುತ್ತ ಒಂದೊಂದೇ ರಸಗುಲ್ಲವನ್ನು ಉದರಕ್ಕೆ ಇಳಿಸುತ್ತ ಮರುದಿನ ಇದಕ್ಕೂ ಹೆಚ್ಚು ತರುವಂತೆ ವಿನಂತಿಸಿಕೊಳ್ಳುತ್ತಾನೆ. ನಾವಿಬ್ಬರೂ ಸರಿಸಮಾನರಂತೆ ವರ್ತಿಸುತ್ತಿದ್ದೇವೆ. ಜೊತೆಯಾಗಿ ಆಡುತ್ತೇವೆ, ಓಡುತ್ತೇವೆ, ತಿನ್ನುತ್ತೇವೆ, ಉಣ್ಣುತ್ತೇವೆ, ಬರೆಯುತ್ತೇವೆ, ಮಲಗುತ್ತೇವೆ. ನಾನು ಆಫೀಸಿಗೆ ಇಲ್ಲವೇ ನಿರೀಕ್ಷಣೆಗೆ ಹೋದಾಗ ಮಾತ್ರ ಕಾಕಿಯವರು ಬೇಕೇ ಬೇಕು.

ಸಾಹಸದ ಕಥೆಗಳೆಂದರೆ ಅವನಿಗೆ ಪಂಚಪ್ರಾಣ. ಅಲ್ಪ ಸ್ವಲ್ಪ ವಿರಾಮ ಸಿಕ್ಕರೂ ಸಾಕು, ಧಾವಿಸಿ ಬಂದು ಕಥೆ, ಹೇಳೆಂದು ಗಂಟು ಬಿದ್ದಿರುತ್ತಾನೆ. ಅವುಗಳೆಲ್ಲ ಅವನ ಸುತ್ತಲೇ ಹೆಣೆದಿರುವದ್ದರಿಂದ ಕಿವಿಗೊಟ್ಟು ಆಸಕ್ತಿಯಿಂದ ಕೇಳುತ್ತಿರುತ್ತಾನೆ. ಆ ನಂತರ ಅದನ್ನು ಅಜ್ಜಗೂ ಹೇಳುತ್ತಾನೆ. ಕೇಳಿದಾಗೆಲ್ಲ ಹೇಳುವ ಕಥೆಗಳಲ್ಲಿ ಒಂದು ಮಾದರಿ ಹೀಗಿದೆ-ಕೇಳು, ವಿಕಾಸನಿಗೆ ಖ್ಯಾತ ಬಂಗಾಲಿ ಹುಲಿಯನ್ನು ನೋಡುವ ಮನಸ್ಸಾದ್ದರಿಂದ ಮನೆಯಲ್ಲಿದ್ದ ರಸಗುಲ್ಲಗಳನ್ನು ಕಟ್ಟಿಕೊಂಡು ಸುಂದರಬನಕ್ಕೆ ಬರುತ್ತಾನೆ. ದೊಡ್ಡದೊಂದು ಮರವನ್ನೇರಿ ಕುಳಿತುಕೊಳ್ಳುತ್ತಾನೆ. ಹುಲಿ ಹೊಂಚು ಹಾಕಿ, ಚಿಗರೆಯ ಮೇಲೆ ಜಿಗಿದು, ಅದರ ಮಾಂಸಭಕ್ಷಣ ನಡೆಸಿದ್ದನ್ನು ನೋಡಿ ಜಿಗುಪ್ಸೆಯಾಗುತ್ತದೆ. ಕೆಳಗಿಳಿದು ಬಂದು ಹೆಬ್ಬುಲಿಗೆ ರಸಗುಲ್ಲ ತಿನ್ನಿಸುತ್ತಾನೆ. ಅದರ ರುಚಿಗೆ ಮನಸೋತ ಹುಲಿಯಣ್ಣ

ಇನ್ನೊಂದು, ಮತ್ತೊಂದು, ಮಗುದೊಂದು ಎಂದು ಎಲ್ಲವನ್ನೂ ಮುಗಿಸಿಬಿಡುತ್ತದೆ. ತನ್ನೊಂದಿಗೆ ಮನೆಗೆ ಬಂದರೆ ಇನ್ನಷ್ಟು ಕೊಡುವೆ ಎಂದು ಆಸೆ ತೋರಿಸಿದಾಗ, ಅದು ಬೀದಿ ನಾಯಿಯಂತೆ ಇವನನ್ನು ಹಿಂಬಾಲಿಸಿ ಬರುವದನ್ನು ಪ್ಲಾಸಿಯ ಜನ ಅತ್ಯಂತ ಕುತೂಹಲದಿಂದ ನೋಡುತ್ತ ನಿಂತಿರುತ್ತಾರೆ. ದಾರದಿಂದ ಅದನ್ನು ಜಗಲಿಯ ಕಂಬಕ್ಕೆ ಕಟ್ಟಿಹಾಕಿ, ಕಾಕಿ ಮಾಡಿದ ಸೌತೆಕಾಯಿ ಕಡಬು ತಿನ್ನಿಸುತ್ತಾನೆ. ಹುಲಿರಾಯ ಚಪ್ಪರಿಸಿ ತಿನ್ನುತ್ತ ತಮ್ಮ ಮನೆಯಲ್ಲಿ ಇಂಥ ತಿಂಡಿಗಳೇ ಇಲ್ಲದ್ದರಿಂದ ಶಾಶ್ವತವಾಗಿ ವಿಕಾಸನ ಮನೆಯಲ್ಲೇ ಇರುವದಾಗಿ ಘೋಷಿಸುತ್ತದೆ. ಈಗ ಹುಲಿಯಣ್ಣ, ವಿಕಾಸನ ಗೆಳೆಯ, ಜೊತೆಗಾರ; ಅವನ ಜೋಕಾಲಿಯಲ್ಲಿ ತೂಗಿಕೊಳ್ಳುತ್ತದೆ. ಬೂಟ್-ಚಪ್ಪಲ್ ಖರೀದಿಸುತ್ತದೆ. ಬಟ್ಟೆಗಳನ್ನು ಧರಿಸಲು ಪ್ರಾರಂಭಿಸಿ, ಅವನ್ನು ಸ್ವಚ್ಛಗೊಳಿಸಲು ವಿಕಾಸನ ಅಂಗಡಿಗೇ ಕೊಡುತ್ತದೆ. ಅಪ್ಪನ ಚಿಲ್ಲರೆಯಿಂದ ವಿಕಾಸನು ನಡೆಸುವ ಬ್ಯಾಂಕಿನಲ್ಲಿ ಒಂದು ಖಾತೆ ತೆರೆಯುತ್ತದೆ. ಒಂದು ದಿನ ಅದು ಅಂಗಳದಲ್ಲಿಯೇ ಹೇಸಿಗೆ ಮಾಡಿದಾಗ, ಕೋಪಗೊಂಡ ವಿಕಾಸನು ಸುಂದರಬನಕ್ಕೆ ಹಿಂದಿರುಗುವಂತೆ ಆಜ್ಞಾಪಿಸುತ್ತಾನೆ. ಅದು ಅತ್ತೂ ಕರೆದು, ವಿಕಾಸನ ಕಾಲಿಗೆ ಬಿದ್ದು, ಕ್ಷಮಾಯಾಚನೆ ಕೇಳಿದಾಗ, ದಯಾಮಯಿ ವಿಕಾಸನು ಕ್ಷಮಿಸಿ ರಸಗುಲ್ಲಾ ತಿನ್ನಿಸುತ್ತಾನೆ!

ಪ್ರತಿಸಂಜೆ ವಿಕಾಸ-ಕಾಕಿಯರನ್ನು ಗಂಗಾ ನದಿಯ ತೀರಕ್ಕೆ ಗಾಳಿ ಸೇವನೆಗೆ ಕರೆದೊಯ್ಯುತ್ತೇನೆ. ದಾರಿಯುದ್ದಕ್ಕೂ ವಿಕಾಸನು ಕೇಳುವ ಪ್ರಶ್ನೆಗಳಿಗೆ ಕೊನೆ ಮೊದಲಿಲ್ಲ. ಕೆಲ ಪ್ರಶ್ನೆಗಳಿಗೆ ಉತ್ತರಿಸುವದು ಕಷ್ಟಕ್ಕಿಟ್ಟುಕೊಳ್ಳುತ್ತದೆ. ಹೋರಿ ಪತಿ, ಆಕಳು ಪತ್ನಿಯಾಗಿದ್ದರೆ ಅವು ಜೊತೆಯಾಗಿದ್ದು ಸಂಸಾರವೇಕೆ ಹೂಡುವದಿಲ್ಲ? ಎಂದು ವಿಚಾರಿಸಿದರೆ, ಅದಕ್ಕೇನು ವಿವರಣೆ ಕೊಡುವದು? ದಾರಿಯುದ್ದಕ್ಕೂ ಬಂಗಾಲಿ ಹುಡುಗಿಯರು ಎಷ್ಟು ಕರೆದರೂ ಈತ ಅವರತ್ತ ಕಣ್ಣೆತ್ತಿ ಕೂಡ ನೋಡುವದಿಲ್ಲ. ಇದೂ ಒಳ್ಳೆಯದೇ ಆಯಿತು. ಮದುವೆಗೆ ಆಸೆಪಡುವ ಕನ್ಯೆಯರು ಇವನನ್ನು ಬಿಗಿದಪ್ಪಿ ಚುಂಬಿಸುವದು ನನಗೂ ಮನಸ್ಸಿಗೆ ಬರುವದಿಲ್ಲ. ಹುಡುಗಿಯರಿಗೆ ಇವನನ್ನು 'ಬಿಕಾಚಬಾಬು' ಎಂದು ಕೂಗಿ ಕರೆದೂ ಕರೆದೂ ಚುಡಾಯಿಸಿದಾಗಲೇ ನೆಮ್ಮದಿ. ಇವನು ಮಾತ್ರ ಬಾಪ್ಪಾ-ಕಾಕಿಯರ ಕೈಹಿಡಿದು ಗಜಗಾಂಭೀರ್ಯದಿಂದ ಗಂಗಾ ದರ್ಶನಕ್ಕೆ ಹೊರಟಿರುತ್ತಾನೆ.

-9-

ಪ್ಲಾಸಿ, 6-1-1970


ಕಾಕಾರು ನಮ್ಮನ್ನೆಲ್ಲ ಅಗಲಿ ಸರಿಯಾಗಿ ಒಂದು ವರ್ಷವಾಯಿತು. ನಮ್ಮೆಲ್ಲರಿಂದ ಅತಿ-ದೂರ ಇದ್ದುದರಿಂದಲೋ ಏನೋ, ಅವರ ನೆನಪುಗಳು ದಿನವಿಡೀ ಆವರಿಸಿಬಿಟ್ಟಿದ್ದವು. ಅಂತರಂಗದಿಂದ ತೇಲಿ ಬಂದ ಭಾವನೆಗಳನ್ನು, ಅವರನ್ನೇ ಉದ್ದೇಶಿಸಿ ಬರೆಯಲಾರಂಭಿಸಿದೆ. ಬರೆದು ಮುಗಿಸಿದಾಗ ಕೊಂಚ ನೆಮ್ಮದಿಯೆನಿಸಿತು. ಯಾವ ವಿಳಾಸಕ್ಕೆ ಕಳಿಸುವದೆಂದು ಅರಿಯದೇ ನಿನಗೇ ಕಳಿಸುತ್ತಿದ್ದೇನೆ. ಓದಿ ನೋಡು:

'ನೀನು ನಮ್ಮೆಲ್ಲರನ್ನು ಬಿಟ್ಟು ಯಾವ ಲೋಕಕ್ಕೆ ಹೋಗಿರುವಿ? ಯಾವ ಮೋಡದಾಚೆ ಅಡಗಿರುವಿ? ನಮ್ಮ ಕಿರುಕುಳಗಳಿಂದ ಜಿಗುಪ್ಸೆಯಾಯಿತೇ? ಛೆ! ಎಂಥ ಕ್ಷುಲ್ಲಕ ವಿಚಾರಗಳು. ಜೀವನದ ಸುಂಟರಗಾಳಿ, ಜಡಿಮಳೆ, ಗುಡುಗು, ಮಿಂಚುಗಳಿಗೆ ಅಂಜದೇ, ಅಳುಕದೇ ಸಂಸಾರ ನೌಕೆಯನ್ನು ನಡೆಸಿಕೊಂಡು ಹೋದ ಧೀರ ನಾವಿಕನು ನೀನು. ಪ್ರತಿ ದಿನವೂ ಈಗ ನಿನ್ನ ದರ್ಶನ ಲಾಭ ದೊರೆಯದಿದ್ದರೇನಾಯಿತು? ಕಿವಿಗಳಿಗೆ ನೀತಿಯ ಮಾತು ಕೇಳುವ ಅವಕಾಶ ಸಿಗದಿದ್ದರೇನಾಯಿತು? ನನ್ನಾತ್ಮ ಸದಾ ನಿನ್ನ ಧ್ಯಾನದಲ್ಲಿಯೇ ತೊಡಗಿರುತ್ತದೆ. ದಿನದ ಘಟನೆಗಳ ವರದಿ ನಿನಗೆ ಒಪ್ಪಿಸಬೇಕು. ಸಿದ್ಧಪಡಿಸಿದ ಛಾಯಾಚಿತ್ರಗಳನ್ನು ನಿನಗೆ ತೋರಿಸಬೇಕು ಎಂದು ವಿಚಾರ ಮಾಡುತ್ತಿರುತ್ತೇನೆ. ಆದರೆ ನಿನ್ನನ್ನು ಸಂಪರ್ಕಿಸುವ ಬಗೆ ಹೇಗೆ?

ಅಪ್ಸರೆಯರ ನಾಡಿನಲ್ಲಿ ನೀನು ನೆಮ್ಮದಿಯಾಗಿರುವಿ ಎಂದು ತಿಳಿಯಲೇ? ಮುಳುಗುವ ಸೂರ್ಯ, ಮೂಡುವ ಚಂದ್ರನ ಬೆಳಕಿನಲ್ಲಿ ನಿನಗಾಗಿ ಹುಡುಕಾಡುತ್ತಿದ್ದೇನೆ. ಪುಣ್ಯ ಮಾಡಿದವರೆಲ್ಲ ಚುಕ್ಕೆಗಳಾಗುತ್ತಾರೆಂದು ಚಿಕ್ಕವನಿದ್ದಾಗ ನೀನೇ ಹೇಳಿದ್ದರಿಂದ ಗಗನಮಂಡಲದಲ್ಲಿ ನಿನ್ನ ನಕ್ಷತ್ರಕ್ಕಾಗಿ ಶೋಧಿಸುತ್ತೇನೆ. ನೀನು ಅಲ್ಲಿಂದಲೇ ನಮ್ಮೆಲ್ಲರ ಸಕಲ ಚಟುವಟಿಕೆಗಳನ್ನು ವೀಕ್ಷಿಸುತ್ತಿರಬೇಕಲ್ಲವೇ? ಒಂದು ರಾತ್ರಿಯಿಡೀ ಜಾಗರಣೆ ಮಾಡಿ ನಿನ್ನ ಚುಕ್ಕೆಯನ್ನು ಗುರುತಿಸಬೇಕೆಂದಿರುವೆ. ನಿನ್ನ ಕರಿಟೋಪಿ ಕಾಣಿಸುವ ಚುಕ್ಕಿ ಹುಡುಕಿ ತೆಗೆಯಲು ಸಾಧ್ಯವೇ?

ನೀನು ಭೂಮಂಡಲನಿವಾಸಿಯಾಗಿರುವಾಗಲೇ ಬರೆದು ತಿಳಿಸಿದಂತೆ, ಹೊಸ ನೌಕರಿಗೆ ಸೇರಿದ್ದೇನೆ. ಅಂತೆಯೇ ಕೀಟ ಸಂಶೋಧಕನಾಗಿ ಪಶ್ಚಿಮ ಬಂಗಾಲದ ಪ್ಲಾಸಿಗೆ ಬಂದಿದ್ದೇನೆ. ಹೊನ್ನಾವರದಂತೆಯೇ ಇದೊಂದು ಸೌಂದರ್ಯಭರಿತ ರಮ್ಯ ಊರು. ಅಲ್ಲಿ ಶರಾವತಿ ಹರಿದರೆ ಇಲ್ಲಿ ಭಾಗೀರಥಿ ಇದ್ದಾಳೆ. ಆದರೆ ಅಲ್ಲಿಯ ಸಹ್ಯಾದ್ರಿ ಸಾಲು ಮಾತ್ರ ಇಲ್ಲಿಲ್ಲ. ಸೂಸು ಮಣ್ಣಿನ ಬಯಲು ಪ್ರದೇಶವಾದ್ದರಿಂದ ಅತೀವ ಫಲವತ್ತಾಗಿದೆ. ಅಂತೆಯೇ ಕಾಳು-ಕಡಿಗಳ ಜೊತೆಗೆ ಕೀಟಗಳೂ ಬೃಹತ್ ಸಂಖ್ಯೆಯಲ್ಲಿ ಬಿಡು ಮಾಡಿವೆ. ಅವುಗಳ ನಿಯಂತ್ರಣ, ನನ್ನ ಕರ್ತವ್ಯ. ನೀನು ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ದಿನವಿಡೀ ಮೈ ಮುರಿದು ದುಡಿಯುತ್ತೇನೆ. ದುಡಿತದಿಂದ ಗೌರವ ಪಡೆಯಬಹುದೆಂಬ ನಿನ್ನ ಹಿತೋಕ್ತಿಯ ಸತ್ಯಾಂಶವನ್ನು ಮನಗಾಣುತ್ತಿದ್ದೇನೆ. ಇದರ ಜೊತೆಗೆ ಬರವಣಿಗೆಯನ್ನು ಪ್ರಾರಂಭಿಸಿದ್ದೇನೆ. ಅಮೇರಿಕೆಯ ಪ್ರವಾಸ ಕಥನವನ್ನು ನಿನಗೆ ಅರ್ಪಿಸಿದ್ದೇನೆ. ಕನ್ನಡ ಓದುಗರು ಈ ಕೃತಿಗೆ ತುಂಬು ಮನಸ್ಸಿನ ಸ್ವಾಗತ ನೀಡಿದ್ದಾರೆ. ಅಂತೆಯೇ ಇನ್ನೊಂದು ಪುಸ್ತಕದ ಹಸ್ತಪ್ರತಿ ಬರೆದು ಮುಗಿಸಿದ್ದೇನೆ. ಸತ್ಯ, ಸರಳತೆ, ಸಮಾಧಾನ, ಕಷ್ಟ ಸಹಿಷ್ಣುತೆಗಳಂತಹ ನಿನ್ನ ಆದರ್ಶಗಳನ್ನು ನನ್ನವನ್ನಾಗಿ ಮಾಡಿಕೊಳ್ಳಲು ಸದಾ ಸೆಣಸಾಟ ನಡೆಸಿದ್ದೇನೆ.

ನಿನಗೆ ಅನುರೂಪ ಸೊಸೆಯಾಗಬೇಕೆಂದು ಜ್ಯೋತ್ಸ್ನಾ, ಸತತ ಯತ್ನದಲ್ಲಿದ್ದಾಳೆ. ನಿನ್ನ ಹಿತೋಕ್ತಿಯ ಮೇರೆಗೆ, ಇದ್ದ ಒಳ್ಳೆ ನೌಕರಿಗೆ ರಾಜೀನಾಮೆ ಕೊಡದೇ ಜಯಪುರದ ಅವಧಿ ಮುಗಿಸಿ ಈಗ ಧಾರವಾಡದ ಆಕಾಶವಾಣಿಗೆ ವರ್ಗವಾಗಿ ಬಂದು ಅರ್ಧಕ್ಕೇ ನಿಂತು ಹೋದ ಡಾಕ್ಟರೇಟು ಮುಗಿಸುವ ವಿಚಾರವನ್ನು ಇಟ್ಟುಕೊಂಡಿದ್ದಾಳೆ. ನಮ್ಮ ಏಕಮೇವ, ಅದ್ವಿತೀಯ ಪುತ್ರ ವಿಕಾಸನು ತನ್ನನ್ನು ಎತ್ತಿಕೊಂಡ ಅಜ್ಜನನ್ನು ಫೋಟೋದಲ್ಲಿ ಗುರುತಿಸಿ, ಅಜ್ಜಾ ಅಜ್ಜಾ ಎಂದು ಮುದ್ದಿಸುತ್ತಾನೆ. ಅವನು ತುಂಬ ಜಾಣನಾಗಿ ಬೆಳೆಯುತ್ತಿದ್ದಾನೆ. ನೀನು ನನಗೆ ಕೊಟ್ಟ ವಿದ್ಯಾ-



ಬುದ್ಧಿಗಳನ್ನು ಅವನಿಗೂ ಕೊಡುವಂತಹ ಭಾಗ್ಯ ಒದಗಿ ಬಂದಿದ್ದರೆ ಅವನೊಬ್ಬ ಆದರ್ಶ ಮೊಮ್ಮಗನಾಗಿ ಬೆಳೆಯುವದರಲ್ಲಿ ಏನೇನೂ ಸಂದೇಹವಿರಲಿಲ್ಲ. ನಾವು ಮೂವರೂ ಒಂದೆಡೆ ಇದ್ದಾಗ ನಿನ್ನನ್ನು ಬರಮಾಡಿಕೊಳ್ಳಬೇಕೆಂದು ಕನಸು ಕಟ್ಟಿದ್ದೆ. ಆದರೆ ದೈವ ಇನ್ನೊಂದನ್ನೇ ಬಗೆದು ನಿನ್ನನ್ನು ಪರಲೋಕಕ್ಕೆ ಕೊಂಡೊಯ್ದಿತು. ಅಲ್ಲಿಯವರು ನಿನ್ನಂಥ ಸಜ್ಜನರ ಮಾರ್ಗದರ್ಶನವನ್ನು ತಪ್ಪದೇ ಪಡೆಯುತ್ತಾರೆಂದು ನಂಬಿದ್ದೇನೆ.

ಕಳೆದ ಒಂದು ವರ್ಷದಿಂದ ನಿನ್ನ ಯೋಗಕ್ಷೇಮದ ಬಗ್ಗೆ ನಮಗೆ ಏನೇನೂ ತಿಳಿಯದು. ಅಲ್ಲಿ ಚೆಟ್ಟಿಯಂಥ ಕ್ಷೌರಿಕರಿದ್ದಾರೆಯೇ? ನಿನ್ನ ಶರ್ಟು, ಧೋತರಗಳನ್ನು ಯಾರು ಒಗೆದುಕೊಡುತ್ತಾರೆ? ನಿನ್ನ ಪ್ರೀತಿಯ ಕೆಂಪು ಹರಿವೆಸೊಪ್ಪು ಅಲ್ಲಿ ಬೆಳೆಯುತ್ತಾರೆಯೇ? ನಿನ್ನ ಹವ್ಯಾಸದ ಚಿತ್ರಕಲೆಗೆ ಬೇಕಾಗುವ ಕುಂಚ-ಬಣ್ಣಗಳು ಸುಲಭ ಬೆಲೆಗೆ ಸಿಗುತ್ತವೆಯೇ? ಕಮ್ಮಾರನ ಕಾರಾಗಿರಿ ನಿನ್ನ ಇನ್ನೊಂದು ಹವ್ಯಾಸ-ಅದಕ್ಕೆ ಬೇಕಾಗುವ ಹತ್ಯಾರಗಳು ಲಭ್ಯವಾಗಿವೆಯೇ? ನಿನ್ನ ವಿಳಾಸ ತಿಳಿಸಿದರೆ ಇವುಗಳನ್ನು ಇಲ್ಲಿಂದ ಪಾರ್ಸಲ್‌ಮಾಡಿ ಕಳಿಸಬಹುದಾಗಿತ್ತು. ಸುರಲೋಕದ ಸುರಾಪಾನ, ಸ್ವೇಚ್ಛಾಚಾರಗಳಿಂದ ನಿನಗೆ ಜಿಗುಪ್ಸೆಯಾಗಿರಬೇಕಲ್ಲವೇ? ಆದರೆ ಅಂಥ ಜೀವನಕ್ಕಾಗಿ ಹಂಬಲಿಸುವವರು ಭೂಲೋಕದಲ್ಲಿ ಅದೆಷ್ಟು ಜನ ಜೀವಿಸಿರುವರೋ!

ನಾನು ಕೂಡ ಪ್ರತ್ಯಕ್ಷ ಕಂಡರೂ ಪರಾಮರ್ಶಿಸಿ ನೋಡಬೇಕು ಎಂಬ ಲೋಕೋಕ್ತಿಯಲ್ಲಿ ವಿಶ್ವಾಸವಿಟ್ಟವನು. ಆದ್ದರಿಂದ ಧಾರ್ಮಿಕ ಕುರುಡು ಆಚಾರ-ವಿಚಾರಗಳಲ್ಲಿ ಒಂದಿಷ್ಟೂ ವಿಶ್ವಾಸವಿಲ್ಲ. ಇಷ್ಟಾದರೂ ಕೆಲವೊಂದು ನಂಬಿಕೆಗಳು ನಿಜವಾಗಿದ್ದರೆ,.... ಎಂದು ಅನಿಸದೇ ಇರುವದಿಲ್ಲ. ಮೃತರ ಶ್ರಾದ್ಧದ ದಿನ ತಮ್ಮ ಆಪ್ತ-ಬಂಧುಗಳು ಮಿತ್ರರೊಂದಿಗೆ ಇರಲು ಮೃತರ ಆತ್ಮ, ಭೂಮಿಗೆ ಇಳಿದು ಬರುತ್ತದಂತೆ. ಅಂತೆಯೇ ಅವರಿಗೆ ಇಷ್ಟವಾದ ಅಡಿಗೆಯನ್ನೇ ಮಾಡಿ ನೆರೆದವರಿಗೆಲ್ಲ ತೃಪ್ತಿಯಾಗುವಷ್ಟು ಉಣಬಡಿಸುವ ಪರಿಪಾಠ ಬೆಳೆದುಬಂದಿದೆ. ನೀನೂ ಇಂದು ಭೂಮಿಗೆ ಇಳಿದು ಬಂದು ನಮ್ಮೊಂದಿಗೆ ಇರುವಂತಾಗಿದ್ದರೆ ಎಷ್ಟು ಖುಷಿ ಪಡುತ್ತಿದ್ದೆವು. ನೀನು ಅವಶ್ಯ ಬಾ. ಹಕ್ಕಿಯ, ಕಾಗೆಯ ರೂಪದಲ್ಲಾದರೂ ಬಾ. ಆದರೆ ಖಂಡಿತ ಬಾ. ನಮ್ಮನ್ನೆಲ್ಲ ನಿರಾಸೆಗೊಳಿಸಲಿಕ್ಕಿಲ್ಲವೆಂದು ನಂಬಲೇ? ಕಾಕಿಯವರು ಹಬ್ಬದೂಟ ಏರ್ಪಡಿಸಿದ್ದಾರೆ. ನಿನ್ನ ಪ್ರೀತಿಯ ಕಡಲೇಬೇಳೆ ಪಾಯಸ ಸಿದ್ಧವಾಗಿದೆ. ಮಕ್ಕಳು, ಮೊಮ್ಮಕ್ಕಳು ಒಂದೆಡೆ ಸೇರಿದ್ದಾರೆ. ನೀನೂ ಭೂಮಿಗೆ ಇಳಿದು ಬಂದು ಎಂದಿನಂತೆ ಹಾಸ್ಯ-ಚಟಾಕಿಗಳನ್ನು ಹಾರಿಸುವಂತಾಗಿದ್ದರೆ... ಈ ವರ್ಷ ಬರಲಾಗದಿದ್ದರ ಹೋಗಲಿ. ಮುಂದಿನ ವರ್ಷ ಬರುವಿ ಎಂಬ ಆಶ್ವಾಸನೆ ಸಿಕ್ಕಿತೇ? ಕ್ಯಾಮರಾದಲ್ಲಿ ಫಿಲ್ಮ ಹಾಕಿ ನಿನಗಾಗಿ ಕಾಯಲೇ?'

-10-

'ಪ್ಲಾಸಿ, 17-2-1970

ನನ್ನಿಂದ ಪತ್ನಿಗೆ ಯಾವ ರೀತಿಯ ತೊಂದರೆಯೂ ಆಗಬಾರದೆಂದು, 'ವಿಧೇಯಕ ಪತಿ'ಯಾಗಬೇಕೆಂದು ಬಹಳ ಹಿಂದೆಯೇ ನಿರ್ಧರಿಸಿಬಿಟ್ಟಿದ್ದೇನೆ. ಈ ಸಾಲು ಓದಿ ಪಿಸಕ್ಕನೆ ನಕ್ಕುಬಿಟ್ಟೆಯಲ್ಲವೇ? ಆದರೆ ಇದನ್ನು ದೃಢೀಕರಿಸಲು ಬೇಕಾದಷ್ಟು ಸಾಕ್ಷಿ-ಪುರಾವೆಗಳನ್ನು ಕೊಡಬಲ್ಲೆ. ಜೋಬನೇರದಲ್ಲಿ ಸಂಸಾರ ಹೂಡಲು ಯಾವ ಸವಲತ್ತುಗಳು ಇಲ್ಲದಿದ್ದರೂ ಮದುವೆಯಾದ ಕೂಡಲೇ ನನ್ನೊಂದಿಗೆ ರಾಜಸ್ಥಾನಕ್ಕೆ ಹೊರಟು ನಿಂತಾಗ ಕೂಡಲೇ ಒಪ್ಪಿಕೊಳ್ಳಲಿಲ್ಲವೇ? ವಿಹಾರಕ್ಕಾಗಿ ಕಾಶ್ಮೀರಕ್ಕೆ ಹೋಗೋಣವೆಂದಾಗ ಅಷ್ಟೊಂದು ಹಣದ ಅನುಕೂಲವಿಲ್ಲದಿದ್ದರೂ ಹೊರಡಲಿಲ್ಲವೇ? ನೌಕರಿ ಸಾಕು, ರಾಜೀನಾಮೆ ಕೊಡುವದಾಗಿ ಹೇಳಿದ್ದಿ. ಆ ಕೂಡಲೇ ಒಪ್ಪಿಗೆ ಕೊಡಲಿಲ್ಲವೇ? ಅರ್ಧಕ್ಕೆ ನಿಲ್ಲಿಸಿದ ಡಾಕ್ಟರೇಟ ಮುಂದುವರಿಸುವದಾಗಿ ಹೇಳಿದಾಗ, ತನು, ಮನ, ಧನದಿಂದ ಸಹಾಯ ಮಾಡುತ್ತೇನೆ ಎಂದೆ.

ಸಂಸಾರ ಸಾಕು-ಬೇಕು ಎಂದಾಗ, ಹೌದು, ಹೌದು! ಎಂದೆ. ಬರುವ ಸಂಬಳದಲ್ಲಿ ಉಳಿತಾಯ ಮಾಡಬೇಕೆಂದಾಗ ಒಪ್ಪಿಕೊಂಡೆ. ಗೃಹಕೃತ್ಯದ ಸಕಲ ಕೆಲಸಗಳಲ್ಲಿಯೂ ನೆರವಾಗಬೇಕೆಂದಾಗ ಸಮ್ಮತಿಸಿದೆ. ನನ್ನಂತಹ ವಿಧೇಯಕ ಪತಿ ಈ ಪೃಥ್ವಿಯಲ್ಲಿ ಇನ್ನೊಬ್ಬಾತ ಇದ್ದಿರಬಹುದೇ?

ಸಿರಿವಂತರ ಮಗಳು, ಪತಿಯ ಬಡತನದ ಹಿನ್ನೆಲೆಯನ್ನು ಹೀಗಳೆಯುವದನ್ನೆ ಚಟ ಮಾಡಿಕೊಂಡಿರುತ್ತಾಳೆ. ಪ್ರಭಾವಶಾಲಿಯ ಪುತ್ರಿ, ತನ್ನ ತವರಿನವರ ಸಾಧನೆಗಳನ್ನೇ ಹೇಳುತ್ತಿರುತ್ತಾಳೆ. ಹೆಂಡಕ್ಕೆ ಮಾರು ಹೋದವನ ಪತ್ನಿ 'ಕುಡಿದು ಸರ್ವಸ್ವವನ್ನು ಹಾಳು ಮಾಡಿದರು' ಎಂಬ ಹಾಡನ್ನೆ ಹಗಲೆಲ್ಲ ಹಾಡುತ್ತಿರುತ್ತಾಳೆ. ಸೌಮ್ಯ ಸ್ವಭಾವದವನು, ಜೀವನದಲ್ಲಿ ಮುಂದೆ ಬಾರದ್ದಕ್ಕಾಗಿ 'ಬಳೆಗಳನ್ನು ತೊಟ್ಟುಕೊಳ್ಳಬಾರದೇ' ಅನ್ನುತ್ತಾಳೆ ಗಂಡುಬೀರಿ ಗೃಹಿಣಿ. ಹಣ ಹಿಗ್ಗಿಸುವದನ್ನು ಬಿಟ್ಟರೆ ಹೆಂಡತಿಯನ್ನು ಮಾತನಾಡಿಸಲು ಕೂಡ ಇವರಿಗೆ ಬಿಡುವಿಲ್ಲವೆಂದು ಮೂದಲಿಸುವಳು, ವ್ಯಾಪಾರಿಯ ಪತ್ನಿ. ಇವರ ಸರ್ವ ಸಮಯವೂ ರೋಗಿಗಳಿಗೇ ಮೀಸಲು, ಎಂದು ಆಕ್ಷೇಪಿಸುವವಳು ಡಾಕ್ಟರರ ಪತ್ನಿ. ಆಫೀಸನ್ನು ಹೊಕ್ಕುಬಿಟ್ಟರೆ, ತಾವು ವಿವಾಹಿತರು, ಎಂಬುದನ್ನೆ ಮರೆಯುತ್ತಾರೆ ಸಾಹೇಬರು! ಎಂದು ಉಚ್ಚ ಅಧಿಕಾರಿಯ ಅರ್ಧಾಂಗಿನಿ ಪರಿಹಾಸ್ಯ ಮಾಡುವಳು. ಈ ಧನ-ದೌಲತ್ತು ಒಂದೂ ಬೇಕಾಗಿಲ್ಲ. ಒಂದು ಚಿಕ್ಕ ಹಳ್ಳಿಯಲ್ಲಿ ನಾವೇ ನಾವಾಗಿರೋಣ ಎನ್ನುವವಳು, ಸಕಲ ಸೌಲಭ್ಯಗಳನ್ನೂ ಹೊಂದಿರುವ ಜೀವನ ಸಂಗಾತಿ.

ಆರತಕ್ಷತೆ, ಅರಿಸಿನ-ಕುಂಕುಮಗಳ ನೆವದಿಂದ ಹೆಂಗಳೆಯರೆಲ್ಲ ಒಂದೆಡೆಗೆ ಸೇರಿದಾಗ, ಇಂಥದೇ ಕಾಡು ಹರಟೆಯಲ್ಲಿ ಕಾಲಕ್ಷೇಪ ಮಾಡುತ್ತಿರಬಹುದಲ್ಲವೇ? ತಾಯಿಯ ಮಾತನ್ನು ಅಲ್ಲಗಳೆಯಲಾಗದ್ದರಿಂದ ತನ್ನನ್ನು ಗೃಹಸ್ಥನು ಕಸ ಸಮಾನವಾಗಿ ಕಾಣುತ್ತಾನೆ ಎಂದು ಒಬ್ಬಾಕೆ ಗೋಗರೆದರೆ, ತಾವು ವಿಂಗಡದ ಗುಡಿ ಮಾಡೋಣವೆಂದರೆ ಕುಂಟುನೆಪ ಹೂಡಿ ಮುಂದೆ ಹಾಕುತ್ತಲೇ ಇರುವನೆಂದು ಇನ್ನೊಬ್ಬಳು ಕಣ್ಣೀರು ಹಾಕಬಹುದು. ಮಗುದೊಬ್ಬಳು ತಾನು ಮರಗುಳಿಯ ಕೈ ಹಿಡಿದಿರುವೆ. ಸ್ನಾನಕ್ಕೆ ಇಳಿದಾಗ ಸಾಬೂನು, ಟಾವೆಲ್ಲು ಎಂದು ಕಿರಿಚಿಕೊಳ್ಳುವದು ಪ್ರತಿನಿತ್ಯದ ಸುಗಮ ಸಂಗೀತ! ಎಂದು ಅಪಹಾಸ್ಯ ಮಾಡಬಹುದು ಗಾನಪ್ರಿಯೆಯೊಬ್ಬಳು. ತನ್ನವಳ ತಪ್ಪುಗಳನ್ನು ಹುಡುಕುತ್ತಿರುವದೇ ತನ್ನವರ ಏಕಮೇವ ಗುರಿ, ಎಂದು ಗರತಿಯೊಬ್ಬಳು ಸಾರಿದರೆ, ಬ್ಯಾಂಕ್ ಠೇವಣಿ ಹೆಚ್ಚಿಸುವದನ್ನು ಬಿಟ್ಟರೆ ಬೇರೆ ಯಾವುದರಲ್ಲಿಯೂ ಆಸಕ್ತಿಯಿಲ್ಲ ಎಂದು ಗೊಣಗುವವಳು ಅಸಹಾಯಕ ಪತ್ನಿ. ತನಗೆ ಕಥೆ-ಕಾದಂಬರಿಗಳಲ್ಲಿ ಆಸಕ್ತಿಯಿದ್ದರೆ, ಪತಿ ಅವನ್ನು ವೈರಿಯೆಂದು ಪರಿಗಣಿಸುವ, ಕೈಯಲ್ಲಿರುವ ಪುಸ್ತಕವನ್ನು ಕಿತ್ತೊಗೆಯುವ! ಎಂದು ನೊಂದುಕೊಳ್ಳುವಳು ಅರಸಿಕನ ಪತ್ನಿ. ಇವರೆಲ್ಲ ಸೇರಿ ತಂತಮ್ಮ ವೈವಾಹಿಕ ಜೀವನದ ಅನುಭವಗಳನ್ನು ಹೇಳಲೇಬೇಕು ಎಂದು ಪಟ್ಟುಹಿಡಿದಾಗ, ನೀನು ಏನು ಹೇಳಬಹುದು? ಎಂದು ಕಲ್ಪಿಸಿಕೊಂಡೇ ರೋಮಾಂಚನವಾಯಿತು.

''ನಾನೆಷ್ಟು ನಿರ್ಭಾಗ್ಯಳೆಂದು ನಿಮ್ಮೆಲ್ಲರ ಅನುಭವಗಳ ರಾಶಿ ಕೇಳಿದಾಗ ಅರಿವಾಯಿತು! ಒಮ್ಮೆಯೂ ಸ್ನಾನಕ್ಕೆ ಇಳಿದು ಸಾಬೂನು, ಟಾವೆಲ್‌ಗಳಿಗಾಗಿ 'ಇವರು' ಕಿರುಚಾಡಲಿಲ್ಲ. ಮಾಡಿದ ಅಡಿಗೆಯಲ್ಲಿ ಒಮ್ಮೆಯೂ ಕುಂದು-ಕೊರತೆಗಳನ್ನು ಹುಡುಕಲಿಲ್ಲ. ಹೋಗಲಿ, ಅಡಿಗೆ ಏಕೆ ಮಾಡಿಲ್ಲ? ಎಂದು ಕೂಡಾ ಹಸಿದು ಬಂದಾಗ ಪ್ರಶ್ನಿಸುವದಿಲ್ಲ. ತಮ್ಮ ಬಟ್ಟೆ ಬರೆಯುತ್ತ ಗಮನ ಕೊಡದವರು ಪತ್ನಿಗೆ ಒಳ್ಳೇ ಸೀರೆ ಕೊಡಿಸುತ್ತಾರೆ. ಒಮ್ಮೆ ಕೈಯಲ್ಲಿದ್ದ ಎಲ್ಲ ಹಣ ಹಾಕಿ ರೇಶ್ಮೆ ಸೀರೆಯನ್ನು ಕೊಂಡು ತಂದಾಗ, ತಾನೇ ಅವರನ್ನು ತರಾಟೆಗೆ ತೆಗೆದುಕೊಂಡದ್ದಕ್ಕಾಗಿ ಈಗಲೂ ಮರುಗುತ್ತಿರುತ್ತೇನೆ. ಗೃಹಕೃತ್ಯದ ಯಾವುದೇ ಕೆಲಸವನ್ನು, ಯಾವ ಅಳುಕೂ

ಇಲ್ಲದೆ ಮಾಡಿ ಮುಗಿಸುವದು ಇವರ ಪರಿಪಾಠ.

ಸ್ವಲ್ಪವಾದರೂ ಅನಾರೋಗ್ಯವಾದರೆ ಸಾಕು, ಅವರ ಔಷಧೋಪಚಾರಕ್ಕೆ ಕೊನೆಮೊದಲಿಲ್ಲ, ಇಂಥ ವ್ಯಕ್ತಿ, ಗಂಡನೆಂಬಾತ ಒಬ್ಬನಿರುತ್ತಾನೆಂದು ಯಾರಾದರೂ ಹೇಳಿದರೆ ನಾ ನಂಬುತ್ತಿರಲಿಲ್ಲ. ತುಸು ಹಂಗಿಸಲಿಕ್ಕಾದರೂ ನನ್ನವರಲ್ಲಿ ಒಂದೆರಡು ಕೊರತೆಗಳಿರಬಾರದಿತ್ತೆ'' ಎಂಬುದಾಗಿ ನೀ ಹೇಳಬಹುದಿತ್ತು. ಹೇಗಿದೆ ಈ ವಿಚಾರ ಲಹರಿ!

-11-

ಪ್ಲಾಸಿ, 10-3-1970

ನಮ್ಮ ವಿವಾಹದ ನಾಲ್ಕು ವರ್ಷಗಳ ನಂತರ, ನಿನ್ನವನಿಗೆ ಸ್ನೇಹಿತೆಯೋರ್ವಳಿದ್ದಳು. ಅವರಲ್ಲಿ ಪತ್ರ ವ್ಯವಹಾರ ತುಂಬ ಮುಂದುವರಿದಿದ್ದರಿಂದ ಮದುವೆಯಲ್ಲಿ ಪರಿವರ್ತನೆಗೊಳ್ಳುವದೆಂದು ಸಕಲರೂ ನಂಬಿದ್ದರು ಎಂದು 'ಸತ್ಯ ಸಂಗತಿ' ಯನ್ನು ನಿನಗೆ.... ಹೇಳಿದ್ದು ತಿಳಿದು ಮೋಜೆನಿಸಿತು. ನೀನು ಇದನ್ನು ನಂಬಿ, ಕೊರಗಿ, ಬಂಡೇಳಲಿಲ್ಲವೆಂದು ನೆಮ್ಮದಿಯಾಯಿತು. ನಾನು ಮಿತಭಾಷಿಯಾಗಿದ್ದರೂ ಎಲ್ಲರ ಮಾತುಗಳನ್ನು ಕಿವಿಗೊಟ್ಟು ಆಲಿಸಿ ಅರ್ಥೈಸಿಕೊಳ್ಳಲು ಯತ್ನಿಸುತ್ತಿರುತ್ತೇನೆ. ಸೌಂದರ್ಯಪ್ರಿಯತೆ, ವಿಚಾರ ಮಂಥನ, ಜೊತೆಗೆ ಜೀವನದ ಸೂಕ್ಷ್ಮತೆಗಳನ್ನು ಅರಿತುಕೊಳ್ಳುವ ಹವ್ಯಾಸವಿದೆ. ಅಂತೆಯೇ ಶಾಲಾದಿನಗಳಿಂದಲೂ ಆಪ್ತರಿಗೆ, ಸ್ನೇಹಿತರಿಗೆ, ಬರೆಯುವ ಪತ್ರಗಳಲ್ಲಿ ಇವುಗಳ ಬಗ್ಗೆ, ಖಚಿತವೆಂದು ಕಂಡ ವಿಚಾರಗಳ ಬಗ್ಗೆ ಬರೆದು ಹಾಳೆಯನ್ನು ತುಂಬಿ ತುಳುಕಿಸುತ್ತಿದ್ದೆ. ಪತ್ರ ಬರೆಯುವದು ಸ್ನೇಹದ ಕುರುಹು ಇದ್ದಂತೆ, ನನಗೆ ಅದು ಅಭಿವ್ಯಕ್ತಿ ಮಾಧ್ಯಮವೂ ಹೌದು. ಒಳ್ಳೇ ಮಾತುಗಾರರಾಗಿ, ನಕ್ಕು, ನಗಿಸಿ ನಲಿಸುವವರನ್ನು, ಒಂದು ಅಂಚೆ ಕಾರ್ಡನ್ನು ತುಂಬುವಷ್ಟೂ ಪತ್ರ-



ಲೇಖನ ಮಾಡಲು ಬರದವರನ್ನು, ನಾನು ಕಂಡಿದ್ದೇನೆ. ಪತ್ರ ಯಾರಿಗೇ ಬರೆಯಲಿ, ಅದು ಅನೈತಿಕವೆಂದು ಅನಿಸುವದೇ ಇಲ್ಲ.


ಅಸಂಖ್ಯಾತ ಸ್ನೇಹಿತರೊಡನೆ ಪತ್ರ ವ್ಯವಹಾರ ಇಟ್ಟುಕೊಂಡಿರುವಂತೆ, ಕೆಲವು ಸ್ನೇಹಿತೆಯರಿಗೂ ಪತ್ರ ಬರೆಯುತ್ತಿರುತ್ತೇನೆ. ಆದರೆ ಇವರಲ್ಲಿ ಯಾರೊಬ್ಬಳೊಡನೆಯೂ ಪತ್ರ ಸ್ನೇಹ, 'ಪ್ರೇಮ'ದಲ್ಲಿ ಪರಿವರ್ತನೆಗೊಳ್ಳಬಹುದೆಂಬ ಆಸೆ ತೋರಿಸಿಲ್ಲ, ಎಂದು ಕಡಾ ಖಂಡಿತವಾಗಿ ಹೇಳಬಲ್ಲೆ! ಪತ್ರ ಬರೆದ ತಪ್ಪಿಗಾಗಿ ವಿವಾಹ ಮಾಡಿಕೊಳ್ಳಬೇಕಾಗಿದ್ದರೆ, ಪದ್ಮಾ, ಶಾಂತಾ, ಮೀರಾ, ಶಾರದಾ, ಡಾಯನಾ, ಡಾರ್‌ಬೆರಾ, ಹೆಲೆನ್, ಜೀನಾ ಮುಂತಾದವರೆಲ್ಲ ಪತ್ನಿಯರಾಗಿರುತ್ತಿದ್ದರು. ಶ್ರೀಕೃಷ್ಣ ಪರಮಾತ್ಮನಿಗೆ ಮಾತ್ರ ಇದು ಸಾಧ್ಯವಲ್ಲದೆ ಕಲಿಯುಗದ ಈ ಕೃಷ್ಣನಿಗೆ ಓರ್ವ ಪತ್ನಿಯನ್ನೇ ಸಂಭಾಳಿಸುವದು ಕಷ್ಟಕ್ಕಿಟ್ಟುಕೊಂಡಾಗ, ಬಹುಪತ್ನಿಯರ ಮಾತು ದೂರವೇ ಉಳಿಯಿತು.

ಹುರುಳಿಲ್ಲದ ಗುಲ್ಲು ಎಬ್ಬಿಸುವದರಲ್ಲಿ ನಮ್ಮವರು, ನಿಸ್ಸೀಮರೆಂದು ತೋರುತ್ತದೆ. ನಮ್ಮ ಶಾಲೆಯ ವಿದ್ಯಾರ್ಥಿನಿಯೊಬ್ಬಳು ತೀರ ಸರಳ ಸ್ವಭಾವದವಳು. ಯಾರನ್ನಾದರೂ ಮುಕ್ತ ಮನಸ್ಸಿನಿಂದ ಮಾತನಾಡಿಸುವವಳು. ಒಂದು ದಿನ ಸಹಪಾಠಿಯೊಬ್ಬನೊಡನೆ ಮಾತನ್ನಾಡುತ್ತಿರುವದು, ಯಾವುದೋ ವಕ್ರಕಣ್ಣಿಗೆ ಗೋಚರಿಸಿತು. ಪಿಸು, ಪಿಸುಮಾತು, ಕುಚೋದ್ಯದ ಕಟಕಿ ಮಾತು, ಅವನ್ನು ಹೊತ್ತ ಫಲಕಗಳು ಅಲ್ಲಲ್ಲಿ ತಲೆ ಎತ್ತಿ ನಿಂತವು. ಸ್ನೇಹ ಮಿತಿಮೀರಿದೆ; ಅವಳು ತಾಯಿಯಾಗಲಿದ್ದಾಳೆ ಎಂದು ಒಬ್ಬ, ಗರ್ಭಪಾತ ಮಾಡಿಸಿಕೊಂಡಿದ್ದಾಳೆ ಎಂದು ಇನ್ನೊಬ್ಬ, ದೂರದ ಆಸ್ಪತ್ರೆಯಲ್ಲಿ ಬಾಣಂತನ ಮಾಡಿಸಿಕೊಂಡು ಮಗುವನ್ನು ಕಡಲಿಗೆ ಎಸೆದಿದ್ದಾಳೆ ಎಂದ ಮಗದೊಬ್ಬ. ಇದೆಲ್ಲ ವದಂತಿ, ಕೇವಲ ಒಂದೇ ತಿಂಗಳಿನಲ್ಲಿ ನಡೆದದ್ದು ಎಂಬುದು ಗಮನಾರ್ಹ ಸಂಗತಿ! ಎಂದೂ ಪತ್ರ ಬರೆಯದವರು ಕೂಡ, ಧಾರವಾಡ, ಮುಂಬಯಿಗಳಲ್ಲಿ ಓದುತ್ತಿದ್ದ ಸಹಪಾಠಿಗಳಿಗೆ ಈ ಹುರುಳಿಲ್ಲದ ಸಮಾಚಾರ ತಿಳಿಸದೇ ಇರಲಿಲ್ಲ. ಆದ್ದರಿಂದ ನಿನ್ನವನ ಬಗ್ಗೆ ಹೇಳಿದ್ದು ತೀರ ಅಲ್ಪ ಎಂದೆನಿಸಿತು. ಇನ್ನೂ ಮುಂದುವರಿದು, ನಾನು ನಿಮ್ಮ ಮನೆಯಲ್ಲೇ ವಾಸ್ತವ್ಯ ಹೂಡಿ ವಿದ್ಯಾಭ್ಯಾಸ ಮುಗಿಸಿದೆ, ಎಂಬ ಗಾಳಿ ಸುದ್ದಿ ಬಂದರೆ ಬೆದರಬೇಡ. ಭಾವಿ ಪತ್ನಿಗೆ ಅಮೇರಿಕೆಗೂ ಕರೆದುಕೊಂಡೇ ಹೋಗಿದ್ದ ಎಂದು ಸಿದ್ಧ ಮಾಡುವವರೂ ಇದ್ದಿರಬಹುದಲ್ಲವೇ? ನಿನಗೆ ಕೀಟಲೆ ಕೊಡಲೆಂದೇ ಇಲ್ಲಸಲ್ಲದ ಕಥೆಗಳನ್ನು ಹೇಳಿದರೆ, ಸ್ನೇಹಿತೆಯರೊಡನೆ ಪತ್ರ ಮುಂದರಿಸಲು ನಾನೇ ಸೂಚಿಸಿದ್ದೇನೆ, ಎಂದು ಮುಖಕ್ಕೆ ಹೊಡೆದಂತೆ ಹೇಳಿಬಿಡು!

-12-

ಪ್ಲಾಸಿ, 25-3-1970

ವಿವಾಹವೆಂಬುದು ವಧು-ವರರ ಜೀವನವನ್ನೇ ಬದಲಿಸುವ ಘಟನೆಯಾದರೂ, ಬಹುಸಂಖ್ಯಾತರು ತಮ್ಮ ಬಾಳ ಸಂಗಾತಿಯ ಆಯ್ಕೆಯಲ್ಲಿ ಯಾವ ಮುಂದಾಲೋಚನೆ ತೋರಿಸದೇ ಇರುವದು ದುರ್ದೈವದ ಸಂಗತಿ. ಮುಂದೆ ಸಂತಾನದ ಬಗೆಗೂ ತಾರತಮ್ಯವಿಲ್ಲದ ಧೋರಣೆ ಮುಂದುವರಿಯುವದು ತೀರ ಸಾಮಾನ್ಯ. ಜೋಬನೇರದ ಶ್ರೀವಾಸ್ತವ ದಂಪತಿಗಳಿಗೆ ಬೇಡವಾದಾಗ ಹುಟ್ಟಿದ ಮಗಳು ಅಂಗವಿಕಲಳಾದಳಂತೆ. ಸಬಾನರ ಮಾನಸಿಕ ರೋಗಿ ಮಗಳು ಅವರಿಗೆ ಬೇಕಾಗಿರಲೇ ಇಲ್ಲವಂತೆ. ಇಂಥ ದುರಂತಗಳಿಗೆ, ಎಷ್ಟೋ ಸಲ-ಕಾರಣ, ಪತಿ-ಪತ್ನಿಯರಲ್ಲಿ ವಿಚಾರ-ವಿಮರ್ಶೆಯ ಅಭಾವವೆಂದು ಬೇರೆ ಹೇಳಬೇಕೇ? ಪರಿಚಿತ ದಂಪತಿಗಳ ವಿರಸ-ಸಂಸಾರದಲ್ಲಿ, ಮಾತು-ಕತೆ ನಿಂತಾಗ ಎರಡು ಬಾರಿ ಗರ್ಭಪಾತ ಮಾಡಿಸುವ ಸಂದರ್ಭ ಬಂದಿತಂತೆ! ಯಾವಾಗಲೂ ದೂರವಿರುವ ನಮ್ಮ ದಾಂಪತ್ಯದಲ್ಲಿ ಇಂಥ ಸಮಸ್ಯೆಗಳನ್ನು ಎದುರಿಸಬೇಕಾಗಿ ಬರಲಿಲ್ಲ! ಅಲ್ಲದೇ ಪತ್ರ ಮುಖೇನ ಹೆಚ್ಚು ಬಿಚ್ಚು ಮನಸ್ಸಿನಿಂದ ಅನಿಸಿಕೆಗಳನ್ನು ವಿನಿಮಯ ಮಾಡಿಕೊಳ್ಳಬಹುದು ಅನಿಸುತ್ತದ. ಅಂತೆಯೇ ಏಕಮೇವ ಪುತ್ರನ ಪಾಲನೆಯ ಬಗ್ಗೆ



ಅವರು ಮೊದಲು ಪಿ.ಡಬ್ಲ್ಯೂ.ಡಿ. ಕಂಟ್ರಾಕ್ಟರ್ ಆಗಿದ್ದರು...!

ಕಾಡುವ ಕೆಲ ಅಂಶಗಳ ಬಗ್ಗೆ ಬರೆಯುವ ಸಾಹಸಕ್ಕೆ ಇಳಿಯುವವನಿದ್ದೇನೆ.


ಯಾವ ಹರಕೆ ಹೊರದೇ, ವ್ರತ ಕೈಕೊಳ್ಳದೇ, ಜ್ಯೋತಿಷಿಯ ಅಭಿಪ್ರಾಯಪಡದೇ ಪುತ್ರನನ್ನು ಪಡೆದಿದ್ದೇವೆ. ಆತ ಸಾಮಾನ್ಯ ಮಕ್ಕಳಿಗಿಂತ ಹೆಚ್ಚು ಜಾಣನಾಗಿರುವದರಿಂದ ಪಾಲನೆ-ಪೋಷಣೆಗಳಲ್ಲಿ ಚಿಕಿತ್ಸಕ-ಮುಂಜಾಗ್ರತೆಗಳು ಮುಖ್ಯ. ಪರಿಚಯ ಮತ್ತು ಪರಿಸರದವರು ಸದಾ ನಗುವ ಮುದ್ದು ಮಗುವನ್ನು ಎತ್ತಿಕೊಂಡು, ಮುದ್ದಾಡಿ, ಸಿಹಿ ತಿಂಡಿ ಕೊಟ್ಟು ಗೆದ್ದುಕೊಂಡು ಬಿಡುತ್ತಾರೆ. ಹೀಗಾಗಿ ಮಕ್ಕಳಿಗೆ, ತಂದೆ-ತಾಯಿಗಳಿಗಿಂತ, ತಾತ್ಕಾಲಿಕ ಹಿತಚಿಂತಕರೇ ಹತ್ತಿರದವರಾಗಿ ಬಿಡುತ್ತಾರೆ. ಅಂತೆಯೇ ಹುಲಿಯಂತೆ ಗರ್ಜಿಸಿ, ಕೋತಿಯಂತೆ ಜಿಗಿದು, ನಾಯಿಯಂತೆ ಬೊಗಳಿ, ನವಿಲಿನಂತೆ ಕುಣಿದು, ಮುದ್ದು ಮುದ್ದಾಗಿ ಹಾಡಿ ಎಲ್ಲರಿಗೂ ಮಕ್ಕಳು ಮನರಂಜನೆ ಒದಗಿಸುತ್ತವೆ. ಸ್ನಾನ, ಊಟ, ನಿದ್ರೆಯ ವೇಳೆಗೂ ಮನೆಗೆ ಮರಳಲು ನಿರಾಕರಿಸುವ ಮಕ್ಕಳಿವೆ. ನೆರೆಮನೆಯ ಅಣ್ಣ, ಅಕ್ಕ, ಅಜ್ಜಿ, ಆಂಟಿಯೊಂದಿಗೆ ರಾತ್ರಿ ಕಳೆಯುತ್ತೇವೆಂದು ಪಟ್ಟು ಹಿಡಿಯುತ್ತವೆ. ಪಾಪ! ಚಿಕ್ಕ ಮಗು, ಅದಕ್ಕೇಕೆ ನಿರಾಸೆ ಮಾಡುವುದು? ಎಂದು ಪಾಲಕರು ಸುಮ್ಮನಾಗಿ ಬಿಡುತ್ತಾರೆ. ಮುಂಬರುವ ಸಮಸ್ಯೆಗಳಿಗೆ ಇದು ರಣಕಹಳೆಯಾದೀತೆಂಬ ಎಂಬ ಕಲ್ಪನೆ ಇರುವುದಿಲ್ಲ.

ನಮ್ಮಂತೆ ತಂದೆ-ತಾಯಿಗಳಿಬ್ಬರೂ ದುಡಿಯುವವರಿದ್ದರೆ, ಎದುರಿಸಬೇಕಾದ ಸಮಸ್ಯೆಗಳು ಅಸಂಖ್ಯಾತ. ಬೆಳೆಯುವ ಮಗುವಿಗೆ ಪೂರೈಸಬೇಕಾದ 'ಲಕ್ಷ್ಯ', ಸಮಯ, ಮಮತೆಗಳನ್ನು ಕೊಡಲಾಗುತ್ತಿಲ್ಲವೆಂಬ ಕೊರಗು ಸದಾ ಕಾಡುತ್ತಿರುತ್ತದೆ. ಬೆನ್ನಟ್ಟಿ ಬರುವ ಈ ತಪ್ಪುಗಾರಿಕೆಯ ಭಾವನೆಯಿಂದ ಬಚಾವು ಆಗಲು ಗಳಿಕೆಯ ದೊಡ್ಡ ಪಾಲನ್ನು ಮಗುವಿನ ಐಹಿಕ ಸವಲತ್ತುಗಳನ್ನು ಪೂರೈಸಲು ಬಳಸುತ್ತೇವೆ. ಕೇವಲ ಮೂರು ದಶಕಗಳ ಹಿಂದೆ ನಾನೂ ಏಕಾಸನಂತೆ, ಮಗುವಿದ್ದಾಗ, ಪಾಲಕರು ಹೆಚ್ಚಿನ ಆಟಿಗೆ ಸೌಲಭ್ಯಗಳನ್ನು ಕೊಡ ಮಾಡದಿದ್ದರೂ ಆದರ-ಪ್ರೀತಿಗಳಿಗೆ ಏನೇನೂ ಕೊರತೆ ಮಾಡಿರಲಿಲ್ಲ. ಕಾಕಾರವರು ಆಗಾಗ ವಾಯು-ವಿಹಾರಕ್ಕೆ ಕರೆದೊಯ್ದು ಗುಡ್ಡ, ಬೆಟ್ಟ, ನದಿ, ಕೊಳ್ಳಗಳ ಪರಿಚಯ ಮಾಡಿಕೊಡುತ್ತಿದ್ದರು. ಹಿಂದಿರುಗಿ ಬರುವಷ್ಟರಲ್ಲಿ ಹಾಲು ಹಾಕಿದ ಗಂಜಿ, ಉಪ್ಪಿನಕಾಯಿಗಳ ಆಹಾರ ಸಿದ್ಧಪಡಿಸುತ್ತಿದ್ದರು-ಕಾಕಿಯವರು. ಮಜ್ಜಿಗೆ ಕಡೆಯುತ್ತಿರಲಿ, ಮಸಾಲೆ ರುಬ್ಬುತ್ತಿರಲಿ, ಅವರ ಹತ್ತಿರವೇ ಇದ್ದು, ಅವರ ಕಥೆ ಕೇಳುತ್ತಲೋ, ಹಾಡು ಆಲಿಸುತ್ತಲೋ ಇಲ್ಲವೆ ಹಿತ್ತಲಲ್ಲಿ ಸುತ್ತಾಡುತ್ತಲೋ ಇದ್ದರೆ ಬೇರೇನೂ ಬೇಕೆನಿಸುತ್ತಿರಲಿಲ್ಲ. ಇನ್ನೂ ಚಿಕ್ಕ ವಯಸ್ಸಿನಲ್ಲಿ ಅಂದರೆ ಬರೇ ಅಂಗಿತೊಟ್ಟು ಚಡ್ಡಿಯಿಲ್ಲದೇ ತಿರುಗುವ ಪ್ರಾಯದ ನೆನಪು ಇವು!

ಕೇವಲ ಒಂದೇ ತಲೆಮಾರಿನಲ್ಲಿ ಆದ ಪರಿವರ್ತನೆಗಳನ್ನು ಪರಾಮರ್ಶಿಸಿದೆಯಾ? ಮಗನಿಗೆ ಬಗೆ ಬಗೆಯ ಬಿಸ್ಕತ್ತು, ಬನ್, ಜಾಮ್,

ಬೋರ್ನವಿಟಾ, ಹಾರ್ಲಿಕ್ಸುಗಳ ಬ್ರೆಕ್‌ಫಾಸ್ಟ್. ಸೊಗಸಿನ ಬಾಬಾಸೂಟ್‌ಗಳು, ಮಿಕ್ಯಾನೊ ಆಟಿಗೆ ಸೆಟ್‌ಗಳು. ಬೇಕೆಂದಾಗಲೆಲ್ಲ ಪೆಪ್ಪರ ಮಿಂಟ್, ಚಾಕೊಲೆಟ್, ಲಾಲಿಪೂಪ್‌ಗಳು. ಆತ ಇಷ್ಟ ಪಡುವ ಅಡಿಗೆ ಮಾಡಿದರೆ, ಎರಡು ತುತ್ತು ಊಟ ಮಾಡಿಯಾನು! ಎಂಬ ಸಂಭ್ರಮ. ಬೇಕೆಂದೊಡನೆ ಸಿದ್ಧಮಾಡುವ ವ್ಯಂಜನ, ತಿಂಡಿಗಳು. ಓಡಾಡಲು ಪ್ರಾಮ್‌ಗಾಡಿ, ನಂತರ ಟ್ರಾಸಿಕಲ್. ಸಮವಸ್ತ್ರದ ಸೂಟು-ಬೂಟುಗಳು. ಇವೆಲ್ಲವನ್ನು ವೇಳೆ ವೇಳೆಗೆ ಪೂರೈಸಲು ನಮಗೆ ಬಿಡುವು ಇಲ್ಲದ್ದರಿಂದ ಇನ್ನಿತರರ ನೆರವು ಬೇಕೇ ಬೇಕು. ಮಗನಿಗಾಗಿ ಏನೇನು ಮಾಡುತ್ತಿದ್ದೇವೆ, ಎಂದು ನೆಮ್ಮದಿ ಪಡಲು ಯತ್ನಿಸಿದರೂ ನಿಜವಾದ ಪಾಲಕರ ಜವಾಬ್ದಾರಿಗಳನ್ನು ನಿರ್ವಹಿಸುತ್ತಿಲ್ಲ, ಎಂಬ ಕಟುಸತ್ಯ ಕೊರೆಯುತ್ತಿರುತ್ತದೆ. ಮಕ್ಕಳು, ಗುರು-ಹಿರಿಯರ ಬೋಧನೆಗಳನ್ನು ಪಾಲಿಸಿ ಬೆಳೆಯುವದಿಲ್ಲ. ಬದಲಿಗೆ ಅವು ಪ್ರತಿ ನಿಮಿಷವೂ ಅನುಕರಣೆ ಮಾಡುತ್ತಲೇ ಇರುತ್ತವೆ. ಅಂತೆಯೇ ನಮ್ಮ ಪ್ರತಿ ವರ್ತನೆಯನ್ನೂ ಕಣ್ಣಲ್ಲಿ ಕಣ್ಣಿಟ್ಟು ಒರೆಗಲ್ಲಿಗೆ ಹಚ್ಚಿ ನೋಡುತ್ತಲೇ ಇರುತ್ತವೆ. ಮಕ್ಕಳು ಎಂಥವರಾಗಬೇಕು, ಹೇಗೆ ಬೆಳೆಯಬೇಕು, ಎಂದು ಎಂಥ ಕನಸು ಕಟ್ಟುತ್ತವೆಯೋ ಅಂತಹದೇ ಆದರ್ಶ ಜೀವನವನ್ನು ಪಾಲಕರು ನಡೆಸಬೇಕಾಗುತ್ತದೆ. ಬೀಡಿ, ಸಿಗರೇಟು ಸೇದುವವರ ಮಕ್ಕಳಿಗೆ ಅದು ಕೆಟ್ಟ ಚಟ ಅನಿಸುವದೇ ಇಲ್ಲ. ಮದ್ಯಪಾನಿಗಳ ಮಕ್ಕಳಿಗೆ ಚಹಾ-ಕಾಫಿಯಂತೆ ಹೆಂಡವೂ ಒಂದು ಪಾನೀಯವೆನಿಸಿದರೆ ಆಶ್ಚರ್ಯವಿಲ್ಲ.

ನಮ್ಮ ಮಗನು ನಮ್ಮಿಬ್ಬರನ್ನೂ ಮೀರಿಸಬೇಕೆಂಬ ಹಿರಿಯಾಸೆ. ಅಂತೆಯೇ ಅವನು ನೆರೆ-ಹೊರೆಯವರ ಸುಲಭ ಆದರ್ಶಗಳನ್ನು ತನ್ನದನ್ನಾಗಿ ಮಾಡಿಕೊಳ್ಳುವಂತೆ ಎಚ್ಚರಿಕೆ ವಹಿಸುವದು ಅತಿಮುಖ್ಯ. ಐಷಾರಾಮ ಕೊಡುವದಕ್ಕಿಂತ ಮುಖ್ಯವಾಗಿ, ಸ್ನೇಹ-ಸಂಗಾತಿ-ಪಾಲನೆಗಳು ಸದಾಕಾಲ ಇರಲೇಬೇಕು. ನಮ್ಮಿಬ್ಬರ ಕಾರ್ಯ ಬಾಹುಳ್ಯದಿಂದಾಗಿ ಇದು ಸುಲಭ-ಸಾಧ್ಯವೆಂದು



ಅನಿಸುವುದಿಲ್ಲ. ಆದ್ದರಿಂದ ಒಂದು ಪರಿಹಾರ ಮಾರ್ಗವನ್ನು ಸೂಚಿಸುತ್ತಿದ್ದೇನೆ. ನಾವು ಹೋದಲ್ಲೆಲ್ಲ ಮಗನನ್ನು ಕರೆದೊಯ್ದು, ಒಮ್ಮೆ ಹಿಂದಿ, ಒಮ್ಮೆ ಬಂಗಾಲಿ, ಇನ್ನೊಮ್ಮೆ ಮರಾಠಿ ಶಾಲೆ ಸೇರಿಸಿ ಯಾವುದೂ ತನ್ನದನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗದಂತೆ ಮಾಡುವದಕ್ಕಿಂತ, ನಾನು ಕಲಿತ ಹೊನ್ನಾವರದ-ಕಸಬಾ ಗಂಡು ಮಕ್ಕಳ ಶಾಲೆಗೆ ಸೇರಿಸಿದರೆ ಅವನಿಗೆ ಸಾಮಾನ್ಯ ಮಕ್ಕಳ ಸಹವಾಸ ಯಥೇಷ್ಟವಾಗಿ ಲಭಿಸುವದು. ಕಾಕಿಯವರಿಗಂತೂ ಈ ಮೊಮ್ಮಗನೆಂದರೆ ಪಂಚಪ್ರಾಣ. ತಂಗಿ ಮಾಲಿನಿಯಂತೂ ಮನೆಯ-ಮಕ್ಕಳ ಪಡೆಯನ್ನು ನಿಯಂತ್ರಿಸುವದರಲ್ಲಿ ರಿಂಗ್ ಮಾಸ್ಟರ್ ಇದ್ದಂತೆ. ಬೇರಾರಿಗೂ ಇರದ ಈ ಸವಲತ್ತು ನಮಗೆ ಲಭ್ಯವಿರುವಾಗ, ಅದರ ಸದುಪಯೋಗ ಏಕೆ ಮಾಡಿಕೊಳ್ಳಬಾರದು? ಇದ್ದ ಒಬ್ಬನೇ ಮಗನನ್ನು ಬಿಟ್ಟಿರಲು ತಾಯಿಯ ಕರುಳು ಒಪ್ಪಲಿಕ್ಕಿಲ್ಲ. ಆದರೆ ಮಗನ ಭವಿತವ್ಯದ ದೃಷ್ಟಿಯಿಂದ ಹೀಗೆ ಮಾಡುವದೇ ಉಚಿತವೆನಿಸುತ್ತದೆ. ನೀನು ಒಪ್ಪಿದರೆ ಮಾತ್ರ ಹೊನ್ನಾವರಕ್ಕೆ ಪತ್ರ ಬರೆದು ಹಾಕುತ್ತೇನೆ.

ಈ ನಿರ್ಣಯದಿಂದಾಗಿ ವಿಕಾಸನು ಹತ್ತರ ಜೋಡಿ ಹನ್ನೊಂದಾಗಿ ಬೆಳೆದಿದ್ದರಿಂದ ನಗರದವರು ಮೇಲು, ಹಳ್ಳಿಯವರು ಕೀಳು ಎಂಬ ಭಾವನೆ ಇಲ್ಲ. ಕೊನ್ವೆಂಟ್ ಶಾಲೆಗೆ ತರಣು ಹೋಗದ್ದರಿಂದ, ಕನ್ನಡ, ಕೊಂಕಣಿ, ಇಂಗ್ಲೀಷ್ ಭಾಷೆಗಳ ಮೇಲೆ ಸಮನಾದ ಪ್ರಭುತ್ವ ಪಡೆದಿದ್ದಾನೆ.

-13-

ಪ್ಲಾಸಿ, 27-5-1970

ನಾವು ಹೇಗೆ ಜೀವನ ನಡೆಸಬೇಕು? ಎಂಬುದರ ಬಗ್ಗೆ ಅವರಿವರ ಮತ ನಮಗೆ ಬೇಕಿಲ್ಲ. ನನ್ನ ನಿನ್ನ ಸಹಮತವೊಂದಿದ್ದರೆ ಸಾಕು. ಜೀವನ ನಡೆಸಬೇಕಾಗಿರುವದು ನಮ್ಮ ನೆಮ್ಮದಿಗಾಗಿಯೇ ಹೊರತು ಇನ್ನೊಬ್ಬರಿಂದ ಬೆನ್ನು ಚಪ್ಪರಿಸಿಕೊಳ್ಳುವದಕ್ಕಾಗಿ ಅಲ್ಲ. ಯಾವ ಥಳಕು ಹೊಳಪುಗಳಿಗೆ ಮಾರುಹೋಗದೇ ಸುಲಭ, ಸರಳ ಜೀವನ ನಡೆಸಿದರೆ ಇತರರೂ ತಲೆದೂಗದೇ ಇರಲಾರರು. ಇವರಂತೆ ತಮಗೂ ಇರಲಾಗುವದಿಲ್ಲವಲ್ಲ! ಎಂಬ ಅಸೂಯೆಯಿಂದ ಅಪಹಾಸ್ಯಕ್ಕೂ ಗುರಿ ಮಾಡಬಹುದು. ನಾವಿಬ್ಬರೂ ಗಟ್ಟಿಗರಾಗಿದ್ದರೆ, ಯಾರಿಗೂ ಸೊಪ್ಪು ಹಾಕಲೇಬೇಕಾಗಿಲ್ಲ. ಅವರ ಸಂಪತ್ತಿನ ಮೇಲೆ ನಾವು ಸಂಸಾರ ನಡೆಸುತ್ತಿಲ್ಲವಲ್ಲ! ಯಾವದೇ ಕಾರಣಕ್ಕೆ ನಾವು ಜಾರಿಬಿದ್ದರೆ, ಟೀಕೆ ಮಾಡುವದರಲ್ಲಿ ಇವರು ಮೊದಲಿಗರು. ಆದ್ದರಿಂದ ನಮ್ಮ ಜೀವನವನ್ನು ನಾವೇ ರೂಪಿಸಿಕೊಳ್ಳೋಣವಂತೆ, ಆಗದೇ? ಕಾಲುನಡಿಗೆಯಲ್ಲಿ ಹೋಗಬಹುದಾದ ದಾರಿಗೆ ಬಸ್ ಏರುವದು ಬೇಡ. ಬಸ್ ಸಿಗುತ್ತಿರುವಲ್ಲಿ ಟಾಂಗಾ ಬೇಡ. ಟಾಂಗಾ ಇದ್ದಲ್ಲಿ ಟ್ಯಾಕ್ಸಿ ಬೇಕಾಗಿಲ್ಲ. ಇದೇ ನಮ್ಮ ಜೀವನದ ಸೂತ್ರವಾಗಲಿ ಎಂಬ ಆಸೆ.

ಏನೇ ಮಾಡಲಿ, ಹೇಗೆ ಇರಲಿ, ನಮ್ಮ ಸಕಲ ಚಟುವಟಿಕೆಗಳಲ್ಲಿ ಅಭಿಮಾನ-ಆತ್ಮ ತೃಪ್ತಿಗಳು ಇರಲೇಬೇಕು. ನಡೆಯುವ ತ್ರಾಣವಿಲ್ಲದೆ ಕಾರು ಕೊಳ್ಳುವದಕ್ಕಿಂತ ಗಟ್ಟಿಮುಟ್ಟಾದ ಕಾಲುಗಳಿರುವದು ಮೇಲಲ್ಲವೇ? ನಿತ್ರಾಣರಾಗಿ ಮಿಕ್ಸಿಯ ಗುಂಡಿ ಒತ್ತುವದಕ್ಕಿಂತ ರುಬ್ಬುವ ಕಲ್ಲನ್ನು ತಿರಿಗಿಸುವಂತಹ ಬಾಹುಬಲವಿರುವದು ಮೇಲು; ತುಪ್ಪದಲ್ಲಿ ಕರಿದ ಪೂರಿ, ಬಾಸುಂದಿ, ಹಲ್ವಗಳನ್ನು ತಿಂದು ತೇಗುವದಕ್ಕಿಂತ, ಮೂಲಂಗಿ, ಬೀಟ್, ಗಜ್ಜರಿ, ಸೌತೇಕಾಯಿ, ಟೊಮ್ಯಾಟೊಗಳನ್ನು ಜೀರ್ಣಸಿಕೊಂಡು ತೇಗುವದು ಸರ್ವ ದೃಷ್ಟಿಯಿಂದಲೂ ಹಿತಕರ. ಕೊಬ್ಬು, ಕಾಲುನೋವು, ಬೆನ್ನು-ನೋವುಗಳಿಂದ ನರಳಿ, ನಿಸರ್ಗ-ಚಿಕಿತ್ಸೆಗೆ ಹಣ ಸೂರೆ ಮಾಡುವದಕ್ಕಿಂತ, ಪ್ರತಿದಿನ ಬೆಳಿಗ್ಗೆ ನಿಸರ್ಗದ ಸಾನಿಧ್ಯದಲ್ಲಿ ತಿರುಗಾಡುವದು ಕ್ಷೇಮಕರ. ಸಂಬಳದ ಜೊತೆಗೆ ಗಿಂಬಳ ಗಿಟ್ಟಿಸಲಾಗದ್ದರಿಂದ, ನಾವು ಹೀಗೆ ಮಾಡಬೇಕಾಗಿ ಬಂದಿದೆ, ಎಂದು ಸಹೋದ್ಯೋಗಿಗಳು, ಪರಿಚಯದವರು ಗೇಲಿ ಮಾಡಬಹುದು. ಅವರ ಅಭಿಪ್ರಾಯಕ್ಕಾಗಿ ನಕ್ಕುಬಿಡುವ ಕೆಚ್ಚೆದೆ ನಮ್ಮದಾಗಿರಬೇಕು.

ನಮಗೆ ತೃಪ್ತಿಕೊಡುವ ಕೆಲಸಗಳನ್ನು ಮಾಡು



ಸ್ವಲ್ಪ ರಾಜಿಗೂ ನೀವು ಸಿದ್ಧರಿರಬೇಕು. ಬೆಲೆ, ತೂಕ, ಗುಣಮಟ್ಟ ಎಲ್ಲವೂ ನ್ಯಾಯವಾಗಿಯೇ ಇರಬೇಕೆಂದರೆ ಹೇಗೆ?

ವದರ ಜೊತೆಗೆ, ಇನ್ನಿತರರಿಗೂ ಖುಷಿ ಕೊಡುವಂತಹ ಚಟುವಟಿಕೆಯಲ್ಲಿ ತೊಡಗಿದಾಗ, ಅಭಿಮಾನ ಉಕ್ಕಿಬಾರದಿರದು. ಜೋಬನೇರದ ಕೆಲಸದ ಹುಡುಗ ಗೋಪಾಲನ ಛಾಯಾಚಿತ್ರ ತೆಗೆದು ಒಂದು ಪ್ರತಿಯನ್ನು ಅವನಿಗೂ ಕೊಟ್ಟಾಗ, ಅವನ ಸಂತೋಷಕ್ಕೆ ಮೇರೆಯೇ ಇರಲಿಲ್ಲ. ಕೇರಿಯವರೆಲ್ಲರಿಗೂ ತೋರಿಸಿದ. ಅದು ಮರುದಿನವೇ ಮುದುಡಿಯಾಗಿ ಮೂಲೆಗುಂಪಾಗಿರಬಹುದು. ಆದರೆ ಅದು ಅವನ ಜೀವನದ ಪ್ರಪ್ರಥಮ ಭಾವಚಿತ್ರವೆಂಬುದು ನಿಸ್ಸಂಶಯ. ಕೊನೆಯದಾಗಿದ್ದರೂ ಆಶ್ಚರ್ಯವಿಲ್ಲ. ಅದರಂತೆ ಪೋಸ್ಟಮ್ಯಾನ್ ರಮ್‌ಝಾನನು ಜೋಬನೇರ ವಿಲಾಸಕ್ಕೆ ಬಂದ ಪತ್ರಗಳನ್ನೆಲ್ಲ ತಪ್ಪದೇ ಪ್ಲಾಸಿಗೆ ಕಳಿಸುವದಲ್ಲದೇ ಪ್ರತಿ ಪತ್ರದ ಕೊನೆಯಲ್ಲಿ ಒಂದು ಮೂಲೆಯಲ್ಲಿ ಹಿಂದಿಯಲ್ಲಿ, 'ಮಾಸ್ಟರ ಸಾಬ್, ನಮಸ್ಕಾರ. ನೀವು ಮಾಡಿಕೊಟ್ಟ ಫೋಟೋ ನೋಡಿದಾಗಲೆಲ್ಲ ನಿಮ್ಮ ನೆನಪಾಗುತ್ತದೆ.' ಎಂದು ಬರೆಯಲು ಮರೆಯುವದಿಲ್ಲ. ಡೀನ್-ಪ್ರಸಾದರು ತಮ್ಮ ಭವ್ಯ ಬಂಗಲೆಯ ಬೈಠಕ್‌ಖಾನೆಯಲ್ಲಿ ನಾನು ಮಾಡಿಕೊಟ್ಟ ದೊಡ್ಡ ಭಾವಚಿತ್ರವೊಂದನ್ನು ತೂಗುಹಾಕಿ, 'ಡಾ. ಕಾಮತರು ಸೆರೆ ಹಿಡಿಯುವಂಥ ಭಾವಚಿತ್ರಗಳನ್ನು ಯಾರಿಂದಲೂ ಮಾಡಲಾಗುವದಿಲ್ಲ'ವೆಂದು ಬಂದವರೆಲ್ಲರ ಎದುರು ಅಭಿಮಾನದಿಂದ ಹೇಳಿಕೊಳ್ಳುತ್ತಾರಂತೆ. ನಿನ್ನ ಪ್ರಾಧ್ಯಾಪಕರಿಗೆ, ಬೆಳವಡಿ ಮಲ್ಲಮ್ಮ ಮತ್ತು ಶಿವಾಜಿಯ ಉಬ್ಬು ಚಿತ್ರ ಮಾಡಿ ಕಳಿಸಿದಾಗ, ಧಾರವಾಡದ ಛಾಯಾಚಿತ್ರಕಾರನಿಂದ ಆಗದ ಕೆಲಸವನ್ನು ನಿನ್ನ ಯಜಮಾನರು ಯಶಸ್ವಿಯಾಗಿ ಮಾಡಿದ್ದಾರೆ, ಎಂದು ಬೆನ್ನು ಚಪ್ಪರಿಸಲಿಲ್ಲವೇ? ಅಕ್ಕ-ತಂಗೆಂದಿರ, ತಮ್ಮಂದಿರ, ಆಪ್ತರ ಚಿತ್ರಗಳು, ಆಲ್ಬಮ್‌ಗಳನ್ನು ಮಾಡಿ ಕಳಿಸಿದ್ದನಲ್ಲವೇ? ಹೋಗಿ ಬಂದವರಿಗೆಲ್ಲ ಅವರು, ಅವನ್ನು ಎಷ್ಟು ಅಭಿಮಾನದಿಂದ ಪ್ರದರ್ಶಿಸುತ್ತಾರೆ ಗೊತ್ತೇ? ಎಷ್ಟು ಹಣ ಕೊಟ್ಟರೂ, ಯಾವ ಸ್ಟುಡಿಯೋದವನೂ ಇಂಥ ಆಲ್ಬಮ್‌ಗಳನ್ನು ಅವರಿಗೆ ಮಾಡಿ ಕೊಡಲಾರ! ಈ ಚಟುವಟಿಕೆಗಳಿಂದ ಒಂದು ಪೈಸಾ ಲಾಭವಾಗದಿದ್ದರೂ, ಇವೆಲ್ಲ ನನಗೆ ಅತ್ಯಂತ ಅಭಿಮಾನದ ಸಂಗತಿಗಳಾಗಿವೆ.

1943ರಲ್ಲಿ ಟ್ಯಾಫೈಡ್ ಜ್ವರ, ಜ್ಯೋತ್ಸ್ನಾಳ ತಾಯಿ, ಶಾರದಾಬಾಯಿಯವರನ್ನು ಆಹುತಿ ತೆಗೆದುಕೊಂಡಿತು. ಅವರ ಒಳ್ಳೆಯ ಭಾವಚಿತ್ರವೊಂದು ನಮ್ಮ ಬಳಿ ಇರಲಿಲ್ಲ. ಯಾವುದೋ ಗುಂಪಿನಲ್ಲಿದ್ದ ಚಿತ್ರದ ಪ್ರತಿಕೃತಿ ಮಾಡಿಸಿದಾಗ ಅದು ವಿಕಾರ ರೂಪ ತಾಳಿತ್ತು. 1972ರಲ್ಲಿ ಶಾರದಾಬಾಯಿಯವರು ಸ್ವರ್ಗಸ್ಥರಾದ ಹಿರೇಕೆರೂರಿನ ಯಾತ್ರೆ ಕೈಕೊಂಡಾಗ, ಶ್ರೀ ಅಡಿವೆಪ್ಪ ಕುಬಸದ ಅವರ ಮನೆಗೂ ಭೇಟಿಕೊಟ್ಟೆವು. ಅವರ ವೃದ್ಧ ಹೆಂಡತಿ, ತಮ್ಮ ಸ್ನೇಹಿತೆಯ ಅಳಿಯ-ಮಗಳು ಬಂದಿದ್ದಾರೆಂದು ಹಿರಿಹಿರಿ ಹಿಗ್ಗಿದರು. ಅವರ ಪತಿಯವರು ಹುಲಿ-ಶಿಕಾರಿಯಲ್ಲಿ ಎತ್ತಿದ ಕೈ. ದನಗಳನ್ನು ಕೊಲ್ಲುತ್ತಿದ್ದ ಹುಲಿಯೊಂದನ್ನು ಬೇಟೆಯಾಡಿದಾಗ ಈ ಎರಡೂ ಕುಟುಂಬದ ಸದಸ್ಯರನ್ನು ಸೇರಿಸಿ ಛಾಯಾಚಿತ್ರ ತೆಗೆಸಿದ್ದರು. ಅದನ್ನು ಹುಡುಕಿ ತಂದು ತೋರಿಸಿ

ದರಲ್ಲದೇ ಪ್ರತಿ ಮಾಡಲು ಅನುಮತಿಕೊಟ್ಟಾಗ, ನಮ್ಮ ಯಾತ್ರೆ ನಿರೀಕ್ಷೆ ಮೀರಿ ಯಶಸ್ವಿಯಾದ ತೃಪ್ತಿ ನಮ್ಮದಾಗಿತ್ತು. ಅವರ ಆಧಾರದ ಮೇಲೆ ಅತ್ತೆಯವರ ದೊಡ್ಡದೊಂದು ಭಾವಚಿತ್ರ ತಯಾರಾದಾಗ ಪತ್ನಿಯ, ಇತರ ಭಾಂದವರ ಆನಂದಕ್ಕೆ ಮಿತಿಯಿರಲಿಲ್ಲ. ಮೂಲಪ್ರತಿಯನ್ನು ತಿರುಗಿ ಅಡಿವೆಪ್ಪನವರ ಕುಟುಂಬಕ್ಕೆ ಹಿಂದಿರುಗಿಸಲು ಮರೆಯಲಿಲ್ಲ.

-14-

ಪ್ರಾ.ಪಿ,11-11-1970

ವಿದ್ಯಾರ್ಹತೆಗೆ ಅನುಗುಣವಾದ ನೌಕರಿ ಇಲ್ಲದ್ದಕ್ಕೆ ನೀನೇಕೆ ಬೇಸರಿಸಬೇಕು? ಹೊಟ್ಟೆ ಹೊರೆದುಕೊಳ್ಳುವದಕ್ಕಾಗಿಯೇ ಶಿಕ್ಷಣ ಎಂಬುದು ತಪ್ಪು ಗ್ರಹಿಕೆ. ನರಿ-ನಾಯಿಗಳೂ ತಮ್ಮ ಅವಶ್ಯಕತೆಗಳನ್ನು ಯಾವ ಶಾಲೆ-ಕಾಲೇಜುಗಳ ಮೆಟ್ಟಿಲು ಹತ್ತದೇ ಪೂರೈಸಿಕೊಳ್ಳುತ್ತವೆ. ವಿದ್ಯಾಭ್ಯಾಸದ ಮೂಲ ಉದ್ದೇಶವಿರುವದು ಮಾನವನ ಮಾನಸಿಕ ವಿಕಾಸಕ್ಕಾಗಿ. ಹಣ ಸಂಪಾದನೆ, ಸುಖಜೀವನಗಳೇ ಶಿಕ್ಷಣದ ಗುರಿಯಾಗಿದ್ದರೆ, ಡಾರ್ವಿನ್, ನ್ಯೂಟನ್, ಐನ್‌ಸ್ಟಾಯಿನ್‌ರಂಥವರು ಈ ವಿಶ್ವವನ್ನು ಶ್ರೀಮಂತವಾಗಿಸುತ್ತಿರಲಿಲ್ಲ. ಅದೇ ಮಾರವಾಡಿ, ಸಿಂಧಿಗಳು ಅಂಥ ಶಿಕ್ಷಣ ಪಡೆಯದಿದ್ದರೂ ಧನಿಕರಾಗಲು ಎಂದೂ ಹಿಂದೆ ಬಿದ್ದಿಲ್ಲ. ನಾನು ಎಂದೂ ಶಿಕ್ಷಣದಿಂದ ಸಿರಿವಂತನಾಗಬೇಕೆಂದು ಕನಸು ಕಟ್ಟಿದವನಲ್ಲ. ಅಂತೆಯೇ ಸರ್ವೇಸಾಮಾನ್ಯರಲ್ಲಿ ಕಂಡುಬಾರದ ವಿದ್ಯೆಯ ಬಗೆಗಿನ ಮಮತೆ-ವಿಶ್ವಾಸಗಳು ನನ್ನಲ್ಲಿ ಮನೆ ಮಾಡಿಕೊಂಡಿವೆ. ವಿದ್ಯಾರ್ಥಿ ದೆಸೆಯಲ್ಲಿ ನಾನೆಂದೂ ಗ್ಯಾಡ್ ಓದಿದವನಲ್ಲ. ಟ್ಯೂಶನ್ ಪಡೆದವನಲ್ಲ. ಪರೀಕ್ಷೆಗಾಗಿಯೇ ಅಭ್ಯಾಸ ಮಾಡಿದವನಲ್ಲ. ಅಂಕಗಳ ಸಂಪಾದನೆಗೆ ವಾಮಮಾರ್ಗ ತುಳಿದವನಲ್ಲ. ರ‍್ಯಾಂಕ್‌ಗಾಗಿ ಹಂಬಲಿಸಿದವನೂ ಅಲ್ಲ. ಆದರೆ ಮಾದರಿ ಪ್ರಶ್ನೆಗಳನ್ನು ಪಡೆದು, ಗ್ಯಾಡ್ ಉತ್ತರಗಳನ್ನು ಕಂಠಪಾಠ ಮಾಡಿ, ಜೇಬು ತುಂಬ ಗುಣ ಪಡೆದವರ ಶಿಕ್ಷಣ ಅಲ್ಲಿಗೇ ಮುಕ್ತಾಯವಾದರೆ, ಶಾಲೆ-ಕಾಲೇಜುಗಳಲ್ಲಿ ಓದಿ ಅರಿತುಕೊಂಡದ್ದೆಲ್ಲ ಇಂದು ನನ್ನದಾಗಿ ಉಳಿದುಕೊಂಡಿದೆ. ಹರಿಶ್ಚಂದ್ರ ಕಾವ್ಯ ಭಾಗ, ಹರಿಹರನ ಕೆಲ ರಗಳೆ, ಮುದ್ದಣ-ಮನೋರಮೆಯರ ಸಂವಾದ, ಕಪ್ಪೆ-ಅರಭಟ್ಟನ ಶಾಸನಗಳು ಇಂದಿಗೂ ಅಕ್ಷರಶಃ ನೆನಪಿವೆ: ಪ್ರಿಯವಾಗಿ ಉಳಿದುಕೊಂಡಿವೆ.



ನಿಮ್ಮನ್ನು ನಿಯಂತ್ರಿಸಲು ಮಾಸ್ತರರು ಇರೋದಿಲ್ವೇನಪ್ಪಾ?

ಶಾಲಾ-ಜೀವನದಲ್ಲಿಯೇ ಚಿತ್ರಕಲೆಯನ್ನು ಕರಗತ ಮಾಡಿಕೊಂಡಿದ್ದರೂ, ಅದರಿಂದ ಹಣ ಗಳಿಸಬೇಕೆಂಬ ವಿಚಾರ ಎಂದೂ ಬರಲಿಲ್ಲ. ಆದರೆ ಇದರಿಂದ ಸುಂದರ ವಸ್ತು, ಸೃಷ್ಟಿ ಕಂಡಾಗಲೆಲ್ಲ ಅದನ್ನು ಸವಿಯಲು ಸಹಾಯವಾಯಿತು. ನಾಲ್ಕು ವರ್ಷ ಎನ್.ಸಿ.ಸಿ ಕಲಿತೆ. ಸೈನ್ಯ ಸೇರಲಿಲ್ಲ. ಆದರೆ ಅದರಿಂದಾಗಿ ಶಾರೀರಿಕ ದಾರ್ಢ್ಯ, ಜೊತೆಗೆ ಕೈಕೊಂಡ ಕೆಲಸಗಳಲ್ಲಿ ಶಿಸ್ತು-ಅಚ್ಚುಕಟ್ಟುತನ ತಾವಾಗಿಯೇ ನುಸುಳಿಕೊಂಡವು. ವಂಶಪಾರಂಪರಿಕವಾಗಿ ಬಂದ ವೃತ್ತಿಗೆ

ಕಾಲೇಜು-ಶಿಕ್ಷಣ ಬೇಕಾಗಿರದಿದ್ದರೂ ಆಸಕ್ತಿಯಿಂದ ಓದಿದ್ದೆ. ಶಿಕ್ಷಣಾಧಿಕಾರಿಯಾಗುವ ಕನಸು ಕಾಣದಿದ್ದರೂ ಜೀವನ ಶಿಕ್ಷಣ ತರಬೇತಿಯನ್ನು ಪಡೆದೆ. ಇದರಿಂದ ನೂಲುವದು, ಹಾಸು ಹಾಕುವದು, ಏಂಕಿ ಮಾಡುವದು, ನೇಯುವದು, ರಟ್ಟಿನ ಕೆಲಸ, ಬಡಿಗತನಗಳು ಕರಗತವಾದುವಲ್ಲದೇ ಇಂದಿಗೂ ಅವನ್ನು ಒಂದಿಲ್ಲೊಂದು ರೀತಿಯಲ್ಲಿ ನಿತ್ಯ ಬಳಸುತ್ತಲೇ ಇದ್ದೇನೆ. ಸ್ನಾತಕೋತ್ತರ ಶಿಕ್ಷಣ ಮುಗಿಸಿದ ನಂತರ ಹೆಚ್ಚಿನ ವೇತನ ಬರುವ ನೌಕರಿಗೆ ಸೇರದೇ ಸಂಶೋಧನಾ ಸೌಕರ್ಯಗಳಿರುವ ದೊಡ್ಡ ಕಾಲೇಜಿನಲ್ಲಿ ಕಡಿಮೆ ಸಂಬಳದ ನೌಕರಿಗೆ ಸೇರಿದ ಧೀರ ನಾನು!

ಉಚ್ಚ ಶಿಕ್ಷಣಕ್ಕಾಗಿ ಅಮೇರಿಕೆಗೆ ಹೋದದ್ದು ದೊಡ್ಡ ಅಧಿಕಾರಿಯಾಗಿ ಮೆರೆಯಬೇಕು; ಇಲ್ಲವೇ ಕೈತುಂಬ ಸಂಬಳ ಸಂಪಾದಿಸಬೇಕೆಂಬ ಆಸೆಯಿಂದ ಅಲ್ಲವೇ ಅಲ್ಲ. ನನ್ನೊಡನೆಯೇ ಬೆಳೆದು ಬಂದ ತಿರುಗಾಟದ ತವಕ, ಅಷ್ಟೊಂದು ದೂರದ ದೇಶಕ್ಕೂ ಕರೆದೊಯ್ದಿತು. ಅಮೆರಿಕೆಯಲ್ಲಿ ಪಡೆದ ಡಾಕ್ಟರೇಟ್ ಪದವಿ, ಶಿಕ್ಷಣದ ಮಾಪನವೆಂದು ಇನ್ನಿತರರು ತಿಳಿದರೆ, ಅಲ್ಲಿಯ ಅನುಭವಗಳಿಂದ ನನ್ನಲ್ಲಾದ ಪರಿವರ್ತನೆಗಳಿಗೆ ಅಳತೆಗೋಲೇ ಇಲ್ಲ! ಜೀವನವನ್ನು ಬೇಕಾದಂತೆ ರೂಪಿಸಿಕೊಳ್ಳುವದು ನಮ್ಮ ಕೈಯಲ್ಲಿಯೇ ಇದೆ, ಎಂದು ಅಲ್ಲಿಯೇ ಅನುಭವಿಸಿದೆ. ಅಲ್ಲದೇ ಇನ್ನಿತರರಿಗೆ ಸೊಪ್ಪು ಹಾಕಬೇಕಾಗಿಲ್ಲವೆಂದೂ ಅರಿತೆ. ಆದಷ್ಟು ಅಮೇರಿಕನ್ನರ ಹೃದಯವನ್ನು ಗೆದ್ದುಕೊಂಡೆ. ದೇಶ, ಜಾತಿ, ವರ್ಣಗಳನ್ನು ಮೆಟ್ಟಿನಿಂತ ಮಾನವೀಯತೆ ಎಲ್ಲೆಲ್ಲೂ ಇದೆ, ಎಂಬುದನ್ನು ಕಂಡುಕೊಂಡೆ. ಆ ಬೃಹತ್ ದೇಶದ

ನಾಲ್ಕೂ ಮೂಲೆಗಳಲ್ಲಿಯೂ ಅಲೆದಾಡಿ, ಗಿಡ-ಮರಗಳನ್ನು, ಪಶು-ಪಕ್ಷಿಗಳನ್ನು ವೀಕ್ಷಿಸಿ, ಕೆಲವೊಮ್ಮೆ ಅವುಗಳೊಂದಿಗೆ ಒಂದಾಗುವ ಅವಕಾಶವೂ ದೊರೆಯಿತು. ಮಾನವನಿಗೆ ಸುಖ-ಸಂಪತ್ತುಗಳಿಗಿಂತ ಆತ್ಮ-ಗೌರವ, ದೇಶಾಭಿಮಾನಗಳು ಹೆಚ್ಚಿನ ನೆಮ್ಮದಿ ಕೊಡಬಲ್ಲವೆಂದು ಅನುಭವಿಸಿ ಸ್ವದೇಶಕ್ಕೆ ಮರಳಲು ನಿಶ್ಚಯಿಸಿದೆ.

ಪ್ರಕೃತ, ಪಡೆದ ಪದವಿಗಳನ್ನು ಬಳಸದೇ ಜೀವನ ನಡೆಯಿಸಬೇಕೆಂದು ನಿರ್ಣಯಿಸಿದ್ದೇನೆ. ಯಾವ ತರಬೇತಿಯೂ ಇಲ್ಲದೆ ಬರಹಗಾರನಾಗಿಬಿಟ್ಟೆನಷ್ಟೆ. ಆದರೆ ಅದನ್ನು ವೃತ್ತಿಯನ್ನಾಗಿಸುವ ಎದೆಗಾರಿಕೆ ಇಲ್ಲ. ಹಾಗೆ ಮಾಡಿದಾಗಲೆಲ್ಲ ಟೊಳ್ಳು ಸಾಹಿತ್ಯ ಹೊರಬರುವದು ಅನುಭವದ ಮಾತು. ಅದೇ ಛಾಯಾಗ್ರಹಣವು ನನಗೆ ಅತ್ಯಂತ ಪ್ರಿಯವಾದ ಕಲೆ. ಸ್ವಸಂತೋಷಕ್ಕಾಗಿ ಅದನ್ನು ಕೈಕೊಂಡರೂ ಅದನ್ನು ವೈಜ್ಞಾನಿಕ ಸಂಶೋಧನಕ್ಕಾಗಿ ಬಳಸಬಹುದು. ಇದನ್ನೆ ಜೀವನೋಪಾಯವಾಗಿ ಯಾಕೆ ಮಾಡಿಕೊಳ್ಳಬಾರದು? ಆಗ ವಿಜ್ಞಾನ, ಶಿಕ್ಷಣ, ಸಂಶೋಧನೆ ಜೊತೆಗೆ ವಿದ್ಯಾರ್ಥಿಗಳ ನಿಕಟ ಸಂಪರ್ಕ ಇಟ್ಟುಕೊಳ್ಳಲು ಅನುಕೂಲವಾಗುತ್ತದೆ, ಎಂಬುದು ನನ್ನ ಮನದಾಸೆ. ಇದರಲ್ಲಿ ಧುಮುಕಲು ದೃಢ ಸಂಕಲ್ಪ ಒಂದನ್ನು ಬಿಟ್ಟರೆ ಬೇರಾವ ತರಬೇತಿಯೂ ಇಲ್ಲ. ಆದರೂ ಒಂದು ಕೈ ನೋಡಿಬಿಡಬೇಕೆಂದು ಮನಸ್ಸು. ನಿನ್ನ ಅನಿಸಿಕೆಯನ್ನು ಆದಷ್ಟು ಬೇಗ ತಿಳಿಸುವಿಯ?

★ ★ ★

ಫಲಶ್ರುತಿ

ಕಳೆದ ಎರಡು ದಶಕಗಳಿಂದ ಬೆಂಗಳೂರಲ್ಲಿ ವೈಜ್ಞಾನಿಕ ಛಾಯಾಗ್ರಹಣವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ- ಕೃಷ್ಣಾನಂದರು. ಅವರ ಪತ್ನಿ ಜ್ಯೋತ್ಸ್ನಾ ಕಾಮತರೂ ಈಗ ಬೆಂಗಳೂರಲ್ಲಿಯೇ ನೆಲೆಸಿದ್ದಾರೆ. ಹೀಗಾಗಿ ಪತ್ರೋತ್ತರದ ಪರಿಸ್ಥಿತಿ ಇಲ್ಲ! ●

★ ಕಂಪ್ಯೂಟರ್ ಮಾನವ :

ಅಮೆರಿಕದ ವಿಜ್ಞಾನಿಗಳು 12 ಕೈಗಳಿರುವ ಯಂತ್ರಮಾನವನನ್ನು ನಿರ್ಮಿಸಿದ್ದಾರೆ. ಈ ಕಂಪ್ಯೂಟರ್ ಚಾಲಿತ ಯಂತ್ರಮಾನವ ಅದೇ ಸ್ವತಃ ಮರ ಹತ್ತಿ, ಹಣ್ಣುಗಳನ್ನು ಕಿತ್ತು, ಮತ್ತೆ ಕೆಳಗಿಳಿಯಬಲ್ಲದು. ಈ ಬುದ್ಧಿವಂತ ಯಂತ್ರಮಾನವ ಭುಜದ ಮೇಲೆ ಒಂದು ಕಡೆ ಬಣ್ಣದ ಟೆಲಿವಿಜನ್ ಕ್ಯಾಮರಾ ಇದ್ದು; ಅದು ಪಕ್ವವಾದ ಹಣ್ಣುಗಳ ಬಳಿ ತಲುಪಿದ ಕೂಡಲೇ ಕಿತ್ತಳೆ ಬಣ್ಣದ ಸಂಕೇತ ನೀಡುತ್ತದೆ. ಪಕ್ವವಾದ ಹಣ್ಣುಗಳನ್ನು ಆರಿಸಿ ಅವುಗಳನ್ನು ಕೀಳುವ ಈ ಯಂತ್ರದ ಕಾರ್ಯನಿರ್ವಹಣೆ ನಿಜಕ್ಕೂ ಸೋಜಿಗವೆನಿಸುವಂತಿದೆ.

(ಸಂಗ್ರಹ) ಎಂ.ಶಾರದಾ ನಾಗಭೂಷಣ

Printed and Published by **B. S. SAVANOOR** on behalf of Loka Shikshana Trust at 'Samyukta Karnataka Press', Koppikar Road, Hubli - 580020 (Phone: 64303), No.2, Residency Road, Bangalore - 560025 (Phone: 213265)
Managing Editor: **K. SHAMARAO**
Registered with the Registrar of Newspapers for India under No. 3633/57.